ಗುಲಬರ್ಗಾ ಪರಿಸರದ ಶಾಸನಗಳು ಮತ್ತು ಸ್ಮಾರಕಗಳು

(ಶಾಸನಶಾಸ್ತ್ರ ವಿಭಾಗದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸುತ್ತಿರುವ ಪ್ರಬಂಧ)

ಸಂಶೋಧಕರು
ಸಿದ್ಧಾರಾಮ ಭೀಮಣ್ಣಾ

ಮಾರ್ಗದರ್ಶಕರು
ಡಾ. ಕೆ.ಜಿ.ಭಟ್‌ಸೂರಿ
ಸಹ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ಶಾಸನಶಾಸ್ತ್ರ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
೨೦೧೧-೧೨

ಗಂಗಾವತಿ ತಾಲೂಕಿನ ದೇವಾಲಯಗಳು ಮತ್ತು ಸ್ಮಾರಕಗಳು

[illegible]

ಸಂಶೋಧಕರು
[illegible]

ಮಾರ್ಗದರ್ಶಕರು
ಡಾ. [illegible]
[illegible]

[illegible]
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
೨೦೦೧-೦೨

ಗುಲಬರ್ಗಾ ಪರಿಸರದ ಶಾಸನಗಳು ಮತ್ತು ಸ್ಮಾರಕಗಳು

(ಶಾಸನಶಾಸ್ತ್ರ ವಿಭಾಗದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸುತ್ತಿರುವ ಪ್ರಬಂಧ)

ಸಂಶೋಧಕರು
ಸಿದ್ಧಾರಾಮ ಭೀಮಣ್ಣಾ

ಮಾರ್ಗದರ್ಶಕರು
ಡಾ. ಕೆ.ಜಿ.ಭಟ್‌ಸೂರಿ
ಸಹ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು

ಶಾಸನಶಾಸ್ತ್ರ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬
೨೦೧೧-೧೨

ಸಂಶೋಧಕರ ಪ್ರಮಾಣ ಪತ್ರ

"ಗುಲಬರ್ಗಾ ಪರಿಸರದ ಶಾಸನಗಳು ಮತ್ತು ಸ್ಮಾರಕಗಳು" ಎಂಬ ಪ್ರಬಂಧವನ್ನು ಸಹ ಪ್ರಾಧ್ಯಾಪಕರಾದ ಡಾ. ಕೆ.ಜಿ.ಭಟ್‌ಸೂರಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್. ಪದವಿಗಾಗಿ ಸಮಾಜವಿಜ್ಞಾನಗಳ ನಿಕಾಯದ ಶಾಸನಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ

ದಿನಾಂಕ: ೩೦.೬.೨೦೧೨

ಸಿದ್ಧಾರಾಮ ಭೀಮಣ್ಣಾ
ಸಂಶೋಧಕರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಾರ್ಗದರ್ಶಕರ ಪ್ರಮಾಣ ಪತ್ರ

"ಗುಲಬರ್ಗಾ ಪರಿಸರದ ಶಾಸನಗಳು ಮತ್ತು ಸ್ಮಾರಕಗಳು" ಎಂಬ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ **ಶ್ರೀ ಸಿದ್ಧಾರಾಮ ಭೀಮಣ್ಣಾ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸಲಾಗಿದೆ.

ಸ್ಥಳ: ವಿದ್ಯಾರಣ್ಯ

ದಿನಾಂಕ: ೩೦.೬.೨೦೧೨

ಡಾ. ಕೆ.ಜಿ.ಭಟ್‌ಸೂರಿ
ಸಹ ಪ್ರಾಧ್ಯಾಪಕರು ಹಾಗೂ ಮಾರ್ಗದರ್ಶಕರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ,ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

ಅಧ್ಯಾಯ ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

೧.೧. ಪ್ರಸ್ತಾವನೆ :

ಗುಲಬರ್ಗಾ ಜಿಲ್ಲೆ ಕರ್ನಾಟಕದ ಉತ್ತರ ಭಾಗವಾಗಿದ್ದು. ೧೯೫೬ರಲ್ಲಿ ರಾಜ್ಯ ಪುನರ್ವಿಂಗಡನೆಯಾದಾಗ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿನ ಮೂರು ಜಿಲ್ಲೆಗಳಲ್ಲಿ ಒಂದಾಗಿದೆ. (ಉಳಿದೆರಡು ಜಿಲ್ಲೆಗಳು ಬೀದರ್ ಮತ್ತು ರಾಯಚೂರು) ಜಿಲ್ಲೆಯ ವಿಶಾಲ ಸಮತಟ್ಟಾದ ಪ್ರದೇಶವು ೭೬° ೦೪° ಮತ್ತು ೭೭° ೪೨° ಪೂರ್ವ ರೇಖಾಂಶ ಹಾಗೂ ೧೬° ೧೨° ಮತ್ತು ೧೭° ೪೬° ಉತ್ತರ ಅಕ್ಷಾಂಶ ಇವುಗಳ ನಡುವೆ ಹರಡಿಕೊಂಡಿದೆ. ಜಿಲ್ಲೆಯು ವಾಯುವ್ಯ ಭಾಗದಲ್ಲಿ ಮಹಾರಾಷ್ಟ್ರ ರಾಜ್ಯದ ಸೊಲ್ಲಾಪುರ ಮತ್ತು ಉಸ್ಮಾನಬಾದ್ ಜಿಲ್ಲೆಗಳ ಎಲ್ಲೆಯನ್ನು ಮತ್ತು ಪೂರ್ವ ಭಾಗದಲ್ಲಿ ಆಂಧ್ರಪ್ರದೇಶದ ಮೇಡಕ್ ಮತ್ತು ಮೆಹಬೂಬನಗರ ಜಿಲ್ಲೆಗಳ ಗಡಿಯನ್ನು ಹೊಂದಿದೆ. ಇನ್ನುಳಿದ ಗಡಿ ಪ್ರದೇಶವು ಉತ್ತರದಲ್ಲಿ ಬೀದರ್ ಜಿಲ್ಲೆಯಿಂದ, ದಕ್ಷಿಣದಲ್ಲಿ ರಾಯಚೂರು ಜಿಲ್ಲೆಯಿಂದ ಮತ್ತು ಪಶ್ಚಿಮದಲ್ಲಿ ಬಿಜಾಪುರ ಜಿಲ್ಲೆಯಿಂದ ಸುತ್ತುವರಿಯಲ್ಪಟ್ಟಿದೆ. ದಕ್ಷಿಣ ಭಾಗದಲ್ಲಿ ಕೃಷ್ಣಾನದಿ ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳು ಎಲ್ಲೆಯಾಗಿ ಪ್ರವಹಿಸುತ್ತವೆ.[೧]

ಪದನಿಷ್ಪತ್ತಿ:

'ಗುಲಬರ್ಗಾ'ವನ್ನು ಕಲಬುರ್ಗಿ, ಕಲ್ಬುರ್ಗಿ ಮತ್ತು ಗುಲ್ಬರ್ಗ ಎಂಬ ಪರ್ಯಾಯ ಹೆಸರುಗಳನ್ನು ಈ ಮುಂದಿನ ಶಾಸನಗಳ ಆಧಾರದ ಮೇಲೆ ಉಲ್ಲೇಖಿಸಲಾಗಿದೆ.

ಕ್ರಿ.ಶ.೧೧೯೯ ಹುಣಸಿಹಡಗಿಲದ ಶಾಸನದಲ್ಲಿ 'ಹಡಂಗಿಲೆಯ ವಾಯುವ್ಯದ ಹೊದಲ್ನಲುಂಬರಗೆಯಲ್ನುಡಿದಂತೆ ಗಂಡನ ಗಡಿಂಬಲು ಬಿಟ್ಟಕರಿಯ ನೆಲಂ ಮತ್ತರು

ಹನ್ನೆರಡು' ಉಲ್ಲೇಖಿಸಿದೆ. ಕ್ರಿ.ಶ.೧೧೧೦ ಸರಡಗಿಯ ಶಾಸನ-'-----ಸೀಸ್ವರ ವೇವರ್ಗ್ಗೆ ಬಿಟುಕ್ಷೇತ್ರ ಕಲುಂಬರಗೆಯ x ಶಂಹಡುವಲಂ ಕೋಲಮತ್ತರೞ' ಎಂದು ದಾಖಲಿಸಿದೆ. ಕ್ರಿ.ಶ.೧೧೪೨ರ ಬಸವಕಲ್ಯಾಣದ ಶಾಸನ 'ಪ್ರಮುಖವಾಗಿ ಸಾವಾಸಿ ಭ್ರಮಾಂನುಕ್ತರು ಕಲುಂಬರಗೆಯ ಭ್ರಮಾಂನ್ತು ಕಸಾಯಿ ಪಯ್ಯ ನಾಯಕರುಂ'.

ಕ್ರಿ.ಶ.೧೧೭೦ ಗೊಬ್ಬೂರು ಶಾಸನ-'ಮೇಲಮ ಸೀಮೆಯ ತೆಂಕಲು' ಕಲಂಬರಿಗೆಯ ಬಟ್ಟೆ ಸೀಮೆಯ ಪಣ ಕೋಲಲು ಗೊಬ್ಬೂರದ ಎಂದಿದೆ. ಕ್ರಿ.ಶ.ಸು.೧೨ನೇ ಶತಮಾನದ ಕುಳಗೇರಿ ಶಾಸನ-x x x ನೆರೆದೇಕಸ್ತರಾಗಿ ಕಲುಂಬರಗೆಯ ಕಲ್ತೆ ಸೆಟ್ಟೆ x x x ಎಂದು ಉಲ್ಲೇಖಿಸಿದೆ. ಕ್ರಿ.ಶ.ಸು.೧೨-೧೩ನೇ ಶತಮಾನದ ಚಿನಮಳ್ಳಿ ಶಾಸನ-'x x x ಕವಿಲಿಗೆಯ ಸೆಟ್ಟಿಕಲಂ ಬರೆಗೆಯ ನೃಪಚಿಲ್ಲಸೆಟ್ಟಿ' ಎಂದು ದಾಖಲಿಸಿದೆ. ಕ್ರಿ.ಶ.೧೫೩೭ರ ಸಿರವಾಳದ ಶಾಸನದಲ್ಲಿ 'ಶ್ರೀ ಮತು ಕಲುಬರಿಗಿಯ ನಾಡೊಳಗೆ ಮಾಗುಡಿಯ ಮಲ್ಲೋಜನ ಪುತ್ರದೇವರ್‍ಸಾರು ಸಗರ ನಾಡೊಳಗೆ ಸಿರವಳ ಗ್ರಾಮದಲ್ಲಿ ....' ಎಂದಿದೆ.

ಶ್ರೀ ಕೃಷ್ಣದೇವರಾಯನ 'ಅಮುಕ್ತಮೌಲ್ಯದಾ' ಗ್ರಂಥದಲ್ಲಿ 'ಕಲ್ಪರಿಗ' ಎಂಬುದಾಗಿ ಇದೆ. ಶ್ರೀ ಕೃಷ್ಣದೇವರಾಯನ ಬಿರುದುಗಳನ್ನು ವರ್ಣಿಸುತ್ತಾ ಅವನ ಅಸ್ಥಾನದ ತೆಲಗು ಕವಿ ಅಲ್ಲಸಾನಿ ಪೆದ್ದಣ್ಣನು ತನ್ನ 'ಮನುಚರಿತಮು'ಕೃತಿಯಲ್ಲಿ 'ಕಲಬುರಗಿ' ಕಟಕ ಕ್ಷಿತಿಪಾಲಕ ಎಂದಿದ್ದಾನೆ.(೩-೧೪೨). ವಿಜಯನಗರಕ್ಕೆ ಬಂದಿದ್ದ ಪರ್ಷಿಯಾದ ರಾಯಭಾರಿ ಅಬ್ದುಲ್ ರಜಾಕನು ವಿಜಯನಗರ ಸಾಮ್ರಾಜ್ಯದ ಮೇರೆಗಳನ್ನು ಹೇಳುವಾಗ 'ಕಲಬರ್ಗ' ಎಂದೇ ಉಲ್ಲೇಖಿಸಿದ್ದಾನೆ. ಪಾಶ್ಚಾತ್ಯ ಪ್ರವಾಸಿ ನ್ಯೂನಿಜನು ತನ್ನ ಬರವಣಿಗೆಯಲ್ಲಿ 'ಕಲ್ಬರ್ಗೂರ' ಎಂಬೂದಾಗಿ ದಾಖಲಿಸಿದ್ದಾನೆ.[೨]

ಪ್ರಸ್ತುತ ಗುಲಬರ್ಗಾ ಒಂದು ಜಿಲ್ಲಾ ಕೇಂದ್ರವಾಗಿದ್ದು ಇದರ ಮೂಲ ಹೆಸರು 'ಕಲಬುರ್ಗಿ' ಎಂದಿದ್ದು ಕ್ರಮೇಣ ಅದು ಗುಲಬರ್ಗಾ, ಗುಲ್ಬರ್ಗ ಎಂದಾಗಿದೆ.[೩] ಗುಲಬರ್ಗ ಎಂಬುದು ಹೆಚ್ಚು ಕಡಿಮೆ 'ಕಲಬುರಗಿ' ಪದದ ಫಾರಸಿಕರಣ. ಫಾರಸಿಯಲ್ಲಿ 'ಗುಲ್' ಎಂದರೆ ಹೂವು 'ಬರ್ಗ್' ಎಂದರೆ ಎಲೆ ಎಂಬ ಅರ್ಥವಿದೆ. 'ಕಲಬುರಗಿ' ಎಂಬ ಅಚ್ಚ ಕನ್ನಡ ರೂಪವೇ ಮಹಮದಿಯರಿಗೆ ಮೊದ ಮೊದಲು 'ಕಲಬುರ್ಗ್' ಎಂದೆನಿಸಿ ನಿಧಾನವಾಗಿ ಅದೇ 'ಗುಲ್ಬರ್ಗ' ಎಂದಾಗಿರಬೇಕು. ಒಟ್ಟಿನಲ್ಲಿ 'ಕಲಬುರಗಿ' ಎಂಬ ಹೆಸರು ಕ್ರಿ.ಶ.೧೬ನೇ ಶತಮಾನದವರೆಗೂ ರೂಢಿಯಲ್ಲಿದ್ದು ಮುಸ್ಲಿಮರ ಆಡಳಿತ ಪ್ರಭಾವದಿಂದಾಗಿ 'ಗುಲಬರ್ಗಾ'

ಎಂಬ ರೂಪವನ್ನು ಪಡೆದಿದೆ.[೪] ಹಾಗೆಯೇ ಗುಲಬರ್ಗಾ ಕೋಟೆ ರಾಜಾಗುಲಚಂದನಿಂದ ಕಟ್ಟಲ್ಪಟ್ಟಿದ್ದು, ಅದಕ್ಕಾಗಿ ಈ ಹೆಸರು ಬಂದಿರುವ ಸಾಧ್ಯತೆ ಇದೆ.[೫]

೧.೨. ಉದ್ದೇಶ :

ಭಾರತದ ಇತಿಹಾಸವು ತನ್ನದೇ ಆದ ವೈಶಿಷ್ಟ್ಯತೆಯಿಂದ ಕೂಡಿದ್ದು, ಈ ವೈಶಿಷ್ಟ್ಯತೆಯನ್ನು ವಸ್ತುನಿಷ್ಠವಾಗಿ ರೂಪಿಸುವಲ್ಲಿ ಕರ್ನಾಟಕದ ಕೊಡುಗೆ ಮಹತ್ತರವಾದದ್ದು. ಪುರಾತತ್ವ ಅಧ್ಯಯನದ ಶಾಖೆಗಳಾದ ದೇವಾಲಯಗಳು ಮತ್ತು ಶಾಸನಗಳು ಇತಿಹಾಸ ರಚನೆಗೆ ಪ್ರಧಾನ ಆಕರಗಳಾಗಿವೆ. ಪ್ರಸ್ತುತ ಈ ಅಧ್ಯಯನ ಗುಲಬರ್ಗಾ ಪರಿಸರಕ್ಕೆ ಸೀಮಿತವಾಗಿದ್ದು, ಈ ವಿಷಯಕ್ಕೆ ಸಂಬಂಧಪಟ್ಟ ಆಕರಗಳನ್ನು ಒಂದೆಡೆ ಸಂಗ್ರಹಿಸಿ, ಅಧ್ಯಯನ ಮಾಡುವುದೇ ಈ ಪ್ರಬಂಧದ ಮುಖ್ಯ ಉದ್ದೇಶ. ಈ ದಿಶೆಯಲ್ಲಿ ಮಾಡಿದ ಒಂದು ಕಿರುಪ್ರಯತ್ನವೇ 'ಗುಲಬರ್ಗಾ ಪರಿಸರದ ಶಾಸನಗಳು ಮತ್ತು ದೇವಾಲಯಗಳು'.

೧.೩. ವ್ಯಾಪ್ತಿ :

ಗುಲಬರ್ಗಾ ಪರಿಸರದ ಪ್ರಾಚೀನ ಇತಿಹಾಸದ ಸಂಸ್ಕೃತಿಯ ಸಂಪತ್ತನ್ನು ಹೊಂದಿದ ಪ್ರದೇಶವಾಗಿದೆ. (ಪ್ರಸ್ತುತ ಈ ಅಧ್ಯಯನ ಪ್ರಾಚೀನ ದೇವಾಲಯ ಮತ್ತು ಶಾಸನಗಳಿಗೆ ಸೀಮಿತವಾಗಿದೆ.) ಗುಲಬರ್ಗಾ ಪರಿಸರವನ್ನು ಉತ್ತರ, ದಕ್ಷಿಣ, ಪೂರ್ವ ಮತ್ತು ಪಶ್ಚಿಮಗಳಿಗೆ ಸೀಮಿತ ಮಾಡಿ ಉತ್ತರಕ್ಕೆ ಮಹಾಗಾಂವ, ದಕ್ಷಿಣಕ್ಕೆ ಫಿರೋಜಾಬಾದ, ಪೂರ್ವಕ್ಕೆ ಪಟ್ಟಣದವರೆಗೆ, ಪಶ್ಚಿಮಕ್ಕೆ ಸಣ್ಣೂರವರೆಗೂ ಕ್ಷೇತ್ರಕಾರ್ಯ ಕೈಗೊಳ್ಳುವುದರ ಮೂಲಕ ಆ ಊರಿನಲ್ಲಿದ್ದ ದೇವಾಲಯಗಳ ಛಾಯಾಚಿತ್ರಗಳನ್ನು ಸಂಗ್ರಹಿಸುವುದರೊಂದಿಗೆ ಮತ್ತು ಪ್ರಕಟ ಆಕರಗಳೊಂದಿಗೆ ಮಾಹಿತಿಯನ್ನು ಒಂದೆಡೆ ಸೇರಿಹಿಡಿಯಲಾಗಿದೆ.

೧.೪. ಪೂರ್ವಾಧ್ಯಯನಗಳ ಸಮೀಕ್ಷೆ :

ಹೈದ್ರಾಬಾದ್ ಕರ್ನಾಟಕದಲ್ಲಿಯ ಶಾಸನಗಳ ಅಧ್ಯಯನವನ್ನು ಮೊದಲು ಕರ್ನಲ್ ಮೆಕೆಂಜಿ ಮಾಡಿದ್ದಾರೆ. ಇವರ ಜೊತೆ, ಜೊತೆಗೆ ಮತ್ತೊಬ್ಬ ಶಾಸನ ತಜ್ಞರಾದ ಸರ್ ವಾಲ್ಟರ್ ಎಲಿಯಟ್‌ರು ಕೂಡ ಒಬ್ಬರಾಗಿದ್ದಾರೆ. ಪಿ.ಬಿ.ದೇಸಾಯಿಯವರ 'ದೇಸಾಯಿ ಹಿಸ್ಟಾರಿಕಲ್ ಕಲೆಕ್ಷನ್' ಪ್ರಕಟಣೆಯಲ್ಲಿ ಗುಲಬರ್ಗಾ ಜಿಲ್ಲೆಯ ಒಟ್ಟು ೭೪ ಶಾಸನಗಳನ್ನು ಪ್ರಕಟಿಸಲಾಗಿದೆ. ಮತ್ತು ಮೆಕೆಂಜಿಯವರು ಸಂಗ್ರಹಿಸಿದ ಒಟ್ಟು ೪೩೬, ಶಾಸನಗಳಲ್ಲಿ ಗುಲಬರ್ಗಾ ಜಿಲ್ಲೆಗೆ

ಸಂಬಂಧಿಸಿದಂತೆ ೩೬ ಶಾಸನಗಳನ್ನು ಗುರ್ತಿಸಿದ್ದಾರೆ.

ಹನುಮಾಕ್ಷಿ ಗೋಗಿಯವರು ಪ್ರಕಟಿಸಿದ 'ಕಲ್ಬುರ್ಗಿ ಜಿಲ್ಲೆಯ ಶಾಸನ' ಗ್ರಂಥದಲ್ಲಿ ೨೪೭ ಶಾಸನಗಳನ್ನು ಪ್ರಕಟಿಸಿದ್ದಾರೆ. ವಿ. ಶಿವಾನಂದರು 'ಹೈದರಾಬಾದ್ ಕರ್ನಾಟಕ ಭಾಗದ ಕನ್ನಡ ಶಿಲಾ ಶಾಸನಗಳು' ಎಂಬ ಗ್ರಂಥ ಬನಾರಸ್ ವಿಶ್ವವಿದ್ಯಾಲಯದಿಂದ ಪ್ರಕಟಿಸಿದ್ದಾರೆ. ಎಮ್.ಯಾಸಿನ್, ಖುದ್ದೂಸಿ ಮತ್ತು ಸೀತಾರಾಮ ಜಾಗೀರ್‌ದಾರ್ ಅವರು ಸಂಪಾದಿಸಿದ 'ಪರ್ಶಿಯನ್ ಅರೇಬಿಕ್ ಮತ್ತು ಉರ್ದು ಶಾಸನಗಳು' ಈ ಗ್ರಂಥದಲ್ಲಿ ಬಹಮನಿ ಸಾಮ್ರಜ್ಯದ ಬಗ್ಗೆ ತಿಳಿದುಕೊಳ್ಳಲು ಸಹಾಯಕವಾಗುತ್ತದೆ.

ಸರ್ ವಾಲ್ಟರ್ ಎಲಿಯಟ್‌ರು 'ಕರ್ನಾಟಕ ದೇಶ ಇನ್‌ಸ್ಕ್ರಿಪ್ಷನ್ಸ್' ಸಂಪುಟದಲ್ಲಿ ೫೯೫ ಶಾಸನಗಳನ್ನು ಒಂದೆಡೆ ಸಂಗ್ರಹಿಸಿದ್ದು, ಅದರ ಪ್ರತಿ ಭಾರತದಲ್ಲಿ ನಮಗೆ ಲಭ್ಯವಿಲ್ಲ. ಅದರಲ್ಲಿ ಗುಲಬರ್ಗಾ ಜಿಲ್ಲೆಯ ಶಾಸನಗಳೂ ಸೇರಿವೆ. ಹೀಗೆ ಕಾಲಿನ್‌ಮೆಕೆಂಝಿ, ಜೆ.ಎಫ್.ಫ್ಲೀಟ್, ಎಲ್.ಡಿ.ಬಾರ್ನೆಟ್, ವಾಲ್ಟರ ಎಲಿಯಟ್‌ರಂತಹ ವಿದೇಶಿ ವಿದ್ವಾಂಸರಿಂದ ಗುಲಬರ್ಗಾ ಜಿಲ್ಲೆಯ ಶಾಸನಾಧ್ಯಾಯನ ಆರಂಭಗೊಂಡಿತು ಎನ್ನಬಹುದು.

೧.೫. ಸ್ವರೂಪ :

ಅಧ್ಯಯನದ ವ್ಯಾಪ್ತಿಗನುಗುಣವಾಗಿ ಪ್ರಸ್ತುತ ಸಂಶೋಧನೆಯನ್ನು ಆರು ಅಧ್ಯಾಯಗಳಾಗಿ ವಿಂಗಡಿಸಲಾಗಿದೆ. ಮೊದಲನೆಯ ಅಧ್ಯಾಯದಲ್ಲಿ ಉದ್ದೇಶ, ವ್ಯಾಪ್ತಿ ಮತ್ತು ವಿಧಾನವನ್ನು ಚರ್ಚಿಸಲಾಗಿದೆ. ಸಂಶೋಧನೆಯಲ್ಲಿ ಇವುಗಳ ಮಹತ್ವತೆಯನ್ನು ತೋರಿಸಲಾಗಿದೆ. ಈ ಅಧ್ಯಯನದಲ್ಲಿ ಅಧ್ಯಯನದ ಅವಶ್ಯಕತೆ, ಉದ್ದೇಶ, ವ್ಯಾಪ್ತಿ ಮತ್ತು ವಿಧಾನಗಳು ಹೀಗೆ ಪೂರಕ ಅಕರ ಸಾಮಾಗ್ರಿ ಮತ್ತು ಯಾವ ರೀತಿಯಲ್ಲಿ ಉಪಯುಕ್ತವಾಗಿದೆ ಎಂಬುದನ್ನು ಚರ್ಚಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ 'ಸ್ಥಳೀಯ ಇತಿಹಾಸವನ್ನು' ಆಧಾರವಾಗಿಟ್ಟುಕೊಂಡು ಶಾಸನಗಳ ಸಹಾಯದಿಂದ ಅಧ್ಯಯನ ಮಾಡುವುದರೊಂದಿಗೆ ಇಲ್ಲಿನ ಸಾಮಾಜಿಕ ಸ್ಥಿತಿಗತಿ, ಜನರ ರೀತಿ ನೀತಿಗಳು, ರಾಜಕೀಯ ಜೀವನ ಮತ್ತು ಧಾರ್ಮಿಕ ಸ್ಥಿತಿಗತಿಗಳಲ್ಲಿ ಹಿಂದೂ, ಜೈನ, ವೀರಶೈವ, ಧರ್ಮಗಳ ಬೆಳವಣಿಗೆಯನ್ನು ಈ ಅಧ್ಯಾಯದಲ್ಲಿ ಅಳವಡಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಶಾಸನಗಳ ವೈವಿಧ್ಯತೆ, ಅರ್ಥ, ಸ್ವರೂಪ, ಪೂರ್ವಾರ್ಧ್ಯಯಗಳು ಹಾಗೆಯೇ ಶಾಸನಗಳ ವೈಶಿಷ್ಟ್ಯತೆಯಲ್ಲಿ ವೀರಗಲ್ಲು ಮತ್ತು ಶಾಸನಶಿಲ್ಪಗಳಾಗಿ ವಿಂಗಡಿಸಿ ಅವುಗಳಲ್ಲಿರುವ ವಿಷಯಗಳನ್ನು ಈ ಅಧ್ಯಾಯದಲ್ಲಿ ಸ್ಪಷ್ಟಪಡಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ದೇವಾಲಯಗಳ ವಾಸ್ತುಶಿಲ್ಪದ ವಿಸ್ತಾರವಾದ ವಿವರಣೆಯನ್ನು ಕೊಡಲಾಗಿದೆ. ಶೈವ, ವೈಷ್ಣವ, ಜೈನ ಮತ್ತು ಶಾಕ್ತ ದೇವಾಲಯಗಳೆಂದು ವಿಂಗಡಿಸಿ ಇವುಗಳ ತಿರ್ಯನ್ಮುಖ ಹಾಗೂ ಊರ್ಧ್ವಮುಖ ವಾಸ್ತುರಚನೆಯನ್ನು, ಅದರಲ್ಲಿರುವ ವಿವಿಧ ಉಪಾಂಗಗಳ ವಾಸ್ತುಶಿಲ್ಪದ ಲಕ್ಷಣಗಳನ್ನು ಗುರುತಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಭಾರತದ ವಾಸ್ತುಶಿಲ್ಪದ ಹಿನ್ನಲೆಯಲ್ಲಿ ಮೂರ್ತಿಶಿಲ್ಪದ ಉಗಮ ಮತ್ತು ವಿಕಾಸದ ಬಗ್ಗೆ ಅದರಲ್ಲೂ ಹೆಚ್ಚಾಗಿ ಗುಲಬರ್ಗಾ ಪರಿಸರದ ಶಾಸನಗಳು ಮತ್ತು ಸ್ಮಾರಕಗಳು ಎಂಬ ವಿಷಯವನ್ನು ಆಧಾರವಾಗಿಟ್ಟುಕೊಂಡು ಶೈವ, ವೈಷ್ಣವ, ಜೈನ, ಮತ್ತು ಬೌದ್ಧ ಮೂರ್ತಿಶಿಲ್ಪಗಳನ್ನು ಅಧ್ಯಯನ ಮಾಡಲಾಗಿದೆ.

ಆರನೇ ಅಧ್ಯಾಯದಲ್ಲಿ ಒಟ್ಟಾರೆ ಐದು ಅಧ್ಯಾಯದಲ್ಲಿ ಕಂಡುಕೊಂಡ ಮಹತ್ವತೆಯನ್ನು ಸೆರೆಹಿಡಿಯಲಾಗುವುದು. ಇದರ ಜೊತೆಗೆ ಅನುಬಂಧದಲ್ಲಿ ಗುಲಬರ್ಗಾ ಜಿಲ್ಲಾ ಹಾಗೂ ತಾಲೂಕಿನ ನಕ್ಷೆ, ಆಕರ ಗ್ರಂಥಗಳು, ಹಾಗೂ ಛಾಯಾಚಿತ್ರಗಳ ಪಟ್ಟಿಯನ್ನು ಅಳವಡಿಸಲಾಗಿದೆ.

೧.೬. ವಿಧಾನ :

ಪ್ರಸ್ತುತ ಅಧ್ಯಯನ ವಿಷಯ ವಿಶ್ಲೇಷಣೆಗೆ ಹಲವಾರು ವಿಧಿ–ವಿಧಾನಗಳನ್ನು ಅನುಸರಿಸಲಾಗಿದೆ. ಅಧ್ಯಯನ ವಿಷಯಕ್ಕೆ ಸಂಬಂಧಪಟ್ಟಂತೆ ಹಲವಾರು ಚಿಂತಕರು ಬರೆದ ಪುಸ್ತಕಗಳನ್ನು ಸಂಗ್ರಹಿಸಿ, ಅಧ್ಯಯನಕ್ಕೆ ಪೂರಕವಾಗಿ ಮಾಹಿತಿಯನ್ನು ಪಡೆದುಕೊಳ್ಳಲಾಗಿದೆ. ಕ್ಷೇತ್ರಕಾರ್ಯದಲ್ಲಿ ಸೂಚಿಪಟ್ಟಿ ಮಾಡಿಕೊಂಡು, ವಿಷಯ ಸಂಗ್ರಹಣೆ ಮಾಡಲಾಗಿದೆ. ಹಾಗೂ ಆಕರಗ್ರಂಥ ವಿಧಾನ, ತೌಲನಿಕ ಅಧ್ಯಯನ, ಕ್ಷೇತ್ರಕಾರ್ಯ ವನ್ನೊಳಗೊಂಡು ಎಲ್ಲಾ ವಿಧಾನಗಳನ್ನು ಅನುಸರಿಸುವುದರೊಂದಿಗೆ ಮಾಹಿತಿಯನ್ನು ಒಂದೆಡೆ ಸೆರೆಹಿಡಿಯಲಾಗಿದೆ.

ಅಡಿಟಿಪ್ಪಣಿಗಳು :

೧. ಪಾಟೀಲ್ ಎಂ.ಬಿ., ಗುಲಬರ್ಗಾ ಜಿಲ್ಲಾ ಗೆಜೆಟಿಯರ್, ಪು.೧

೨. ಇಂದುಮತಿ ಪಾಟೀಲ, ಪು.೧೪–೧೬

೩. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಕನ್ನಡ ನಾಡಿನ ಪ್ರಾಚೀನ ಸಾಂಸ್ಕೃತಿಕ ಕೇಂದ್ರಗಳು, ಪು.೭೭

೪. ಪಾಟೀಲ್ ಎಂ.ಬಿ., ಪೂರ್ವೋಕ್ತ, ಪು.೨

೫. ಹನುಮಾಕ್ಷಿ ಗೋಗಿ, ಕಲ್ಬುರ್ಗಿ ಜಿಲ್ಲೆ ಶಾಸನಗಳು, ಪು.೧೬

♦ ♦ ♦

ಅಧ್ಯಾಯ ೨

ಐತಿಹಾಸಿಕ ಹಿನ್ನೆಲೆ

ಅಧ್ಯಾಯ ೨

ಐತಿಹಾಸಿಕ ಹಿನ್ನೆಲೆ

೨.೧. ಪೀಠಿಕೆ :

ಸುದೀರ್ಘ ಇತಿಹಾಸ ಮತ್ತು ಪರಂಪರೆಯನ್ನು ಹೊಂದಿರುವ ಗುಲಬರ್ಗಾ ಪರಿಸರ ಕರ್ನಾಟಕ ಇತಿಹಾಸದುದ್ದಕ್ಕೂ ಪ್ರಮುಖ ಪಾತ್ರವಹಿಸಿದೆ. ರಾಷ್ಟ್ರಕೂಟರು, ಕಲ್ಯಾಣದ ಚಾಳುಕ್ಯರು, ಕಳಚೂರಿಯರು, ಬಹಮನ್ ಷಾಹಿಗಳು ಹಾಗೂ ಬಿಜಾಪುರದ ಆದಿಲ್ ಷಾಹಿಗಳು ನಿರಂತರವಾಗಿ ಆಳ್ವಿಕೆ ನಡೆಸಿದ್ದರು. ರಾಷ್ಟ್ರಕೂಟರು ಗುಲಬರ್ಗಾದ ಮಳಖೇಡವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ್ದರು. ಬಹಮನ್ ಷಾಹಿಗಳು ಗುಲಬರ್ಗಾ ನಗರವನ್ನೇ ತಮ್ಮ ರಾಜಧಾನಿಯನ್ನಾಗಿಸಿಕೊಂಡು ಕ್ರಿ.ಶ.೧೩೪೭ ರಿಂದ ಕ್ರಿ.ಶ.೧೪೨೪ರ ವರೆಗೆ ಆಳ್ವಿಕೆ ನಡೆಸಿದರು. ನಂತರ ಅಹಮದ್ ಷಾ ಆಡಳಿತಾವಧಿಯಲ್ಲಿ ಬಹಮನ್ ಷಾಹಿಗಳು ತಮ್ಮ ರಾಜಧಾನಿಯನ್ನು ಗುಲಬರ್ಗಾದಿಂದ ಬೀದರಿಗೆ ವರ್ಗಾಯಿಸಿದರು. ಇವರ ನಂತರ ಈ ಭೂಭಾಗವನ್ನು ಹೈದರಾಬಾದ್ ನಿಜಾಮರ ಸಂಸ್ಥಾನಕ್ಕೆ ಅಧೀನವಾಗಿ ಆಳಲ್ಪಟ್ಟಿತ್ತು. ಹೀಗೆ ಎಲ್ಲ ಮನೆತನಗಳ ಆಳ್ವಿಕೆಯ ಬಗ್ಗೆ ಅಷ್ಟೇ ಅಲ್ಲದೆ ಅಂದಿನ ಕಾಲದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಇತಿಹಾಸವನ್ನು ಈ ಅಧ್ಯಾಯದಲ್ಲಿ ಸೆರೆಹಿಡಿಯಲಾಗಿದೆ.

೨.೨. ರಾಜಕೀಯ ಇತಿಹಾಸ :

ಮೌರ್ಯರು

ಮೌರ್ಯರು, ಗುಲಬರ್ಗಾ ಪರಿಸರದ ಸುತ್ತಮುತ್ತ ಆಳಿದರು ಎಂಬುದಕ್ಕೆ ಇಲ್ಲಿ ದೊರೆತ ಶಾಸನಗಳ ಆಧಾರಗಳೇ ಸಾಕ್ಷಿಯಾಗಿವೆ. ಈಗಾಗಲೇ ಹೇಳಿದಂತೆ ಗುಲಬರ್ಗಾ ಜಿಲ್ಲೆಯ ದಕ್ಷಿಣಕ್ಕೆ ಒಂದರ ಪಕ್ಕದಲ್ಲೊಂದಿರುವ ರಾಯಚೂರು, ಬಳ್ಳಾರಿ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಕ್ರಮವಾಗಿ ಕೊಪ್ಪಳ, ಮಸ್ಕಿ, ನಿಟ್ಟೂರು, ಉದಯಗೊಳಂ, ಬ್ರಹ್ಮಗಿರಿ, ಸಿದ್ದಾಪುರ,

ಜಟಿಂಗ ರಾಮೇಶ್ವರದಲ್ಲಿ ಮೌರ್ಯ ಚಕ್ರವರ್ತಿ ಅಶೋಕನ (ಸು.ಕ್ರಿಪೂ. ೨೭೪-೨೩೩) ಲಘು ಪ್ರಶಸ್ತಿ ಶಾಸನಗಳಿವೆ.

೧೯೯೦ನೇ ವರ್ಷವು ಗುಲಬರ್ಗಾ ಜಿಲ್ಲೆಯ ಇತಿಹಾಸ ಸಂಶೋಧನೆಯಲ್ಲಿ ಒಂದು ಮಹತ್ವದ ಕಾಲಘಟ್ಟ. ಈಗಾಗಲೇ ಶಾತವಾಹನ ಅರಸರ ಕಾಲದ ಬೌದ್ಧಸ್ತೂಪ, ಶಿಲ್ಪ ಹಾಗೂ ಶಾಸನಗಳಿಗೆ ಪ್ರಸಿದ್ಧವಾಗಿರುವ ಸ್ಥಳ ಸನ್ನತಿ. ಇಲ್ಲಿ ಅಶೋಕ ಸಾಮ್ರಾಟನ ಬೃಹತ್ ಬಂಡೆ ಶಾಸನಗಳ ಮಾಲಿಕೆಯಲ್ಲಿನ ೧೩ ಹಾಗೂ ೧೪ ಮತ್ತು ಒರಿಸ್ಸಾ ಕಳಿಂಗದಲ್ಲಿಯ ಧೌಳಿ (ಪುರಿಜಿಲ್ಲೆ) ಮತ್ತು ಔಗಡ (ಗಂಜಾಂ)ದ ಎರಡು ಪ್ರತ್ಯೇಕ ಶಾಸನಗಳ ಪ್ರತಿಗಳು ಆಕಸ್ಮಿಕವಾಗಿ ಬೆಳಕಿಗೆ ಬಂದವು. ಅಶೋಕನ ಈ ಪ್ರಕಾರದ ಶಾಸನಗಳು ದಖನ್ ಪ್ರಸ್ಥಭೂಮಿಯು ಸೇರಿದಂತೆ ದಕ್ಷಿಣ ಭಾರತದಲ್ಲಿ ಅದರಲ್ಲಿ ಹೆಚ್ಚಾಗಿ ಕರ್ನಾಟಕದಲ್ಲಿ ಸಿಗುತ್ತಿರುವುದು ಇದೇ ಮೊದಲು.[೧] ಅಷ್ಟೇ ಅಲ್ಲದೆ ಭಾರತೀಯ ಪುರಾತತ್ವ ಸರ್ವೇಕ್ಷಣ ಹೈದರಾಬಾದ್ ವಲಯದ ಸಿಬ್ಬಂದಿಗಳಾದ ಆರ್.ವಿ.ಶಿವಶರ್ಮ ಮತ್ತು ಜೆ.ವರಪ್ರಸಾದ್‌ರಾವ್ ಅವರು ಸನ್ನತಿ ಚಂದ್ರಲಾಂಬಾ ದೇವಸ್ಥಾನದ ಪಕ್ಕದಲ್ಲಿರುವ ಚಾಮುಂಡಾ ದೇವಿಯ ವಿಗ್ರಹವನ್ನು ಸ್ಥಾಪಿಸಲಾಗಿದ್ದ ಪೀಠದ ಕಲ್ಲಿನ ಮೇಲಿರುವ ಅಶೋಕನ ನಾಲ್ಕು ಹೊಸ ಶಿಲಾಶಾಸನಗಳನ್ನು ಸಂಶೋಧಿಸಿದರು. ಇದರಿಂದ ಗುಲಬರ್ಗಾ ಪರಿಸರದ ಸುತ್ತ ಮೌರ್ಯರ ಆಡಳಿತವಿತ್ತೆಂದು ಸ್ಪಷ್ಟ. ಗುಲಬರ್ಗಾ ಪರಿಸರ ಕೇವಲ ಮುಸ್ಲಿಂ ಅರಸರ ಆಳ್ವಿಕೆಯಾಗಿರದೆ, ಇಲ್ಲಿ ಹಿಂದೂ ಅರಸರ ಆಳ್ವಿಕೆ ಇತ್ತು ಎಂದು ಸನ್ನತಿಯಲ್ಲಿ ದೊರೆತ ನಾಲ್ಕು ಬೃಹತ್ ಬಂಡೆಗಲ್ಲು ಶಾಸನ ದಾಖಲಿಸಿವೆ.[೨]

ಶಾತವಾಹನರು

ಮೌರ್ಯ ಸಾಮ್ರಾಜ್ಯವು ಪತನದ ಹಾದಿ ಹಿಡಿದಿದ್ದ ಸಂದರ್ಭದಲ್ಲಿ ಕರ್ನಾಟಕದ ಉತ್ತರ ಭಾಗವನ್ನು ಶಾತವಾಹನರು ತಮ್ಮ ತೆಕ್ಕೆಗೆ ತೆಗೆದುಕೊಂಡರು. ಈ ಮನೆತನದ ಮೂಲ ಪುರುಷ ಸಿಮುಖ. ಶಾತವಾಹನ ಅರಸರಿಗೆ ನೇರವಾಗಿ ಸಂಬಂಧಿಸಿದ ನಾಲ್ಕು ಶಾಸನಗಳು ಮತ್ತು ಇದೇ ಕಾಲದ (ಕ್ರಿ.ಶ. ಒಂದು ಅಥವಾ ಎರಡನೆಯ ಶತಮಾನ) ೭೧ ತುಂಡು ಶಾಸನಗಳು ದೊರೆತಿವೆ. ಅಲ್ಲದೆ ಸನ್ನತಿಯಲ್ಲಿ ಶಾತವಾಹನರ ಕಾಲದ ಅವಶೇಷಗಳು ಉತ್ಖನನದಲ್ಲಿ ಲಭಿಸಿದೆ.

ಕೇವಲ ಸನ್ನತಿಯಲ್ಲಷ್ಟೇ ಅಲ್ಲದೆ, ಗುಲಬರ್ಗಾ ಪರಿಸರದ ಸುತ್ತಲಿನ ಪ್ರದೇಶಗಳಾದ ಕನಗನಳ್ಳಿ, ಜೇವರ್ಗಿ, ವಜ್ಜಲ, ಅಣಬಿ, ಹಾಸರಗುಂಡಗಿ, ತುನ್ನೂರು, ಅವರಾದ, ಹಿಪ್ಪರಗಿ, ಕಲ್ಲಹಂಗರಗಾ, ರೋಜಾ, ಬಳವಡಗಿ, ಸಿರವಾಳಗಳಲ್ಲಿ ದೊರೆತಿರುವ ಲಿಪಿ ಸಹಿತ ಮತ್ತು ಲಿಪಿ

ರಹಿತ ಸ್ಮಾರಕ ಶಿಲಾಫಲಕಗಳು ಈ ಪ್ರದೇಶಗಳಲ್ಲಿ ಶಾತವಾಹನರ ಆಡಳಿತವಿತ್ತೆಂಬುದಕ್ಕೆ ಸಾಕ್ಷಿಯಾಗಿವೆ. ಸನ್ನತಿಯ ಭೂ ಶೋಧನೆಯಲ್ಲಿ ಶಾತವಾಹನ ಅರಸ ಸಿರಿ ಶಾತವಾಹನನಿಗೆ ಸಂಬಂಧಿಸಿದ ಶಾತವಾಹನರ ಅಚ್ಚೊತ್ತಿದ ಸೀಸದ ಮತ್ತು ತಾಮ್ರದ ನಾಣ್ಯಗಳು ಸಹ ಲಭಿಸಿವೆ. ಈ ಮನೆತನದ ರಾಜಕೀಯ ಇತಿಹಾಸ ಅಧ್ಯಯನವು, ಗುಲಬರ್ಗಾ ಪರಿಸರ ಅಧ್ಯಯನಕ್ಕೆ ಪೂರಕವಾಗಿದೆ.[೩]

ಮಳಖೇಡದ ರಾಷ್ಟ್ರಕೂಟರು

ಎಂಟನೆಯ ಶತಮಾನದ ಮಧ್ಯಭಾಗದ ವೇಳೆಗೆ ದಕ್ಷಿಣ ಆಧಿಪತ್ಯವು ಚಾಲುಕ್ಯರ ಕೈಯಿಂದ ರಾಷ್ಟ್ರಕೂಟರ ಕೈ ಸೇರಿತು. ದಂತಿದುರ್ಗನು ಕ್ರಿ.ಶ. ೭೫೦ರಲ್ಲಿ ಬಾದಾಮಿ ಚಾಳುಕ್ಯರ ಆಡಳಿತವನ್ನು ತೊರೆದು ಹಾಕಿ ರಾಷ್ಟ್ರಕೂಟ ಸಾಮ್ರಾಜ್ಯದ ಸ್ಥಾಪನೆಯನ್ನು ಮಾಡಿದನು. 'ರಾಷ್ಟ್ರಕೂಟ' ಎಂಬುದು ಮೊದಲು ಅಧಿಕಾರ ಹುದ್ದೆಯಾಗಿದ್ದು, ಕಾಲಕ್ರಮೇಣ ಒಂದು ಕುಟುಂಬದ ಹೆಸರಾಯಿತೆಂದು ಪಿ.ಬಿ.ದೇಸಾಯಿಯವರು ತಿಳಿಸುತ್ತಾರೆ. ಇದಕ್ಕೆ ಪುಷ್ಟಿ ಕೊಡುವಂತೆ ಮೌರ್ಯರ ಶಾಸನಗಳಲ್ಲಿ ಕಂಡುಬರುವ 'ರಾಷ್ಟ್ರಿಕ' ಎಂಬ ಅಧಿಕಾರ ಹುದ್ದೆಯೇ ಕಾಲಾನುಕಾಲಕ್ಕೆ 'ರಾಷ್ಟ್ರಕೂಟ' ಎಂದು ರೂಢಿಗೆ ಬಂದಿರುವ ಸಾಧ್ಯತೆ ಇದೆ. ಬಾದಾಮಿ ಚಾಳುಕ್ಯರ ತಾಮ್ರಪಟದಲ್ಲಿ ಕಂಡುಬರುವ 'ರಾಷ್ಟ್ರಕೂಟ' ಎಂಬ ಅಧಿಕಾರ ಹುದ್ದೆಯೇ ಈ ಪದದ ಅತ್ಯಂತ ಪ್ರಾಚೀನ ಉಲ್ಲೇಖವಾಗಿದೆ.[೪]

ಗುಲಬರ್ಗಾ ಜಿಲ್ಲೆಯ ಸಿರವಾಳ, ಅಂದೋಲ, ನಿಡಗುಂದಾಗಳಲ್ಲಿ ಸ್ಪಷ್ಟವಾಗಿ ಉಲ್ಲೇಖಗೊಂಡಿರುವ ರಾಷ್ಟ್ರಕೂಟ ಮೂರನೇ ಕೃಷ್ಣನ ಮೂರು ಶಾಸನಗಳು ಲಭಿಸಿವೆ. ಆದರೆ ಲಿಪಿ ಸಾಮ್ಯದಿಂದ ಸಿರವಾಳದಲ್ಲಿ ಇನ್ನೆರಡು ಮತ್ತು ಶೆಳಗಿಯಲ್ಲಿ ಒಂದು ಹಾಗೂ ತಡಕಲ್‌ನಲ್ಲಿ ಒಂದು ರಾಷ್ಟ್ರಕೂಟರ ಕಾಲದ ಶಾಸನಗಳು ಕಂಡುಬಂದಿವೆ.[೫]

ಗುಲಬರ್ಗಾ ಜಿಲ್ಲೆಯ ಪುರಾತನ ರಾಜಕೀಯ ಸಂಸ್ಕೃತಿಯ ನೆಲೆಗಳ ಪೈಕಿ ಮಳಖೇಡವೂ ಒಂದು. ಏಕೆಂದರೆ ಬಾದಾಮಿ ಚಾಲುಕ್ಯರು ಹಾಗೂ ಕಲ್ಯಾಣ ಚಾಲುಕ್ಯರ ನಡುವಿನ ಅವಧಿಯಲ್ಲಿ ದಕ್ಷಿಣಭಾರತದ ಬಹುಭಾಗದ ಮೇಲೆ ಸ್ವಾಮ್ಯವನ್ನು ಪಡೆದ ಮುಖ್ಯ ನೆಲೆ ಮಳಖೇಡವಾಗಿದೆ.[೬]

ಅಮೋಘವರ್ಷ ನೃಪತುಂಗನು ತನ್ನ ಆಸ್ಥಾನಕ್ಕೆ ವಿವಿಧ ಮತಗಳ ಪಂಡಿತರನ್ನು, ಕವಿಗಳನ್ನು ಬರಮಾಡಿಕೊಂಡನು. ಈತನು ವಿದ್ಯಾಪಕ್ಷಪಾತಿಯು, ಧಾರ್ಮಿಕನು ಆಗಿದ್ದನು.[೭]

ಇವನ ಆಶ್ರಯದಲ್ಲಿ ಸಂಸ್ಕೃತ ಮತ್ತು ಕನ್ನಡ ಸಾಹಿತ್ಯಗಳು ವರ್ಧಿಸಿದವು. ಕನ್ನಡದ ಮೊದಲ ಉಪಲಬ್ಧ ಗ್ರಂಥವಾದ 'ಕವಿರಾಜಮಾರ್ಗ'ವನ್ನು ಬರೆದ 'ಶ್ರೀವಿಜಯ'ನಿಗೆ ಆಶ್ರಯವನ್ನು ನೀಡಿದ್ದ ಇವನು ಎಲ್ಲ ಧರ್ಮಗಳನ್ನು ಒಂದೇ ವಿಧವಾಗಿ ಪುರಸ್ಕರಿಸಿದನು. ಗುಲಬರ್ಗಾ ಪರಿಸರದ ಅಧ್ಯಯನಕ್ಕೆ ಇವರ ಇತಿಹಾಸ ಪುಷ್ಟಿಯನ್ನು ನೀಡುತ್ತದೆ.[೮]

ಕಲ್ಯಾಣ ಚಾಲುಕ್ಯರು

ಕರ್ನಾಟಕ ರಾಜಮನೆತನಗಳಲ್ಲಿ ಕಲ್ಯಾಣ ಚಾಲುಕ್ಯರ ಮನೆತನದ ಕೊಡುಗೆ ವಿಶಿಷ್ಟವಾಗಿದೆ. 'ಯಾವೊಬ್ಬ ಚಕ್ರವರ್ತಿ, ತ್ರಿಭುವನಮಲ್ಲ ಆರನೆಯ ವಿಕ್ರಮಾದಿತ್ಯನಂತೆ ನೇಪಾಳದಿಂದ ಶ್ರೀಲಂಕಾದವರೆಗೆ, ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಮತ್ತು ಪಶ್ಚಿಮ ಸಮುದ್ರದಿಂದ, ಪೂರ್ವ ಸಮುದ್ರದವರೆಗೆ ಭಾರತವನ್ನು ಒಂದೇ ಆಡಳಿತಕ್ಕೆ ಒಳಪಡಿಸಿದವನಿಲ್ಲ'.[೯] ಕಲ್ಯಾಣ ಚಾಲುಕ್ಯರ ನೂರಾರು ಶಾಸನಗಳು ಗುಲಬರ್ಗಾ ಜಿಲ್ಲೆಯಲ್ಲಿ ದೊರೆತಿದೆ. ಚಾಲುಕ್ಯರ ಶಾಖೆಯ ಇಮ್ಮಡಿ ತೈಲಪನಿಂದ ರಾಷ್ಟ್ರಕೂಟರ ಇಮ್ಮಡಿ ಕರ್ಕನು ಸುಮಾರು ಕ್ರಿ.ಶ.೯೭೩ರಲ್ಲಿ ಪರಾಜಯಗೊಂಡ ನಂತರ ರಾಷ್ಟ್ರಕೂಟ ಸಾಮ್ರಾಜ್ಯವು ಕ್ಷೀಣಿಸಿತು. ಇಮ್ಮಡಿ ಕರ್ಕನ ಮೊದಲಿಗನಾಗಿದ್ದ ಖೊಟ್ಟಿಗನನ್ನು ಮಾಳವದ ರಾಜಸೀಯಕ ಹರ್ಷನನ್ನು ಸೋಲಿಸಿದಾಗಲೇ ರಾಷ್ಟ್ರಕೂಟ ಸಾಮ್ರಾಜ್ಯದ ತಳಹದಿಯು ತಲ್ಲಣಗೊಂಡಿತು.

ಕಲ್ಯಾಣದ ಚಾಲುಕ್ಯರೆಂದು ಕರೆದುಕೊಳ್ಳುವ ಈ ವಂಶದವರು ಬಾದಾಮಿ ಚಾಲುಕ್ಯರ ವಂಶಜರೆಂದು ಹೇಳಿಕೊಂಡಿದ್ದಾರೆ. ಬಾದಾಮಿ ಚಾಲುಕ್ಯರ ದೊರೆ ಎರಡನೇ ವಿಕ್ರಮಾದಿತ್ಯನ ಸೋದರನಾಗಿದ್ದ ಭೀಮನ ಮಗನಾದ ಕೀರ್ತಿವರ್ಮನು ಈ ವಂಶದ ಮೂಲ ರಾಜನೆಂದು ತಿಳಿದುಬರುತ್ತದೆ. ಈತನ ಪುತ್ರ ಎರಡನೇ ಭೀಮನ ಮಗನಾದ ಅಯ್ಯಣನ ಮಗನೇ ೪ನೇ ವಿಕ್ರಮಾದಿತ್ಯ. ವಿಕ್ರಮಾದಿತ್ಯನ ಮಗನಾದ ಇಮ್ಮಡಿ ತೈಲಪನು ಈ ಸಾಮ್ರಾಜ್ಯದ ಸಂಸ್ಥಾಪಕನೆಂದು ಶಾಸನಾಧಾರಗಳು ಸ್ಪಷ್ಟಪಡಿಸುತ್ತವೆ.[೧೦]

ಆರನೇ ಶತಮಾನದಲ್ಲಿ ಬಾದಾಮಿ ಚಾಲುಕ್ಯರ ಕಾಲದಲ್ಲೇ ಈ ಪಟ್ಟಣವಿತ್ತು. ಇದಕ್ಕೆ 'ಕಂಜಲಪುರ' ಎಂಬ ಹೆಸರೂ ಇತ್ತು. ಕೆಲಕಾಲ ರಾಷ್ಟ್ರಕೂಟರ ವಶದಲ್ಲಿದ್ದು, ಮುಂದೆ ಹನ್ನೊಂದನೆ ಶತಮಾನದ ಮಧ್ಯಭಾಗದಲ್ಲಿ ಒಂದನೇ ಸೋಮೇಶ್ವರನ ಆಡಳಿತದಲ್ಲಿ ಚಾಲುಕ್ಯರ ರಾಜಧಾನಿಯಾಯಿತು. ೬ನೇ ವಿಕ್ರಮಾದಿತ್ಯನ ಕಾಲಕ್ಕೆ ಪ್ರಖ್ಯಾತ ಸಾಂಸ್ಕೃತಿಕ ನೆಲೆಯೂ ಆಯಿತು. ಇದಕ್ಕೆ ಸಾಕ್ಷಿ ಎಂಬಂತೆ 'ಮಿತಾಕ್ಷರ ಸಂಹಿತಾ' ಎಂಬ ಯಶಸ್ವೀ ವ್ಯಾಖ್ಯಾನವನ್ನು ಬರೆದ ವಿಜ್ಞಾನೇಶ್ವರ, 'ವಿಕ್ರಮಾಂಕದೇವ ಚರಿತೆ' ಎಂಬ ಐತಿಹಾಸಿಕ

ಕಾವ್ಯವನ್ನು ಬರೆದ ಕಾಶ್ಮೀರದ ಬಿಲ್ಹಣನ ಕೃತಿಗಳೇ ನಮಗೆ ನಿದರ್ಶನ. ಇವರ ವಂಶಸ್ಥರ ಬಗ್ಗೆ ಹೇಳುವುದಾದರೆ ಚಾಲುಕ್ಯರು ವಂಶದವರು ಮೊದಲ ಹಂತದಲ್ಲಿ ಬಾದಾಮಿ ನಗರದಿಂದ ಆಳಿದ ಕಾರಣ ಅವರು ಬಾದಾಮಿ ಚಾಲುಕ್ಯರು ಎಂದು ಹೆಸರಾದಂತೆ ಈ ವಂಶದವರು ಎರಡನೇ ಹಂತದಲ್ಲಿ ಕಲ್ಯಾಣ ನಗರದಿಂದ ಆಳಿದ ಕಾರಣ ಕಲ್ಯಾಣ ಚಾಲುಕ್ಯರು ಎಂದೇ ಹೆಸರಾದರು.[೧೧]

ಕಲ್ಯಾಣ ಚಾಲುಕ್ಯರ ಕಾಲದ ಶಾಸನವೊಂದು ಹುಣಸಿಹಡಗಿಲದಲ್ಲಿ ದೊರಕಿದೆ. ಈ ಶಾಸನವು ಚಾಳುಕ್ಯ ವಿಕ್ರಮ ವರುಷ ೨೩ ಬಹುಧಾನ್ಯ "ಸಂ.ಕ್ರಿ.ಶ.೧೯೯೯ರಲ್ಲಿ" ಚಾಲುಕ್ಯ ಅರಸ ವಿಕ್ರಮಾದಿತ್ಯನ ಕಾಲದಲ್ಲಿ ಹೊರಡಿಸಲಾಗಿದೆ. ಈ ಶಾಸನವಿರುವ ಸ್ಥಳ ಹುಣಸಿಹಡಗಿಲ ಊರ ಪಶ್ಚಿಮದಲ್ಲಿ ಹೊರ ಭಾಗದಲ್ಲಿರುವ ಪಾರ್ಶ್ವನಾಥ ಬಸದಿಯಲ್ಲಿಯ ಗರ್ಭಗೃಹದ ಪಾರ್ಶ್ವಕ್ಕೆ ಶಾಸನವಿದೆ. ದಂಡನಾಯಕ ಬೀವಣಯ್ಯಗಳ ಭಿನ್ನಪದಿಂದ ಬೌದ್ಧರೆ ರಕ್ಕಸಯ್ಯ ನಾಯಕನು ತನ್ನ ಪ್ರಭುತ್ವದ ಗೊಂಕನೂರಿನ ಕೆಲವು ಹಳ್ಳಿಗಳನ್ನು ಪಾರ್ಶ್ವನಾಥ ಹಾಗೂ ಶಾಂತಿನಾಥ ಬಸದಿಗಳಿಗೆ ದತ್ತಿಯಾಗಿತ್ತನು.[೧೨]

ಇವರ ಕಾಲದ ಇನ್ನೊಂದು ಶಾಸನ ಹರಸೂರಿನಲ್ಲಿ ದೊರಕಿದೆ. ಈ ಶಾಸನ ಚಾಳುಕ್ಯ ದೊರೆ ಮೂರನೇ ಜಗದೇಕಮಲ್ಲ ತನ್ನ ಆಳ್ವಿಕೆಯ ಇಪ್ಪತ್ತನೆ ವರ್ಷದಲ್ಲಿ ಹೊರಡಿಸಿದನು. ಈ ಶಾಸನದ ಕಾಲ ಕ್ರಿ.ಶ.೧೧೮೩. ಇದು ಅವರ ಕಾಲದಲ್ಲಿ ಒಂದು ಶಾಲೆಗೆ ದಾನಕೊಟ್ಟ ವಿಷಯವನ್ನು ಒಳಗೊಂಡಿದೆ. ಆ ಶಾಲೆಗೆ 'ಸೀಮಳ' ಎಂಬ ಹೆಸರಿದ್ದುದ್ದನ್ನು ಶಾಸನ ದಾಖಲಿಸಿದೆ.[೧೩]

ವಿಕ್ರಮಾದಿತ್ಯ ನನ್ನ ನರೇಂದ್ರರ್ಕ್ಕಳ ತೇಜಮಿಲ್ಲಿರ್ಪುದುವಿನ್ನೇಕೆಂದು
ತನ್ನಾಣೆ ಗೋಸಣೆಯಾಗಲ್ಸಕನಾಮವಂ ಕಳೆದು ಚಾಳುಕ್ಯಾಂಕಮಮ್ಮಾಡಿದಂ॥
ಎಸೆವ ಸಕವರ್ಷ ಮೆಂಮಾ
ಣಿಸಿ ವಿಕ್ರಮಾ ವರ್ಷಮೆಂದು ತಂನಯ
ಪೆಸರಂ ವಸುಮತಿಯೊಳು ಪರಿಯಿರಿಸಿದಂ
ಜಸಕ್ಕೆಲ್ಲ ಧರೆಯೊಳು ಧರ್ಮ ವಿನೋದಂ॥

ಎಂಬ ಹೊಸ ಶಕವನ್ನು ಆರನೇ ವಿಕ್ರಮಾದಿತ್ಯ ಕ್ರಿ.ಶ.೧೦೭೬ರ ಮಾರ್ಚ್ ೮ರಂದು ಪಟ್ಟಕ್ಕೆ ಬಂದ ದಿನದಂದು ಪ್ರಾರಂಭಿಸಿದ. ಇತಿಹಾಸದಲ್ಲಿ ಮಹತ್ವದ ಕಾಲಘಟ್ಟವಾದ ಈ

ಶಕವರ್ಷವು ಇವರ ಕಾಲಘಟ್ಟದಲ್ಲಿ ರಚನೆಯಾಯಿತು. ಇದು ಇವರ ರಾಜಕೀಯ ಇತಿಹಾಸ ತಿಳಿದುಕೊಳ್ಳುವಲ್ಲಿ ಮಹತ್ವದಾಗಿದೆ.[೧೪]

ಕಲ್ಯಾಣದ ಕಳಚೂರ್ಯರು

ಈ ವಂಶದವರನ್ನು ಕಲಚೂರಿ ಎಂದು ಕರೆದರೂ ಕೂಡ 'ಕೇಟಚೂರಿ' 'ಕಲಟ್‌ಚೂರಿ', 'ಕರಿಚೂರಿ' ಎಂಬ ಪದಗಳೂ ಶಾಸನಗಳಲ್ಲಿವೆ. ಇವರು ಮೂಲತಃ ಮಧ್ಯಭಾರತದಿಂದ ಬಂದವರೆಂದೂ 'ಯದು' ಮತ್ತು 'ಸಹಸ್ರಬೆತ್' (ಕಾರ್ತಿವೀರ್ಯ) ಅವರ ವಂಶಜರೆಂದು ಕರೆದು ಕೊಳ್ಳುತ್ತಾರೆ. ಇವರು ಹೈಹಯ (ಚೇದಿ) ಕುಟುಂಬದವರೆಂದೂ ಕರೆಯಲಾಗುತ್ತದೆ. ಇವರು ಮೊದಲು 'ಕಾಲಂಜರಾ' (ಬುಂಡೇಲ್‌ಖಂಡದ ಬಂಡಾ ಜಿಲ್ಲೆಯಲ್ಲಿ)ದಿಂದ ಆಳುತ್ತಿದ್ದು, ಮಾಲವ್, ಗುಜರಾತ್ ಕೊಂಕಣ ಮತ್ತು ಮಹಾರಾಷ್ಟ್ರಗಳಲ್ಲಿ ಇವರ ಶಾಖೆಗಳಿದ್ದವೆಂದು ತಿಳಿದುಬರುತ್ತದೆ. ಶಿವಮೊಗ್ಗ ಜಿಲ್ಲೆಯ ಬಂದಳಿಕೆಯ ಕ್ರಿ.ಶ.೧೧೭೪ರ ಶಾಸನದಲ್ಲಿ 'ಕಲಚೂರಿ' ಎಂಬ ಪದವು ಹೇಗೆ ಬಂದಿತೆನ್ನುವುದಕ್ಕೆ ವಿವರಣೆಯಿದೆ. ದ್ರೋಣಾಚಾರ್ಯರ ಮಗ ಅಶ್ವತ್ಥಾಮನ ಅನುಯಾಯಿ ಅಥವಾ ಶಿಷ್ಯ ಸೋಮನೆಂಬಾತನು ಈ ಸಂತತಿಯ ಸ್ಥಾಪಕನೆಂದು ತಿಳಿದುಬರುತ್ತದೆ. ರಾಯಮುರಾರಿ ಸೋವಿದೇವನ ಕ್ರಿ.ಶ.೧೧೭೦ರ ಶಾಸನದಲ್ಲಿ ಶಿವನಿಂದ ಈ ಸಂತತಿ ಉದ್ಭವಿಸಿತು ಎಂದಿದೆ.[೧೫]

ಗುಲಬರ್ಗಾ ಜಿಲ್ಲೆಯಲ್ಲಿ ಕಲಚೂರಿಗಳ ಕಾಲದ ಸುಮಾರು ೫೦ ಶಾಸನಗಳು ದೊರಕಿದೆ. ಅವುಗಳಲ್ಲಿ ಕೆಲವು ಪ್ರಮುಖವಾದವುಗಳನ್ನು ಇಲ್ಲಿ ಗಮನಿಸಬಹುದು. ಸೇಡಂ ತಾಲ್ಲೂಕಿನ ಅಲಂದೆ ಗ್ರಾಮದ ರಾಯಮುರಾರಿ ಸೋವಿದೇವನ ಕ್ರಿ.ಶ.೧೧೬೫ರ ಶಾಸನವು ಮಹಾಪ್ರಧಾನ ದಂಡನಾಯಕ ಏಚರಸನು ಹಾಗೂ ಬಾಚಿದೇವರಸನು ಚೆನ್ನ ಪಾರ್ಶ್ವನಾಥ ಜೀನಾಲಯಕ್ಕೆ ನೀಡಿದ ಹಲವು ದತ್ತಿಗಳನ್ನು ಉಲ್ಲೇಖಿಸಿವೆ.[೧೬] ಸುರಪುರ ತಾಲೂಕಿನ ಹಗರಟಗಿಯ ಕ್ರಿ.ಶ.೧೧೬೬ರ ಕಳಚೂರ್ಯ ಸಂಕಮನ ಶಾಸನವು ಸರ್ವ ಸಮಸ್ಯದ ಹಗರಿಟ್ಟಗೆಯ ಅಗ್ರಹಾರದ ಮಹಾಜನರು, ಸಂತೆಗಾಗಿ ಬರುವ ವರ್ತಕರು ಎತ್ತು, ಕತ್ತೆ ಹಾಗೂ ಕೋಣಗಳ ಹೆಸರಿನ ಮೇಲೆ ವೀಳೆಯವರ ಅಡಕೆಗಳನ್ನು ದೇವರಿಗೆ ನೀಡುತ್ತಿದ್ದುದು ದಾಖಲಾಗಿರುವುದು ಗಮನಾರ್ಹ.[೧೭]

ಗುಲಬರ್ಗಾ ತಾಲೂಕಿನ ಕೆಲ್ಲೂರಿನ ಕ್ರಿ.ಶ.೧೧೮೨ರ ಶಾಸನವು ಚಾಳುಕ್ಯ ಪ್ರತಾಪ ಚಕ್ರವರ್ತಿ ಸೋಮೇಶ್ವರನ ಕಾಲದಲ್ಲಿ ಅವರಾದಿಯ ಅಗ್ರಹಾರ ೪೨ ಮಹಾಜನಗಳ

ಸಮ್ಮುಖದಲ್ಲಿ ಮಹಾ ಮಂಡಲೇಶ್ವರ ಅಲ್ಲಹುಲಿದೇವನು ಮಹಾದೇವರ ದೇವರಿಗೆ ಬಿಟ್ಟ ದತ್ತಿಯನ್ನು ದಾಖಲಿಸುತ್ತದೆ.[೧೮] ಇದೇ ಪರಿಸರದ ಹರಸೂರಿನ ಕ್ರಿ.ಶ.೧೧೭೨ ಭಾಷೆ, ಲಿಪಿ ಕನ್ನಡ, ಶಾಸನ ಈ ಶಾಸನವು ಒಳಗೊಂಡಿರುವ ವಿಷಯ ಸಮಸ್ತ ಬಿರುದಾಂಕಿತನಾದ ರಾಯಮುರಾರಿ ಸೋವಿದೇವನ ಮಹಾದಂಡನಾಯಕ ಮಾಧವಯ್ಯ ನಾಯಕನು, ಅಲಂದೆಯ ಸೋಮನಾಥ ಲಬ್ಧ ವರಪ್ರಸಾದ ಮನ್ನೆಯಸಿಂಹ ರಾಮರಸ ಹಾಗೂ ಮಹಾಮಂಡಲೇಶ್ವರ ವೀರಗೊಂಕರಸರೊಡನೆ ಶಾಲೆಯ ಸೀಮಳದ (ಹರಸೂರು) ಶ್ರೀ ಭೋಗೇಶ್ವರ ದೇವರಂಗ ಭೋಗಕ್ಕಾಗಿ ಗೊಂಕನೊರೆಪ್ಪತ್ತರ ಬಳಿಯ ಅಂಕುಲಗೆಯನ್ನು ದತ್ತಿಯಾಗಿರಿಸಿದ್ದನು. ಈ ಶಾಸನಗಳಿಂದ ತಿಳಿದುಬರುವ ಅಂಶವೆಂದರೆ ಕಳಚೂರ್ಯರು ತಮ್ಮ ರಾಜಕೀಯ ವ್ಯವಸ್ಥೆಯಲ್ಲಿ ಶಿಕ್ಷಣಕ್ಕೆ ಅವರು ಕೊಟ್ಟ ಪ್ರಾಧಾನ್ಯತೆಯನ್ನು ತಿಳಿಯಬಹುದಾಗಿದೆ.[೧೯] ಶೈವ ಮತಾವಲಂಬಿಯಾದ ಕಲಚೂರಿ ಮನೆತನದ ಲಾಂಛನವು ಸಹ ನಂದಿಯಾಗಿದೆ. ಕಳಚೂರ್ಯರ ಹೆಚ್ಚಿನ ಶಾಸನಗಳು ಬಿಜ್ಜಳ ಅರಸನ ಕಾಲಕ್ಕೆ ಸೇರಿದವುಗಳಾಗಿವೆ.

ವಿಜಯನಗರ

ವಿಜಯನಗರ ಸಾಮ್ರಾಜ್ಯವು ಕ್ರಿ.ಶ.೧೩೩೬ರಲ್ಲಿ ಸಂಗಮನ ಮಕ್ಕಳಾದ ಹರಿಹರ ಮತ್ತು ಬುಕ್ಕರಾಯರು ಹಂಪಿಯಲ್ಲಿ ಸ್ಥಾಪಿಸಿದರು. ಈ ಸಾಮ್ರಾಜ್ಯ ಸ್ಥಾಪನೆಯ ಮುಖ್ಯ ಉದ್ದೇಶ ಹಿಂದೂ ಧರ್ಮ ಮತ್ತು ಸಂಸ್ಕೃತಿಯನ್ನು ಸಂರಕ್ಷಿಸಿ ಪೋಷಿಸುವುದಾಗಿತ್ತು. ಈ ಸಾಮ್ರಾಜ್ಯ ಸ್ಥಾಪನೆಗೆ ವಿದ್ವಾಂಸರು ಪ್ರೇರಕರಾಗಿದ್ದರು.

ಕೃಷ್ಣದೇವರಾಯನು ಪಟ್ಟಕ್ಕೆ ಬಂದ ಕೂಡಲೇ ಉಮ್ಮತ್ತೂರಿನ ಗಜಪತಿಯನ್ನು ಸೋಲಿಸಿ ಆದಿಲ್ ಖಾನನ್ನು ಡೋಣಿ, ಕೋವಿಲಕೊಂಡ ಯುದ್ದಗಳಲ್ಲಿ ಪರಾಭವಗೊಳಿಸಿ, ಕ್ರಿ.ಶ.೧೫೦೯ರಲ್ಲಿ ಪಟ್ಟಾಭಿಷಿಕ್ತನಾದನು. ಅನಂತರ ಶಿವನಸಮುದ್ರ, ಉಮ್ಮತ್ತೂರು, ಮಂಗಳೂರುಗಳಲ್ಲಿ ಕಾಣಿಸಿದ್ದ ಬಂಡಾಯಗಳನ್ನು ಹತ್ತಿಕ್ಕಿದನು. ವಿಜಾಪುರದ ವಶದಲ್ಲಿದ್ದ ಗೋವೆಯನ್ನು ಗೆಲ್ಲಲು ಪೋರ್ಚುಗೀಸರಿಗೆ ನೆರವಾದನು. ಈತನು ಗಜಪತಿಯನ್ನು ಸೋಲಿಸಿದ ನಂತರ ಅವನ ರಾಜಧಾನಿಯಾಗಿದ್ದ ಕಟಕವರೆಗೂ ವಿಜಯಶಾಲಿಯಾಗಿ ಸಾಗಿದ. ಅದೇ ರೀತಿ ವಿಜಾಪುರದ ಅರಸರನ್ನು ಸೋಲಿಸಿ. ಕ್ರಿ.ಶ.೧೫೨೦ರಲ್ಲಿ ನಾಲ್ಕು ದಿನ ವಿಜಾಪುರದ ರಾಜಧಾನಿಯಲ್ಲೇ ತಳವೂರಿದನು.[೨೦]

ರಾಯಚೂರು ದೋ-ಅಬ್‌ನ್ನು ತನ್ನ ವಶಕ್ಕೆ ತೆಗೆದುಕೊಂಡನು. ಗುಲಬರ್ಗಾ, ಬೀದರ್ (ಆಗ ಬಹಮನಿಗಳ ರಾಜಧಾನಿಯಾಗಿದ್ದರೂ ಬರೀದ್‌ಷಾಹಿಗಳ ವಶವಾಗಿತ್ತು)ಗಳನ್ನು

ವಿಜಯಶಾಲಿಯಾಗಿ ಪ್ರವೇಶಿಸಿದನು. ಕೃಷ್ಣದೇವರಾಯನು ಕ್ರಿ.ಶ.೧೫೨೩ರಲ್ಲಿ ಗುಲಬರ್ಗಾವನ್ನು ತನ್ನ ಸೈನ್ಯದೊಡನೆ ಪ್ರವೇಶಿಸಿದ ಮೇಲೆ, ಮೂರನೇ ಮಹಮ್ಮದನ ಮೊಮ್ಮಕ್ಕಳಾದ ೩ನೇ ಅಲ್ಲಾಉದ್ ದೀನವಲಿಉಲ್ಲಾ ಮತ್ತು ಕಲೀಮುಲ್ಲಾರನ್ನು (ಅಮೀರರುಗಳು ಬಂಧಿಸಿದ್ದರು) ಬಿಡುಗಡೆ ಮಾಡಿ ಅನಂತರ ಹಿರಿಯ ಮಗನಾದ ಮೂರನೇ ಅಲ್ಲಾ ಉದ್‌ದೀನನನ್ನು ಗುಲಬರ್ಗಾದ ಸುಲ್ತಾನನ್ನಾಗಿ ನೇಮಿಸಿ ವಲಿಉಲ್ಲಾ ಮತ್ತು ಕಲೀಮುಲ್ಲಾರನ್ನು ತನ್ನೊಡನೆ ವಿಜಯನಗರಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಸುರಕ್ಷಿತವಾಗಿಟ್ಟನು. ಈ ರಾಜಕೀಯ ಸಾಧನೆ ಯಿಂದಾಗಿ ಕೃಷ್ಣದೇವರಾಯನಿಗೆ 'ಯವನ ರಾಜ್ಯ ಸ್ಥಾಪನಾಚಾರ್ಯ' ಎಂಬ ಬಿರುದು ಇತ್ತು.

ಈತನ ತರುವಾಯ ಅಚ್ಯುತರಾಯನು (ಕ್ರಿ.ಶ.೧೫೨೯–೪೨) ಅಧಿಕಾರಕ್ಕೆ ಬಂದನು. ಇವನ ನಂತರ ಇವನ ಸೋದರ ಪುತ್ರ ಸದಾಶಿವರಾಯನು ಅಧಿಕಾರಕ್ಕೆ ಬಂದನು. ಆದರೆ ನಾಮಮಾತ್ರ ಅರಸನಾಗಿದ್ದು, ಆಡಳಿತವನ್ನೆಲ್ಲಾ ಕೃಷ್ಣದೇವರಾಯನ ಅಳಿಯ ರಾಮರಾಯನ ಕೈಯಲ್ಲಿ ಇತ್ತನು. ರಾಮರಾಯ ಒಡೆದು ಹೋದ ಐದು ಶಾಹಿ ಮನೆತನಗಳ ಲಾಭ ಪಡೆದು ಸಾಮ್ರಾಜ್ಯವನ್ನು ಕೃಷ್ಣಾನದಿವರೆಗೆ ವಿಸ್ತರಿಸಿದನು. ಆದರೆ ಕ್ರಿ.ಶ.೧೫೬೫ರಲ್ಲಿ ತಾಳಿಕೋಟೆ ಯುದ್ಧದಲ್ಲಿ ವಿಜಯನಗರಕ್ಕೆ ಸೋಲುಂಟಾಯಿತು. ಅಳಿಯ ರಾಮರಾಯನನ್ನು ಸೆರೆ ಹಿಡಿದರು. ವಿಜಯನಗರದ ಸಾಮ್ರಾಜ್ಯವು ಮತ್ತೆ ಹಲವು ದಶಕಗಳ ಕಾಲ ಮುಂದುವರಿದರೂ ಗುಲಬರ್ಗಾ ಜಿಲ್ಲೆಯ ಮೇಲೆ ಅವರ ಪ್ರಭಾವವು ಯಾವುದೇ ರೀತಿಯಲ್ಲೂ ಉಂಟಾಗಲಿಲ್ಲ. ವಿಜಾಪುರದ ಆದಿಲ್‌ಷಾಹಿಗಳು ಈ ಭಾಗವನ್ನು ತಮ್ಮ ವಶಕ್ಕೆ ಪೂರ್ಣವಾಗಿ ತೆಗೆದುಕೊಂಡರು.[೨೧] ನಂತರ ಬಂದ ಬಹುಮನಿ ಸುಲ್ತಾನರು, ವಿಜಾಪುರದ ಆದಿಲ್‌ಶಾಹಿಗಳು ಈ ಭಾಗವನ್ನು ಆಡಳಿತಕ್ಕೆ ಒಳಪಡಿಸಿದರು. ಪ್ರಸ್ತುತ ಅಧ್ಯಯನ ಈ ಪರಿಸರದ ಶಾಸನಗಳಿಗೆ ಮತ್ತು ಸ್ಮಾರಕಗಳಿಗೆ ಸೀಮಿತವಾಗಿರಿಸಲಾಗಿದೆ.

೨.೩. ಸಾಮಾಜಿಕ ಇತಿಹಾಸ :

ಸಮಾಜವೆಂಬುದು ಪರಸ್ಪರ ಸಂಬಂಧಗಳನ್ನುಳ್ಳ ಜನರ ಸುವ್ಯವಸ್ಥಿತ ಸಮೂಹ. ಈ ಸಮಾಜವು ಜಾತಿ, ಕುಟುಂಬ, ಸಂಪ್ರದಾಯ ಹಬ್ಬ–ಹರಿದಿನಗಳು, ಆಚರಣೆ, ಸಮಾಜೋಪಯೋಗಿ ಕಾರ್ಯಗಳ ಹಾಗೂ ಪಾಪ–ಪುಣ್ಯಗಳ ಪರಿಕಲ್ಪನೆ ಮುಂತಾದವುಗಳನ್ನು ಒಳಗೊಂಡಿದೆ. ಸಮಾಜ ವ್ಯವಸ್ಥೆಯ ಮುಲಾಂಶಗಳಾದ ಇವುಗಳ ಬಗ್ಗೆ ಶಾಸನಗಳು ವಿಶೇಷವಾಗಿ

ವರ್ಣಿಸುವುದಿಲ್ಲ. ಆದರೂ ಸಹ ಸಂದರ್ಭಾನುಸಾರ ಅಲ್ಲಲ್ಲಿ ಚದುರಿ ಹೋಗಿರುವ ಅಂಶಗಳು ಮತ್ತು ಆಕರಗಳ ಮೇಲೆ ಗುಲಬರ್ಗಾ ಪರಿಸರದ ಸಮಾಜವನ್ನು ಈ ರೀತಿ ಪುನಃ ಕಟ್ಟಿ ಕೊಡುವ ಪ್ರಯತ್ನ ಮಾಡಲಾಗಿದೆ.[೨೨] ಇಲ್ಲಿನ ಕುಟುಂಬದ ಸ್ವರೂಪ, ಮಹಿಳೆಯರ ಸ್ಥಾನಮಾನ, ಸಾಮಾಜಿಕ ಸಮಸ್ಯೆಗಳು, ಜಾತ್ರೆಗಳು, ಹಬ್ಬಗಳು, ವಿಧಿಗಳು, ಸಮಾಜದಲ್ಲಿನ ಕುಟುಂಬ ವ್ಯವಸ್ಥೆ, ಆಭರಣಗಳು, ಮನೋರಂಜನೆ ಇವೆಲ್ಲವೂ ಸಮಾಜದ ಸಂಸ್ಕೃತಿಯ ಮಟ್ಟವನ್ನು ಪ್ರತಿಬಿಂಬಿಸುವ ಅಂಶಗಳಾಗಿವೆ.

ವರ್ಣ ಮತ್ತು ವರ್ಣಾಶ್ರಮ ಪದ್ಧತಿ:

ಈ ವ್ಯವಸ್ಥೆಯನ್ನು ನಾವು ವೇದಗಳ ಕಾಲದಿಂದಲೂ ಕಾಣುತ್ತೇವೆ. ಆದರೆ ಅಂದು ವರ್ಣ ಆಧಾರಿತ ಜಾತಿವ್ಯವಸ್ಥೆ ಇದ್ದು, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳು ಜಾತಿ ವ್ಯವಸ್ಥೆಗೆ ಮೂಲ ಎಂದು ತಿಳಿದುಬರುತ್ತದೆ. ಅಂದಿನ ಸಾಮಾಜಿಕ ಸ್ತರ ವಿನ್ಯಾಸದಲ್ಲಿ ಬ್ರಾಹ್ಮಣರು ಅತ್ಯಂತ ಮೇಲು ಸ್ತರದಲ್ಲಿದ್ದು ಹೆಚ್ಚಿನ ಗೌರವನ್ವಿತರೂ, ಪ್ರಭಾವಶಾಲಿಗಳೂ ಆಗಿದ್ದರು. ವೇದಗಳ ಕಾಲದಲ್ಲಿ ಬ್ರಾಹ್ಮಣನಾದವನು ರಾಜರುಗಳಿಂದ ದಾನವನ್ನು ಪಡೆದುಕೊಳ್ಳುತ್ತಿದ್ದನು. ಇದಕ್ಕೆ ನಿದರ್ಶನವೆಂಬಂತೆ "ಹರಸೂರಿನ ಶಾಸನವೊಂದು ಶಾಲೆಗೆ ದಾನವಿತ್ತ ವಿಷಯವನ್ನು ತಿಳಿಸುತ್ತದೆ". ಅದು ಹೀಗಿದೆ. ಸಮಸ್ತ ಬಿರುದಾಂಕಿತನಾದ ರಾಯಮುರಾರಿ ಸೋವಿದೇವನ ಮಹಾದಂಡನಾಯಕ ಮಾಧವಯ್ಯ ನಾಯಕರು ಅಲಂದೆಯ ಸೂಧನಾಥ ಲಬ್ದ ವರಪ್ರಸಾದ 'ಮನ್ನೆಯಸಿಂಹ ರಾಮರಸ ಹಾಗೂ ಮಹಾಮಂಡಲೇಶ್ವರ ವೀರಗೊಂಕರಸರೊಡನೆ ಶಾಲೆಯ ಸೀಮಳದ (ಹರಸೂರು)ಶ್ರೀ ಭೊಗೇಶ್ವರ ದೇವರಂಗ ಭೋಗಕ್ಕಾಗಿ ಗೊಂಕನೂರಿಪ್ಪತ್ತರ ಬಳಿಯ ಅಂಕುಲಗೆಯನ್ನು ದತ್ತಿಯಾಗಿರಿಸಿದ್ದು, ಅಂದರೆ, ಶಾಲೆ ದಾನ ನೀಡಿದ ವಿಷಯ ಇಲ್ಲಿ ತಿಳಿದು ಬರುತ್ತದೆ. ಶಾಲೆಯಲ್ಲಿ ಬ್ರಾಹ್ಮಣರೇ ಶಿಕ್ಷಕರಾಗಿದ್ದರಿಂದ ಇದು ಪರೋಕ್ಷವಾಗಿ ಅವರಿಗೆ ಸಂದ ದಾನವೆನ್ನಬಹುದು.[೨೩]

ಸಮಾಜದ ಆಡಳಿತ ವ್ಯವಸ್ಥೆಯಲ್ಲಿ ಕ್ಷತ್ರಿಯನು(ರಾಜನು) ತಮ್ಮ ಪುಣ್ಯಾರ್ಜನೆಗಾಗಿ ಬ್ರಾಹ್ಮಣರನ್ನು ಅವಲಂಬಿಸಿದ್ದರು. ರಾಜ್ಯಕ್ಕೆ ಒಡೆಯರಾದ ಅರಸರು ದೇವ ದ್ವಿಜರ ದಾಸರಾಗಿ ಅವರನ್ನು ಪೂಜಿಸುತ್ತಿದ್ದರು. ರಾಜರು ಯಜ್ಞಯಾಗಗಳನ್ನು ಕೈಗೊಳ್ಳುತ್ತಿದ್ದರು. ಕ್ಷತ್ರಿಯರ ವಿವಾಹಗಳು ರಾಜಕೀಯ ಹಿನ್ನೆಲೆಯಿಂದ ನೆರವೇರುತ್ತಿದ್ದವು. ಕಲ್ಯಾಣ ಚಾಲುಕ್ಯರ ಅರಸ ಆರನೇ ವಿಕ್ರಮಾದಿತ್ಯ ಹಲವು ಧರ್ಮಿಯರ ಕನ್ಯೆಯರನ್ನು ವಿವಾಹವಾದದನ್ನು ಕಾಣಬಹುದು.

ಧಾರ್ಮಿಕ ವಿಷಯದಲ್ಲಿ ಕ್ಷತ್ರಿಯರು (ರಾಜನು) ತಮ್ಮ ಅಧಿಕಾರವನ್ನು ಪ್ರಜೆಗಳ ಮೇಲೆ ಹೇರದೆ, ಧರ್ಮ ಸಮನ್ವಯವನ್ನು ಕಾಪಾಡಿಕೊಂಡು ಬರುತ್ತಿದ್ದನು. ರಾಜ್ಯದ ಎಲ್ಲಾ ದೇವಾಲಯಗಳಿಗೆ ಅರಸನು ದಾನ–ದತ್ತಿಗಳನ್ನು ನೀಡಿರುವುದನ್ನು ಶಾಸನಗಳಿಂದ ತಿಳಿದುಬರುತ್ತದೆ.

ಚತುರ್ವರ್ಣ ವ್ಯವಸ್ಥೆಯಲ್ಲಿ ತೃತೀಯ ಸ್ಥಾನವನ್ನು ಪಡೆದುಕೊಂಡವರು ವೈಶ್ಯರು. ಇವರು ಬ್ರಹ್ಮನ ತೊಡೆಗಳಿಂದ ಜನಿಸಿದವರೆಂದು ವೇದಗಳಿಂದ ತಿಳಿದುಬರುತ್ತದೆ. ವೈಶ್ಯರು ವ್ಯಾಪಾರವನ್ನು ಮೈಗೂಡಿಸಿಕೊಂಡವರು. ಗುಲಬರ್ಗಾ ಕೋಟೆಯಲ್ಲಿ ದೊರೆತ ಶಾಸನವೊಂದರಲ್ಲಿ ಅಂದು ಮಾರಾಟವಾಗುತ್ತಿದ್ದ ನಿತ್ಯ ವ್ಯವಹಾರದ ಹಣ್ಣು, ಕಾಯಿಗಳ ಬೆಲೆಗಳನ್ನು 'ದಮ್ಮ' 'ದಮ್ಮಾಣಿ' ರೂಪದಲ್ಲಿ ದಾಖಲಿಸಿದೆ.[೨೪]

ಕುಟುಂಬ ವ್ಯವಸ್ಥೆ :

ಕುಟುಂಬ ವ್ಯವಸ್ಥೆ, ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ಕಂಡು ಬಂದಂತೆ, ನಮ್ಮ ದೇಶದಲ್ಲಿ ವೇದಗಳ ಕಾಲದಿಂದಲೂ ನಡೆದು ಬಂದಿದೆ. ಈ ಸಂಪ್ರದಾಯದಂತೆ ಗುಲಬರ್ಗಾ ಪರಿಸರದಲ್ಲಿಯೂ ಸಹ ಅವಿಭಕ್ತ ಕುಟುಂಬ ಪದ್ದತಿ ಜಾರಿಯಲ್ಲಿತ್ತು. ಕುಟುಂಬದ ಎಲ್ಲ ಸದಸ್ಯರು ಒಂದೇ ಮನೆಯಲ್ಲಿ ಅನ್ಯೋನ್ಯವಾಗಿ ವಾಸಿಸುತ್ತಿರುವುದು ನಾವು ಇಂದಿಗೂ ಸಹ ಕಾಣುತ್ತೇವೆ. ಮನೆಯಲ್ಲಿ ಯಾವುದೇ ರೀತಿಯ ಸಭೆ, ಸಮಾರಂಭಗಳು, ಧಾರ್ಮಿಕ ಕಾರ್ಯಗಳು ನಡೆಸಬೇಕಾದರೆ ಮನೆಯ ಯಜಮಾನನೇ ಅಂತಿಮ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಪಡೆದಿದ್ದಾನೆ. ಮನೆಯ ಯಜಮಾನನಿಗೆ ಎಲ್ಲ ಸದಸ್ಯರು ಗೌರವದಿಂದ ಕಾಣುತ್ತಾರೆ.[೨೫] ಆದರೆ ಇತ್ತೀಚೆಗೆ ಸಾರಿಗೆ ಸಂಚಾರ, ಶಿಕ್ಷಣ, ವ್ಯಾಪಾರ, ಕೈಗಾರಿಕೆಗಳ ಬೆಳವಣಿಗೆಯ ಫಲವಾಗಿ ನಗರೀಕರಣ ಹೆಚ್ಚುತ್ತಿರುವುದರಿಂದ ಗ್ರಾಮೀಣ ಜನರು ನಗರ ಪ್ರದೇಶಗಳಿಗೆ ಬಂದು ವಾಸ ಮಾಡಲು ಆರಂಭಿಸುವುದರಿಂದ ಹಿಂದಿನಿಂದಲೂ ನಡೆದು ಬಂದ ಸತ್‌ಸಂಪ್ರದಾಯಗಳು ಮತ್ತು ಹಿರಿಯರಿಗೆ ಸಲ್ಲುವ ಗೌರವಧಾರಗಳು ಕೃತಕಗೊಂಡು, ಅವಿಭಕ್ತ ಕುಟುಂಬಗಳು ಸ್ವಲ್ಪಮಟ್ಟಿಗೆ ಕುಂಠಿತಗೊಂಡಿರುವುದು ಕಂಡು ಬರುತ್ತದೆ.[೨೬]

ಶಿಕ್ಷಣ ಪದ್ಧತಿ :

ಅಗ್ರಹಾರಗಳು ಮತ್ತು ಘಟಿಕಾಲಯಗಳು ಅಂದಿನ ಪ್ರಮುಖ ಶಿಕ್ಷಣ ಕೇಂದ್ರಗಳಾಗಿದ್ದವು. ಅಗ್ರ+ಹಾರ=ಅಗ್ರಹಾರ. ಅಂದರೆ ಶ್ರೇಷ್ಠರಿಗೆ ಅಂದರೆ ಬ್ರಾಹ್ಮಣರಿಗೆ ಕೊಟ್ಟ ಸ್ಥಳಗಳು. ಗುಲಬರ್ಗಾ ಜಿಲ್ಲೆಯಲ್ಲಿ ಮುದ್ನೂರು, ಹಗರಿಟಗೆ, ನಾಗಾವಿ, ಹುನಗುಂಟಾ, ಗೊಬ್ಬೂರ,

ಇಂಗಳಿಗೆ, ಸುಲೇಪೇಠ, ದಿಗ್ಗಾವಿಗೆ, ಸೇಡಾ, ಸಿರವಾಳ, ಹರಸೂರು ಇತ್ಯಾದಿ ಪ್ರಮುಖ ಅಗ್ರಹಾರಗಳಿದ್ದವು. ಇಲ್ಲಿ ವಾಸಿಸುತ್ತಿದ್ದ ಮಹಾಜನರು ಊರಿನ ಒಡೆಯರು ಎಂದೆನಿಸಿಕೊಳ್ಳುತ್ತಿದ್ದರು. ಊರಲ್ಲಿ ಕರಗಳನ್ನು ಇವರೇ ನಿಗದಿಪಡಿಸುತ್ತಿದ್ದರು ಎಂಬ ವಿಚಾರ ಮುದ್ನೂರಿನ ಶಾಸನದಲ್ಲಿ ತಿಳಿದುಬರುತ್ತದೆ. ಅದರಲ್ಲಿ ಮಹಾಜನರು ಕುಂಬಾರರಿಗೆ ಹಲವು ಕರಗಳನ್ನು ನಿಗದಿಸಿದ್ದಾರೆ.[೨೭]

ಘಟಿಕಸ್ಥಾನ ಉಚ್ಚಮಟ್ಟದ ವಿದ್ಯಾಕೇಂದ್ರವಾಗಿತ್ತು. ಇಲ್ಲಿ 'ಗಳಿಗೆಯ ಬಟ್ಟಲುಗಳನ್ನು' ಸಮಯ ತಿಳಿಯಲು ಇಡುತ್ತಿದ್ದುದರಿಂದ, ಘಟಿಕ ಸ್ಥಾನಗಳೆಂದು ಕರೆಯುತ್ತಿದ್ದರು. ನಾಗಾವಿಯು ಗುಲಬರ್ಗಾ ಜಿಲ್ಲೆಯ ಪ್ರಸಿದ್ಧ ಘಟಿಕಸ್ಥಾನವಾಗಿತ್ತು. ಇಲ್ಲಿಯ ತ್ರೈಪುರುಷ ದೇವರ ಶಾಲೆ ಘಟಿಕಸ್ಥಾನವಾಗಿತ್ತು. ಈ ಅಗ್ರಹಾರವನ್ನು ಕಾಳಿದಾಸ ದಂಡಾಧೀಶದಿಂದ ಚತುರ್ವೇದ ಪಾರಂಗತರಾದ ೪೦೦ ವೀರರಿಗೆ ಕೊಡಲಾಗಿತ್ತು. ಅಲ್ಲಿ ೨೦೦ ಜನ ವೇದಾಧ್ಯಾಯಿಗಳು, ೫೦ ಶಾಸ್ತ್ರಾಧ್ಯಾಯಿಗಳು, ಮೂರು ಜನ ಉಪಾಧ್ಯಾಯರು, ಮೂರು ಜನ ಭಟ್ಟದರ್ಶನ, ನ್ಯಾಸ, ಪ್ರಭಾಕರ ವ್ಯಾಖ್ಯಾತೃಗಳು, ಮೂರು ಜನ ವೇದವನ್ನೋದಿಸುವ ಉಪಾಧ್ಯಾಯರು, ಆರು ಜನ ಶಾಲೆಯ ಸರಸ್ವತಿ ಭಂಡಾರಿಗರು ಇದ್ದರಂತೆ. ದೀಪ ನೈವೇದ್ಯಗಳಿಗಾಗಿ ೧೦೦೦ ಮತ್ತರು ಭೂಮಿಯನ್ನು ಕಾಳಿದಾಸ ದಂಡಾಧೀಶ ದಾನವಾಗಿ ನೀಡಿದನು.[೨೮]

ಜಾತ್ರೆಗಳು ಮತ್ತು ಹಬ್ಬಗಳು:

ಜಾತ್ರೆಗಳು ಮತ್ತು ಹಬ್ಬಗಳು ಭಾರತೀಯ ಸಂಸ್ಕೃತಿಯ ಒಂದು ಅವಿಭಾಜ್ಯ ಅಂಗವಾಗಿದೆ. ಪ್ರಸ್ತುತ ಅಧ್ಯಯನದ ವ್ಯಾಪ್ತಿಯ ಪ್ರದೇಶದಲ್ಲಿ ಶ್ರೀಶರಣ ಬಸವೇಶ್ವರ ಜಾತ್ರೆ ಹಾಗೂ ಖಾಜಬಂದೇ ನವಾಜರ ಉರಸ್(ಜಾತ್ರೆ) ಈ ಎರಡು ಜಾತ್ರೆಗಳು ಹಿಂದಿನಿಂದಲೂ ಸಾಗಿ ಬಂದಿರುವುದನ್ನು, ನಾವು ಹಲವಾರು ಸಾಹಿತ್ಯದ ಆಧಾರಗಳಿಂದ ತಿಳಿಯಬಹುದಾಗಿದೆ.

ಇಂದಿಗೂ ನಮ್ಮ ಜನ ವಿಶಿಷ್ಟ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಬರುತ್ತಿದ್ದಾರೆ. ಜೊತೆಗೆ ಅದನ್ನು ಮುಂದಿನ ಜನತೆಗೆ ಮುಂದುವರೆಸಿಕೊಂಡು ಹೋಗುವ ಬಗ್ಗೆ ಅರಿವು ಮೂಡಿಸುತ್ತಿದ್ದಾರೆ.

ಮನೋರಂಜನೆ, ಆಹಾರ, ಉಡುಗೆ, ಆಭರಣ:

ಪ್ರಾಚೀನ ಕಾಲದಿಂದಲೂ ಗುಲಬರ್ಗಾ ಪರಿಸರದ ಸಾಮಾಜಿಕ ವ್ಯವಸ್ಥೆಯಲ್ಲಿ ಬೇಟೆಗಾರಿಕೆ, ಕುದುರೆ ಸವಾರಿ, ಕತ್ತಿವರಸೆ ಇವುಗಳು ರಾಜನಿಗೆ ಪ್ರಿಯವಾಗಿತ್ತು. ಇಲ್ಲಿನ ಜನ

ಆಹಾರಕ್ಕಾಗಿ ಅಕ್ಕಿ, ಜೋಳ, ಎಳ್ಳು, ಏಕದಳ ಮತ್ತು ದ್ವಿದಳ ಧಾನ್ಯಗಳನ್ನು ಬೆಳೆಯುತ್ತಿದ್ದರು. ಹಾಗೆಯೇ ಪುರುಷರು ಧೋತಿಯನ್ನು, ಮಹಿಳೆಯರು ಸೀರೆಯನ್ನು ಉಡುತ್ತಿದ್ದರು. ಮೇಲ್ವರ್ಗದ ಜನರು, ರಾಜ ಪರಿವಾರದವರು, ಪೈಜಾಮ, ಉದ್ದನೆಯ ನಿಲುವಂಗಿ ಹಾಗೂ ಟೋಪಿಯನ್ನು ಧರಿಸುತ್ತಿದ್ದರು.

ಇಲ್ಲಿನ ಮೇಲ್ವರ್ಗದ ಜನರು ಚಿನ್ನ, ವಜ್ರ, ಮತ್ತು ಹವಳ, ಕೆಂಪುಕಲ್ಲು ಇತರೆ ಅಮೂಲ್ಯ ಹರಳುಗಳಿಂದ ತಯಾರಿಸಿದ ಆಭರಣಗಳು ಧರಿಸುತ್ತಿದ್ದರು. ಮುಖ್ಯವಾಗಿ ಬಳೆ, ತೋಳಬಂದಿ ಕಾಪು, ಸರಗಳು, ಉಂಗುರ, ಡಾಬು, ತೀಕಿ, ಚೈನು, ನಡುಪಟ್ಟಿ, ಕಡಗ ಈ ರೀತಿಯ ಆಭರಣಗಳನ್ನು ಹಿಂದಿನ ಕಾಲದಲ್ಲಿ ಪುರುಷರು ಸಹ ಆಭರಣಗಳನ್ನು ಹಾಗೂ ಅಲಂಕಾರಿಕ ವಸ್ತುಗಳನ್ನು ಬಳಸುತ್ತಿದ್ದರು ಎಂದು ತಿಳಿದು ಬರುತ್ತದೆ.[೨೯]

೨.೪. ಧಾರ್ಮಿಕ ಇತಿಹಾಸ :

ಜೈನ ಧರ್ಮ:

ಕ್ರಿ.ಪೂ. ೩ನೆಯ ಶತಮಾನದಲ್ಲಿ ಅಂತಿಮ ಶ್ರುತಿ ಕೇವಲಿ ಭದ್ರಬಾಹು ಭಟ್ಟಾರಕರಿಂದ ಹಾಗೂ ಸಂಪ್ರತಿ ಚಂದ್ರಗುಪ್ತರಿಂದ ಕರ್ನಾಟಕಕ್ಕೆ ಜೈನ ಧರ್ಮದ ಆಗಮನವಾಯಿತು.[೩೦] ಜೈನ ಧರ್ಮದಲ್ಲಿ ದಿಗಂಬರ ಹಾಗೂ ಶ್ವೇತಾಂಬರಗಳೆಂಬ ಪಂಗಡಗಳಿದ್ದು ಗುಲಬರ್ಗಾ ಪರಿಸರದಲ್ಲಿ ದಿಗಂಬರ ಪಂಗಡದವರೇ ಹೆಚ್ಚಾಗಿರುವುದಾಗಿ ತಿಳಿದುಬರುತ್ತದೆ. ಕ್ರಿ.ಶ.೧ನೇ ಶತಮಾನದಲ್ಲಿ ಪಾದಲಿಪ್ತಾಚಾರ್ಯರು ದಕ್ಷಿಣ ಭಾರತಕ್ಕೆ ಬಂದಾಗ ಮಳಖೇಡದ ಸುತ್ತಮುತ್ತ ಶ್ವೇತಾಂಬರರಿದ್ದಾರೆ ಎಂಬುದಾಗಿ ತಿಳಿದು ಬರುತ್ತದೆ. ಗುಲಬರ್ಗಾ ಜಿಲ್ಲೆಯ ಶಹಾಪುರ ತಾಲೂಕಿನ ಗೋಗಿ ಗ್ರಾಮದ ಸಮೀಪ ಚಾರಣಗಿರಿ ಬೆಟ್ಟದ ಬಂಡೆಯಲ್ಲಿ ಪಾರ್ಶ್ವನಾಥ ತೀರ್ಥಂಕರ ಪ್ರತಿಮೆಯನ್ನು ಕಡೆದಿರುವುದು ಕಂಡುಬರುತ್ತದೆ. ಇದು ಸುಮಾರು ಕ್ರಿ.ಶ.೫ ಅಥವಾ ೬ನೇ ಶತಮಾನದ್ದಾಗಿರ ಬಹುದೆಂದೂ ಗೋಗಿಯ ಡಿ.ಎನ್. ಅಕ್ಕಿಯವರು ಅಭಿಪ್ರಾಯಪಡುತ್ತಾರೆ. ಹಾಗೂ ಇಂತಹದೇ ಪ್ರತಿಮೆಯನ್ನು ಯಾದಗಿರಿಯ ಸಮೀಪದ ಬೆಟ್ಟದಲ್ಲಿ ಕಂಡುಬರುವುದಾಗಿ ಅವರು ಹೇಳಿರುತ್ತಾರೆ. ಜೈನ ಧರ್ಮದ ಇನ್ನೊಂದು ಶಾಖೆಯಾದ ಯಾಪನೀಯ ಪಂಗಡವು ಗುಲಬರ್ಗಾ ಜಿಲ್ಲೆಯ ಅಡಕಿ ಮತ್ತು ಸೇಡಂಗಳಲ್ಲಿ ಇದ್ದವೆಂದು ತಿಳಿದು ಬರುತ್ತದೆ. ಮಳಖೇಡದಲ್ಲಿ ಹದಿನಾಲ್ಕು ಬಸದಿಗಳಿದ್ದವೆಂದೂ ಅವುಗಳಲ್ಲಿ ಅನೇಕ ಧರ್ಮಗ್ರಂಥಗಳಿದ್ದವೆಂದೂ ಪಿ.ಬಿ.ದೇಸಾಯಿ ಅವರು ತಿಳಿಸಿರುತ್ತಾರೆ. ರಾಷ್ಟ್ರಕೂಟರು ಹಾಗೂ ಕಲ್ಯಾಣ ಚಾಲುಕ್ಯರ ಆಸ್ಥಾನದಲ್ಲಿದ್ದ ಜೈನ ಕವಿಗಳಾದ

ಸೋಮದೇವ ಸೂರಿ, ವೀರಸೇನ, ಜೀನಸೇನ, ಮೊದಲಾದವರು ಕನ್ನಡದಲ್ಲಿಯೂ ಜೈನ ಮತಿಯ ಗ್ರಂಥಗಳನ್ನು ರಚಿಸಿದ್ದಾರೆ.

ಗುಲಬರ್ಗಾ ತಾಲೂಕಿನ ಹುಣಸಿಹಡಗಿಲಯಲ್ಲಿ ಪಾರ್ಶ್ವನಾಥ ಬಸದಿ, ಶಾಂತಿನಾಥ ಬಸದಿ[೩೧] ಮತ್ತು ಇದೇ ತಾಲೂಕಿನ ಶ್ರೀನಿವಾಸ ಸರಡಗಿಯಲ್ಲಿ ಒಂದು ಜೈನ ಬಸದಿ ಇದೆ. ಆದರೆ ಗ್ರಾಮದ ಜನರೆಲ್ಲ ಅದನ್ನು ಯಲ್ಲಮ್ಮನ ದೇವಸ್ಥಾನವೆಂದು ಪೂಜಿಸುತ್ತಾರೆ. ಹರಸೂರಲ್ಲಿಯೂ ಕೂಡ ತ್ರಿಕೂಟ ಬಸದಿ ಇದೆ. ಈ ಬಸದಿಯೂ ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸಂಬಂಧಪಟ್ಟದ್ದಾಗಿದೆ, ಈ ಬಸದಿಯಲ್ಲಿ ಎರಡು ಶಾಸನಗಳು ಪತ್ತೆಯಾಗಿವೆ. ಇವುಗಳನ್ನು ಚಾಲುಕ್ಯ ಅರಸ ಹೊರಡಿಸಿದನೆಂದು ಶಾಸನಗಳಿಂದ ತಿಳಿಯುತ್ತದೆ. ಮಳಖೇಡ, ಸೇಡಮ್, ಹುಣಸಿಹಡಗಿಲ ಮತ್ತು ಇನ್ನಿತರ ಸ್ಥಳಗಳ ಉದ್ದಗಲಗಳಲ್ಲಿ ತನ್ನ ಪ್ರಭಾವವನ್ನು ಎಷ್ಟು ವಿಫುಲವಾಗಿ ಬೀರಿತ್ತು ಎಂಬುದು ಸ್ಪಷ್ಟವಾಗದಿರದು.[೩೨]

ವೈದಿಕ ಧರ್ಮ :

ಗುಲಬರ್ಗಾ ತಾಲೂಕಿನಲ್ಲಿ ಅತ್ಯಂತ ಪ್ರಾಚೀನವಾದ ಧರ್ಮ, ವೈದಿಕ ಧರ್ಮವೆಂದು ಹೇಳಬಹುದು. ಈ ಜಿಲ್ಲೆಯಲ್ಲಿ ಬೌದ್ಧಧರ್ಮ ಹರಡುವುದಕ್ಕಿಂತಲೂ ಮೊದಲೇ ವೈದಿಕ ಧರ್ಮ ಅಸ್ತಿತ್ವದಲ್ಲಿತ್ತೆಂದು ತೋರುತ್ತದೆ.

ವೇದಗಳ ಕಾಲದಿಂದಲೂ ಬ್ರಹ್ಮನಿಗೆ ಹೆಚ್ಚಿನ ಪ್ರಾಮುಖ್ಯತೆ ದೊರೆಯಿತು. ಆದ್ದರಿಂದ ವೈದಿಕ ಧರ್ಮಿಯರು ಬ್ರಹ್ಮನನ್ನು ವಿಶೇಷವಾಗಿ ಪೂಜಿಸುತ್ತಿದ್ದರು. ಬ್ರಹ್ಮನನ್ನು ಮೂರ್ತಿಶಿಲ್ಪದ ರೂಪದಲ್ಲಿ ಆರಾಧಿಸುವ ಪದ್ಧತಿಯು ಕ್ರಿ.ಶ.೧೧ನೆಯ ಶತಮಾನದವರೆಗೂ ಅಸ್ತಿತ್ವದಲ್ಲಿತ್ತು. ನಂತರದ ಕಾಲಘಟ್ಟದಲ್ಲಿ ಲಿಂಗರೂಪದಲ್ಲಿಯೇ ಬ್ರಹ್ಮನನ್ನು ಆರಾಧಿಸುವ ಪದ್ಧತಿಯು ಪ್ರಾರಂಭವಾಯಿತು.

ಇದಕ್ಕೆ ಉದಾಹರಣೆಯೆಂದರೆ ಹರಸೂರಿನಲ್ಲಿರುವ ಈಶ್ವರ ದೇವಾಲಯ, ಶ್ರೀನಿವಾಸ ಸರಡಗಿಯ ಹನುಮಂತನ ದೇವಾಲಯ ಇವುಗಳು ಶಿವಲಿಂಗ ಹೊಂದಿದ ದೇವಾಲಯಗಳಾಗಿವೆ. ಹನುಮಂತನ ದೇವಾಲಯ ಮೂಲತಃ ಶಿವಲಿಂಗ ದೇವಾಲಯವಾಗಿದ್ದು ಇತ್ತೀಚಿನ ಕಾಲದಲ್ಲಿ ಈ ದೇವಾಲಯದಲ್ಲಿ ಹನುಮನ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ವೈದಿಕ ಧರ್ಮ ಕಾಲಾಂತರದಲ್ಲಿ ಶೈವಧರ್ಮ, ವೈಷ್ಣವ ಧರ್ಮ ಮುಂತಾದ ಧರ್ಮಗಳಾಗಿ ಹಲವು ಪ್ರಭೇದಗಳಾದುದನ್ನು ಗಮನಿಸಬಹುದು.[೩೩]

ಬೌದ್ಧ ಧರ್ಮ:

ಪ್ರಾಚ್ಯವಸ್ತು ಇಲಾಖೆಯವರು ಉತ್ಖನನದ ಫಲವಾಗಿ ಮಳಖೇಡ, ಸೇಡಂ ಮತ್ತು ಸನ್ನತಿಗಳು ಪ್ರಮುಖ ಬೌದ್ಧ ಕೇಂದ್ರಗಳಾಗಿದ್ದವೆಂದು ತಿಳಿದುಬಂದಿರುತ್ತದೆ. ಸನ್ನತಿಯಲ್ಲಿ ದೊರೆಕಿರುವ ಅಶೋಕನ ಬ್ರಾಹ್ಮಿಲಿಪಿಯ ಶಾಸನಗಳು ಹಾಗೂ ಇತರ ಬೌದ್ಧ ಅವಶೇಷಗಳು ಬೌದ್ಧ ಧರ್ಮದ ಅಸ್ತಿತ್ವಕ್ಕೆ ದಾಖಲೆಗಳಾಗಿವೆ. ಮುಂದೆ ಕ್ರಿಸ್ತಶಕದ ಆರಂಭ ಕಾಲದಿಂದಲೇ ಶಾತವಾಹನರ ಕಾಲದ ಶಿಲ್ಪಗಳು, ಸ್ತೂಪಗಳಂತಹ ರಚನೆಗಳು ಜಿಲ್ಲೆಯಲ್ಲಿ ಭೀಮಾನದಿಯ ದಡದಲ್ಲಿ ಕಂಡುಬರುತ್ತದೆ. ಗುಲ್ಬರ್ಗ ತಾಲೂಕಿನ ಹಾಗರಗುಂಡಿಗಿ, ಅಂಬಿಗಳಲ್ಲು, ಚಿತ್ತಾಪುರ ತಾಲೂಕಿನ ಕನಗನಹಳ್ಳಿ ಮತ್ತು ಕೊಲ್ಲೂರುಗಳಲ್ಲಿ ಸ್ತೂಪಗಳಂತಹ ರಚನೆ, ಇಟ್ಟಿಗೆ ಕಟ್ಟಡಗಳ ಅವಶೇಷ ಹಾಗೂ ನುಣುಪು ಕಲ್ಲಿನ ಭಿನ್ನವಾದ ಶಿಲ್ಪಗಳು ದೊರೆತಿದ್ದು ಇವು ಕ್ರಿಸ್ತಶಕದ ಆರಂಭ ಕಾಲದ್ದಾಗಿದೆ.[೩೪]

ಸನ್ನತಿ ಸುತ್ತಲೂ ಹಲವಾರು ಬೌದ್ಧ ಕುರುಹುಗಳು ದೊರಕಿವೆ. ಅಂತಹದರಲ್ಲಿ ಬೆಳ್ವಾಡಿಗಿ ಗ್ರಾಮ ಒಂದು. ಇಲ್ಲಿ ಒಂದು ಕಲ್ಲಿನ ಮೇಲೆ ಕೆತ್ತಿರುವ ಒಂದು ಚಿತ್ರವು ಕಲಶ ಎಂಬಾತನ 'ಛಾಯಾಪಡಿಮೆ' ಅಂದರೆ ಛಾಯಾ ಪ್ರತಿಮೆಯಾಗಿದೆ. ಒಂದು ಸಾಲಿನ ಬರಹದ ಕೆಳಗೆ ಎರಡೆತ್ತಿನ ಗಾಡಿಯ ಚಿತ್ರವಿದ್ದು ನೊಗ ಬಾಗಿದೆ. ಒಂದು ಎತ್ತು ಮಲಗಿ ಇನ್ನೊಂದು ಎತ್ತು ನಿಂತಿದೆ. ಬಹುಶಃ ಪ್ರವಾಸದ ಮೇಲಿದ್ದ ಕಲಕನೆಂಬುವನು ದಾರಿಯಲ್ಲಿ ಸಾವಿಗೀಡಾಗಿದ್ದನೆಂಬ ಇಲ್ಲವೆ ಮುಂದೆ ಚಲಿಸಲಾರದ ಗಾಡಿಯು ಕಲಕನ ಜೀವನ ಪ್ರಯಾಣದ ಕೊನೆಯನ್ನು ಸಾಂಕೇತಿಕವಾಗಿ ಸಾರುವುದೆಂಬ ಅಭಿಪ್ರಾಯಗಳನ್ನು ಮೂಡಿಸುತ್ತವೆ. ಬಹುಶಃ ಇದು ಜಾತಕ ಕಥೆಯ ಒಂದು ಶಿಲ್ಪರೂಪವಾಗಿರಬೇಕು.[೩೫] ಇತ್ತೀಚೆಗೆ ಶ್ರೀಯುತ ಮಲ್ಲಿಕಾರ್ಜುನ ಖರ್ಗೆಯವರ ನೇತೃತ್ವದಲ್ಲಿ ನಿರ್ಮಿಸಲ್ಪಟ್ಟ, ಕಲಬುರ್ಗಿಯ ಬೌದ್ಧ ವಿಹಾರ ಅತ್ಯಂತ ರಮಣೀಯ ಮತ್ತು ನೋಡುಗರ ಕಣ್ಮನ ಸೆಳೆಯುತ್ತದೆ. ಬೌದ್ಧ ಉಪಾಸಕರು ಧರ್ಮ ಬೋಧಕರು ಧಾರ್ಮಿಕ ಚಿಂತನೆಗಳನ್ನು ಏರ್ಪಡಿಸುವುದರ ಮೂಲಕ ಧರ್ಮ ಸಂದೇಶವನ್ನು ಪ್ರಚಾರ ಮಾಡಲಾಗುತ್ತದೆ.[೩೬]

ಇಸ್ಲಾಂ ಧರ್ಮ:

ಹದಿಮೂರನೆ ಶತಮಾನದಲ್ಲಿ ದೆಹಲಿ ಸುಲ್ತಾನರು ಗುಲ್ಬರ್ಗ ಪ್ರದೇಶವನ್ನು ವಶಪಡಿಸಿಕೊಳ್ಳುವ ಯತ್ನದಿಂದಾಗಿ, ಮಹಮ್ಮದೀಯರ ಸಂಸ್ಕೃತಿ ಮತ್ತು ಭಾಷೆಗಳು ಬೆಳೆದು ಬಂದವು. ನಂತರ ಕ್ರಿ.ಶ.೧೩೪೭ರಲ್ಲಿ ಹಸನ್‌ಗಂಗು ಗುಲಬರ್ಗಾವನ್ನು ಕೇಂದ್ರವಾಗಿರಿಸಿಕೊಂಡು ಬಹುಮನಿ

ಸಾಮ್ರಾಜ್ಯವನ್ನು ಸ್ಥಾಪಿಸಿದನು. ಮುಂದೆ ಸಾಮ್ರಾಜ್ಯದ ಕೇಂದ್ರ ಸ್ಥಾನವು ಬೀದರ್‌ಗೆ ವರ್ಗವಾದರೂ ಈ ಪ್ರದೇಶ ಅವರ ವಶದಲ್ಲಿಯೇ ಇದ್ದು, ನಂತರ ಹೈದರಾಬಾದ್ ನಿಜಾಮರ ವಶಕ್ಕೆ ಸೇರಿತು. ನಂತರ ಗುಲಬರ್ಗಾಕ್ಕೆ ಬಂದು ನೆಲೆಸಿದ, ಖ್ವಾಜಾ ಬಂದೇ ನವಾಜ್ ಒಂದು ರೀತಿಯಲ್ಲಿ ವೈಚಾರಿಕ ಕ್ರಾಂತಿಯನ್ನೇ ಮಾಡಿದರು. ಇವರು ಹಲವಾರು ಗ್ರಂಥಗಳನ್ನು ರಚಿಸಿದುದಲ್ಲದೇ ಇವರು ನಡೆಸುತ್ತಿದ್ದ ಪ್ರಾರ್ಥನಾ ಸಭೆಗಳು ಹಾಗೂ ಪ್ರವಚನಗಳು ಜನಪ್ರಿಯವಾಗಿದ್ದವು. ಮುಸ್ಲಿಮರ ಅನೇಕ ಸಮಾಧಿ, ಮಂದಿರಗಳು ಹಿಂದೂ-ಮುಸ್ಲಿಂ ಇಬ್ಬರಿಗೂ ಪವಿತ್ರ ಸ್ಥಳಗಳಂತಿದ್ದು, ಹಲವಾರು ಧಾರ್ಮಿಕ ಕಾರ್ಯಗಳಲ್ಲಿ ಎರಡು ಕೋಮಿನವರು ಭಾಗವಹಿಸುವುದು ಕಂಡುಬರುತ್ತದೆ. ಗುಲಬರ್ಗಾವೂ ಸೇರಿದಂತೆ, ತಿಂಥಿಣಿ, ಭೈರಾಮಡಗಿ, ಶಹಾಪುರ, ವಡಗೇರಿ, ಆಳಂದ, ಮಾದನ ಹಿಪ್ಪರಗಿ ಮುಂತಾದ ಸ್ಥಳಗಳಲ್ಲಿನ ಪೂಜಾ ಮಂದಿರಗಳನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ. ಚೌಕಾಕಾರದ, ಬೃಹತ್ತಾದ ನಾಲ್ಕು ಮೂಲೆಗಳೂ ಮಿನಾರುಗಳಿರುವ ಕೆಲವೆಡೆ ಚಿತ್ತಾರಗಳಿಂದ ಕೂಡಿರುವ ಮುಸ್ಲಿಂ ಶೈಲಿಯದೇ ಆದ ಮಂದಿರಗಳು ಗುಲಬರ್ಗಾ ಪರಿಸರದ್ಯಾಂತ ಕಾಣಬಹುದಾಗಿದೆ.[೩೭]

೨.೫. ಆರ್ಥಿಕ ಸ್ಥಿತಿಗತಿ :

ಕೃಷಿ:

ಹೆಚ್ಚಿನ ಶಾಸನಗಳು ದೇವಸ್ಥಾನಗಳಿಗೆ ಬಿಟ್ಟ ಭೂದಾನಗಳನ್ನೇ ಹೇಳುವುದರಿಂದ, ವ್ಯವಸಾಯ ಪ್ರಮುಖ ಉದ್ಯೋಗವಾಗಿರುವುದು ತಿಳಿದುಬರುತ್ತದೆ. ಹೀರಾಪುರದಲ್ಲಿ ಎರಡು ಬಾವಿಗಳನ್ನು ಕಾಶ್ಯಪ ಗೋತ್ರದ ಗೌತಮ ಹಾಗೂ ಮುದ್ಗಲ ಗೋತ್ರದ ರಂಗೋಜಿ ಎಂಬುವರು ಕಟ್ಟಿಸಿದುದನ್ನು ಶಾಸನಗಳು ತಿಳಿಸುತ್ತವೆ. ಇಲ್ಲಿಯೇ ಬಿಕ್ಕಾಜಿ ಸೋಮಾಜಿ ಮೋಖೇಡ ಎನ್ನುವವನು ಒಂದು ಬಾವಿ ಕಟ್ಟಿಸಿದುದನ್ನು ಶಾಸನ ತಿಳಿಸುತ್ತದೆ. ಇವನನ್ನು ಬಿಟ್ಟರೆ ಇನ್ನೆಲ್ಲಿಯೂ ಕೆರೆ, ಬಾವಿಗಳ ಉಲ್ಲೇಖವೇ ಇಲ್ಲ. ಕೊಲ್ಲೂರಿನ ಶಾಸನದಲ್ಲಿ ಕರಿಯ ಭೂಮಿ, ಮಸಂಬು, ಗದ್ದೆ, ಉದ್ಯಾನಗಳನ್ನು ಉಂಬಳಿಯಾಗಿ ಕೊಟ್ಟಿರುವ ಬಗ್ಗೆ ಉಲ್ಲೇಖಗಳಿವೆ. ಕುಂಬಾರ, ಬಡಗಿ, ಕಮ್ಮಾರ, ಅಕ್ಕಸಾಲಿಗ, ಒಕ್ಕಲಿಗ, ತಂಬುಲಿಗ, ಜೇಡಹಟಗಾರ, ಗಾಣಿಗ, ಅಗಸ, ನಾವಿಂದ, ಕಂಚಗಾರ, ಬೋಗಾರ, ಕಲ್ಕುಟಿಗರ ಉಲ್ಲೇಖಗಳು ಇಲ್ಲಿಯ ಶಾಸನಗಳಲ್ಲಿವೆ.[೩೮] ಕೃಷಿ ಯೋಗ್ಯವಾದ ಭೂಮಿಯನ್ನು 'ಕೆಯ್' ಎಂದು ಪ್ರಾಚೀನ ಕಾಲದಲ್ಲಿ ಕರೆಯುತ್ತಿದ್ದರು. ನಮಗೆ ಗುಲಬರ್ಗಾ ಪರಿಸರದಲ್ಲಿ ದೊರೆತ ಶಾಸನಗಳ ಆಧಾರದಿಂದ ಕೃಷಿಯಲ್ಲಿ ಗೊಂಕನೂರಿಪ್ಪತ್ತರು, ಮತ್ತರು ಎಂಬ ಹಲವು ಪ್ರಕಾರಗಳಿರುವುದು ಕಂಡು ಬರುತ್ತದೆ.[೩೯]

ನೀರಾವರಿ :

ಮಳೆಯಾಧಾರಿತ ಬೇಸಾಯವೇ ಅಂದೂ ಸಹ ವ್ಯಾಪಕವಾಗಿತ್ತು. ಅತ್ಯಲ್ಪ ಪ್ರಮಾಣದಲ್ಲಿ ನೀರಾವರಿ ವಿಧಾನವೂ ಜಾರಿಯಲ್ಲಿತ್ತು. ಭೂದತ್ತಿ ನೀಡುವಾಗ ಖುಷ್ಕಿ ಭೂಮಿಯನ್ನು ಸಾವಿರ ಮತ್ತರುಗಳ ಪ್ರಮಾಣದಲ್ಲಿ ನೀಡಿದರೆ, ನೀರಾವರಿ ಭೂಮಿಯನ್ನು ಕೇವಲ ಒಂದೆರಡು ಮತ್ತರುಗಳಲ್ಲಿ ಬಿಟ್ಟಿದ್ದಾರೆ. ಕೆರೆ ನೀರಾವರಿ ಪದ್ಧತಿ ಹೆಚ್ಚಾಗಿ ಗದ್ದೆಗಳಿಗೆ ಮತ್ತು ಬಾವಿಗಳನ್ನಾಶ್ರಯಿಸಿ ಕೇವಲ ತೋಟಗಳಿಗೆ ಉಪಯೋಗಿಸಿಕೊಳ್ಳುತ್ತಿದ್ದರು. ಕೆರೆಗಳಿಗೆ ಹಿರಿಯ ಮತ್ತು ಕಿರಿಯ ತೂಬುಗಳಿರುತ್ತಿದ್ದವು. ಮತ್ತುಗಾರೆ ಎಂಬುದು ಕೆರೆಗಳಲ್ಲಿನ ಒಂದು ಪ್ರಕಾರವಾಗಿತ್ತು. ಕೆರೆಗಳ ನೀರನ್ನು ಚಿಕ್ಕ ಚಿಕ್ಕ ಹೊಂಡಗಳಲ್ಲೂ ಸಹ ಸಂಗ್ರಹಿಸಿ ಉಪಯೋಗಿಸುತ್ತಿದ್ದರು. "ಹಿರಾಪುರದ ಕಾರಂಜಿ' ಬಾವಿ ಫಲಭರಿತವಾಗಿದ್ದವು ಎಂಬುದು ಶಾಸನಗಳಿಂದ ತಿಳಿದು ಬರುತ್ತದೆ".[೪೦]

ವ್ಯಾಪಾರ :

ವರ್ತಕರಲ್ಲಿ ಮುಮ್ಮುರಿದಂಡ, ಸೆಟ್ಟಿಗುತ್ತರು, ನಖರರು, ಉಭಯ ನಾನಾದೇಸಿಗಳು, ಆಯ್ಯಾವಳೆಯ ಐನೂರ್ವರು, ವೀರಬಣಂಜು ಸಂಘ ಇತ್ಯಾದಿ ಉಲ್ಲೇಖಗಳಿವೆ. ಇವರು ಜೈನರು, ವೈಶ್ಯರು ಆಗಿರುವ ಸಂಭವವಿದೆ. ಗುಲ್ಬರ್ಗಾ ಪರಿಸರದ ಸುತ್ತಲೂ ವ್ಯಾಪಾರ ಪದ್ಧತಿಯು ಹೇಗಿತ್ತು ಎಂಬ ವಿಷಯವನ್ನು ಸೆರೆಹಿಡಿಯಲಾಗಿದೆ. ಅಗ್ರಹಾರ ಹಗರಿಟಗೆಯಲ್ಲಿ ೨೦೦ ಜನ ಸೆಟ್ಟಿಗುತ್ತರು ಹಾಗೂ ಮುಮ್ಮುರಿ ದಂಡರು ಇದ್ದರೆಂದು ಹಗರಿಟಗೆಯ ಶಾಸನ ತಿಳಿಸುತ್ತದೆ. ಅಡಕಿಯ ಶಾಸನದಲ್ಲಿ ಅಯ್ಯಾವಳೆಯ ಐನೂರ್ವರು, ಪ್ರಮುದಖ ೩೬ ಬೀಡು, ಮುಮ್ಮುರಿದಂಡಗಳು, ಉಭಯ ನಾನಾದೇಸಿಗಳು ಮುಖ್ಯವಾಗಿ ದತ್ತಿಯನ್ನು ಬಿಡಲಾಯಿತು. ಅಯ್ಯಾವಳೆಯ ೫೦೦ ಜನ ಮಹಾಸ್ವಾಮಿಗಳು, ಕನ್ನಡ ನಾಲ್ಕು ಸಾವಿರದ ನಾನಾ ದೇಶಗಳು ಹಾಗೂ ಇನ್ನು ಹಲವು ಅಧಿಕಾರಿಗಳು ಸೇರಿ ಹಲವು ನಿಯಮಗಳನ್ನು ರಚಿಸಿದ, ಸುಂಕ ದತ್ತಿಗಳನ್ನು ಬಿಟ್ಟ ಉಲ್ಲೇಖವಿದೆ.

ಇಂತಹ ವ್ಯಾಪಾರಿ ಸಂಘಗಳ ಮುಖ್ಯಸ್ಥನನ್ನು ಪಟ್ಟಣಸ್ವಾಮಿ ಎಂದು ಕರೆಯುತ್ತಿದ್ದರು. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಮಳಖೇಡದ ಶಾಸನದಲ್ಲಿಯ ಈಶ್ವರಸೆಟ್ಟಿಗೆ ಮಲೆಯಾದ್ರಿ ಪುರವರಾಧೀಶ್ವರ ಎಂಬ ಬಿರುದಿದೆ. ಮಲೆಯಾದ್ರಿಪುರವೆಂದರೆ ಇಂದಿನ ಮಳಖೇಡ.[೪೧]

ಅಳತೆಗಳು :

ಗುಲಬರ್ಗಾ ಪರಿಸರದ ಸುತ್ತಮುತ್ತಲು ಯಾವ ರೀತಿ ಅಳತೆಗಳ ವ್ಯವಸ್ಥೆಯಿತ್ತು ಎಂದು ತಿಳಿದುಕೊಳ್ಳಲು ಸಹಾಯಕವಾಗುತ್ತದೆ. ಪ್ರಾಚೀನ ಕಾಲದಲ್ಲಿ ಎರಡು ರೀತಿಯಲ್ಲಿ ಹೊಲಗಳನ್ನು ಅಳೆಯುತ್ತಿದ್ದರು. ಒಂದು ಭೂಮಿಯಲ್ಲಿ ಬಿತ್ತಬಹುದಾದ ಬೀಜದ ಪ್ರಮಾಣದ ಮೇಲೆ ಇನ್ನೊಂದು, ಅಳತೆಗೋಲುಗಳಿಂದ ಅಳೆಯುವುದು. ಈ ಜಿಲ್ಲೆಯ ಶಾಸನಗಳಲ್ಲಿ ಬೀಜ ಪ್ರಮಾಣದ ಅಳತೆಯ ಉಲ್ಲೇಖವಿಲ್ಲ. ಹಲಕಟ್ಟ ಶಾಸನದಲ್ಲಿ ಹದಿನೆಂಟು ಮತ್ತರು ಭೂಮಿ, ಶಿರಹಳ್ಳಿಯ ಶಾಸನದಲ್ಲಿ ನಲವತ್ತು ಮತ್ತರು ಭೂಮಿ ಬಿಟ್ಟ ವಿವರಗಳಿವೆ. ಹನುಗುಂಟಾ ಶಾಸನದಲ್ಲಿ ಎರಡು ಮತ್ತರು, ಕಾಳಗಿ ಶಾಸನದಲ್ಲಿ ನಲವತ್ತು ಮತ್ತರು, ದಿಗ್ಗಾಂವ ಶಾಸನದಲ್ಲಿ ೩೦೦ ಮತ್ತರು, ಅಡಕಿ ಶಾಸನದಲ್ಲಿ ಒಂದು ಮತ್ತರು ಭೂಮಿಯನ್ನು ದೇವರಿಗಾಗಿ ಬಿಟ್ಟುದರ ವಿವರಗಳಿವೆ. ನಾಗಾವಿ ಶಾಸನವು ಕಾಳಿದಾಸ ದಂಡಾದೀಶ ಘಟಿಕಾ ಸ್ಥಾನಕ್ಕಾಗಿ ೧೦೦೦ ಮತ್ತರು ಭೂಮಿಯನ್ನು ದತ್ತಿಯಾಗಿ ಬಿಟ್ಟುದನ್ನು ಉಲ್ಲೇಖಿಸುತ್ತದೆ. ಈ ಅಳತೆಗಳು ಗುಲ್ಬರ್ಗಾ ಪರಿಸರದಲ್ಲಿಯೂ ಸಹ ಇತ್ತೆಂದು ಊಹಿಸಬಹುದಾಗಿದೆ.[೪೨]

ಕರಗಳು :

ಮುದನ್ನೂರಿನ ಒಂದು ಶಾಸನದಲ್ಲಿ ಮಹಾಜನರು "ಗಾತುರ ಕಿರುಕುಳಾಯ, ಕೂಳುಪೊರಸು" ಇತ್ಯಾದಿಗಳಿಂದ ಕುಂಬಾರರು ಎರಡು ಗದ್ಯಾಣ ಹಾಗೂ ಎರಡು ಪಣಗಳ ತಳಾರ ಗೂಲಿಯನ್ನು ಕೊಡಬೇಕೆಂದು" ನಿಗದಿಸಿದುದನ್ನು ತಿಳಿಸುತ್ತದೆ. ಗಾತುಕ, ಕೂಳು ಪೊರಸುಗಳ ಅರ್ಥ ತಿಳಿದು ಬಂದಿಲ್ಲ. ತಳಾರಗೂಲಿ ಎಂದರೆ ತಳವಾರನ ಜೀವಿತಕ್ಕಾಗಿ ಕೊಡಬೇಕಾಗಿದ್ದ ಸುಂಕವೆನ್ನಬಹುದು. ಕಿರುಕುಳಾಯ ಎನ್ನುವದೊಂದು ಚಿಕ್ಕ ತೆರಿಗೆ ಇದೆ. ಊರಿನ ಇನ್ನೊಂದು ಶಾಸನ ಮುದ್ನೂರಿನ ಹದಿನೆಂಟು ಸಾವಿರ ಮತ್ತರು ಭೂಮಿಯ ಮೇಲೆ ವಿಧಿಸುವ ಹೆಜ್ಜುಂಕ ಹಾಗೂ ವಡ್ಡರಾವುಳದಿಂದ ಬರುವ ಹಣವನ್ನು ದೇವರಿಗೆ ದತ್ತಿ ಬಿಟ್ಟುದನ್ನು ಸೂಚಿಸುತ್ತದೆ. ಈ ತೆರಿಗೆಗಳನ್ನು ಸಂಗ್ರಹಿಸುವ "ಸುಂಕವೆರ್ಗಡೆ" ಎಂಬ ಅಧಿಕಾರಿ ಇರುತ್ತಿದ್ದನೆಂಬುದೂ ಮುದನ್ನೂರಿನ ಶಾಸನದಿಂದ ತಿಳಿದುಬರುತ್ತದೆ. ಈ ಎಲ್ಲ ಕರ ಪದ್ಧತಿಯನ್ನು ಅವಲೋಕಿಸಿದ್ದರೆ ಗುಲಬರ್ಗಾ ಪರಿಸರದಲ್ಲಿಯೂ ಇದೇ ರೀತಿಯ ಕರ ವ್ಯವಸ್ಥೆ ಇತ್ತೆಂದು ಹೇಳಬಹುದು.[೪೩]

ನಾಣ್ಯ ಪದ್ಧತಿ :

"ಗುಲಬರ್ಗಾ ಕೋಟೆಯಲ್ಲಿ ದೊರೆತ ಶಾಸನವೊಂದರಲ್ಲಿ 'ದಮ್ಮ' ಎಂಬ ನಾಣ್ಯದ ಉಲ್ಲೇಖವಿದೆ". ದಮ್ಮವು "A Coin of the Value of Four Kaasus" ಈ ರೀತಿ ಗುಲ್ಬರ್ಗ ಪರಿಸರದಲ್ಲಿ ದೊರೆತ ಹಲವು ಶಾಸನಗಳಿಂದ ಅಂದಿನ ಜನರಿಗೆ ನಾಣ್ಯಗಳ ಬಗ್ಗೆ ಅರಿವಿತ್ತು ಎಂಬ ಅಂಶವನ್ನು ತಿಳಿಯಬಹುದಾಗಿದೆ.[೪೪]

ಅಡಿಟಿಪ್ಪಣಿಗಳು

೦೧. ಪಾಟೀಲ್ ಎಂ.ಬಿ., ಪೂರ್ವೋಕ್ತ, ಪು.೪೦

೦೨. ಇಂದುಮತಿ ಪಾಟೀಲ, ಕ.ಜಿ.ಇ.ಮತ್ತು ಸಾ.ಪ. ಪು.೨೪

೦೩. ಅದೇ, ಪು.೨೫–೨೬

೦೪. ಅದೇ, ಪು.೨೮

೦೫. ಪಾಟೀಲ್ ಎಂ.ಬಿ., ಪೂರ್ವೋಕ್ತ, ಪು.೪೫

೦೬. ಶ್ರೀವಾತ್ಸವ ಎಸ್.ವಟಿ. ಕನ್ನಡ ನಾಡಿನ ಪ್ರಾಚೀನ ಸಾಂಸ್ಕೃತಿಕ ಕೇಂದ್ರಗಳು, ೨೪

೦೭ ಪಾಟೀಲ್ ಎಂ.ಬಿ., ಪೂರ್ವೋಕ್ತ, ಪು.೪೭

೦೮. ಅದೇ, ಪು.೪೭

೦೯. ಇಂದುಮತಿ ಪಾಟೀಲ, ಪೂರ್ವೋಕ್ತ, ಪು.೨೯

೧೦. ಅದೇ, ಪು.೪೮

೧೧. ಶ್ರೀವಾತ್ಸವ ಎಸ್.ವಟಿ. ಪೂರ್ವೋಕ್ತ, ೨೮

೧೨. ವಿ.ಶಿವಾನಂದ, ಹೈ.ಕ.ಕ.ಶಿ. ಪು.೫೮

೧೩. ಅದೇ, ಪು.೨೧೮

೧೪. ಇಂದುಮತಿ ಪಾಟೀಲ, ಪೂರ್ವೋಕ್ತ, ಪು.೩೨

೧೫. ಪಾಟೀಲ್ ಎಂ.ಬಿ., ಪೂರ್ವೋಕ್ತ, ಪು.೫೩–೫೪

೧೬. ಅದೇ, ಪು.೫೫

೧೭. ಅದೇ, ಪು.೫೫

೧೮. ಪಾಟೀಲ್ ಎಂ.ಬಿ., ಪೂರ್ವೋಕ್ತ, ಪು.೫೬

೧೯. ವಿ.ಶಿವಾನಂದ, ಪೂರ್ವೋಕ್ತ, ಪು.೧೯೦

೨೦. ಪಾಟೀಲ್ ಎಂ.ಬಿ., ಪೂರ್ವೋಕ್ತ,. ಪು.೫೮,೫೯

೨೧. ಗೋಪಾಲ್ ಆರ್., ಗು.ಜಿ.ಇ.ಮತ್ತು ಪು. ಪು.೨೧೬

೨೨. ಮೊನಪ್ಪ ಶಿರವಾಳ, ಕ.ಜಿ.ಕ.ಸಾ.ಅ.ಪಿಎಚ್.ಡಿ. ಪ್ರಬಂಧ (ಅಪ್ರಕಟಿತ) ಪು.೯೨

೨೩. ವಿ.ಶಿವಾನಂದ, ಪೂರ್ವೋಕ್ತ, ಪು.೧೯೦

೨೪. ಅದೇ, ಪು.೨೬೨

೨೫. ಇಂದುಮತಿ ಪಾಟೀಲ, ಪೂರ್ವೋಕ್ತ, ಪು.೧೫೦

೨೬. ಅದೇ, ಪು.೧೫೦

೨೭. ಅದೇ, ಪು.೨೩

೨೮. ಆದೇ, ಪು.೨೩

೨೯. ಸುರೇಶ ಕರಿಬಸಪ್ಪ ಹಾನಗಲ್ಲರ ಎಂ.ಫಿಲ್. (ಅಪ್ರಕಟಿತ) ಪ್ರಬಂಧ, ಹುಬ್ಬಳ್ಳಿ ತಾಲೂಕಿನ ಶಾಸನಗಳು ಮತ್ತು ದೇವಾಲಯಗಳು, ಪು.೧೧–೧೨

೩೦. ಗೋಪಾಲ್ ಆರ್., ಪೂರ್ವೋಕ್ತ, ಪು.೨೯೯

೩೧. ಅದೇ, ಪು.೩೦೦

೩೨. ತವಗ ಭೀಮಸೇನರಾವ್, ಗುಲಬರ್ಗಾ, ಪು.೩೭

೩೩. ಗೋಪಾಲ್ ಆರ್., ಪೂರ್ವೋಕ್ತ, ಪು.೩೦೦

೩೪. ಪಾಟೀಲ್ ಎಂ.ಬಿ., ಪೂರ್ವೋಕ್ತ, ಪು.೧೪೨

೩೫. ಹನುಮಾಕ್ಷಿ ಗೋಗಿ, ಕ.ಜಿ.ಶಾ. ಪು.೨೧

೩೬. ಇಂದುಮತಿ ಪಾಟೀಲ, ಪೂರ್ವೋಕ್ತ, ಪು.೧೬೩

೩೭. ಪಾಟೀಲ್ ಎಂ.ಬಿ., ಪೂರ್ವೋಕ್ತ, ಪು.೧೪೨

೩೮. ಹನುಮಾಕ್ಷಿ ಗೋಗಿ, ಪೂರ್ವೋಕ್ತ, ಪು.೨೭

೩೯. ವಿ.ಶಿವಾನಂದರ, ಪೂರ್ವೋಕ್ತ, ಪು.೧೯೫

೪೦. ಮೊನಪ್ಪ ಶಿರವಾಳ, ಪೂರ್ವೋಕ್ತ, ಪು.೧೨೧-೧೨೨

೪೧. ಹನುಮಾಕ್ಷಿ ಗೋಗಿ, ಪೂರ್ವೋಕ್ತ, ಪು.೨೭

೪೨. ಅದೇ, ಪು.೨೮

೪೩. ಅದೇ.,

೪೪. ಅದೇ, ಪು.೨೬೨

♦ ♦ ♦

ಅಧ್ಯಾಯ ೩

ಶಾಸನಗಳ ವೈವಿಧ್ಯತೆ

ಅಧ್ಯಾಯ ೩

ಶಾಸನಗಳ ವೈವಿಧ್ಯತೆ

೩.೧ ಪೀಠಿಕೆ :

ನಾಡಿನ ಐತಿಹಾಸಿಕ ಸಾಂಸ್ಕೃತಿಕ ಜೀವನ ಸಂಗತಿಗಳನ್ನು ದಾಖಲೆಯಾಗಿಸುವ ಸಾಮಾಗ್ರಿಗಳಲ್ಲಿ ಶಾಸನಗಳಿಗೆ ಮಹತ್ವದ ಸ್ಥಾನವಿದೆ. ಅಲ್ಲದೆ ಶಾಸನಗಳು ಅಂದಿನ ಲಿಪಿಯ ವಿಕಾಸ, ಭಾಷಾ ಸ್ವರೂಪವನ್ನು ತಿಳಿಯಲು ಸಹ ನೆರವಾಗುತ್ತವೆ. ಇತಿಹಾಸಕ್ಕೆ ಶಾಸನಗಳೇ ಪ್ರಮುಖ ಆಕರ.

'ಶಾಸನ' ಎಂಬ ಪದ 'ಶಾಸ್' ಎಂಬ ಧಾತುವಿನಿಂದ ರೂಪಗೊಂಡಿದೆ. ಇದರ ಅರ್ಥ ಆಜ್ಞಾಪಿಸು, ಶಿಕ್ಷಿಸು, ನಿಯಂತ್ರಿಸು ಎಂದರ್ಥ. ಶಾಸನಕ್ಕೆ ಸಮಾನಾರ್ಥವಾಗಿ ಬಳಕೆಯಾಗುತ್ತಿರುವ English ಪದ "Inscription". ಇದನ್ನು "Epigraph" ಎಂದು ಕರೆಯಲಾಗುತ್ತದೆ. ಆದುದರಿಂದ "Epigraphy" ಎಂಬ ಪದ ಬಳಕೆಯಲ್ಲಿದೆ. Inscription ಎಂಬ ಪದವು 'Inscribere' ಎಂಬ Latien ಭಾಷೆಯ ಪದದಿಂದ ಬಂದಿದ್ದು 'ಮೇಲೆ ಬರೆ' ಎಂಬ ಅರ್ಥವನ್ನು ಹೊಂದಿದೆ. ಹಾಗೆಯೇ "Epigraphy" ಎಂಬ ಪದವು "Epi"(ಮೇಲೆ) ಮತ್ತು "Graphic"(ಬರೆ) ಸಂಕೇತ ಎಂಬೆರಡು Greek ಪದಗಳಿಂದ ಹುಟ್ಟಿಕೊಂಡಿದೆ. "Epigraphy" ಪದವನ್ನು ಬರಹಗಳ ಅಧ್ಯಾಯನಶಾಸ್ತ್ರ ಎಂಬ ಅರ್ಥದಲ್ಲಿ ಬಳಸಲಾಗುತ್ತದೆ. "Inscription" ಎಂದರೆ ಬಹುಕಾಲ ನಿಲ್ಲಬಲ್ಲ, ಶಾಶ್ವತವಾಗಿ ಉಳಿಯಬಲ್ಲ ವಸ್ತುಗಳ ಮೇಲೆ ಕೊರೆಯಲ್ಪಟ್ಟ ಬರಹ. ಕಲ್ಲು, ತಾಮ್ರ, ಬೆಳ್ಳಿ, ಮೊದಲಾದವುಗಳ ಮೇಲೆ ಕೊರೆಯಲ್ಪಟ್ಟ ಪ್ರಾಚೀನ ಬರಹಗಳೇ ಶಾಸನಗಳು.

ಗುಲಬರ್ಗಾ ಪರಿಸರದಲ್ಲಿಯೂ ಸಹ ವಿವಿಧ ರೀತಿಯ ಮೂರ್ತಿಶಿಲ್ಪ, ದೇವಾಲಯಗಳು, ಜಿನಾಲಯಗಳು, ಶಾಸನಗಳು, ಮಾಸ್ತಿಕಲ್ಲುಗಳು, ವೀರಗಲ್ಲುಗಳು ದೊರೆಕಿವೆ. ಇತ್ತೀಚೆಗೆ

ಗುಲಬರ್ಗಾ ನಗರದಲ್ಲಿ ಒಂದು ಮಾಸ್ತಿಕಲ್ಲನ್ನು ಪತ್ತೆ ಹಚ್ಚಲಾಗಿದೆ. ಇದರಿಂದ ಇಲ್ಲಿ ಮಹಾಸತಿ ಅಚರಣೆಯಲ್ಲಿ ಇತ್ತು ಎನ್ನುವುದು ತಿಳಿದುಬರುತ್ತದೆ. ಗುಲಬರ್ಗಾ ಪರಿಸರದಲ್ಲಿ ದೊರೆತ ೨೪ ವೀರಗಲ್ಲುಗಳಲ್ಲಿ ಎರಡು ವೀರಗಲ್ಲಿನಲ್ಲಿ ವೀರನು ಹುಲಿ ಬೇಟೆಯಾಡುತ್ತಿರುವ ದೃಶ್ಯವನ್ನು ಕಾಣಬಹುದು. ಇದು ಇಲ್ಲಿನ ವೀರನ ಕಾರ್ಯವನ್ನು ತಿಳಿಸಿಕೊಡುತ್ತದೆ. ಹರಸೂರು ಮತ್ತು ಹುಣಸಿಹಡಗಿಲದಲ್ಲಿ ಜೈನ ಜಿನಾಲಯಗಳನ್ನು ಕಾಣುತ್ತೇವೆ. ಅಷ್ಟೇ ಅಲ್ಲದೆ ಶೈವ ದೇವಾಲಯಗಳು ಸಹ ಈ ಪರಿಸರದಲ್ಲಿ ಕಂಡು ಬರುತ್ತವೆ. ಮೌರ್ಯರು ಗುಲಬರ್ಗಾ ಪರಿಸರದ ಪಕ್ಕದ ಸನ್ನತಿಯಲ್ಲಿ ಆಳ್ವಿಕೆ ಮಾಡಿದರು ಎಂಬುದಕ್ಕೆ ಅಶೋಕನ ಕಾಲದ ೪ ಬಂಡೆಗಲ್ಲು ಶಾಸನಗಳು ದೊರೆತಿವೆ. ಕಲ್ಯಾಣ ಚಾಲುಕ್ಯರ ಕಾಲದ ಶಾಸನಗಳು ಹರಸೂರು, ಶ್ರೀನಿವಾಸ ಸರಡಗಿ, ಹೊನ್ನಕಿರಣಗಿಯಲ್ಲಿ ದೊರೆತ ಶಾಸನಗಳು ಇವುಗಳಿಗೆ ಸಾಕ್ಷಿಯಾಗಿವೆ. ಬಹಮನಿಯರು, ಕಲ್ಯಾಣದ ಕಳಚೂರ್ಯರು, ನಿಜಾಮರು ಆಳ್ವಿಕೆ ಮಾಡಿದ್ದಾರೆ ಎಂಬುದಕ್ಕೆ ಅವರ ಕಾಲದಲ್ಲಿ ನಿರ್ಮಿತವಾದ ಕೋಟೆಗಳು, ಶಾಸನಗಳಿಂದ ತಿಳಿಯಬಹುದು.

೩.೨. ದಾನ ಶಾಸನಗಳು :

ಪ್ರಾಚೀನ ಕಾಲದಲ್ಲಿ ಕನ್ನಡನಾಡಿನಲ್ಲಿ 'ದಾನ' ಪರಂಪರೆಯು ಮಹೋನ್ನತವು ಮತ್ತು ಮೌಲ್ಯಯುತವಾಗಿದ್ದು, ತಮ್ಮ ಹೆಸರುಗಳು ಚಿರಾಯುವಾಗಿ, ಅಜರಾಮರವಾಗಿ ಉಳಿಯಲಿ ಎಂಬ ಉದ್ದೇಶದಿಂದ, ಧರ್ಮ ಕಾರ್ಯಗಳಿಗಾಗಿ ಹಾಗೂ ಪರೋಪ ಕಾರ್ಯಕ್ಕಾಗಿ ದಾನವನ್ನು ನೀಡುತ್ತಿದ್ದರು.

ದಾನ ಶಾಸನಗಳು ಹೆಚ್ಚಾಗಿ ಧಾರ್ಮಿಕ ದತ್ತಿಯನ್ನುಳ್ಳ ಶಾಸನಗಳಾಗಿವೆ. ಈ ಶಾಸನಗಳ ಧಾರ್ಮಿಕ ದತ್ತಿಯ ಉದ್ದೇಶಿಸುವುದರ ಜೊತೆಗೆ, ಖಾಸಗಿ ವ್ಯಕ್ತಿಗಳಿಗೆ ನೀಡಿದ ದಾನಗಳನ್ನು ದಾಖಲು ಮಾಡಿವೆ.

ಉದಾ: ದೇವಾಲಯದಲ್ಲಿ ನಡೆಯುವ ಪೂಜೆ, ಪುನಸ್ಕಾರಗಳಿಗೂ, ಪೂಜಾರಿಗಳಿಗೂ, ನರ್ತಿಸುವ ನರ್ತಕಿಯರಿಗೂ, ವಾದ್ಯಗಾರರಿಗೂ, ಮಠದಲ್ಲಿ ನಡೆಯುವ ವಿದ್ಯಾ ದಾನಕ್ಕೂ ಅಲ್ಲಿನ ಅಧ್ಯಾಪಕ ಮತ್ತು ವಿದ್ಯಾರ್ಥಿ ವೃಂದಕ್ಕೂ ಲೋಕೋಪಯೋಗಿ ಕಾರ್ಯಗಳಾದ ಕೆರೆ, ಬಾವಿ, ಅರವಟ್ಟಿಗೆ, ಇವುಗಳಲ್ಲದೇ ವ್ಯಕ್ತಿಯೊಬ್ಬನ ಸೇವೆ, ಪರಾಕ್ರಮಗಳನ್ನು ಮನ್ನಿಸಿಯೇ ನೀಡಿದ ದಾನವಾಗಿರುತ್ತದೆ.[೧]

ದಾನವಾಗಿ ನೀಡುವ ಆರ್ಥಿಕ ಮೂಲ ಭೂಮಿಯಾಗಿರಬಹುದು, ನಗದು ರೂಪದ ಹಣವಾಗಿರಬಹುದು ಅಥವಾ ಅಗತ್ಯ ವಸ್ತುಗಳ ಪೂರೈಕೆಯಾಗಿರಬಹುದು. ಪ್ರಸ್ತುತ ಈ ಒಂದು ಅಧ್ಯಯನದಲ್ಲಿ ಒಟ್ಟು ೨೩ ಹಳ್ಳಿಗಳಲ್ಲಿ ದೊರೆತ ೨೩ ಶಾಸನಗಳು ದಾನ ಶಾಸನಗಳಾಗಿವೆ. ಇಲ್ಲಿ ಇದಕ್ಕೆ ಹೊರತಾಗಿ ಪರ್ಶಿಯನ್ ಮತ್ತು ಅರೇಬಿಕ್ ಶಾಸನಗಳು ದೊರೆತಿವೆ. ಪ್ರಮುಖವಾಗಿ ಅತಿ ಹೆಚ್ಚು ದಾನ ಶಾಸನಗಳು ಹರಸೂರು, ಹುಣಸಿಹಡಗಿಲ, ಶ್ರೀನಿವಾಸ ಸರಡಗಿಯಲ್ಲಿ ಮತ್ತು ಗುಲಬರ್ಗಾ ಪ್ರದೇಶದಲ್ಲಿ ದೊರೆತಿವೆ.

ಶಾಸನಗಳ ವೈವಿಧ್ಯತೆಯ ಅಧ್ಯಯನದ ದೃಷ್ಟಿಯಿಂದ ಅದರ ಪಠ್ಯವನ್ನು ಅದರಲ್ಲಿರುವ ವಿಷಯವನ್ನು ಸ್ಪಷ್ಟವಾಗಿ ತಿಳಿಸಲಾಗಿದೆ. ಎಂ.ಯಾಸಿನ್ ಖುದ್ದೊಸಿ ಮತ್ತು ಸೀತಾರಾಮ ಜಾಗಿರದಾರರು ಬರೆದಿರುವ 'ಕರ್ನಾಟಕ ಪರ್ಶಿಯನ್ ಅರೇಬಿಕ್ ಮತ್ತು ಉರ್ದು ಶಾಸನಗಳು' ಎಂಬ ಪುಸ್ತಕ, ಪ್ರಸ್ತುತ ಅಧ್ಯಯನದ ಮೇಲೆ ಹೆಚ್ಚು ಬೆಳಕು ಚೆಲ್ಲುವ ಕಾರಣ ಆ ಕೃತಿಯಲ್ಲಿನ ೪೫ ಶಾಸನಗಳನ್ನು ನನ್ನ ಅಧ್ಯಯನದಲ್ಲಿ ಅಳವಡಿಸಿಕೊಂಡಿದ್ದೇನೆ. ಈ ಎಲ್ಲ ಶಾಸನಗಳು ಗುಲಬರ್ಗಾ ಪರಿಸರಕ್ಕೆ ಸಂಬಂಧಪಟ್ಟದವುಗಳಾಗಿವೆ. ಆ ಶಾಸನಗಳನ್ನು ಈ ಕೆಳಗಿನಂತೆ ವಿವರಿಸಲಾಗಿದೆ.

ಕನ್ನಡ ಶಾಸನಗಳು

ಗ್ರಾಮ–ತಿಳಗುಳ — ಸ್ಥಳ–ಊರಿನ ಹನುಮಂತನ ದೇವರಗುಡಿ

ಅರಸ–೬ನೇ ವಿಕ್ರಮಾದಿತ್ಯ — ಕಾಲ–ಕ್ರಿ.ಶ.೧೦೮೧

ರಾಜವಂಶ–ಕಲ್ಯಾಣ ಚಾಲುಕ್ಯ

ನಿಂಬದೇವಯ್ಯಗಳು ತ್ರೈಪುರುಷ ದೇವಾಲಯಕ್ಕೆ ೫೦ ಕಮ್ಮ ಭೂಮಿಯನ್ನು ದತ್ತಿಯಾಗಿ ಕೊಟ್ಟಿದೆ. ಶಾಸನಗಳ ಬರವಣಿಗೆಯಲ್ಲಿ ಇಲ್ಲಿ ಸಂಕ್ಷಿಪ್ತತೆಯಿದ್ದು ಕೇವಲ ದತ್ತಿಯಾಗಿಸಿದವನ ಹೆಸರು ಮತ್ತು ಅಲ್ಲಿನ ದೇವರ ಹೆಸರನ್ನಷ್ಟನ್ನೇ ಉಲ್ಲೇಖಿಸಲಾಗಿದೆ.[೨]

ಗ್ರಾಮ–ಹುಣಸಿ ಹಡಗಿಲ — ಸ್ಥಳ–ಜೈನಬಸದಿ

ಅರಸ–೬ನೇ ವಿಕ್ರಮಾದಿತ್ಯ — ಕಾಲ–ಕ್ರಿ.ಶ.೧೦೯೯

ರಾಜವಂಶ–ಕಲ್ಯಾಣ ಚಾಲುಕ್ಯ

ಕಲ್ಯಾಣ ದಂಡನಾಯಕ ಬಿವಣಯ್ಯಗಳ ಬಿನ್ನಪದಿಂದ ಚೌಧರೆ ರಕ್ಕಸಯ್ಯ ನಾಯಕನು ತನ್ನ ಪ್ರಭುತ್ವದ ಗೊಂಕನೂರಿನ ಕೆಲವು ಹಳ್ಳಿಗಳನ್ನು ಪಾರ್ಶ್ವನಾಥ ಹಾಗೂ ಶಾಂತಿನಾಥ ಬಸದಿಗಳಿಗೆ ದತ್ತಿಯಾಗಿ ನೀಡಿರುವ ಅಂಶ ಇದರ ಮುಖ್ಯ ವಿಷಯ ವಸ್ತುವಾಗಿದೆ.[೩]

ಗ್ರಾಮ–ಹೊನ್ನಕಿರಣಗಿ ಸ್ಥಳ–ಗ್ರಾಮದ ಪಂಚಾಯ್ತಿ ಕಟ್ಟೆ

ಅರಸ–ನೊರ್ಮಡಿ ತೈಲಪ ಕಾಲ–ಕ್ರಿ.ಶ.೧೧೫೮

ರಾಜವಂಶ–ಕಲ್ಯಾಣ ಚಾಳುಕ್ಯ

ಅಲಂದೆ ಸಾಸಿರದ ಸುಂಕನೆಗ್ಗಡೆಯು ಕೀರಣಿಗೆಯ ಬಸವಯ್ಯ ದೇವರಿಗೆ ಬಿಟ್ಟ ದತ್ತಿಯಾಗಿದೆ. ಹೊನ್ನಕಿರಣಗಿ ಭಾಗವು ಆಗ ಅಲಂದೆ ಸಾಸಿರ ನಾಡಿಗೆ ಸೇರಿತ್ತೆಂಬ ಅಂಶ ಈ ಶಾಸನದಿಂದ ತಿಳಿದು ಬರುತ್ತದೆ.[೪]

ಗ್ರಾಮ–ಹರಸೂರು ಸ್ಥಳ–ಈಶ್ವರ ಗುಡಿ

ಅರಸ–ರಾಯಮುರಾರಿ ಸೋವಿದೇವ ಕಾಲ–ಕ್ರಿ.ಶ.೧೧೭೦

ರಾಜವಂಶ–ಕಲ್ಯಾಣ ಕಳಚೂರಿ

ಬಿರುದಾಂಕಿತನಾದ ರಾಯಮುರಾರಿ ಸೋವಿದೇವನ ಮಹಾದಂಡನಾಯಕ ಮಾಧವಯ್ಯ ನಾಯಕನು ಅಲಂದೆಯ 'ಸೋಮನಾಥ ಲಬ್ದವರಪ್ರಸಾದ' 'ಮನ್ನೆಯಸಿಂಹ' ರಾಮರಸ ಹಾಗೂ ಮಹಾಮಂಡಲೇಶ್ವರ ವೀರ ಗೊಂಕರಸರೊಡನೆ ಶಾಲೆಯ ಸೀಮಳದ (ಹರಸೂರು) ಶ್ರೀಭೋಗೇಶ್ವರ ದೇವರಂಗ ಭೋಗಕ್ಕಾಗಿ ಗೊಂಕನೊರೆಪ್ಪತರ ಅಂಕೂಲಗೆಯನ್ನು ದತ್ತಿಯಾಗಿರಿಸಿದ್ದನ್ನ ಈ ಶಾಸನ ಪ್ರಸ್ತಾಪಿಸುತ್ತದೆ.[೫]

ಗ್ರಾಮ–ಹರಸೂರು ಸ್ಥಳ–ಜೈನಬಸದಿ

ಅರಸ–೩ನೇ ಜಗದೇಕಮಲ್ಲ ಕಾಲ–ಕ್ರಿ.ಶ.೧೧೮೩

ರಾಜವಂಶ–ಕಲ್ಯಾಣ ಚಾಳುಕ್ಯ

ಶಾಲೆಯ ಶಿಮಳದ ಬಾಲೇಶ್ವರ ದೇವರ್ಗೆ ಬಿಟ್ಟ ದತ್ತಿ ಹರಸೂರಿಗೆ ಹಿಂದೆ ಶಾಲೆಯ ಸೀಮಳವೆಂದು ಹೆಸರಿದ್ದು, ಅಂದಿನ ವಿದ್ಯಾಕೇಂದ್ರಗಳಲ್ಲಿ ಒಂದಾಗಿತ್ತೆಂಬ ಅಂಶ ಹರಸೂರಿನ ಬೇರೆ ಶಾಸನಗಳಿಂದಲೂ ತಿಳಿದು ಬರುತ್ತದೆ.[೬] ಅಂದರೆ ವ್ಯಕ್ತಿ ಮತ್ತು ಧಾರ್ಮಿಕ ಸಂಸ್ಥೆಗಳಿಗಷ್ಟೆ ಅಲ್ಲದೆ ಶಾಲೆಗಳಂತಹ ಸಮಾಜಮುಖಿ ಕಾರ್ಯಗಳಿಗೂ ದತ್ತಿ ಕೊಡುತ್ತಿದ್ದರು ಎಂಬುದು ಈ ಶಾಸನದಿಂದ ನಮಗೆ ವೇದ್ಯವಾಗುತ್ತದೆ.

ಗ್ರಾಮ–ಪಟ್ಟಣ ಸ್ಥಳ–ಪಟ್ಟಣ

ಅರಸ–ಚಾಳುಕ್ಯ ವಿಕ್ರಮ ಕಾಲ–ಕ್ರಿ.ಶ.೧೧೮೮

ರಾಜವಂಶ–ಕಲ್ಯಾಣ ಚಾಲುಕ್ಯ

ಮಹಾಮಂಡಳೇಶ್ವರ ಬಿಬ್ಬರಸನು ಭೀಮಾತೀರದ ಕವಿಟಗೆ ಅಜ್ಜೇಶ್ವರ ದೇವರಿಗೆ ಸಾಂಪ್ರದಾಯಿಕವಾಗಿ ಬಿಟ್ಟ ಭೂಮಿ, ಮನೆ ನಿವೇಶನವಾಗಿದೆ.[೭]

ಗ್ರಾಮ–ಫಿರೋಜಾಬಾದ ಸ್ಥಳ–ಈಶ್ವರ ದೇವಾಲಯ

ಅರಸ–x x x ಕಾಲ–೧೨ನೇ ಶತಮಾನ

ರಾಜವಂಶ–ಕಲ್ಯಾಣ ಚಾಲುಕ್ಯ

ಈ ಶಾಸನವು ಓಂ ನಮಃ ಶಿವಾಯ॥ ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾಮರ ಚಾರವೇ ತ್ರೈಲೋಕ್ಯ ನಗರಾಂಭ ಮೂಲಸ್ತಾಂಭಯ ಎಂಬ ಶ್ಲೋಕದೊಂದಿಗೆ ಪ್ರಾರಂಭವಾಗುತ್ತದೆ. ದಾನದ ಬಗ್ಗೆ ಈ ಶಾಸನದಲ್ಲಿ ಉಲ್ಲೇಖಿಸಲಾಗಿದೆ.[೮]

ಗ್ರಾಮ–ಹರಸೂರು ಸ್ಥಳ–ಜಗನ್ನಾಥ ದೇವಾಲಯ

ಅರಸ–x x x ಕಾಲ–೧೨ನೆಯ ಶತಮಾನ

ರಾಜವಂಶ–ಕಲ್ಯಾಣ ಚಾಲುಕ್ಯ

ಈ ಶಾಸನದಲ್ಲಿ ಅಕ್ಷರಗಳು ಸವೆದು ಹೋಗಿವೆ. ವಿಷಯ ಅಸ್ಪಷ್ಟ.[೯]

ಪರ್ಶಿಯನ್, ಅರೇಬಿಕ್ ಮತ್ತು ಉರ್ದು ಶಾಸನಗಳು

ಗ್ರಾಮ–ಗುಲಬರ್ಗಾ ಸ್ಥಳ–ಹೈದ್ರಾಬಾದಿನ ವಸ್ತು ಸಂಗ್ರಹಾಲಯ

ಅರಸ–ಅಲ್ಲಾವುದ್ದೀನ್ ಬಹಮನ್ ಷಾ ಕಾಲ–ಕ್ರಿ.ಶ.೧೩೫೩–೫೪

ರಾಜವಂಶ–ಬಹಮನಿ

ಈ ಶಾಸನವು ಈಗ ಹೈದ್ರಾಬಾದಿನ ವಸ್ತು ಸಂಗ್ರಹಾಲಯದಲ್ಲಿದ್ದು, ಇದು ಪರ್ಶಿಯನ್ ಭಾಷೆಯಲ್ಲಿದೆ. ಅಂದರೆ ಮೂಲತಃ ಇದು ಕೋಟೆಯ ಹೊರಗೆ ಫರ್ಮಾನ್ ತಾಲಾಬ್ ಪಕ್ಕದ ಒಂದು ಗೋರಿಗೆ ಸಂಬಂಧಿಸಿದೆ. ಈ ಶಾಸನವು ಅಲ್ಲಾವುದ್ದಿನ್ ಬಹಮನ್ ಷಾಹ ದೊರೆಯ ಆಳ್ವಿಕೆಯ ಕಾಲಕ್ಕೆ ಸಂಬಂಧಿಸಿದ್ದಾಗಿದೆ. ದೌಲತ್ ಷಾಃ ಜಾಲಿಬಿಯಾ ಎಂಬಾತನು ಆ.ಹಿ೭೫೪ ಎಂದರೆ ಕ್ರಿ.ಶ.೧೩೫೩–೫೪ರಲ್ಲಿ ಮಸೀದಿಯನ್ನು ಕಟ್ಟಿಸಿದ ಸಂಗತಿಯನ್ನು ದಾಖಲಿಸಿದೆ.[೧೦]

ಗ್ರಾಮ–ಗುಲಬರ್ಗಾ ಸ್ಥಳ–ಹೊಕ್ಕು ತುಂಬುವ ಬಾವಿ

ಅರಸ–ಮಹಮ್ಮದ್ ಷಾ ಕಾಲ–ಕ್ರಿ.ಶ.೧೩೬೭ ಏಪ್ರಿಲ್ ೧೧

ರಾಜವಂಶ–ಬಹಮನಿ

ಖ್ವಾಜಾ ಸಿರಾಜುದ್ದೀನ್ ಜುನೈದಿ ಅವರ ಸಮಾಧಿ ಕಟ್ಟಡದ ಪ್ರಾಕಾರದಲ್ಲಿರುವ ಹೊಕ್ಕು ತುಂಬುವ ಬಾವಿಯಲ್ಲಿ ಪರ್ಶಿಯನ್ ಭಾಷೆಯ ಈ ಶಾಸನ ದೊರಕಿದೆ. ಸಮಾಧಿಯ ದರ್ಶನಕ್ಕೆ ಬರುವ ಯಾತ್ರಿಗಳ ಉಪಯೋಗಕ್ಕೆಂದು ಈ ಬಾವಿಯು ತುರುಕರ ಮುಖ್ಯಸ್ಥ(?) ಅಬು ಮಹಮ್ಮದ್ ತಬ್ರಿಜಿ ಎಂಬುವನಿಂದ ಮಹಮ್ಮದ್ ಖಾಲ್ ಖಾಲಿಯವರ ಪುತ್ರ ಖ್ವಾಜಾ ಕಬೀರ ಅವರ ನೇತೃತ್ವದಲ್ಲಿ ಮಹಮ್ಮದ್ ಷಾಹ ಬಹಮನಿ ದೊರೆಯ ಆಳ್ವಿಕೆಯ ಕಾಲದಲ್ಲಿ ಆ.ಹಿ.೭೬೮ ಷಾಬಾನ್ ೧೦ ಎಂದರೆ ಕ್ರಿ.ಶ.೧೩೬೭ ಏಪ್ರಿಲ್ ೧೧ರಂದು ಕಟ್ಟಿ ಸಂಪೂರ್ಣಗೊಳಿಸಲಾಯಿತೆಂದು ಶಾಸನದಲ್ಲಿ ವಿವರಿಸಿದೆ.[೧೧]

ಗ್ರಾಮ–ಗುಲಬರ್ಗಾ	ಸ್ಥಳ–ದ್ವಾರಮಂಟಪದಲ್ಲಿದೆ.
ಅರಸ–ರಫಿ	ಕಾಲ–ಕ್ರಿ.ಶ.೧೩೬೭ ಆಗಸ್ಟ್ ೩೧
ರಾಜವಂಶ–ಬಹಮನಿ	

ಅರಬ್ಬಿ ಭಾಷೆಯ ಈ ಶಾಸನ ಕೋಟೆಯ ಜಾಮಿ ಮಸೀದಿಯ ಉತ್ತರದಲ್ಲಿರುವ ದ್ವಾರಮಂಟಪದಲ್ಲಿದೆ. ಇದು ಮಸೀದಿಯನ್ನು ಮನ್ಸೂರ್ ಅಲ್–ಖಾಜ್ವಿನಿಯ ಪೌತ್ರ ಷಮ್ಷನ ಪುತ್ರ ರಫಿ ಎಂಬಾತನು ಕಟ್ಟಿಸಿದ್ದನ್ನು ತಿಳಿಸುತ್ತದೆ. ಈ ಕಾರ್ಯವು ಅ.ಹಿ.೭೬೯. ಮುಹರ್ರಂ ೪ ಎಂದರೆ ಕ್ರಿಶ ೧೩೬೭ ಆಗಸ್ಟ್ ೩೧ರಂದು ಸಂಪೂರ್ಣಗೊಂಡಿತೆಂದೂ ಇದರಲ್ಲಿ ಬರೆದಿದೆ.[೧೨]

ಗ್ರಾಮ–ಗುಲಬರ್ಗಾ	ಸ್ಥಳ–ಮೊಮಿನಪುರ ಬಡಿ ಮಸೀದಿ
ಅರಸ–ಮಹಮ್ಮದ್ ಷಾ	ಕಾಲ–ಕ್ರಿ.ಶ.೧೩೭೩
ರಾಜವಂಶ–ಬಹಮನಿ	

ಈ ಶಾಸನ ಮೂಮಿನಪುರ ಬಳಿ ಮಸೀದಿಯ(ದೊಡ್ಡಮಸೀದಿ) ಮುಖ್ಯದ್ವಾರದ ಮೇಲೆ ಬರೆಯಲಾಗಿದೆ. ಪರ್ಶಿಯನ್ ಭಾಷೆಯಲ್ಲಿರುವ ಇದು ಒಂದು ಮಸೀದಿ ಮತ್ತು ಹೊಕ್ಕು ತುಂಬುವ ಬಾವಿಯನ್ನು ಕುರಿತು ಮಾಹಿತಿಯನ್ನು ನೀಡುತ್ತದೆ. ಈ ಶಾಸನವು ಓಲಗ ಶಾಲೆ ಕಟ್ಟಿದ ಖ್ಯಾತಿಯನ್ನು ಪಡೆದಿದ್ದ (ಷಹನ–ಇ–ಬಾರ್) ರಜಬ್ ಜಲಾಲ್ ಎಂಬುವನು ಮೊಹಮ್ಮದ್ ಷಾಃ ದೊರೆಯ ಆಳ್ವಿಕೆಯಲ್ಲಿ ಆ.ಹಿ. ೭೭೪ ರಬ್ಬಿ–ಉಲ್–ಅವ್ವಲ್೫?ಎಂದರೆ ಕ್ರಿ.ಶ.೧೩೭೩ ಸೆಪ್ಟಂಬರ್ ೪ರಂದು ಇದನ್ನು ಕಟ್ಟಿಸಿದನೆಂದಿದೆ.[೧೩]

ಗ್ರಾಮ–ಗುಲಬರ್ಗಾ ಸ್ಥಳ–ಸಿರಾಜುದ್ದೀನ್ ಜುನ್ಯೆದಿ ಸಮಾಧಿ

ಅರಸ–x x x ಕಾಲ–ಕ್ರಿ.ಶ.೧೩೭೯–೮೦

ರಾಜವಂಶ–ಬಹಮನಿ

ಷೇಕ್ ಸಿರಾಜುದ್ದಿನ್ ಜುನ್ಯೆರಿ ಇವರ ಸಮಾಧಿಯ ದ್ವಾರದಲ್ಲಿರುವ ಪರ್ಶಿಯನ್ ಭಾಷೆಯ ಈ ಶಾಸನವು ಷೇಕ್ ಸಿರಾಜುದ್ದರ ನಿಧನವನ್ನು ದಾಖಲಿಸಿದೆ. ಈ ಘಟನೆಯನ್ನು ಕಾಲಶ್ಲೇಷೆಯ–(Chronogram) ಮುಖಾಂತರ ವಿವರಿಸಲಾಗಿದೆ. ಅದು ಆ.ಹಿ.೭೮೧ ಎಂದರೆ ಕ್ರಿ.ಶ. ೧೩೭೯–೮೦ರಲ್ಲಿ ಘಟಿಸಿತು ಎಂದು ಶಾಸನದಲ್ಲಿ ದಾಖಲಿಸಿದೆ.[೧೪]

ಗ್ರಾಮ–ಗುಲಬರ್ಗಾ ಸ್ಥಳ–ಮೊಹಲ್ಲಾಷೇಖ್ ರವ್ಜಾ ಮಸೀದಿ

ಅರಸ–ಮಹಮ್ಮದ್ ಷಾಃ ಕಾಲ–ಕ್ರಿ.ಶ.೧೩೭೯ ಡಿಸೆಂಬರ್ ೧೧

ರಾಜವಂಶ–ಬಹಮನಿ

ಮೊಹಲ್ಲಾಷೇಖ್ ರವ್ಜಾ ಮಸೀದಿಯ ಒಂದು ಬಿಡಿಕಲ್ಲಿನಲ್ಲಿರುವ ಈ ಶಾಸನ ಪರ್ಶಿಯನ್ ಭಾಷೆಯಲ್ಲಿದೆ. ಇದು ಮಸೀದಿಯ ನಿರ್ಮಾಣವನ್ನು ಆ.ಹಿ.೭೮೧ ರಮ್ಜಾನ್ ತಿಂಗಳಲ್ಲಿ ಎಂದರೆ ಕ್ರಿ.ಶ.೧೩೭೯ ಡಿಸೆಂಬರ್ ೧೧ರಿಂದ ೧೩೮೦ ಜನವರಿ ೯ರ ಅವಧಿಯಲ್ಲಿ ಮೊಹಮ್ಮದ್ ಷಾಃ-II ರಾಜನ ಆಳ್ವಿಕೆಯಲ್ಲಿ ಮಲಿಖುಷ್ ಷಕ ಆಬಾಜಿ(?) ಅವರಿಂದ ಮಾಡಿಸಲಾಯಿತೆಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ.[೧೫]

ಗ್ರಾಮ–ಫಿರೋಜಾಬಾದ್ ಸ್ಥಳ–ದರ್ಗಾ ಮಸೀದಿ

ಅರಸ–ಫಿರೋಜ್ ಷಾ ಕಾಲ–ಆ.ಹಿ.೮೦೮–ಕ್ರಿ.ಶ.೧೪೦೬,ಜನವರಿ–೨೧

ರಾಜವಂಶ–ಬಹಮನಿ

ಅರಬ್ಬೀ ಭಾಷೆಯಲ್ಲಿರುವ ಈ ಶಾಸನ ದರ್ಗಾ ಮಸೀದಿಯ ಪ್ರವೇಶ ದ್ವಾರದಲ್ಲಿದೆ. ಈ ಮಸಿದಿಯನ್ನು ಹುಸೇನ್ ಕೈಫಿ–ಅಲ್–ಹಿಸ್ಕಿ(?)ಯ ಪುತ್ರನಾದ ಅಹಮ್ಮದನು ಆ.ಹಿ೮೦೮ ರಜಬ್ ಕೊನೆಯ ದಿನ ಎಂದರೆ ಕ್ರಿ.ಶ. ೧೪೦೬ ಜನವರಿ ೨೧ರಂದು ಫಿರೋಜ್ ಷಾಃ ಬಹಮನಿ ದೊರೆಯ ಆಳ್ವಿಕೆಯ ಕಾಲದಲ್ಲಿ ಕಟ್ಟಿಸಿದ್ದನ್ನು ಉಲ್ಲೇಖಿಸುತ್ತದೆ.[೧೬]

ಗ್ರಾಮ–ಫಿರೋಜಾಬಾದ್ ಸ್ಥಳ–ದರ್ಗಾ ಮಸೀದಿ

ಅರಸ–ಖ್ವಾಜಾ ಷಮ್ಷಾಮ್ ಅರ್‌ರೂಮಿ ಕಾಲ–ಕ್ರಿ.ಶ.೧೪೨೧ ಫೆಬ್ರವರಿ ೭

ರಾಜವಂಶ–ಬಹಮನಿ

ಈ ಶಾಸನ ದರ್ಗಾ ಮಸೀದಿಯ ಗೋಡೆಯ ಮೇಲಿದ್ದು ಇದು ಅರಬ್ಬೀ ಭಾಷೆಯಲ್ಲಿ ರಚಿತವಾಗಿದೆ. ಈ ಸಮಾಧಿಯು(ಖಬರ್) ಆ.ಹಿ.೮೨೪ ಸಫರ ೯ ಎಂದರೆ ಕ್ರಿ.ಶ.೧೪೨೧ ಫೆಬ್ರವರಿ ೭ರಂದು ಬರಾಫಿ ಸ್ಥಳದಲ್ಲಿ ಕೊಲ್ಲಲ್ಪಟ್ಟ ಬುರ್‌ಸಾ ನಿವಾಸಿಯಾದ ಖ್ವಾಜ ಷಾಮುಸಿದ್ದೀನ್ ಮಹಮ್ಮದ್ ಅವರ ಪುತ್ರ ಖ್ವಾಜಾ ಷಮ್ಷಾಮ್ ಅರ್‌ರೂಮಿ ಅವರದು ಎಂದು ದಾಖಲಿಸಿದೆ.[೧೭]

ಗ್ರಾಮ–ಗುಲಬರ್ಗಾ | ಸ್ಥಳ–ಖರ್ಬುಜಾ ಗುಂಬಜ್

ಅರಸ–ಫಿರೋಜ್ ಷಾಃ | ಕಾಲ–ಕ್ರಿ.ಶ.೧೪೧೬ ಏಪ್ರಿಲ್ ೧೨

ರಾಜವಂಶ–ಬಹಮನಿ

ಈ ಶಾಸನವು ಪರ್ಶಿಯನ್ ಭಾಷೆಯಲ್ಲಿದ್ದು ಖರ್ಬುಜ ಗುಂಬಜಿನ ಬಾಗಿಲ ಮೇಲಿದೆ. ಇದು ತುರ್ಕಿವಂಶೀಯನಾದ ಮಲಿಕ್ ನಾಯಿಬ್ ಹೊಷಂಗರ ಸಮಾಧಿಯನ್ನು ಫಿರೋಜಷಾಃ ಬಹಮನಿ ದೊರೆಯ ಆಳ್ವಿಕೆಯಲ್ಲಿ ಆ.ಹಿ.೮೧೯ ಸಫರ್ ೧೩ ಎಂದರೆ ಕ್ರಿ.ಶ. ೧೪೧೬ ಏಪ್ರಿಲ್ ೧೨ರಂದು ಕಟ್ಟಿದ್ದನ್ನು ಕಟ್ಟಿದವರು ರಾಜನ ಸೇವಕನೆಂದು ಇಲ್ಲಿ ಹೇಳಲಾಗಿದೆ.[೧೮]

ಗ್ರಾಮ–ಗುಲಬರ್ಗಾ | ಸ್ಥಳ–ಕೋಟೆ ಮಸೀದಿ

ಅರಸ–x x x | ಕಾಲ–ಕ್ರಿ.ಶ.೧೪೨೧–೨೨

ರಾಜವಂಶ–ಬಹಮನಿ

ಶಾಸನವು ಅರಬ್ಬೀ ಭಾಷೆಯಲ್ಲಿದ್ದು ಕೋಟೆಯ ಜಾಮಿಯ ಮಸೀದಿಯ ಉತ್ತರ ದಿಕ್ಕಿನಲ್ಲಿರುವ ಮಂಟಪದ ಎಡಗೋಡೆಯಲ್ಲಿದೆ. ಇದು ಹಾಜಿ ಹುಸೈನ್ ಲಾಹಿಜಾನೀ ಅವರ ಪುತ್ರ ಹಾಜಿ ಮೊಹಮ್ಮದ್ ಅವರು ಆ.ಹಿ. ೮೨೪ ಎಂದರೆ ಕ್ರಿ.ಶ.೧೪೨೧–೨೨ರಲ್ಲಿ ನಿಧನ ಹೊಂದಿದನ್ನು ತಿಳಿಸುತ್ತದೆ.[೧೯]

ಗ್ರಾಮ-ಗುಲಬರ್ಗಾ | ಸ್ಥಳ-ಲಂಗರ್ ಖಾನಾ ಮಸೀದಿ

ಅರಸ-ಅಹಮ್ಮದ್ ಷಾಃ ೨ | ಕಾಲ-ಕ್ರಿ.ಶ.೧೪೩೪,ಮೇ-ಜೂನ್

ರಾಜವಂಶ-ಬಹಮನಿ

ಈ ಅರಬ್ಬೀ ಶಾಸನವು ಬಹಮನಿ ರಾಜರ ಆಡಳಿತಾವಧಿಗೆ ಸಂಬಂಧಿಸಿದೆ. ಲಂಗರ್ ಖಾನಾ ಮಸೀದಿಗೆ ಹತ್ತಿರವಿರುವ ಸಮಾಧಿಯ ಬಳಿಯಲ್ಲಿ ದೊರೆತಿದೆ;ಅಹಮ್ಮದ್ ಷಾಃ II

ದೊರೆಯನ್ನು ಪ್ರತಿನಿಧಿಸುತ್ತದೆ. ಮಹಾಸಂತ ಸಯ್ಯದೀ ಅಹಮ್ಮದ್ ಕಬೀರ ಅವರ ಆಧ್ಯಾತ್ಮಿಕ ಪರಂಪರೆಯ ಉತ್ತರಾಧಿಕಾರಿಯಾದ ಮರಾಘದ ಹಾಜಿ ಝ್ಯುದಿಯ ಸಮಾಧಿಯ ನಿರ್ಮಾಣಕ್ಕೆ ಸಂಬಂಧಿಸಿದೆ. ಈ ಶಾಸನ ಅ.ಹಿ.೮೩೭ ಪವ್ವಲ್ ಎಂದರೆ ಕ್ರಿ.ಶ.೧೪೩೪ ಮೇ-ಜೂನ್ ಅವಧಿಯಲ್ಲಿ ಈತನು ನಿಧನ ಹೊಂದಿದನ್ನು ತಿಳಿಸುತ್ತದೆ.[೨೦]

ಗ್ರಾಮ-ಗುಲಬರ್ಗಾ | ಸ್ಥಳ-ಷಾಃ ಕಬೂಲ್–ಉಲ್ಲಾ–ಹುಸೈನಿ ದರ್ಗಾ

ಅರಸ-x x x | ಕಾಲ–ಕ್ರಿ.ಶ.೧೪೪೯-೫೦

ರಾಜವಂಶ-ಬಹಮನಿ

ಈ ಶಾಸನವು ಪರ್ಶಿಯನ್ ಭಾಷೆಯಲ್ಲಿದ್ದು ಷಾಃ ಕಬಾಲ್-ಉಲ್ಲಾ ಹುಸೈನಿ ಅವರ ದರ್ಗಾದಲ್ಲಿ ಸಮಾಧಿಯ ಮೇಲಿದೆ. ಇದು ಆ.ಹಿ. ೮೫೩ ಎಂದರೆ ಕ್ರಿ.ಶ. ೧೪೪೯-೫೦ರಲ್ಲಿ ಷಾಃಯದುಲ್ಲಾ ಹುಸೈನಿ ನಿಧನ ಹೊಂದಿದುದನ್ನು ದಾಖಲಿಸಿದೆ.[೨೧]

ಗ್ರಾಮ-ಗುಲಬರ್ಗಾ | ಸ್ಥಳ-ಖಲಂದರ್ ಷಾಃ ಬಾವಿ

ಅರಸ-ಹುಮಾಯೂನ | ಕಾಲ–ಕ್ರಿ.ಶ.೧೪೫೭-೫೮

ರಾಜವಂಶ-ಬಹಮನಿ

ಖಲಂದರ್ ಷಾಃ ಬಾವಿಯ ಪೂರ್ವದ ಗೋಡೆಯಲ್ಲಿರುವ ಈ ಶಾಸನವು ಪರ್ಷಿಯನ್ ಭಾಷೆಯಲ್ಲಿದೆ. ಹೊಕ್ಕು ತುಂಬುವ ಈ ಬಾವಿಯನ್ನು ಆ.ಹಿ. ೮೬೨ ಎಂದರೆ ಕ್ರಿ.ಶ.೧೪೫೭-೫೮ರಲ್ಲಿ ಬಹುಮನಿ ದೊರೆ ಹುಮಾಯೂನನ ಆಳ್ವಿಕೆಯ ಕಾಲದಲ್ಲಿ ಕಟ್ಟಲಾಯಿತೆಂದು ಉಲ್ಲೇಖಿಸಿದೆ. (ಬಾವಿಯನ್ನು ಕಟ್ಟಿದ) ವಾಸ್ತುಶಿಲ್ಪಿಯ ಹೆಸರಿದ್ದು ಇದು ಅಳಿಸಿದೆ.[೨೨]

ಗ್ರಾಮ–ಗುಲಬರ್ಗಾ | ಸ್ಥಳ-ಪುತಲಿ ಬುರ್ಜ

ಅರಸ-ಅಲೀ-೧ | ಕಾಲ–ಕ್ರಿ.ಶ.೧೫೫೭-೫೮

ರಾಜವಂಶ-ಬಿಜಾಪುರ ಆದಿಲ್‌ಶಾಹಿ

ಕೋಟೆಯ ಪಶ್ಚಿಮದ ಗೋಡೆಯ ಪುತಲಿ ಬುರ್ಜನ ಒಳಗೋಡೆಯಲ್ಲಿ ಈ ಶಾಸನದ ಕಲ್ಲನ್ನು ಕಟ್ಟಲಾಗಿದೆ. ಪರ್ಶಿಯನ್ ಭಾಷೆಯಲ್ಲಿದ್ದ ಈ ಶಾಸನ ಬುರ್ಜ್‌ದೌಲತ್ ಕಟ್ಟಡವನ್ನು ಅರಬ್‌ಖಾನನು ಆ.ಹಿ. ೯೬೫ರಲ್ಲಿ ಎಂದರೆ ಕ್ರಿ.ಶ.೧೫೫೭-೫೮ರಲ್ಲಿ ಆದಿಲ್‌ಶಾಹಿ ವಂಶದ ಅಲಿ-೧ ರಾಜನ ಆಳ್ವಿಕೆಯಲ್ಲಿ ಕಟ್ಟಿಸಿದ ಸಂಗತಿಯನ್ನು ದಾಖಲಿಸಿದೆ.[೨೩]

ಗ್ರಾಮ-ಗುಲಬರ್ಗಾ ಸ್ಥಳ-ಕೋಟೆ ಬಾವಿ

ಅರಸ-ಹಾಜಿ ಇಮಾದ್ ಖಾನ್ ಕಾಲ-ಕ್ರಿ.ಶ.೧೫೬೧-೬೨

ರಾಜವಂಶ-ಆದಿಲ್‌ಶಾಹಿ

ಈ ಶಾಸನವು ಪರ್ಶಿಯನ್ ಭಾಷೆಯಲ್ಲಿದ್ದು ಕೋಟೆಯ ಪಶ್ಚಿಮದ ಎರಡು ಗೋಡೆಗಳ ಮಧ್ಯದ ಹೊಕ್ಕು ತುಂಬುವ ಬಾವಿಯ ಹರಬಾವಲಿ ಭಿತ್ತಿ ಮೇಲಿದೆ. ಮೂಲತಃ ಹರಬಾವಲಿ ಬಳಿಯ ಮನೆಯೊಂದರ ಭಗ್ನ ಅವಶೇಷಗಳಲ್ಲಿ ಇದು ಇದ್ದಿತು. ಆ.ಹಿ. ೯೬೯ರಲ್ಲಿ ಎಂದರೆ ಕ್ರಿ.ಶ. ೧೫೬೧ ರಲ್ಲಿ ಆದಿಲ್‌ಶಾಹಿಯ ದೊರೆ ಅಲೀ ಅವರ ಕಾಲದಲ್ಲಿ ಕಟ್ಟಲ್ಪಟ್ಟ ಕಟ್ಟಡವೊಂದರ ನಿರ್ಮಾಣವನ್ನು ದಾಖಲಿಸಿದೆ. ಈ ಕಟ್ಟಡವನ್ನು ಕಟ್ಟಿದವರ ಹೆಸರು ಹಾಜಿ ಇಮಾದ್ ಖಾನ್ ಎಂದಿದೆ.[೨೪]

ಗ್ರಾಮ-ಗುಲಬರ್ಗಾ ಸ್ಥಳ-ಬಿಜಾಪುರ ಬಕ್ಷಿಸಾಹೇಬರ ಮಸೀದಿ

ಅರಸ-x x x ಕಾಲ-ಕ್ರಿ.ಶ.೧೫೭೨-೭೩

ರಾಜವಂಶ-ಬಿಜಾಪುರ ಆದಿಲ್ ಷಾಹಿಗಳು

ಆ.ಹಿ. ೯೮೦ ಎಂದರೆ ಕ್ರಿ.ಶ.೧೫೭೨-೭೩ರಲ್ಲಿ ಬರೆಯಲಾಗಿರುವ ಇದು ಬಿಜಾಪುರ ಬಕ್ಷಿಸಾಹೇಬರ ಮಸೀದಿ ಗೋಡೆಯೊಂದರ ಮೇಲಿದೆ. ಈ ಶಾಸನವು ಅರಬ್ಬೀ ಭಾಷೆಯಲ್ಲಿದ್ದು ಇದರಲ್ಲಿ ಕುರಾನ್ ಶರೀಫ್ ಕೃತಿಯ ಧಾರ್ಮಿಕ ಪಠ್ಯವನ್ನು ಕೆತ್ತಿದೆ. ಕೊನೆಯಲ್ಲಿ ಆ.ಹಿ. ೯೮೦ ಎಂಬ ತೇದಿಯೊಂದೇ ಇದೆ.[೨೫]

ಗ್ರಾಮ-ಗುಲಬರ್ಗಾ ಸ್ಥಳ-ಹಿರಾಪುರ ಮಕ್ಬರಾ ಮಸೀದಿ

ಅರಸ-x x x ಕಾಲ-ಕ್ರಿ.ಶ.೧೫೭೨-೭೩

ರಾಜವಂಶ-ಬಿಜಾಪುರ ಆದಿಲ್ ಷಾಹಿಗಳು

ಅರಬ್ಬೀ ಭಾಷೆಯಲ್ಲಿರುವ ಈ ಶಾಸನವು ಹೀರಾಪೂರದ ಮಕ್ಬರಾ ಮಸೀದಿಯಲ್ಲಿ ದೊರಕಿದೆ. ಧಾರ್ಮಿಕ ಸಂಗತಿಯ ಪಠ್ಯವನ್ನು ಹೊಂದಿದೆ. ಇದರಲ್ಲಿ ಆ.ಹಿ. ೯೮೦. ಎಂದರೆ ಕ್ರಿ.ಶ.೧೫೭೨-೭೩ ಎಂದು ಉಲ್ಲೇಖಿಸಿದೆ.[೨೬]

ಗ್ರಾಮ-ಗುಲಬರ್ಗಾ ಸ್ಥಳ-ಕೋಟೆಯ ಬುರ್ಜ್

ಅರಸ-ಅಲೀ ಆದಿಲ್‌ಷಾಃ ಕಾಲ-ಕ್ರಿ.ಶ.೧೫೭೩-೭೪

ರಾಜವಂಶ-ಬಿಜಾಪುರ ಆದಿಲ್‌ಶಾಹಿ

ಕೋಟೆಯ ಬುರ್ಜಿನಲ್ಲಿ ದೊರಕಿರುವ ಪರ್ಷಿಯನ್ ಭಾಷೆಯ ಈ ಶಾಸನವು ಈ ಬುರ್ಜನನ್ನು ಬಾಬಾಜೀ ಬಾಬಿತ್ ನಾಯಿನ್–ಇ–ಪೈಬತ್ ಅಧಿಕಾರಿಯು ಅಹಸಾನಾಮಾದ್ ನಗರದ ಕಿಲ್ಲೆಯಲ್ಲಿ ಕಟ್ಟಿಸಿದನೆಂಬ ಸಂಗತಿಯನ್ನು ದಾಖಲಿಸಿದೆ. ಇದನ್ನು ಅಲೀ ಆದಿಲ್ ಷಾಃ-೧ ದೊರೆಯ ಆಳ್ವಿಕೆಯಲ್ಲಿ ಷುಹನಾರ್ ಆ.ಹಿ. ೯೮೧ ಆ. ಹಿ. ೯೮೧ ಎಂದರೆ ಕ್ರಿ.ಶ. ೧೫೭೩-೭೪ ಕಟ್ಟಿಸಲಾಗಿದ್ದ ಮಾಹಿತಿಯನ್ನು ನೀಡುತ್ತದೆ.[೨೭]

ಗ್ರಾಮ-ಗುಲಬರ್ಗಾ	ಸ್ಥಳ-ಕೋಟೆಯ ಜಾಮೀಯ ಮಸೀದಿ
ಅರಸ–ಅಲೀ ಆದಿಲ್ ಷಾಃ	ಕಾಲ–ಕ್ರಿ.ಶ.೧೫೭೩-೭೪
ರಾಜವಂಶ-ಬಿಜಾಪುರ ಆದಿಲ್‌ಷಾಹಿ	

ಈ ಶಾಸನವು ಕೋಟೆಯಲ್ಲಿಯ ಜಾಮಿಯ ಮಸೀದಿ ಮತ್ತು ಪುತಲಿ ಬಾವಲಿ (ಪುತ್ಥಳಿಬಾವಿಯ) ಮಧ್ಯದಲ್ಲಿ ಬಿದ್ದಿರುವ ಕಲ್ಲಿನ ಮೇಲಿದೆ. ಬಾಜಿತ್ ಖಾನ್‌ನು ರಾಜಾಜ್ಞೆಯ ಮೆರೆಗೆ ಅಲೀ ಆದಿಲ್‌ಷಾಃ–೧ ದೊರೆಯ ಆಳ್ವಿಕೆಯ ಕಾಲದಲ್ಲಿ ಭವನೊಂದನ್ನು ಕಟ್ಟಿಸಿದ್ದನ್ನು ಪರ್ಷಿಯನ್ ಭಾಷೆಯಲ್ಲಿ ದಾಖಲಿಸಿದೆ. ಈ ಕಾರ್ಯವು ಆ.ಹಿ. ೯೮೧ ಎಂದರೆ ಕ್ರಿ.ಶ. ೧೫೭೩-೭೪ರಲ್ಲಿ ನಡೆಯಿತು ಎಂದು ಈ ಶಾಸನದಲ್ಲಿ ಉಲ್ಲೇಖಿತವಾಗಿದೆ.[೨೮]

ಗ್ರಾಮ-ಗುಲಬರ್ಗಾ	ಸ್ಥಳ-ಹೊಕ್ಕು ತುಂಬುವ ಬಾವಿ
ಅರಸ-ಇಬ್ರಾಹಿಂ ಆದಿಲ್ ಷಾಃ	ಕಾಲ–ಕ್ರಿ.ಶ.೧೫೮೬ ಜನವರಿ
ರಾಜವಂಶ-ಬಿಜಾಪುರ ಆದಿಲ್ ಷಾಹಿ	

ಹಿರಾಪುರದ ಹೊಕ್ಕು ತುಂಬುವ ಬಾವಿಯಲ್ಲಿ ಲಭ್ಯವಾಗಿರುವ ಈ ಪರ್ಷಿಯನ್ ಶಾಸನವು ಘನತೆವೆತ್ತ ನವಾಬೇ ಇಬ್ರಾಹಿಂ ಆದಿಲ್‌ಷಾಃ ದೊರೆಯು ತನ್ನ ಸೇನಾಸಮೇತ ಬಿಡಾರ ಬಿಟ್ಟಾಗ, ಇಲ್ಲೊಂದು ಕಾರಂಜೀ ಬಾವಿ ಹಾಗೂ ಫಲಭರಿತ ತೋಟವನ್ನು ಮಾಡಿಸುವುದಾಗಿ ರಾಜನ ತಾಯಿ ಮುಖ್ದೂಮಾ-ಇ-ಜಹಾನ್ ಹರಕೆ ಹೊತ್ತಿದ್ದಳು. ಅವನು ಸಂತ ಸಯ್ಯದ್ ಮೊಹಮ್ಮದ್ ಹುಸೈನಿ ಗೇಸುದರಾಜ್ ಅವರ ದರ್ಗಾಕ್ಕೆ ಯಾತ್ರೆ ಹೊರಟಿದ್ದರು. ಯಾತ್ರೆ ಹೊರಟಿದ್ದುದು ಆ.ಹಿ. ೯೮೯. ಮೊಹರಂ ೩ ಎಂದರೆ ಕ್ರಿ.ಶ.೧೫೮೧ ಫೆಬ್ರವರಿ ೭ ಮತ್ತು ಹರಕೆಯನ್ನು ಈಡೇರಿಸಿದುದು ಆ.ಹಿ. ೯೯೪ ಮೊಹರಂ ಎಂದರೆ ಕ್ರಿ.ಶ.೧೫೮೫. ಡಿಸೆಂಬರ್-೧೫೮೬ ಜನವರಿಯಲ್ಲಿ ಎಂದು ಇದರಲ್ಲಿ ನಮೂದಾಗಿದೆ.[೨೯]

ಗ್ರಾಮ–ಗುಲಬರ್ಗಾ ಸ್ಥಳ-ಈ ಹಿಂದೆ ತೋಟವಾಗಿದ್ದ ಸ್ಥಳದ ಗೋಡೆ

ಅರಸ-ಅಲಿ ಆದಿಲ್ ಷಾಃ-೧ ಕಾಲ–ಕ್ರಿ.ಶ.೧೫೮೬

ರಾಜವಂಶ-ಬಿಜಾಪುರ ಆದಿಲ್‌ಷಾಹಿ

ಈ ಶಾಸನವು ಪರ್ಷಿಯನ್ ಭಾಷೆಯಲ್ಲಿದ್ದು ಈ ಹಿಂದೆ ತೋಟವಾಗಿದ್ದ ಸ್ಥಳದ ಗೋಡೆಯಲ್ಲಿದೆ. ಇದೀಗ ನಗರದ ಒಂದು ಬಡಾವಣೆ. ಈ ಶಾಸನ ಆದಿಲ್‌ಬಾದಿನ ತೋಟದ ಮನೆಯೊಂದರ ನಿರ್ಮಾಣವನ್ನು ಕುರಿತಿದೆ. ಇದನ್ನು ಅಹಸಾನಾಬಾದಿನ ನಾಯಿಬ್-ಇ-ಪೈಬತ್‌ನ ಅಧಿಕಾರಿಯಾಗಿದ್ದ ಬಾವಾಜಿ ಜೌಬಿತ್ ಖಾನ್‌ನು ಅಲೀ ಆದಿಲ್ ಷಾಃ–೧ ದೊರೆಯ ಆಳ್ವಿಕೆಯ ಕಾಲದಲ್ಲಿ ಆ.ಹಿ. ೯೯೪ ಎಂದರೆ ಕ್ರಿ.ಶ. ೧೫೮೬ರಲ್ಲಿ ಕಟ್ಟಿಸಿದನು.[೩೦]

ಗ್ರಾಮ–ಗುಲಬರ್ಗಾ ಸ್ಥಳ–ಕೋಟೆಯ ಗಜದ್ವಾರ

ಅರಸ–ಇಬ್ರಾಹಿಂ ಆದಿಲ್ ಷಾಃ–೨ ಕಾಲ–ಕ್ರಿ.ಶ.೧೫೮೬-೮೭

ರಾಜವಂಶ-ಬಿಜಾಪುರ ಆದಿಲ್‌ಷಾಹಿ

ಶಾಸನವು ಪರ್ಷಿಯನ್ ಭಾಷೆಯಲ್ಲಿದೆ. ಇದು ಕೋಟೆಯ ಗಜದ್ವಾರದ ಬಳಿಯ ಫತೆಬುರ್ಜಿನ ಬಳಿ ದೊರೆತಿದೆ. ಆ.ಹಿ. ೯೯೫ ಎಂದರೆ ಕ್ರಿ.ಶ.೧೫೮೬-೮೭ರಲ್ಲಿ ಬುರ್ಜನ್ನು ಕಟ್ಟಿಸಿದ ಸಂಗತಿಯನ್ನು ದಾಖಲಿಸಿದೆ. ಬುರ್ಜನ್ನು ನ್ಯಾಯಾಲಯದ ಅಧಿಕಾರಿ ಮೊಹಮ್ಮದ್ ಹೈದರನು ಕಟ್ಟಿಸಿದನು. (ಇಬ್ರಾಹಿಂ ಆದಿಲ್‌ಷಾಃ ೨) ದೊರೆಯ ಬಿರುದು 'ತಾಜುದ್ದುನ್ಯಾವುದ್ದೀನ್ ಅಬುಲ್ ಮುಜಫರ್' ಎಂಬುದನ್ನು ಇದು ತಿಳಿಸುತ್ತದೆ.[೩೧]

ಗ್ರಾಮ–ಗುಲಬರ್ಗಾ ಸ್ಥಳ-ಸಿದಿ ಅಂಬರನ ಸಮಾಧಿ

ಅರಸ–ಅಂಬರ ಕಾಲ–ಕ್ರಿ.ಶ.೧೫೯೯-೧೬೦೦

ರಾಜವಂಶ-x x x

ಸಿದಿ ಅಂಬರನ ಸಮಾಧಿಯ ಮೇಲಿರುವ ಈ ಪರ್ಶಿಯನ್ ಭಾಷೆಯ ಶಾಸನ ಅಂಬರನು ಆ.ಹಿ.೧೦೦೮ ಎಂದರೆ ಕ್ರಿ.ಶ.೧೫೯೯-೧೬೦೦ರಲ್ಲಿ ಕಟ್ಟಿಸಿದನೆಂದು ಇದು ತಿಳಿಸುತ್ತದೆ.[೩೨]

ಗ್ರಾಮ–ಗುಲಬರ್ಗಾ ಸ್ಥಳ-ಗುಲಬರ್ಗಾ ಕೋಟೆ

ಅರಸ–x x x ಕಾಲ–೧೬೦೦

ರಾಜವಂಶ–x x x

ಸಂತೆಯಲ್ಲಿ ಅಂದು ಮಾರಾಟವಾಗುತ್ತಿದ್ದ ನಿತ್ಯ ವ್ಯವಹಾರದ ಹಣ್ಣು ಕಾಯಿಗಳ ಬೆಲೆಗಳನ್ನು ದಮ್ಮ ದಮ್ಮಾಣಿ ರೂಪದಲ್ಲಿ ತಿಳಿಸಿರುವರು. ಶಾಸನಗಳಲ್ಲಿ ಕತ್ತೆ ಹಾಗೂ ನಿಂತ ಸ್ತ್ರೀಬೊಂಬೆ ಚಿತ್ರಗಳು ಕಂಡುಬರುತ್ತವೆ.[೩೩]

ಗ್ರಾಮ-ಗುಲಬರ್ಗಾ | ಸ್ಥಳ–ನವರಸ ಬುರ್ಜ

ಅರಸ-ಇಬ್ರಾಹಿಂ ಆದಿಲ್‌ಷಾಃ II | ಕಾಲ-ಕ್ರಿ.ಶ.೧೬೦೩-೦೪

ರಾಜವಂಶ-ಬಿ. ಆದಿಲ್‌ಷಾಹಿ

ನವರಸ ಬುರ್ಜಿನ ಗೋಡೆಯ ಮೇಲಿರುವ ಈ ಶಾಸನವು ಪರ್ಶಿಯನ್ ಭಾಷೆಯಲ್ಲಿದೆ. ಇದು ಇಬ್ರಾಹಿಂ ಆದಿಲ್‌ಷಾಃ II ದೊರೆಯ ಹೆಸರನ್ನು ಉಲ್ಲೇಖಿಸಿದೆ. ಮತ್ತು ಆ.ಹಿ.೧೦೧೨ (ಕ್ರಿ.ಶ.೧೬೦೩-೦೪) ಎಂದು ತೇದಿಯನ್ನು ಹೊಂದಿದೆ. ಇದರಲ್ಲಿ ಬುರ್ಜನ್ನು 'ಬುರ್ಜ್-ಇ-ನವರಸ್ ಕರೆದಿದೆ.[೩೪]

ಗ್ರಾಮ-ಗುಲಬರ್ಗಾ | ಸ್ಥಳ-ಹೈದ್ರಾಬಾದ್‌ನ ವಸ್ತು ಸಂಗ್ರಹಾಲಯ

ಅರಸ–ಇಬ್ರಾಹಿಂ ಆದಿಲ್‌ಷಾಃ | ಕಾಲ–ಕ್ರಿ.ಶ.೧೬೦೯-೧೦

ರಾಜವಂಶ-ಬಿ. ಆದಿಲ್‌ಷಾಹಿ

ಗುಲಬರ್ಗಾದ ನಯಬತ್ ಬುರ್‌ಜಿಗೆ (ಹನುಮಾನ್ ಬುರ್ಜ್) ಸಂಬಂಧಿಸಿದ್ದು, ಇದನ್ನು ಅಲ್ಲಿ ಸಾರ್ವಜನಿಕೋದ್ಯಾನ (Public park Mahaboob ulshan)ದಲ್ಲಿ ಇಡಲಾಗಿತ್ತು. ಅಲ್ಲಿಂದ ಹೈದರಾಬಾದ್ ವಸ್ತುಸಂಗ್ರಹಾಲಯಕ್ಕೆ ಒಯ್ಯಲಾಗಿದೆ. ಬುರ್ಜನ್ನು ನಾಯಿಬ್ ಮಲಿಕ್ ಯಾಖುತ್ ಎಂಬ ಅಧಿಕಾರಿಯು ತನ್ನ ಸಹಾಯಕ ಸಾಮಂತ ಮಲಿಕ್ ರಿಹಾನನ ಸಹಾಯದಿಂದ ಕಟ್ಟಿಸಿದನೆಂದು ಇದು ತಿಳಿಸುತ್ತದೆ. ಈ ಶಾಸನವು ಪರ್ಶಿಯನ್ ಭಾಷೆಯಲ್ಲಿದೆ. ಇಬ್ರಾಹಿಮ್ ಆದಿಲ್ ಷಾಃ ದೊರೆಯ ಕಾಲಕ್ಕೆ ಆ.ಹಿ.೧೦೧೮ ಎಂದರೆ ಕ್ರಿ.ಶ.೧೬೦೯-೧೦ರಲ್ಲಿ ಕಟ್ಟಡ ಕಾರ್ಯ ಸಂಪೂರ್ಣವಾಯಿತು.[೩೫]

ಗ್ರಾಮ–ಗುಲಬರ್ಗಾ | ಸ್ಥಳ-ನವರಸ ಬುರ್ಜ

ಅರಸ-ಬಡಾ ಮಲಿಕನು | ಕಾಲ–ಕ್ರಿ.ಶ.೧೬೨೩-೨೪

ರಾಜವಂಶ–ಬಿಜಾಪುರ ಆದಿಲ್ ಷಾಹಿಗಳು

ನವರಸ ಬುರ್ಜ್‌ನಲ್ಲಿ ದೊರಕಿದ ಈ ಪರ್ಶಿಯನ್ ಶಾಸನವು 'ಷಬುರ್ಜ್-ಇ-ತೋಪ್-ದವಾಜ್ದಾ–ಗಝು' (೧೨ ಯಾರ್ಡ್ ಉದ್ದಳತೆಯ) ಹೆಸರಿನ ತೋಪನ್ನು ಹೊಂದಿದೆ.

ಬುರ್ಜ್‌ನ್ನು ಮಲಿಕ್ ಸಂದಲನ ಪುತ್ರ ಬಡಾ ಮಲಿಕನು ಅ.ಹಿ.೧೦೩೩ ಎಂದರೆ ಕ್ರಿ.ಶ.೧೬೨೩-೨೪ರಲ್ಲಿ ಆದಿಲ್ ಷಾಃ II ದೊರೆಯ ಆಳ್ವಿಕೆಯ ಕಾಲದಲ್ಲಿ ಪೂರ್ಣಗೊಳಿಸಿದನು.[೩೬]

ಗ್ರಾಮ–ಗುಲಬರ್ಗಾ　　　　ಸ್ಥಳ-ಕೋಟೆಯ ಜಂಜರೀ ಗೇಟು

ಅರಸ-ಮೊಹಮ್ಮದ್ ಆದಿಲ್ ಷಾಃ　　　　ಕಾಲ–ಕ್ರಿ.ಶ.೧೬೩೫-೩೬

ರಾಜವಂಶ-ಬಿ. ಆದಿಲ್‌ಷಾಃ

ಕೋಟೆಯ ಶಿನೇ ಬಾಗಿಲಿನ ನಿರ್ಮಾಣವನ್ನು ಕುರಿತು ಹೇಳುವ ಈ ಶಾಸನವು ಪರ್ಶಿಯನ್ ಭಾಷೆಯಲ್ಲಿದ್ದು ಕೋಟೆಯ ಜಂಜಿರೀ ಗೇಟಿನ ಮೇಲಿದೆ. ಈ ಬಾಗಿಲನ್ನು ಮಲಿಕ್ ಯಾಕೂಡ್ ಅವನು ಆ.ಹಿ.೧೦೪೫ರಲ್ಲಿ (ಕ್ರಿ.ಶ.೧೬೩೫-೩೬)ರಲ್ಲಿ ಮೊಹಮ್ಮದ್ ಆದಿಲ್‌ಷಾಃನ ಆಳ್ವಿಕೆಯ ಕಾಲದಲ್ಲಿ ಕಟ್ಟಿಸಿದನೆಂದು ತಿಳಿಸುತ್ತದೆ. ಕೋಟೆಗೆ ನಾಲ್ಕು ಬಾಗಿಲುಗಳು ಇದ್ದವೆಂಬುದನ್ನು ದಾಖಲಿಸಿದೆ.[೩೭]

ಗ್ರಾಮ–ಗುಲಬರ್ಗಾ　　　　ಸ್ಥಳ-ಫಿಳಿಯಾಲಿ ಬುರ್ಜ್

ಅರಸ-ಮೊಹಮ್ಮದ್ ಆದಿಲ್ ಷಾಃ　　　　ಕಾಲ–ಕ್ರಿ.ಶ.೧೬೪೮-೪೯

ರಾಜವಂಶ-ಬಿ. ಆದಿಲ್‌ಷಾಹಿ

ಈ ಪರ್ಶಿಯನ್ ಶಾಸನವು ಕಾಲಾಪಹಾಡ್ ಬುರ್ಜ್(ಕರಿಗುಡ್ಡದ ಬುಜ ಬುರ್ಜ್) ಅಥವಾ ಫಳಿಯಾಲಿ ಬುರ್ಜ್ ಎಂದು ಪ್ರಸಿದ್ದವಾದ ಸ್ಥಳಕ್ಕೆ ಸಂಬಂಧಿಸಿದೆ. ಇದು ನ್ಯಾಯಾಲಯದ ಅಧಿಕಾರಿಯಾದ ಮೊಹಮ್ಮದ್ ಅಖಾ ಅವರ ಪುತ್ರನಾದ ಅಲೀಂಜಾ ಎಂಬವನು ಅರಮನೆಯಂತಹ ಕಟ್ಟಡವನ್ನು ಹಸನ್ ಹಾಗೂ ಹುಸ್ಸೈನಿ ಅವರ ವಂಶಸ್ಥರಾದ ಸಂತ ಮುಖ್ದೂಂ ಸಯ್ಯಿದ್ ಮೊಹಮ್ಮದ್ ಹುಸ್ಸೈನೀ ಗೇಸುದರಾಜ್ ಬಂದಾನವಾಜ್ ಇವರಿಗೆ ಅರ್ಪಿಸಲು ಕಟ್ಟಿಸಿದನೆಂದು ತಿಳಿಸಿದೆ. ಈ ಕಾರ್ಯವು ಆ.ಹಿ. ೧೦೫೮ ಅಂದರೆ (ಕ್ರಿ.ಶ.೧೬೪೮-೪೯)ರಲ್ಲಿ ಮೊಹಮ್ಮದ್ ಆದಿಲ್‌ಷಾಃನ ದೊರೆಯ ಆಳ್ವಿಕೆಯಲ್ಲಿ ಸಂಪೂರ್ಣವಾಯಿತೆಂದು ಉಲ್ಲೇಖವಿದೆ.[೩೮]

ಗ್ರಾಮ–ಗುಲಬರ್ಗಾ　　　　ಸ್ಥಳ-ಕೋಟೆಯ ಕಲಾಪಹಾಡ ಬುರ್ಜ್

ಅರಸ–ಮೊಹಮ್ಮದ್ ಆದಿಲ್ ಷಾಃ　　　　ಕಾಲ–ಕ್ರಿ.ಶ.೧೬೫೫-೫೬

ರಾಜವಂಶ-ಬಿ. ಆದಿಲ್‌ಷಾಹ

ಕೋಟೆಯ ಕಲಾಪಹಾಡ ಬುರ್ಜಿನಲ್ಲಿ ಲಭ್ಯವಾಗಿದೆ. ಈ ಪರ್ಶಿಯನ್ ಭಾಷೆಯ ಶಾಸನದಲ್ಲಿ ರಾಜ್ಯದ ಸರ್ ಖೈಲ್ (ಸರ್ದಾರ) ಅಧಿಕಾರಿಯೂ ಪ್ರವಾದಿ ಮತ್ತು ಕವಿಯ ವಂಶಸ್ಥನೂ ಆದ ನೂರುಲ್ಲಾ ಎಂಬುವನು ದೊರೆ ಮೊಹಮ್ಮದ್ ಆದಿಲ್‌ಷಾಃನ ಆಜ್ಞೆಯ ಮೇರೆಗೆ ಅಹಸಾನಾಬಾದ್ (ಸಗರ) ನಗರವನ್ನು ಸುಂದರಗೊಳಿಸಿದನು. ಗುಲಬರ್ಗಾದ ಪ್ರತಿ ಬುರ್ಜು, ಬಾಗಿಲುಗಳು ಮತ್ತು (ಕೋಟೆ) ಗೋಡೆಗಳನ್ನು ಜೀರ್ಣೋದ್ದಾರ ಮಾಡಿದನು. ಈ ಕಾರ್ಯ ಆ.ಹಿ.೧೦೬೮ ಎಂದರೆ(ಕ್ರಿ.ಶ.೧೬೫೫-೫೬)ರಲ್ಲಿ ನಡೆಯಿತೆಂದು ಉಲ್ಲೇಖಿಸಲಾಗಿದೆ.[೩೯]

ಗ್ರಾಮ–ಗುಲಬರ್ಗಾ ಸ್ಥಳ-ಫೀಲ್ ಬುರ್ಜು

ಅರಸ-ಸಿಕಂದರ್ ಆದಿಲ್ ಷಾಃ ಕಾಲ–ಕ್ರಿ.ಶ.೧೬೭೩-೭೪

ರಾಜವಂಶ-ಬಿ.ಆದಿಲ್‌ಷಾಃ

ಫಿಲ್ ಬುರ್ಜಿನ ಬಳಿಯ ಗೋಡೆಯಲ್ಲಿರುವ ಪರ್ಶಿಯನ್ ಭಾಷೆಯ ಈ ಶಾಸನ ಹವಾಲ್ದಾರ್ ಹಾಗೂ ಸುಬೇದಾರ್ ಮಲಿಕ್ ಅಂಬರನ ಪುತ್ರ ಸಿದ್ಧಿ ಸಿಂಬಲ್‌ನು ಖವಾಸ್ ಖಾನನ ಆಜ್ಞೆಗನುಸಾರವಾಗಿ ಆ.ಹಿ. ೧೦೮೪ ಷಹೂರ್ ವರ್ಷ ೧೦೭೩ ಎಂದರೆ (ಕ್ರಿ.ಶ.೧೬೭೪)ರಲ್ಲಿ ಸಿಕಂದರ್ ಬುರ್ಜ್ ಎಂಬ ಬುರ್ಜನ್ನು ಸಿಕಂದರ್ ಆದಿಲ್‌ಷಾಃನ ಕಾಲದಲ್ಲಿ ಕಟ್ಟಿಸಿದನು. ಅದಲ್ಲದೆ ಒಂದು ತೋಪ್‌ಖಾನ್ ಕಟ್ಟೆಯನ್ನು ಬುನಾದಿಯಿಂದಲೇ ಕಟ್ಟಿಸಿದನು. ಅಂತೆಯೇ ಎರಡು ಲಾದನೀಸ್ ಹಾಗೂ ಒಂದು ಕೋಣೆಯನ್ನು ಕಟ್ಟಿಸಿದನೆಂದು ಈ ಶಾಸನ ವಿವರಿಸಿದೆ.[೪೦]

ಗ್ರಾಮ–ಗುಲಬರ್ಗಾ ಸ್ಥಳ-ಹೈದ್ರಾಬಾದಿನ ವಸ್ತುಸಂಗ್ರಹಾಲಯ

ಅರಸ-ಔರಂಗಜೇಬ ಕಾಲ–ಕ್ರಿ.ಶ.೧೬೯೪ ಏಪ್ರಿಲ್ ೧೩

ರಾಜವಂಶ-ಮೊಘಲರು

ಹೈದ್ರಾಬಾದಿನ ವಸ್ತು ಸಂಗ್ರಹಾಲಯದಲ್ಲಿರುವ ಈ ಶಾಸನವು ಪರ್ಷಿಯನ್ ಭಾಷೆಯಲ್ಲಿದೆ. ಈ ಶಾಸನವು ಮೂಲತಃ ಒಂದು ಬಾವಿಗೆ ಸಂಬಂಧಿಸಿದೆ. ಇದು ಬಾವಿಯನ್ನು ಖ್ವಾಜಾಮೀರ್ ಅವರ ಪುತ್ರ ಮೀರಾ ಮೊಹಮ್ಮದ್ ಷಪಿಯು ಔರಂಗಜೇಬ ಚಕ್ರವರ್ತಿಯ ಆಳ್ವಿಕೆಯ ಕಾಲದಲ್ಲಿ ಆ.ಹಿ. ೧೧೦೫ ಷಾಬಾನ್ ೨೭ ಎಂದರೆ ಕ್ರಿ.ಶ.೧೬೯೪ ಏಪ್ರಿಲ್ ೧೩ ರಂದು ಕಟ್ಟಿಸಿದನೆಂದು ತಿಳಿಸುತ್ತದೆ. ಈ ಕಾರ್ಯ ದೇವರ ದಾರಿಯ ಸೋಪಾನ ಎಂದಿದೆ.[೪೧]

ಗ್ರಾಮ–ಗುಲಬರ್ಗಾ

ಸ್ಥಳ-ಮೊಹಮ್ಮದ್ ಗೇಸುದಾರಾಜ್ ಸಮಾಧಿ

ಅರಸ-x x x

ಕಾಲ-ಕ್ರಿ.ಶ.೧೬೯೬ ಸೆಪ್ಟೆಂಬರ ೧೮

ರಾಜವಂಶ–ಬಹಮನ್ ಷಾಹಿ

ಈ ಶಾಸನವು ಪರ್ಷಿಯನ್ ಭಾಷೆಯಲ್ಲಿದೆ. ಇದು ಸಯ್ಯಿದ್ ಮೊಹಮ್ಮದ್ ಗೇಸುದಾರಾಜ್ ಅವರ ಸಮಾಧಿ ಆವರಣದ ದಕ್ಷಿಣದ ಗೋಡೆಯಲ್ಲಿದೆ. ಇದು ಸ್ತ್ರೀಯೋರ್ವಳು (ಹೆಸರಿಲ್ಲ) ಆ.ಹಿ. ೧೧೦೮, ರಬ್ಬಿಲಾವಲ್–೧ ಎಂದರೆ ಕ್ರಿ.ಶ.೧೬೯೬ ಸೆಪ್ಟೆಂಬರ್ ೧೮ರಂದು ನಿಧನ ಹೊಂದಿದುದನ್ನು ತಿಳಿಸುತ್ತದೆ. ಆಕೆ ಖ್ವಾಜಾ ಅಬ್ದುಲಾಃ ಅನ್ಸಾರಿ(ಹೇರಾತ್ ಸ್ಥಳದ ಪ್ರಸಿದ್ಧ ಸಂತ) ಅವರ ವಂಶಸ್ಥಳೆಂದು ಉಲ್ಲೇಖಿಸಿದೆ.[೪೨]

ಗ್ರಾಮ–ಗುಲಬರ್ಗಾ

ಸ್ಥಳ-ಫಳಿಯಾಲ್ ಬುರ್ಜ್

ಅರಸ-x x x

ಕಾಲ–ಕ್ರಿ.ಶ.೧೭೭೦-೭೧

ರಾಜವಂಶ-x x x

ಪರ್ಶಿಯನ್ ಭಾಷೆಯಲ್ಲಿರುವ ಈ ಶಾಸನವು ಕೋಟೆಯ ಫಳಿಯಾಲ್ ಬುರ್ಜಿ ಮೇಲಿರುವ ತೋಪಿನ ಮೇಲಿದೆ. ಇದರ ಮೇಲಿರುವ ಆ.ಹಿ. ೧೧೮೪ ಎಂದರೆ ಕ್ರಿ.ಶ.೧೭೭೦-೭೧ ಎಂಬ ತೇದಿ ತೋಪನ್ನು ಸಿದ್ಧಗೊಳಿಸಿದ ದಿನವಾಗಿರುವ ಸಾಧ್ಯತೆ ಇದೆ. ಇದರ ಮೇಲೆ ಗೌರವಾನ್ವಿತ ಸಯ್ಯದ್ ಸಮಾಜದ ಜಫರ್-ದ್-ದೌಲಾ ಬಹಾದೂರನ ಹೆಸರಿದೆ.[೪೩]

ಗ್ರಾಮ–ಗುಲಬರ್ಗಾ

ಸ್ಥಳ-ಬಕ್ಷೀಸಾಹೇಬ್ ಬಿಜಾಪುರ ಮಸೀದಿ

ಅರಸ–x x x

ಕಾಲ–ಕ್ರಿ.ಶ.೧೭೮೯

ರಾಜವಂಶ-ಆದಿಲ್ ಷಾಹಿ

ಬಕ್ಷೀ ಸಾಹೇಬ್ ಬಿಜಾಪುರ ಅವರ ಮಸೀದಿಯಲ್ಲಿ ಉಪಲಬ್ಧವಾಗಿರುವ ಪರ್ಷಿಯನ್ ಭಾಷೆಯ ಈ ಶಾಸನವು ಖ್ವಾಜಾ ಬಾವ್‌ಲಿ ಎಂಬ ಬಾವಿಯ ನಿರ್ಮಾಣವನ್ನು ಕುರಿತಿದೆ. ಈ ಬಾವಿಯನ್ನು ದಾರುಜಫರ್ ಬಿಜಾಪುರ ಪ್ರಾಂತದ ನಿವಾಸಿಯೂ ಆಲಂ ಸಾಹೇಬರ ಪುತ್ರರೂ ಆದ ಮೊಹಮ್ಮದ್ ಸಾಹೇಬರು ಆ.ಹಿ. ೧೨೦೩ ಥಲ್ ಹಿಜ್ಜ್ (ಜಿಲ್‌ಹಿಜ್ಜ್) ಎಂದರೆ ಕ್ರಿ.ಶ. ೧೭೮೯ ಆಗಸ್ಟ್-ಸೆಪ್ಟೆಂಬರದಲ್ಲಿ ಕಟ್ಟಿಸಿದರೆಂದು ಉಲ್ಲೇಖಿಸುತ್ತದೆ.[೪೪]

ಗ್ರಾಮ–ಗುಲಬರ್ಗಾ   ಸ್ಥಳ-ಮಕ್ಬರಾ-ಕಿ-ಮಸೀದಿ

ಅರಸ–x x x   ಕಾಲ–ಕ್ರಿ.ಶ.೧೭೮೯ ಆಗಸ್ಟ್-ಸೆಪ್ಟೆಂಬರ್

ರಾಜವಂಶ-ಆದಿಲ್ ಷಾಹಿ

ಮಕ್ಬರ್-ಕಿ-ಮಸೀದಿಯ ಕಟಕಟೆಯ ಮೇಲಿರುವ ಈ ಶಾಸನವು ಪರ್ಷಿಯನ್ ಭಾಷೆಯಲ್ಲಿದೆ. ದಾರುಜ್ಜಪುರ್ ಬಿಜಾಪುರ ಪ್ರಾಂತ್ಯದ ನಿವಾಸಿಯೂ ಆಲಂ ಸಾಹೇಬ್ ಅವರ ಪುತ್ರನೂ ಆದ ಮೊಹಮ್ಮದ್ ಸಾಹೇಬನು ಮಸೀದಿ ಹಾಗೂ ಸಮಾಧಿಗಳನ್ನು ಆ.ಹಿ.೧೨೦೩ ದುಲ್‌ಹಿಜ್ಜ್ (ಜಿಲ್‌ಹಿಜ್ಜ್)ಎಂದರೆ ಕ್ರಿ.ಶ.೧೭೮೯ ಆಗಸ್ಟ್-ಸೆಪ್ಟೆಂಬರದಲ್ಲಿ ಕಟ್ಟಿಸಿದನೆಂದು ವಿವರಿಸಿದೆ.[೪೫]

ಗ್ರಾಮ–ಗುಲಬರ್ಗಾ   ಸ್ಥಳ-ಹಾಪಿಮ್ ಬಾವಲಿ

ಅರಸ-x x x   ಕಾಲ-ಕ್ರಿ.ಶ.೧೭೯೯-೧೮೦೦

ರಾಜವಂಶ-x x x

ಈ ಪರ್ಶಿಯನ್ ಶಾಸನವು ಹಾಪಿಮ್ ಬಾವ್‌ಲಿ ಹೆಸರಿನ ಹೊಕ್ಕು ತುಂಬುವ ಬಾವಿಯಲ್ಲಿ ದೊರೆತಿದೆ. ಈ ಬಾವಿಯನ್ನು ಮೊಹಮ್ಮದ್ ಅಮಾನುಲ್ಲಾ ಖಾನ್ ಆ.ಹಿ. ೧೨೧೪ ಎಂದರೆ ಕ್ರಿ.ಶ.೧೭೯೯-೧೮೦೦ರಲ್ಲಿ ಕಟ್ಟಿಸಿದನೆಂದು ತಿಳಿಸುತ್ತದೆ.[೪೬]

ಗ್ರಾಮ–ಗುಲಬರ್ಗಾ   ಸ್ಥಳ-ಷಾಃಖಾತ್ವ-ಉಲ್ಲಾಃ ಹುಸೈನಿ ದರ್ಗಾ

ಅರಸ-x x x   ಕಾಲ–ಕ್ರಿ.ಶ.೧೮೩೮-೩೯

ರಾಜವಂಶ-x x x

ಷಾಃಖಾತ್ವ ಉಲ್ಲಾ ಹುಸೈನಿ ಅವರ ದರ್ಗಾದ ಕಟಕಟೆಯ ಬೆಳ್ಳಿಯ ಕಂಬದ ಮೇಲೆ ಕೆತ್ತಲಾಗಿರುವ ಪರ್ಶಿಯನ್ ಭಾಷೆಯ ಈ ಶಾಸನವು ಆ.ಹಿ. ೧೨೫೪ ಎಂದರೆ ಕ್ರಿ.ಶ.೧೮೩೮-೩೯ರಲ್ಲಿ ದರ್ಗಾವನ್ನು ಕಟ್ಟಲಾಯಿತೆಂದು ಉಲ್ಲೇಖಿಸುತ್ತದೆ. ಶಾಸನವನ್ನು ಷಾಃರಾಜು ಹುಸೈನಿ ರಚಿಸಿದ್ದಾರೆ.[೪೭]

ಗ್ರಾಮ–ಗುಲಬರ್ಗಾ   ಸ್ಥಳ-ಗೇಸುದರಾಜ್ ದರ್ಗಾ

ಅರಸ–x x x   ಕಾಲ–೧೮೬೫-೬೬

ರಾಜವಂಶ–ಬಹಮನಿ ಷಾಹಿಗಳು

ಹಜರತ್ ಸಯ್ಯಿದ್ ಮೊಹಮ್ಮದ್ ಗೇಸುದರಾಜ್ ಅವರ ದರ್ಗಾದ ಚಿನ್ನದ ಪರದೆಯ ಚೌಕಟ್ಟಿನ ಮೇಲೆ ಬರೆದಿರುವ ಶಾಸನ ಪರ್ಶಿಯನ್ ಭಾಷೆಯಲ್ಲಿದೆ. ಈ ಬಾಗಿಲು ಮತ್ತು

ಪರದೆಗಳನ್ನು ಆ.ಹಿ. ೧೨೮೨ ಎಂದರೆ ಕ್ರಿ.ಶ.೧೮೬೫-೬೬ರಲ್ಲಿ ಷಾಃಯದ್-ಉಲ್ಲಾಃ ಹುಸ್ಸೈನೀ ಅವರು ಅರ್ಪಣಾಭಾವದಿಂದ ಮಾಡಿದರೆಂದು ಇದು ತಿಳಿಸುತ್ತದೆ.[೪೮]

ಗ್ರಾಮ–ಗುಲಬರ್ಗಾ

ಸ್ಥಳ-ಬಕ್ಷಿಸಾಹೇಬ್ ಸಮಾಧಿ

ಅರಸ-x x x

ಕಾಲ–ಕ್ರಿ.ಶ.೧೮೭೧ ಜೂನ್೧೩

ರಾಜವಂಶ-x x x

ಬಕ್ಷಿಸಾಹೇಬ್ ಅವರ ಮಸೀದಿಯ ಪ್ರಾಕಾರದಲ್ಲಿರುವ ಸಮಾಧಿಯ ಮೇಲಿರುವ ಈ ಶಾಸನ ಪರ್ಶಿಯನ್ ಭಾಷೆಯಲ್ಲಿದೆ. ಇದು ಆ.ಹಿ. ೧೨೮೮, ರಬಿ೧, ೨೪ ಎಂದರೆ ಕ್ರಿ.ಶ. ೧೮೭೧ ಜೂನ್ ೧೩ ಎಂಬ ತೇದಿಯನ್ನು ಹೊಂದಿದೆ. ಖಾಜಿ ಉಲ್ ಮುಲ್ಕ ಮದ್ರಾಸೀ ಇವರ ಪುತ್ರ ಮೊಹಮ್ಮದ್ ಅಬ್ದುಲ್ಲಾಃಸದಾರತ್ ಖಾನ್ ಎಂಬುವರು ಮೆಕ್ಕಾಕ್ಕೆ ಹೋಗಿ ಬಂದು ಈ ಸ್ಥಳವನ್ನು ತಲುಪಿದರು ಮತ್ತು ಇಲ್ಲಿಯೇ ನಿಧನ ಹೊಂದಿದರು ಎಂದೂ ಈ ಶಾಸನದಲ್ಲಿ ಉಲ್ಲೇಖಿಸಲಾಗಿದೆ.[೪೯]

ಗ್ರಾಮ–ಗುಲಬರ್ಗಾ

ಸ್ಥಳ-ರಣಮಂದಿರ ಬುರ್ಜ್

ಅರಸ-ಇಬ್ರಾಹಿಂ ಆದಿಲ್ ಷಾಃ

ಕಾಲ–x x x

ರಾಜವಂಶ-ಬಿಜಾಪುರ ಆದಿಲ್ ಷಾಃ

ಕೋಟೆಯ ಪೂರ್ವದ ಬಾಗಿಲು ಬಳಿಯಲ್ಲಿ ರಣಮಂದಿರ ಎಂಬ ಬುರ್ಜಿನ ಬಲಗೋಡೆಯ ಅರ್ಥಾತ್ ಫತೇಬುರ್ಜಿನ ಗೋಡೆಯ ಮೇಲೆ ಪರ್ಶಿಯನ್ ಭಾಷೆಯಲ್ಲಿ ಬರೆದ ಶಾಸನವೊಂದಿದೆ. ಇದು ನ್ಯಾಯಾಲಯದ ಅಧಿಕಾರಿ ಮೊಹಮ್ಮದ್‌ನು ಇಬ್ರಾಹಿಂ ಆದಿಲ್ ಷಾಃ ದೊರೆಯ ಆಳ್ವಿಕೆಯಲ್ಲಿ ಈ ಬುರ್ಜನ್ನು ರಚಿಸಿದನೆಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ.[೫೦]

ಗ್ರಾಮ–ಗುಲಬರ್ಗಾ

ಸ್ಥಳ-ಹರ್ ಬಾವಲಿ

ಅರಸ–ಖಾನ್-ಇ-ಆಜಮ್ ಹಮೀದ್

ಕಾಲ–x x x

ರಾಜವಂಶ–ಬಿ. ಆದಿಲ್‌ಷಾಹಿ

ಪರ್ಶಿಯನ್ ಭಾಷೆಯಲ್ಲಿರುವ ಈ ಶಾಸನವು ಹರಬಾವಲಿ ಎಂಬ ಬಾವಿಯ ಗೋಡೆಯಲ್ಲಿ ದೊರಕಿದೆ. ಒಂದು ಬಾವಿ, ಎರಡು ಬುರ್ಜಗಳನ್ನು ಮತ್ತು ಏತದ ಮೇಲೆ

ಒಂದು ಆಸನ ಇತ್ಯಾದಿಗಳ ನಿರ್ಮಾಣವನ್ನು ಬಾಬಾಜಿ ಜಾಬಿತ್ ಖಾನನ ಅಧಿಕಾರವಧಿಯಲ್ಲಿ ಖಾನ್ ಇ ಅಜಮ್ ಹಮೀದ್ ಬಹುಮನಿ ಎಂಬಾತನು ಮಾಡಿಸಿದಾಗಿಯು ಮತ್ತು ಆಗ್ಗೆ ಅಲೀ–೧ ಎಂಬ ಆದಿಲ್‌ಷಾಹಿ ದೊರೆಯ ಆಳ್ವಿಕೆಯು ಇದ್ದಿತೆಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ.[೫೧]

ಗ್ರಾಮ–ಗುಲಬರ್ಗಾ ಸ್ಥಳ-ಗೇಸುದರಾಜ್ ದರ್ಗಾ

ಅರಸ-x x x ಕಾಲ–x x x

ರಾಜವಂಶ–ಬಹಮನ್ ಷಾಹಿಗಳು

ಹಜರತ್ ಸಯ್ಯಿದ್ ಮೊಹಮ್ಮದ್ ಗೇಸುದರಾಜ್ ಅವರ ದರ್ಗಾದ ಪ್ರವೇಶ ದ್ವಾರದ ಮೇಲಿರುವ ಈ ಶಾಸನವು ಪರ್ಶಿಯನ್ ಭಾಷೆಯಲ್ಲಿದೆ. ರಾಜಮುದ್ರೆ ಹಾಗೂ ಕೀರಿಟಗಳ ಉಸ್ತುವಾರಿ ನೋಡುವ ಅಧಿಕಾರಿಯೂ ಸಿರಾಜ್ ಅವರ ಪುತ್ರನೂ ಆದ ಕುತ್ಬುದ್ದೀನ್ (ಕುತ್‌ಬುದ್-ದ್ದೀನ) ವಾದ್-ದೀನ್ ಮೊಹಮ್ಮದ್ ಈತನ ಉಲ್ಲೇಖ ಈ ಶಾಸನದಲ್ಲಿದೆ.[೫೨]

ಗ್ರಾಮ–ಗುಲಬರ್ಗಾ ಸ್ಥಳ-ಕೋಟೆಯ ಮಸೀದಿ

ಅರಸು-ಅಲೀ-೧ ಕಾಲ-x x x

ರಾಜವಂಶ-ಬಿಜಾಪುರ ಆದಿಲ್‌ಷಾಹಿ

ಕೋಟೆಯ ವಾಯುವ್ಯ ದಿಕ್ಕಿನಲ್ಲಿರುವ ಮಸೀದಿಯಲ್ಲಿ ದೊರಕಿದೆ. ಈ ಶಾಸನವು ಪರ್ಶಿಯನ್ ಭಾಷೆಯಲ್ಲಿದೆ. ಇದು ಮಸೀದಿಯನ್ನು ಅರಬ್‌ಖಾನನು ಆದಿಲ್‌ಷಾಹಿ ವಂಶದ ಅಲೀ-೧ ದೊರೆಯ ಆಳ್ವಿಕೆಯ ಅವಧಿಯಲ್ಲಿ ಕಟ್ಟಿಸಿದ ಸಂಗತಿಯನ್ನು ಇದು ತನ್ನ ಶಾಸನದಲ್ಲಿ ದಾಖಲಿಸಿದೆ.[೫೩]

೩.೩. ವೀರಗಲ್ಲುಗಳು :

ಸಂಸ್ಕೃತ ಭಾಷೆಯ "ವೀರ" ಎಂಬುದು ಅನೇಕ ಇಂಡೊ ಆರ್ಯನ್ ಭಾಷೆಗಳಲ್ಲಿ ಬಳಕೆಯಲ್ಲಿದೆ. ಈ ಪದವು ವ್ಯಕ್ತಿಯ ಪರಾಕ್ರಮ, ಶಕ್ತಿ ಮುಂತಾದ ಅವನ ದೈಹಿಕ ಗುಣಗಳನ್ನು ಸೂಚಿಸುವ ಗುಣವಾಚಕವಾಗಿ ಬಳಕೆಯಲ್ಲಿದೆ. "ವೀರ" ಎಂಬ ಪದಕ್ಕೆ ಸಮನಾರ್ಥಕ ಪದವಾಗಿ ಇಂಗ್ಲೀಷ್ ಭಾಷೆಯ "Hero" ಎಂಬ ಪದವನ್ನು ಸಮನಾರ್ಥಕವಾಗಿ ಕನ್ನಡದಲ್ಲಿ 'ವೀರ' ಎಂಬ ಪದವನ್ನು ಬಳಸುವುದು ರೂಢಿಯಲ್ಲಿದೆ. ಇದು ಮೂಲತಃ ಗ್ರೀಕ್

ಭಾಷೆಯಿಂದ ಇಂಗ್ಲೀಷ್ ಭಾಷೆಗೆ ಬಂದ ಪದ ಇದು ಕಾಲದಿಂದ ಕಾಲಕ್ಕೆ ಹೆಚ್ಚು ಅರ್ಥವ್ಯಾಪ್ತಿಯನ್ನು ಪಡೆಯುತ್ತಾ ಹೋಯಿತು.[೫೪]

"ಜಿತೇನ ಲಭ್ಯತೇ ಲಕ್ಷ್ಮೀ ಮೃತೇನಾಪಿ ಸುರಾಂಗನಾ
ಕ್ಷಣ ವಿಧ್ವಸಿನೀಕಾಯೇ ಕಾ ಚಿಂತಾ ಮರಣೇ ರಣೇ"[೫೫]

ಯುದ್ದದಲ್ಲಿ ಗೆದ್ದರೆ ಇಹಲೋಕದಲ್ಲಿ ರಾಜ್ಯಲಕ್ಷ್ಮಿಯೂ, ಹೋರಾಡುತ್ತ ಮಡಿದರೆ ಸ್ವರ್ಗದಲ್ಲಿ ಸುರಾಂಗನೆಯರೂ ದೊರಕುವುದರಿಂದ ಕ್ಷಣದಲ್ಲಿ ನಾಶವಾಗುವ ಈ ದೇಹಕ್ಕಾಗಿ ಮರಣ ಇಂತಹ ಮಾನವೀಯ ಮೌಲ್ಯಗಳನ್ನು ಹೊಂದಿದ್ದ ವ್ಯಕ್ತಿಗಳು ಯುದ್ಧದಲ್ಲಿ ಮಡಿದ ವೀರನ ವೀರತ್ವದ ನೆನಪಿಗಾಗಿ ಹಾಕಿಸುತ್ತಿದ್ದರು. ವೀರನು ಹೋರಾಟದಲ್ಲಿ ಸತ್ತ ನಂತರ ಇಪ್ಪತ್ತು ತಲೆಮಾರುಗಳವರೆಗೂ ಆತನ ಪರಾಕ್ರಮದ ಕೀರ್ತಿ ಶಾಶ್ವತವಾಗಿ ನಿಲ್ಲುವುದೆಂಬ ನಂಬಿಕೆಯಿಂದ ಈ ಶಾಸನಗಳನ್ನು ಹಾಕಿಸುತ್ತಿದ್ದರು. ಆ ಕಾಲದಲ್ಲಿ ಒಬ್ಬ ವ್ಯಕ್ತಿ ಎಷ್ಟೇ ಸಾದನೆ ಮಾಡಿದರೂ ಪ್ರಸಾರವಾಗುವುದು ತೀರಾ ವಿರಳವಾಗಿತ್ತು. ಆದರೆ ಒಬ್ಬ ವೀರ ಮರಣ ಹೊಂದಿದರೆ ಅಥವಾ ಯುದ್ಧದಲ್ಲಿ ಪ್ರಾಣತ್ಯಾಗ ಮಾಡಿದರೆ ಆತನ ತ್ಯಾಗವನ್ನು ಪ್ರಚಾರಪಡಿಸಲಾಗುತ್ತಿತ್ತು. ಅಂತಹ ವ್ಯಕ್ತಿಯ ಮೇಲೆ ಕತೆಗಳು ಹುಟ್ಟಿಕೊಳ್ಳುತ್ತಿದ್ದವು.

ವೀರಗಲ್ಲುಗಳಲ್ಲಿ ಬರುವ ಲಿಪಿ ಎಂದರೆ ನಾಡಿಗಾಗಿ ಮಡಿದ ಸ್ಮರಿಸುವ ಬರಹ. ಈ ಬರಹವು ಕೆಲವೊಮ್ಮೆ ಮೃತನ ಪರಿವಾರಕ್ಕೆ ಕೊಡಮಾಡಿದ ದೇಣಿಗೆಯ ವಿವರಗಳನ್ನು ಹೊಂದಿರುತ್ತವೆ. ಮುದನೂರಿನ ಶಾಸನವೊಂದು ಕಾಳಗವನ್ನು ಹಾಗೂ ವೀರನ ಮರಣವನ್ನು ೧೧ನೇ ಶತಮಾನದ ಕೇಶ್ವಾರದ ೨ ಶಾಸನಗಳು ಗೋಗ್ರಹಣವನ್ನು ಉಲ್ಲೇಖಿಸಿದರೆ ಸನ್ನತಿಯ ಶಾಸನವೊಂದು ಬಲ್ಲಹ ಹಾಗೂ ದತ್ತಿಯ ದುಗ್ಗರಸರ ನಡುವೆ ನಡೆದ ಕಾಳಗದಲ್ಲಿ ವಿನಯಾದಿತ್ಯನ ತಮ್ಮ ರಾಜಾದಿತ್ಯನು ಮಂಗಲ ಎನ್ನುವ ಆನೆಯನ್ನು ಹಿಡಿದು ತಂದುದನ್ನು ತಿಳಿಸುತ್ತದೆ. ೧೩ನೇ ಶತಮಾನದ ಮುಡಜೋಳ ಶಾಸನವು ಗುಮಿತ ಮಲೆನಾಕನ ಮಗ ಬೊಪ್ಪಯ್ಯನು ಬಾಚರಸನ ಆಳ್ವಿಕೆಯ ಕಾಲದಲ್ಲಿ ಹುಲಿಯನ್ನು ಕೊಂದಿದ್ದನ್ನು ತಿಳಿಸುತ್ತದೆ.[೫೬] ವೀರನೊಬ್ಬನು ಹುಲಿಯೊಂದಿಗೆ ಕಾದಾಡುತ್ತಿರುವ ಚಿತ್ರವಿರುವ ವೀರಗಲ್ಲು ಗುಲಬರ್ಗಾ ಪರಿಸರದ ಹಳ್ಳಿಯಾದ ಹರಸೂರಲ್ಲಿ ದೊರಕಿದೆ. ಪ್ರಾಚೀನ ಜನರು ಕಲಿತನದಿಂದ ಕೂಡಿದ್ದರೆಂಬುದಕ್ಕೆ ಈ ಪರಿಸರದಲ್ಲಿ ದೊರೆತಿರುವ ವೀರಗಲ್ಲುಗಳೇ ಸಾಕ್ಷಿಯಾಗಿವೆ.

"ದ್ವಾವಿಮೌ ಪುರುಷೌ ಲೋಕೇ ಸೂರ್ಯಮಂಡಲ ಭೇದಿಸೌ
ಪರಿವ್ರಾಡ್ಯೋಗ ಯುಕ್ತಾಶ್ಚರಣೇ ಚಾಭಿಮುಖೇ ಹತಃ"

ಸೂರ್ಯಮಂಡಲವನ್ನು ಇಬ್ಬರು ಮಾತ್ರ ಭೇದಿಸಬಲ್ಲರು. ಒಬ್ಬ ಯೋಗಸಾಧನೆ ಮಾಡಿದ ಪರಿವ್ರಾಜಕ, ಮತ್ತೊಬ್ಬ ರಣರಂಗದ ಮೂಲಕ ಸಾಧನೆ ಮಾಡಿದ ಯೋಧ. ಈ ಶ್ಲೋಕ ಕರ್ನಾಟಕ ಹಲವಾರು ವೀರಗಲ್ಲುಗಳ ಪಾಠದಲ್ಲಿ ಪದೇ ಪದೇ ಉದ್ಧೃತವಾಗಿದೆ. ಜನ ಯಾವುದನ್ನು ಪಾರಮಾರ್ಥಿಕ ದೃಷ್ಟಿಯಿಂದ ಶ್ರೇಷ್ಠವಾದುದೆಂದು ಭಾವಿಸಿದ್ದರೋ ಅದಕ್ಕೆ ಸಮಾನವಾದದು ಈ ಯುದ್ದದಲ್ಲಿ ಮಡಿಯುವುದು ಎಂಬುದಾಗಿ ನಮ್ಮ ಜನ ನಂಬಿದ್ದಾರೆಂದು ಇದರಿಂದ ತಿಳಿಯಬಹುದಾಗಿದೆ. ಈ ಕಾರಣದಿಂದಲೇ ವೀರ ಸ್ವರ್ಗದ ಕಲ್ಪನೆ ಹುಟ್ಟಿಕೊಂಡದ್ದು, ವೀರ ಮರಣವನ್ನು ಪಡೆಯುವುದು ವೀರನಿಗೆ ಮಾತ್ರವಲ್ಲ ಆತನ ತಾಯಿಗೂ ಹೆಮ್ಮೆಯ ಸಂಗತಿಯಾಗಿತ್ತು.[೫೭]

ವೀರಗಲ್ಲನ್ನು ನಿಲ್ಲಿಸುವಲ್ಲಿ ಲೌಕಿಕ ಮತ್ತು ಪಾರಮಾರ್ಥಿಕ ದೃಷ್ಟಿಗಳೆರಡೂ ಇತ್ತೆಂದು ತೋರುತ್ತದೆ. ವೀರನ ಪರಾಕ್ರಮವನ್ನು ಮೆಚ್ಚಿ ವೀರಗಲ್ಲನ್ನು ನೆಡುವುದು ಅವನ ಪರಾಕ್ರಮ ಲೋಕಕ್ಕೂ ತಿಳಿಯಲೆಂದು ನೆಡುವುದು. ಇವು ಲೌಕಿಕ ಉದ್ದೇಶಗಳು, ಮಡಿದ ವೀರನಿಗೆ ವೀರಗಲ್ಲನ್ನು ನಿಲ್ಲಿಸುವುದು ತಮ್ಮ ಕರ್ತವ್ಯ ಎಂದು ಭಾವಿಸಿ, ಹಾಗೆ ವೀರಗಲ್ಲು ನಿಲ್ಲಿಸುವುದರ ಮೂಲಕ ಅವನಿಗೆ ಸ್ವರ್ಗವೋ, ಕೈಲಾಸವೋ, ವೈಕುಂಠವೋ ಪ್ರಾಪ್ತವಾಗುತ್ತದೆಯೆಂದು ನಂಬಿ ವೀರಗಲ್ಲುಗಳನ್ನು ನೋಡುವುದು ಇವು ಪಾರಮಾರ್ಥಿಕ ಉದ್ದೇಶಗಳು.[೫೮] ಧ್ಯಾನ, ದಾನ ಮೊದಲಾದ ಧರ್ಮಮಾರ್ಗಗಳಲ್ಲಿ ನಡೆದ ಧರ್ಮವೀರನಿಗೆ ಸಾಧ್ಯವಾಗುವ ಮೋಕ್ಷಸಾಧನೆಯು ಧಾರ್ಮಿಕ ಬಲಿದಾನ ಮತ್ತು ಲೌಕಿಕ ಬಲಿದಾನ ಮಾರ್ಗಗಳಿಂದಲೂ ಸಾಧ್ಯವೆಂಬ ಭಾವನೆ ಬೆಳೆದು ಕೊನೆ ಕೊನೆಗೆ ಯುದ್ಧಮಾರ್ಗದಲ್ಲಿ ಮಡಿದ ಯುದ್ಧವೀರನಿಗೂ ಸಾಧ್ಯವೆಂಬ ವಿಸ್ತಾರ ಪಡೆಯಿತು.[೫೯] ಗುಲಬರ್ಗಾ ಪರಿಸರದಲ್ಲಿ ದೊರೆತ ವೀರಗಲ್ಲು ೨೪ ಇವುಗಳನ್ನು ಆಧಾರವಾಗಿಟ್ಟುಕೊಂಡು ಈ ಪರಿಸರದ ದೊರಕಿದ ವೀರಗಲ್ಲುಗಳ ದಾಖಲಾತಿಯನ್ನು ಇಲ್ಲಿ ಮಾಡಲಾಗಿದೆ.

ಗ್ರಾಮ-ಹರಸೂರು — ಸ್ಥಳ-ಹರಸೂರಿಗೆ ಹೋಗುವ ರಸ್ತೆ

ಕಾಲ–೧೫ನೇ ಶತಮಾನ — ವಸ್ತು-ಕಪ್ಪು ಶಿಲೆ

ಪ್ರಕಟಣೆ-ಅಪ್ರಕಟಿತ

ವೀರರು ಕಾದಾಡುತ್ತಿರುವ ದೃಶ್ಯವನ್ನು ಕಾಣಬಹುದು. ಒಬ್ಬ ವೀರನನ್ನು ಎದುರಾಳಿಯ ಕಣ್ಣು ಕೀಳಲು ಯತ್ನಿಸುತ್ತಿದ್ದಾನೆ. ಕೆಳಗಡೆ ಒಬ್ಬನು ಸತ್ತು ಬಿದ್ದಿರುವ ಚಿತ್ರವನ್ನು ಕಾಣುತ್ತೇವೆ.

ಇವರಿಬ್ಬರಲ್ಲಿ ಒಬ್ಬ ವೀರನು ಜಡೆ ಕಟಿದ್ದರ ಬಗ್ಗೆ ವೀರಗಲ್ಲಿನಲ್ಲಿ ಕಾಣಬಹುದು. ವೀರನು ತನ್ನ ಮೊಳಕಾಲನ್ನು ಎದುರಾಳಿಯ ವೀರನ ಮೊಳಕಾಲಿನ ಮಗ್ಗಲಿಗೆ ಇಟ್ಟು ಆತನ ಮೇಲೆ ಎರಗಿ ಹೋಗುತ್ತಿರುವ ದೃಶ್ಯವನ್ನು ಕಾಣಬಹುದು. ಮೇಲ್ಭಾಗದಲ್ಲಿ ಶಿವಲಿಂಗದ ಪಕ್ಕದಲ್ಲಿ ವೀರನು ಪದ್ಮಾಸನ ಭಂಗಿಯಲ್ಲಿ ಕುಳಿತು ಶಿವನ ಸಾನಿಧ್ಯ ಪಡೆದದ್ದನ್ನು ತೋರಿಸುತ್ತದೆ.

ಗ್ರಾಮ-ಹರಸೂರು ಸ್ಥಳ-ಹರಸೂರಿಗೆ ಹೋಗುವ ರಸ್ತೆ

ಕಾಲ–೧೫ನೇ ಶತಮಾನ ವಸ್ತು-ಕಪ್ಪು ಶಿಲೆ

ಪ್ರಕಟಣೆ–ಅಪ್ರಕಟಿತ

ವೀರನು ಎದುರಾಳಿಯಿಂದ ರಕ್ಷಣೆಯನ್ನು ಪಡೆಯಲು ಗುರಾಣಿಯನ್ನು ತನ್ನ ಎಡಗೈಯಲ್ಲಿ ಹಿಡಿದು ಹೊಡೆತವನ್ನು ತಪ್ಪಿಸುತ್ತಿದ್ದಾನೆ. ಎದುರಾಳಿ ವೀರನು ಖಡ್ಗದಿಂದ ಹೊಟ್ಟೆಗೆ ತಿವಿಯುತ್ತಿದ್ದ ಬಗ್ಗೆಯು ಇದರಲ್ಲಿ ಕಂಡುಬರುತ್ತದೆ. ತನ್ನ ಎಡಗೈಯಲ್ಲಿ ಗದೆಯನ್ನು ಹೊಂದಿದ್ದನು. ಒಬ್ಬನ ಕಾಲು ಮತ್ತೊಬ್ಬರ ಕಾಲಿಗೆ ತಾಗಿ ಯುದ್ಧದ ಭಂಗಿಯಲ್ಲಿ ನಿಂತ ಸನ್ನಿವೇಶವನ್ನು ಕಾಣುತ್ತೇವೆ. ತಲೆ ಮೇಲೆ ಕೂದಲು ಕಟ್ಟಿದರೆ ಒಂದು ಚಿತ್ರವನ್ನು ಸಹ ವೀರಗಲ್ಲಿನಲ್ಲಿ ಕಾಣುತ್ತೇವೆ.

ಗ್ರಾಮ-ಹರಸೂರು ಸ್ಥಳ–ಹರಸೂರಿಗೆ ಹೋಗುವ ರಸ್ತೆ

ಕಾಲ–೧೫ನೇ ಶತಮಾನ ವಸ್ತು-ಕಪ್ಪು ಶಿಲೆ

ಪ್ರಕಟಣೆ-ಅಪ್ರಕಟಿತ

"ಈ ವೀರಗಲ್ಲಿನಲ್ಲಿ ಹುಲಿಯೊಂದಿಗೆ ಬೇಟೆಯಾಡುತ್ತಿರುವ ಸನ್ನಿವೇಶವಿದೆ". ವೀರನ ಮೇಲೆ ಹುಲಿಯು ಎರಗಿದಂತೆ ಕಂಡುಬರುತ್ತದೆ. ಹುಲಿಯು ತನ್ನ ಪ್ರಾಣ ರಕ್ಷಣೆಗೋಸ್ಕರ ತನ್ನ ಮುಂದಿನ ಎರಡು ಕಾಲುಗಳನ್ನು ವೀರನ ಮೇಲೆ ಊರಿ ಅವನನ್ನು ಕೊಲ್ಲುವ ಪ್ರಯತ್ನದ ಸನ್ನಿವೇಶವನ್ನು ಇಲ್ಲಿ ನೋಡಬಹುದು. ವೀರನು ತನ್ನ ಮೇಲೆ ಹುಲಿಯು ಎರಗಿದ ಸಂದರ್ಭದಲ್ಲಿ ತನ್ನ ಕೈಯಲ್ಲಿದ್ದ ಖಡ್ಗದಿಂದ ಅದರ ಹೊಟ್ಟೆಗೆ ಚುಚ್ಚಿ ಅದನ್ನು ಕೊಲ್ಲುತ್ತಿರುವ ದೃಶ್ಯವನ್ನು ನೋಡಬಹುದು. ಇಲ್ಲಿ ಇಬ್ಬರು ವೀರರನ್ನು ಚಿತ್ರಿಸಲಾಗಿದೆ. ಒಬ್ಬನು ಹುಲಿಯೊಂದಿಗೆ ಕಾದಾಡುತ್ತಿದ್ದರೆ ಮತ್ತೊಬ್ಬನು ಅವನಿಗೆ ಸಹಾಯಕನಾಗಿ ಆತನ ಹಿಂದೆಯೇ ನಿಂತಿದೆ. ಹುಲಿಗೆ ಮುಖ ಮಾಡಿ ನಿಂತ ವೀರನು ಒಂದು ಕೈಯಿಂದ ಹುಲಿಯನ್ನು ತನ್ನ ತೆಕ್ಕೆಗೆ ಹಿಡಿದುಕೊಂಡ ದೃಶ್ಯ ಕಂಡುಬರುತ್ತದೆ. ಹಿಂದೆ ನಿಂತಿದ್ದ ವೀರನ ಕೈಯಲ್ಲಿ ಖಡ್ಗಗಳು ಕಂಡುಬರುತ್ತವೆ.

ಗ್ರಾಮ-ಸಣ್ಣೂರ | ಸ್ಥಳ-ರಾಮಲಿಂಗೇಶ್ವರ ಗುಡಿ

ಕಾಲ–೧೬ನೇ ಶತಮಾನ | ವಸ್ತು-ಕಪ್ಪು ಶಿಲೆ

ಪ್ರಕಟಣೆ-ಅಪ್ರಕಟಿತ

ಈ ವೀರಗಲ್ಲು ಮೂರು ಪಟ್ಟಿಕೆಯಿಂದ ಕೂಡಿದೆ. ಕೆಳಪಟ್ಟಿಕೆಯಲ್ಲಿ ವೀರಾವೇಶದಿಂದ ಯುದ್ಧದಲ್ಲಿ ಧುಮುಕಿದರ ಬಗ್ಗೆ ಮಾಹಿತಿ ನೀಡುತ್ತದೆ. ಒಬ್ಬ ವೀರನು ಯುದ್ಧ ಭೂಮಿಯಲ್ಲಿ ನಿಂತು ಕುದುರೆಯ ಮೇಲೆ ಕುಳಿತಿದ್ದವನ ಕಡೆ ತನ್ನ ಬಾಣಗಳನ್ನು ಬಿಡುತ್ತಿರುವ ದೃಶ್ಯ ಸ್ಪಷ್ಟವಾಗಿ ಕಂಡುಬರುತ್ತದೆ. ಎರಡು ಕುದುರೆಗಳು ಮತ್ತು ಹಲವಾರು ಸೈನಿಕರು ಯುದ್ಧವಾಡುತ್ತಲೇ ಮರಣ ಹೊಂದಿದ್ದರ ಬಗ್ಗೆ ಮಾಹಿತಿ ನೀಡುತ್ತದೆ. ಇಬ್ಬರು ವೀರರು ಕುದುರೆಯ ಮೇಲೆ ಕುಳಿತು ಪರಸ್ಪರ ಬಾಣಗಳನ್ನು ಬಿಡುತ್ತಿರುವ ದೃಶ್ಯ ಇದರಲ್ಲಿ ಒಬ್ಬನಿಗೆ ಬಾಣ ತಗುಲಿ ಕೆಳಗೆ ಬೀಳುತ್ತಿರುವ ದೃಶ್ಯವನ್ನು ನೋಡಬಹುದು. ಎರಡನೆಯ ಪಟ್ಟಿಕೆಯಲ್ಲಿ ಅಪ್ಸರೆಯರು ಸತ್ತ ವೀರನನ್ನು ಅವನ ಬಲಕ್ಕೆ ಮತ್ತು ಎಡಕ್ಕೆ ಒಬ್ಬೊಬ್ಬ ಅಪ್ಸರೆಯರು ಅವನ ಕೈಗಳನ್ನು ಹಿಡಿದು ಸ್ವರ್ಗಕ್ಕೆ ಹೊತ್ತೊಯ್ಯುತ್ತಿರುವ ದೃಶ್ಯ ಜೊತೆಗೆ ಅವನಿಗೆ ಗಾಳಿಹಾಕುತ್ತಿರುವ ಮತ್ತು ಮತ್ತೊಬ್ಬ ಅಪ್ಸರೆ ಅವನನ್ನು ಕೈಮುಗಿದು ನಮಸ್ಕರಿಸುತ್ತಿರುವ ಚಿತ್ರ ಇದೆ. ಇನ್ನು ಮೂರನೆಯ ಪಟ್ಟಿಕೆಯಲ್ಲಿ ಇದು ಈ ವೀರಗಲ್ಲಿನ ಕೊನೆಯ ಘಟ್ಟವಾಗಿದೆ. ಇದರಲ್ಲಿ ವೀರನ ಪದ್ಮಾಸನ ಭಂಗಿಯಲ್ಲಿ ತನ್ನ ಕೈ ಜೋಡಿಸಿ ಕೈ ಮುಗಿದು ಪಕ್ಕದಲ್ಲೆ ಇದ್ದು ಸಾನಿಧ್ಯ ಪಡೆದದ್ದು, ಶಿವಲಿಂಗವನ್ನು ಮತ್ತೊಬ್ಬರು ಅಲ್ಲಿಯೇ ಎಡಭಾಗಕ್ಕೆ ನಿಂತು ಪೂಜೆಯನ್ನು ಸಲ್ಲಿಸುತ್ತಿರುವ ಚಿತ್ರವನ್ನು ಕಾಣುತ್ತೇವೆ. ಈ ವೀರಗಲ್ಲು ರಾಮಲಿಂಗೇಶ್ವರ ದೇವಾಲಯದ ಎದುರಿನ ನಂದಿಯ ಪಕ್ಕದಲ್ಲಿದೆ.

ಗ್ರಾಮ-ಸಣ್ಣೂರು | ಸ್ಥಳ-ರಾಮಲಿಂಗೇಶ್ವರ ದೇವಾಲಯ

ಕಾಲ-೧೬ನೇ ಶತಮಾನ | ವಸ್ತು-ಕಪ್ಪು ಶಿಲೆ

ಪ್ರಕಟಣೆ–ಅಪ್ರಕಟಿತ

ಎರಡು ಪಟ್ಟಿಕೆಗಳು ಕಂಡುಬರುತ್ತವೆ. ಮೊದಲನೆಯ ಪಟ್ಟಿಕೆಯಲ್ಲಿ ವೀರನು ತನ್ನ ಬಲಗೈಯಲ್ಲಿ ಖಡ್ಗವನ್ನು ಹಿಡಿದು ಕೈ ಮೇಲಕ್ಕೆತ್ತಿರುವ ದೃಶ್ಯವಿದೆ. ಎಡಗೈಯಲ್ಲಿ ಗುರಾಣಿಯನ್ನು ಹೊಂದಿದ್ದಾನೆ. ವೀರನು ಎದುರಾಳಿಯ ಮೇಲೆ ಯುದ್ಧಕ್ಕೆ ನಿಂತ ಭಂಗಿಯಲ್ಲಿದೆ. ಏಕೆಂದರೆ ತನ್ನ ಎಡಗಾಲನ್ನು ಮಡಚಿ ಬಲಗಾಲನ್ನು ಹಿಂದಿನಿಂದ ಎತ್ತಿ ಮುಂದೆ ಇಡುವ ಭಂಗಿಯಲ್ಲಿದ್ದಾನೆ.

ತನ್ನ ದೇಹವನ್ನು ಮುಂದೆ ಹೋಗುವ ರೀತಿಯಲ್ಲಿ ನಿಂತ ವೀರನು ಸ್ವಲ್ಪ ಮಟ್ಟಿಗೆ ಬಗ್ಗಿದ್ದಾನೆಂದು ತಿಳಿದುಬರುತ್ತದೆ. ಇನ್ನು ಎರಡನೆಯ ಪಟ್ಟಿಕೆಯಲ್ಲಿ ಒಂದು ಶಿವಲಿಂಗ ಅದರ ಎದುರಿಗೆ ವೀರನು ಕೈ ಮುಗಿದು ಕುಳಿತಿರುವ ದೃಶ್ಯವನ್ನು ಕಾಣಬಹುದು.

ಗ್ರಾಮ-ಸಣ್ಣೂರು ಸ್ಥಳ-ಹನುಮಂತ ಗುಡಿ

ಕಾಲ–೧೬ನೇ ಶತಮಾನ ವಸ್ತು-ಕಪ್ಪು ಶಿಲೆ

ಪ್ರಕಟಣೆ-ಅಪ್ರಕಟಿತ

ಈ ವೀರಗಲ್ಲು ಕೂಡ ಮೂರು ಪಟ್ಟಿಕೆಗಳಿಂದ ಕೂಡಿದೆ. ಕೆಳಪಟ್ಟಿಕೆಯಲ್ಲಿ ವೀರರು ಶತ್ರುಗಳೊಂದಿಗೆ ಕಾದಾಡುತ್ತಿರುವ ದೃಶ್ಯವಿದೆ. ಈ ಪಟ್ಟಿಕೆಯಲ್ಲಿಯ ಮೂರು ವೀರರಲ್ಲಿ ಮಧ್ಯದಲ್ಲಿದ್ದ ಒಬ್ಬನು ಈಟಿಯಿಂದ ತನ್ನ ಬಲಭಾಗದ ಶತ್ರುವನ್ನು ಚುಚ್ಚುತ್ತಿದ್ದಾನೆ. ಎಡಗಡೆ ಮತ್ತೊಬ್ಬ ವೀರನು ತನ್ನ ಕೈಯಲ್ಲಿದ್ದ ಖಡ್ಗದಿಂದ ಎದುರಾಳಿಗೆ ಹೊಡೆಯಲೆಂದು ಕೈ ಮೇಲಕ್ಕೆತ್ತಿದ್ದಾನೆ.

ಎರಡನೆಯ ಪಟ್ಟಿಕೆಯಲ್ಲಿ ಕೆಳಪಟ್ಟಿಯಲ್ಲಿ ನಡೆದ ಕಾಳಗದಲ್ಲಿ ಮರಣ ಹೊಂದಿದ ಇಬ್ಬರು ವೀರರನ್ನು ಮೇಲಕ್ಕೆ ಅಂದರೆ ಸ್ವರ್ಗಕ್ಕೆ ಅಪ್ಸರೆಯರು ಕೊಂಡೊಯ್ಯುತ್ತಿರುವ ಚಿತ್ರವಿದೆ. ಇನ್ನು ಕೊನೆಯ ಮತ್ತು ಮೂರನೇ ಪಟ್ಟಿಕೆಯಲ್ಲಿ ಇಬ್ಬರು ವೀರರು ಪದ್ಮಾಸನ ಭಂಗಿಯಲ್ಲಿ ಕುಳಿತಿರುವ ಚಿತ್ರವಿದೆ. ಎರಡು ಕಡೆ ಅಪ್ಸರೆಯರು ನಿಂತು ಅವರಿಗೆ ಗಾಳಿ ಹಾಕುತ್ತಿರುವ ದೃಶ್ಯ ಕಂಡುಬರುತ್ತದೆ.

ಗ್ರಾಮ-ಸಣ್ಣೂರು ಸ್ಥಳ-ಹನುಮಂತ ಗುಡಿ

ಕಾಲ–೧೫ನೇ ಶತಮಾನ ವಸ್ತು-ಕಪ್ಪು ಶಿಲೆ

ಪ್ರಕಟಣೆ-ಅಪ್ರಕಟಿತ

ಈ ವೀರಗಲ್ಲು ನಾಲ್ಕು ಪಟ್ಟಿಕೆಗಳಿಂದ ಕೂಡಿದೆ. ಕೆಳಪಟ್ಟಿಕೆಯಲ್ಲಿ ಕುದುರೆಗಳ ಚಿತ್ರ ಕಂಡುಬರುತ್ತದೆ. ಮೂರನೆಯ ಪಟ್ಟಿಕೆಯಲ್ಲಿ ವೀರನು ಶತ್ರುಗಳೊಂದಿಗೆ ಕಾದಾಡುತ್ತಿರುವ ದೃಶ್ಯವಿದೆ. ಮಧ್ಯದಲ್ಲಿ ವೀರನು ಈಟಿಯಿಂದ ತನ್ನ ಬಲಕ್ಕೆ ಇದ್ದ ವೈರಿಯನ್ನು ಇರಿದಿದ್ದಾನೆ. ಎಡಕ್ಕೆ ಇದ್ದ ಶತ್ರು ಮಧ್ಯದಲ್ಲಿದ್ದ ವೀರನ ಮೇಲೆ ಆತನು ತನ್ನ ಕೈಯಲ್ಲಿದ್ದ ಈಟಿಯನ್ನು ಎತ್ತಿ ಇರಿಯುತ್ತಿರುವ ದೃಶ್ಯವನ್ನು ಕಾಣಬಹುದು. ಎರಡನೇ ಪಟ್ಟಿಕೆಯಲ್ಲಿ ಅಪ್ಸರೆಯರು ಯುದ್ಧದಲ್ಲಿ ಮಡಿದ ವೀರರನ್ನು ಎತ್ತಿಕೊಂಡು ಸ್ವರ್ಗಕ್ಕೆ ಒಯ್ಯುತ್ತಿರುವ ದೃಶ್ಯವನ್ನು ನೋಡಬಹುದು.

ಇನ್ನು ಕೊನೆಯ ಪಟ್ಟಿಕೆಯಲ್ಲಿ ವೀರರು ಇಬ್ಬರು ಪದ್ಮಾಸನ ಭಂಗಿಯಲ್ಲಿ ಕುಳಿತಿದ್ದಾರೆ. ಅಂದರೆ ಅವರು ಸ್ವರ್ಗಸ್ಥರಾದ ಸನ್ನಿವೇಶವನ್ನು ತಿಳಿಸುತ್ತದೆ. ಈ ವೀರರ ಎಡಕ್ಕೆ ಮತ್ತು ಬಲಕ್ಕೆ ಅಪ್ಸರೆಯರು ಗಾಳಿಯನ್ನು ಹಾಕುತ್ತಿರುವ ದೃಶ್ಯವನ್ನು ಕಾಣಬಹುದಾಗಿದೆ.

ಗ್ರಾಮ-ಸಣ್ಣೂರು | ಸ್ಥಳ-ಮಲ್ಲಿಕಾರ್ಜುನ ದೇವಾಲಯದ ಪಕ್ಕ

ಕಾಲ-೧೬ನೇ ಶತಮಾನ | ವಸ್ತು-ಕಪ್ಪು ಶಿಲೆ

ಪ್ರಕಟಣೆ-ಅಪ್ರಕಟಿತ

ವೀರಗಲ್ಲಿನ ಕೆಳಭಾಗವು ನೆಲದಲ್ಲಿ ಹೂತುಹೋಗಿದೆ. ಮೇಲ್ಭಾಗದಲ್ಲಿ ಇಬ್ಬರು ವೀರರ ಚಿತ್ರವಿದೆ. ಇಲ್ಲಿ ಪರಸ್ಪರ ಒಬ್ಬರನ್ನೊಬ್ಬರು ಸಂಭಾಷಣೆಯಲ್ಲಿದ್ದಂತಿದೆ. ಒಬ್ಬ ವೀರನು ಕೊರಳಲ್ಲಿ ಆಭರಣಗಳನ್ನು ಧರಿಸಿದ ಬಗ್ಗೆಯು ಈ ದೃಶ್ಯದಲ್ಲಿದೆ.

ಗ್ರಾಮ-ಶ್ರೀನಿವಾಸ ಸರಡಗಿ | ಸ್ಥಳ-ಗಾಳಿಮರಗೆಮ್ಮನ ಗುಡಿ

ಕಾಲ-೧೬ನೇ ಶತಮಾನ | ವಸ್ತು-ಕಪ್ಪು ಶಿಲೆ

ಪ್ರಕಟಣೆ-ಅಪ್ರಕಟಿತ

ಈ ವೀರಗಲ್ಲು ಎರಡು ಪಟ್ಟಿಕೆಯಿಂದ ಕೂಡಿದೆ. ಮೊದಲ ಪಟ್ಟಿಕೆಯಲ್ಲಿ ವೀರನು ವೈರಿಯೊಂದಿಗೆ ಹೋರಾಡುತ್ತಿರುವ ದೃಶ್ಯವಿದೆ. ವೀರನ ಬಲಗೈಯಲ್ಲಿ ಖಡ್ಗವನ್ನು ಹಿಡಿದು ಕೈ ಮೇಲಕ್ಕೆತ್ತಿದ್ದಾನೆ. ವೀರ ಎದುರಾಳಿಯನ್ನು ಖಡ್ಗದಿಂದ ಇರಿಯುವ ಸನ್ನಿವೇಶವಿದೆ. ಎಡಗೈಯಲ್ಲಿ ಗುರಾಣಿಯನ್ನು ಹಿಡಿದಿರುವಂತಿದೆ. ವೀರನು ತನ್ನ ಖಡ್ಗ ಹಿಡಿದ ಕೈಯಲ್ಲಿ ಕೈಬಂದಿಯನ್ನು ಧರಿಸಿರುವ ಚಿತ್ರ ಕಂಡುಬರುತ್ತದೆ. ಎರಡನೆ ಪಟ್ಟಿಕೆಯಲ್ಲಿ ಕುದುರೆಗಳ ಚಿತ್ರವಿದೆ.

ಗ್ರಾಮ-ಶ್ರೀನಿವಾಸ ಸರಡಗಿ | ಸ್ಥಳ-ಜೈನ ಬಸದಿ ಹತ್ತಿರ

ಕಾಲ-೧೬ನೇ ಶತಮಾನ | ವಸ್ತು-ಕಪ್ಪು ಶಿಲೆ

ಪ್ರಕಟಣೆ-ಅಪ್ರಕಟಿತ

ಈ ವೀರಗಲ್ಲು ಒಂದೇ ಪಟ್ಟಿಕೆಯಿಂದ ಕೂಡಿದ್ದು ವೀರಗಲ್ಲು ಆಗಿದೆ. ವೀರನು ತನ್ನ ಬಲಗೈಯಲ್ಲಿ ಖಡ್ಗವನ್ನು ಹಿಡಿದುಕೊಂಡು ವೈರಿಯನ್ನು ಇರಿಯುತ್ತಿರುವಂತಿದೆ. ಎದುರಾಳಿ ವೀರನು ಕುಳಿತು ತನ್ನ ಈಟಿಯಿಂದ ಮೊದಲ ವೀರನಿಗೆ ಇರಿಯುತ್ತಿರುವ ದೃಶ್ಯವಿದೆ. ಮೊದಲನೆಯ ವೀರನು ತನ್ನ ಕೊರಳಲ್ಲಿ ಆಭರಣಗಳಿವೆ.

ಗ್ರಾಮ-ಶ್ರೀನಿವಾಸ ಸರಡಗಿ ಸ್ಥಳ-ಜೈನ ಬಸದಿ ಹತ್ತಿರ

ಕಾಲ–೧೭ನೇ ಶತಮಾನ ವಸ್ತು-ಕಪ್ಪು ಶಿಲೆ

ಪ್ರಕಟಣೆ-ಅಪ್ರಕಟಿತ

ಈ ವೀರಗಲ್ಲು ಎರಡು ಪಟ್ಟಿಕೆಯಿಂದ ಕೂಡಿದೆ. ಕೆಳಪಟ್ಟಿಕೆಯಲ್ಲಿ ಮೊದಲನೆ ಪಟ್ಟಿಕೆಯಲ್ಲಿ ವೀರನು ತನ್ನ ಕೈಯಲ್ಲಿ ಖಡ್ಗವನ್ನು ಹಿಡಿದು ವೈರಿಯ ಹೊಟ್ಟೆಗೆ ಚುಚ್ಚಿದ್ದನ್ನು ಇಲ್ಲಿ ಕಾಣುತ್ತೇವೆ. ಗುರಾಣಿಯನ್ನು ತನ್ನ ಎಡಗೈಯಲ್ಲಿ ಹಿಡಿದು ವೈರಿಯ ಏಟುಗಳಿಂದ ರಕ್ಷಣೆಯನ್ನು ಪಡೆದುಕೊಳ್ಳುತ್ತಿದ್ದಾನೆ. ಈ ಎಲ್ಲಾ ಚಿತ್ರಗಳನ್ನು ಈ ವೀರಗಲ್ಲಿನಲ್ಲಿ ಕಾಣುತ್ತೇವೆ. ಕೊನೆ ಹಾಗೂ ಎರಡನೆ ಪಟ್ಟಿಕೆಯಲ್ಲಿ ನಂದಿ ಮತ್ತು ಶಿವಲಿಂಗದ ಚಿತ್ರವನ್ನು ಕಾಣಬಹುದು.

ಗ್ರಾಮ-ಶ್ರೀನಿವಾಸ ಸರಡಗಿ ಸ್ಥಳ-ಸಣ್ಣ ಬಸವನ ಗುಡಿ

ಕಾಲ–೧೫ನೇ ಶತಮಾನ ವಸ್ತು-ಕಪ್ಪು ಶಿಲೆ

ಪ್ರಕಟಣೆ-ಅಪ್ರಕಟಿತ

ಈ ವೀರಗಲ್ಲಿನಲ್ಲಿ ವೀರನು ಹಂದಿಯೊಂದಿಗೆ ಕಾದಾಡುತ್ತಿರುವ ಚಿತ್ರವಿದೆ. ವೀರನು ತನ್ನ ಬಲಗೈಯಲ್ಲಿ ಖಡ್ಗವನ್ನು ಹಿಡಿದು ಹಂದಿಯ ಕುತ್ತಿಗೆಗೆ ಇರಿಯುತ್ತಿರುವ ದೃಶ್ಯವಿದೆ.

ಗ್ರಾಮ-ಶ್ರೀನಿವಾಸ ಸರಡಗಿ ಸ್ಥಳ-ದಂಡೊತ್ತಿ ಮಠದ ಪಕ್ಕ

ಕಾಲ–೧೬ನೇ ಶತಮಾನ ವಸ್ತು-ಕಪ್ಪು ಶಿಲೆ

ಪ್ರಕಟಣೆ-ಅಪ್ರಕಟಿತ

ಈ ವೀರಗಲ್ಲಿನಲ್ಲಿ ಮೂರು ಪಟ್ಟಿಕೆಗಳಿವೆ. ಇದರ ಕೆಳಗಿನ ಪಟ್ಟಿಕೆಯಲ್ಲಿ ಎತ್ತುಗಳ ಚಿತ್ರವಿದೆ. ಎರಡನೆಯ ಪಟ್ಟಿಕೆಯಲ್ಲಿ ತನ್ನ ಎಡಗೈಯಲ್ಲಿ ಭರ್ಚಿಯನ್ನು ಹಿಡಿದು ತನ್ನ ಎಡಕ್ಕೆ ನಿಂತವನ ತಲೆಗೆ ಚುಚ್ಚುತ್ತಿರುವ ದೃಶ್ಯವನ್ನು ವೀರನ ಬಲಭಾಗದಲ್ಲಿ ಮತ್ತೊಬ್ಬ ವೀರನ ಕೈಯಲ್ಲಿ ಖಡ್ಗವಿರುವುದನ್ನು ಕಾಣುತ್ತೇವೆ. ಇದರಲ್ಲಿ ಒಂದು ವೈಶಿಷ್ಟ್ಯವಿದೆ. ಅದೇನೆಂದರೆ ವೀರರಿಬ್ಬರು ತಮ್ಮ ಜಡೆಯನ್ನು ತಲೆ ಮೇಲೆ ಕಟ್ಟಿದ್ದಾರೆ. ಮೂರನೆಯ ಪಟ್ಟಿಕೆಯಲ್ಲಿ ವೀರನು ಮಧ್ಯದಲ್ಲಿ ಕುಳಿತಿದ್ದಾನೆ. ಅಪ್ಸರೆಯರು ಅವನ ಬಲಕ್ಕೆ ಮತ್ತು ಎಡಕ್ಕೆ ನಿಂತು ಅವನಿಗೆ ಗಾಳಿಯನ್ನು ಬೀಸುತ್ತಿದ್ದಾರೆ.

ಗ್ರಾಮ-ಶ್ರೀನಿವಾಸ ಸರಡಗಿ ಸ್ಥಳ-ನಾಗಾವಿ ಯಲ್ಲಮ್ಮನ ಗುಡಿ

ಕಾಲ–೧೫ನೇ ಶತಮಾನ ವಸ್ತು-ಕಪ್ಪು ಶಿಲೆ

ಪ್ರಕಟಣೆ-ಅಪ್ರಕಟಿತ

ಇದರಲ್ಲಿ ವೀರನು ತನ್ನ ಎರಡು ಕೈಗಳನ್ನು ತನ್ನ ಬಲಕ್ಕೆ ತೋರಿಸಿದ್ದಾನೆ. ಹಾಗೂ ಈ ದೃಶ್ಯದಲ್ಲಿ ಆತನ ಜಡೆಗಳು ತಲೆ ಹಿಂದೆ ತುರುಬು ಕಟ್ಟಿಕೊಂಡ ದೃಶ್ಯವಿದೆ.

ಗ್ರಾಮ-ಶ್ರೀನಿವಾಸ ಸರಡಗಿ　　　　ಸ್ಥಳ-ಮಲ್ಲಯ್ಯನ ಗುಡಿ

ಕಾಲ–೧೬ನೇ ಶತಮಾನ　　　　ವಸ್ತು-ಬಿಳಿ ಕಲ್ಲು ಶಿಲೆ

ಪ್ರಕಟಣೆ-ಅಪ್ರಕಟಿತ

ಈ ವೀರಗಲ್ಲು ಮೂರು ಪಟ್ಟಿಕೆಗಳಿಂದ ಕೂಡಿದೆ. ಕೆಳಪಟ್ಟಿಕೆ ಅಥವಾ ಮೊದಲ ಪಟ್ಟಿಕೆಯಲ್ಲಿ ಹೂವಿನ ಎಸಳುಗಳ ಚಿತ್ರವಿದೆ. ಎರಡನೆಯ ಪಟ್ಟಿಕೆಯಲ್ಲಿ ವೀರನು ಕುದುರೆ ಮೇಲೆ ಕುಳಿತು ತನ್ನ ಹೆಗಲ ಮೇಲೆ ಭರ್ಚಿಯನ್ನು ಇಟ್ಟುಕೊಂಡ ಚಿತ್ರವಿದೆ. ಆ ಭರ್ಚಿಯನ್ನು ಕೈಯಲ್ಲಿ ಅರ್ಧ ಹಿಡಿದು ಅರ್ಧ ಹೆಗಲ ಮೇಲೆ ಇಟ್ಟುಕೊಂಡು ವೈರಿಗೆ ಅದರಿಂದ ಇರಿಯುತ್ತಿರುವ ದೃಶ್ಯವನ್ನು ಕಾಣುತ್ತೇವೆ. ಇನ್ನು ಕೊನೆಯ ಪಟ್ಟಿಕೆಯಲ್ಲಿ ಶಿವಲಿಂಗದ ಎದುರು ವೀರನು ತನ್ನ ಎರಡು ಕೈಗಳನ್ನು ಜೋಡಿಸಿ ಶಿವ ಸಾನಿಧ್ಯ ಪಡೆದಂತಿದೆ.

ಗ್ರಾಮ-ಶ್ರೀನಿವಾಸ ಸರಡಗಿ　　　　ಸ್ಥಳ-ದಂಡೊತ್ತಿ ಮಠದ ಪಕ್ಕ

ಕಾಲ-೧೫ನೇ ಶತಮಾನ　　　　ವಸ್ತು-ಕಪ್ಪು ಶಿಲೆ

ಪ್ರಕಟಣೆ-ಅಪ್ರಕಟಿತ

ಈ ವೀರಗಲ್ಲಿನ ಅರ್ಧಭಾಗ ತುಟ್ರಿತ. ಇನ್ನೊಂದು ಅರ್ಧ ಭಾಗದಲ್ಲಿ ಇಬ್ಬರು ವೀರರು ತಮ್ಮ ಎರಡು ಕೈಗಳನ್ನು ಜೋಡಿಸಿ ನಂದಿಯನ್ನು ಪ್ರಾರ್ಥಿಸುವ ಹಾಗೆ ಕಂಡುಬರುತ್ತದೆ. ಮೇಲಿನ ಪಟ್ಟಿಕೆಯಲ್ಲಿ ಸೂರ್ಯನ ಚಿತ್ರವಿದೆ.

ಗ್ರಾಮ-ಪಟ್ಟಣ　　　　ಸ್ಥಳ-ಬೋರಲಿಂಗೇಶ್ವರ ದೇವಾಲಯ

ಕಾಲ-೧೬ನೇ ಶತಮಾನ　　　　ವಸ್ತು-ಕಪ್ಪು ಶಿಲೆ

ಪ್ರಕಟಣೆ-ಅಪ್ರಕಟಿತ

ಈ ವೀರಗಲ್ಲಿನಲ್ಲಿ ವೀರನು ತನ್ನ ಎಡಗೈಯಲ್ಲಿ ಬಿಲ್ಲನ್ನು ಹಿಡಿದಿದ್ದಾನೆ. ವೀರನು ತನ್ನ ಬಲಗೈಯಿಂದ ಬಾಣ ಬಿಡುತ್ತಿರುವ ದೃಶ್ಯವಿದೆ. ಅವನ ಹಿಂದೆ ಮತ್ತೊಬ್ಬ ವೀರನು ನಿಂತ ಚಿತ್ರವಿದೆ.

ಗ್ರಾಮ-ಹೊನ್ನಕಿರಣಗಿ ಸ್ಥಳ-ಶ್ರೀಕೇಶವ ಈಶ್ವರಲಿಂಗೇಶ್ವರ ಗುಡಿ

ಕಾಲ–೧೫ನೇ ಶತಮಾನ ವಸ್ತು-ಕಪ್ಪು ಶಿಲೆ

ಪ್ರಕಟಣೆ-ಅಪ್ರಕಟಿತ

ಈ ವೀರಗಲ್ಲು ಶ್ರೀಕೇಶವ ಈಶ್ವರ ಲಿಂಗೇಶ್ವರ ದೇವಾಲಯದ ಗರ್ಭಗುಡಿಯ ಭಿತ್ತಿಯ ಮೇಲೆ ಕಂಡುಬರುತ್ತದೆ. ಇಲ್ಲಿ ವೀರನು ತನ್ನ ಬಲಗೈಯಲ್ಲಿನ ಖಡ್ಗದಿಂದ ತನ್ನ ಎದುರಾಳಿಗೆ ಇರಿಯುವ ಭಂಗಿಯಲ್ಲಿ ನಿಂತಿದ್ದಾನೆ. ಎಡಗೈಯಲ್ಲಿ ಗುರಾಣಿ ಹಿಡಿದಿದೆ. ತನ್ನ ಬಲಗಾಲನ್ನು ಮುಂದೆ ಇಟ್ಟಿದ್ದಾನೆ. ಎಡಗಾಲು ಹಿಂದೆ ಇಟ್ಟ ಹಾಗೆ ಕಂಡುಬರುತ್ತದೆ. ವೀರನು ತನ್ನ ಕಾಲಲ್ಲಿ ಕಾಲಬಂದಿ ಧರಿಸಿದಂತಿದೆ. ಕೈಬಂದಿ ಮತ್ತು ತೋಳಬಂದಿ ಧರಿಸಿರುವ ಚಿತ್ರವನ್ನು ಕಾಣುತ್ತೇವೆ. ಕಿವಿಯಲ್ಲಿ ಓಲೆ ಮತ್ತು ಕೊರಳಲ್ಲಿ ಎರಡು ಕಂಠಹಾರಗಳನ್ನು ಧರಿಸಿದೆ.

ಗ್ರಾಮ-ಮಹಾಗಾಂವ ಸ್ಥಳ-ಸಂಗಯ್ಯನ ದೇವರ ಗುಡಿ

ಕಾಲ–೧೫ನೇ ಶತಮಾನ ವಸ್ತು-ಕಪ್ಪು ಶಿಲೆ

ಪ್ರಕಟಣೆ-ಅಪ್ರಕಟಿತ

ಈ ವೀರಗಲ್ಲು ಮೂರು ಪಟ್ಟಿಕೆಗಳಿಂದ ಕೂಡಿದೆ. ಕೆಳಗಿನಿಂದ ಮೊದಲನೆ ಪಟ್ಟಿಕೆಯಲ್ಲಿ ತನ್ನ ಎರಡು ಕೈಗಳಿಂದ ಭರ್ಚಿಯನ್ನು ಹಿಡಿದು ತನ್ನ ಎದುರಿಗಿದ್ದ ವೈರಿಯ ಕುದುರೆಗೆ ಚುಚ್ಚುತ್ತಿದ್ದಾನೆ. ಎದುರಾಳಿಯು ಕುದುರೆಯ ಮೇಲೆ ಕುಳಿತು ಕೈಯಲ್ಲಿ ಖಡ್ಗವನ್ನು ಹಿಡಿದು ವೀರನನ್ನು ಹೊಡೆಯಲು ಕೈ ಮೆಲೆತ್ತಿದ ಚಿತ್ರ ಕಾಣುತ್ತೇವೆ. ಎರಡನೆ ಪಟ್ಟಿಕೆಯಲ್ಲಿ ಆ ಮೊದಲನೆ ಪಟ್ಟಿಕೆಯಲ್ಲಿ ಮಡಿದ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಒಯ್ಯುತ್ತಿರುವ ದೃಶ್ಯವನ್ನು ಎರಡನೆ ಪಟ್ಟಿಕೆಯಲ್ಲಿ ಕಾಣುತ್ತೇವೆ. ಇನ್ನು ಮೂರನೆ ಪಟ್ಟಿಕೆಯಲ್ಲಿ ವೀರನು ಶಿವಲಿಂಗದ ಎದುರು ಕೈ ಜೋಡಿಸಿ ಶಿವನನ್ನು ಆರಾಧಿಸುತ್ತಿರುವ ದೃಶ್ಯವಿದೆ.

ಗ್ರಾಮ-ಮಹಾಗಾಂವ ಸ್ಥಳ-ಸಂಗಯ್ಯನ ದೇವರ ಗುಡಿ

ಕಾಲ-೧೫ನೇ ಶತಮಾನ ವಸ್ತು-ಕಪ್ಪು ಶಿಲೆ

ಪ್ರಕಟಣೆ-ಅಪ್ರಕಟಿತ

ಈ ವೀರಗಲ್ಲಿನಲ್ಲಿಯು ಮೂರು ಪಟ್ಟಿಕೆಗಳು ಇವೆ. ಕೆಳಗಿನಿಂದ ಮೊದಲನೆ ಪಟ್ಟಿಕೆಯಲ್ಲಿ ವೀರನು ತನ್ನ ಬಲಗೈಯಲ್ಲಿ ಬಿಲ್ಲನ್ನು ಹಿಡಿದಿದ್ದಾನೆ. ಎಡಗೈಯಿಂದ ತನ್ನ ಭತ್ತಳಿಕೆಯಿಂದ ಬಾಣವನ್ನು ತೆಗೆಯುತ್ತಿರುವ ದೃಶ್ಯವಿದೆ. ಎದುರಾಳಿ ವೀರನು ತನ್ನ ಕೈಯಲ್ಲಿ ಖಡ್ಗವನ್ನು ಹಿಡಿದು ತನ್ನ ಎದುರಿನ ವೀರನನ್ನು ಇರಿಯುತ್ತಿರುವ ಚಿತ್ರವಿದೆ. ಇಲ್ಲಿ ಮಡಿದ ವೀರನನ್ನು

ಅಪ್ಸರೆಯರು ಸ್ವರ್ಗಕ್ಕೆ ಕೊಂಡೊಯ್ಯುತ್ತಿರುವ ದೃಶ್ಯವಿದೆ. ಮೂರನೇ ಪಟ್ಟಿಕೆಯಲ್ಲಿ ಶಿವಲಿಂಗದ ಎದುರು ವೀರನು ಕುಳಿತಿರುವ ದೃಶ್ಯವಿದೆ.

ಗ್ರಾಮ-ಮಹಾಗಾಂವ — ಸ್ಥಳ-ಗೌರಿಶಂಕರ ದೇವಾಲಯದ ಭಿತ್ತಿ

ಕಾಲ–೧೬ನೇ ಶತಮಾನ — ವಸ್ತು-ಕಪ್ಪು ಶಿಲೆ

ಪ್ರಕಟಣೆ-ಅಪ್ರಕಟಿತ

ಈ ವೀರಗಲ್ಲು ಎರಡು ಪಟ್ಟಿಕೆಗಳಿಂದ ಕೂಡಿದೆ. ಕೆಳಗಿನಿಂದ ಮೊದಲನೆಯ ಪಟ್ಟಿಕೆಯಲ್ಲಿ ವೀರನು ತನ್ನ ಬಲಗೈಯಲ್ಲಿ ಖಡ್ಗವನ್ನು ಹಿಡಿದು ಎದುರಾಳಿಯನ್ನು ಇರಿಯುತ್ತಿರುವ ದೃಶ್ಯವಿದೆ. ಎರಡನೆ ಪಟ್ಟಿಕೆಯಲ್ಲಿ ಶಿವನನ್ನು ಪೂಜಿಸುತ್ತಿರುವ ಭಂಗಿಯಲ್ಲಿ ವೀರನು ಕುಳಿತಿರುವ ದೃಶ್ಯವಿದೆ.

ಗ್ರಾಮ-ಮಹಾಗಾಂವ — ಸ್ಥಳ-ಮಲ್ಲಿಕಾರ್ಜುನ ದೇವಾಲಯ

ಕಾಲ–೧೬ನೇ ಶತಮಾನ — ವಸ್ತು-ಕಪ್ಪು ಶಿಲೆ

ಪ್ರಕಟಣೆ-ಅಪ್ರಕಟಿತ

ವೀರಗಲ್ಲಿನಲ್ಲಿ ಮೂರು ಪಟ್ಟಿಕೆಗಳಿವೆ. ಕೆಳಗಿನಿಂದ ಮೊದಲನೆ ಪಟ್ಟಿಕೆಯಲ್ಲಿ ವೀರನು ತನ್ನ ಕೈಯಲ್ಲಿ ಭರ್ಚಿಯನ್ನು ಹಿಡಿದುಕೊಂಡು ತನ್ನ ಮೇಲೆ ಎರಗುತ್ತಿರುವ ಹುಲಿಯ ಗಂಟಲಿಗೆ ಚುಚ್ಚುತ್ತಿರುವ ದೃಶ್ಯವಿದೆ. ಹುಲಿ ಮತ್ತು ವೀರನ ಕಾಳಗದಲ್ಲಿ ವೀರನು ಮರಣ ಹೊಂದಿದ್ದ ಚಿತ್ರಣವಿದೆ. ಎರಡನೆ ಪಟ್ಟಿಕೆಯಲ್ಲಿ ಅಪ್ಸರೆಯರು ಆ ವೀರನನ್ನು ಸ್ವರ್ಗಕ್ಕೆ ಒಯ್ಯುತ್ತಿರುವ ದೃಶ್ಯವಿದೆ. ಮೂರನೆ ಪಟ್ಟಿಕೆಯಲ್ಲಿ ವೀರನು ಕೈ ಮುಗಿದು ಕುಳಿತುಕೊಂಡಿದ್ದಾನೆ. ಅವನ ಪಕ್ಕದಲ್ಲಿಯೇ ಶಿವಲಿಂಗದ ಚಿತ್ರವಿದೆ. ವೀರ ಹುಲಿಯೊಂದಿಗೆ ಕಾದಾಡುತ್ತಿರುವ ದೃಶ್ಯವಿರುವ ಎರಡನೆ ವೀರಗಲ್ಲು ಇದಾಗಿದೆ.

ಗ್ರಾಮ-ಮಹಾಗಾಂವ — ಸ್ಥಳ-ಮಲ್ಲಿಕಾರ್ಜುನ ದೇವಾಲಯ

ಕಾಲ-೧೫ನೇ ಶತಮಾನ — ವಸ್ತು-ಕಪ್ಪು ಶಿಲೆ

ಪ್ರಕಟಣೆ-ಅಪ್ರಕಟಿತ

ಈ ವೀರಗಲ್ಲಿನಲ್ಲಿ ವೀರನು ಭರ್ಚಿಯಿಂದ ವೈರಿಗೆ ಇರಿಯುತ್ತಿರುವ ದೃಶ್ಯವಿದೆ.

ಗ್ರಾಮ-ಸೈಯದ ಚಿಂಚೋಳಿ — ಸ್ಥಳ-ಸಂಗಮೇಶ್ವರ ದೇವಾಲಯದ ಪಕ್ಕ

ಕಾಲ-೧೬ನೇ ಶತಮಾನ — ವಸ್ತು-ಕಪ್ಪು ಶಿಲೆ

ವೀರಗಲ್ಲಿನ ಅರ್ಧಭಾಗ ತ್ರುಟಿತವಾಗಿದೆ.

೩.೪. ಮಾಸ್ತಿಕಲ್ಲು :

ಒಬ್ಬ ಪತಿವ್ರತೆಯಾದ ಹೆಂಗಸು ತನ್ನ ಗಂಡನು ಸತ್ತು ಹೋದರೆ ಸಹಗಮನ ಮಾಡಿದ ಸಂಗತಿಯನ್ನು ಸೂಚಿಸುವಂತೆ ಆ ಸ್ಥಳದಲ್ಲಿ ನೆಟ್ಟ ಕಲ್ಲಿಗೆ 'ಮಾಸ್ತಿಕಲ್ಲು' ಎಂದು ಹೆಸರು.[೬೦] "ಮಹಾಸತಿ" "ಮಾಸ್ತಿ" "ಮಹಾಸತಿಕಲ್ಲು" ಇವುಗಳಲ್ಲಿ ಅದೇ ಅರ್ಥವನ್ನು ಒಳಗೊಂಡಿವೆ.[೬೧]

ಮಾಸ್ತಿ ಎರಡು ಬಗೆಯಾಗಿವೆ. ೧. ಸಹಗಮನ(ಸಹಮರಣ) ೨. ಅನುಗಮನ (ಅನುಮರಣ) ಗಂಡನ ಶವದೊಂದಿಗೆ ಚಿತೆಯೇರುವುದು ಸಹಗಮನ. ಸತ್ತ ಗಂಡನ ಹಿಂದೆ ಹೆಂಡತಿ ಸತ್ತು ಇನ್ನೊಂದು ಲೋಕದಲ್ಲೂ ಸಹಭಾಗಿನಿಯಾಗಬೇಕೆನ್ನುವುದೇ ಆ ನಂಬಿಕೆಯ ಮುಖ್ಯ ಅಂಶ. ಗಂಡ ದೂರದ ಸ್ಥಳದಲ್ಲಿ ಮಡಿದರೆ ಅವನ ಪ್ರಿಯವಸ್ತುವನ್ನು ಹಿಡಿದು ಚಿತೆಯೇರುವುದು ಅನುಗಮನ ಗಂಡ ಯಾವುದೇ ರೀತಿಯಿಂದ ಸತ್ತಿರಲಿ ಚಿತೆಯೇರಬೇಕೆಂಬುದು ಇಲ್ಲಿನ ಪರಂಪರೆ.[೬೨]

ಐದು ಅಥವಾ ಆರನೆಯ ಶತಮಾನದ ಕವಡಿ ಶಾಸನ ಬಹುಶಃ ಕದಂಬ ರವಿವರ್ಮನ ರಾಣಿಯ ಸಹಗಮನವನ್ನು ಸೂಚಿಸುತ್ತಿದ್ದು ನಮ್ಮ ನಾಡಿನಲ್ಲಿಯ ಈ ಪದ್ಧತಿಯನ್ನು ಕುರಿತ ಪ್ರಥಮ ದಾಖಲೆಯಾಗಿದೆ.[೬೩] ಜೈನ ಪರಂಪರೆಯಲ್ಲಿ ಪತಿಯ ಮರಣ ನಂತರ ಸತಿಯು ಚಿತೆಯ ಪ್ರವೇಶ ಮಾಡುವುದು ತದ್ವಿರುದ್ಧ ಹೀಗಿದ್ದರೂ ಗುಂಡಬ್ಬೆ ಚಿತಾಗ್ನಿಯಲ್ಲಿ ಮಡಿದಿರುವುದು ಲೋಕ ವಿಖ್ಯಾತವಾಗಿದೆ.[೬೪]

ಮಾಸ್ತಿ ಹೋಗುವ ಬಗೆ :

ಸಾಮನ್ಯವಾಗಿ ಊರೊಡೆಯನ ಮನ್ನಣೆ ಪಡೆದು, ಹಳದಿ ಸೀರೆಯನ್ನಟ್ಟು ಒಂದು ಕೈಯಲ್ಲಿ, ಲಿಂಬೆಹಣ್ಣು ಇನ್ನೊಂದು ಕೈಯಲ್ಲಿ ಕನ್ನಡಿ ಹಿಡಿದು, ದಂಡೆ, ಬಾಸಿಂಗ, ಕಾಲಕುಪ್ಪಸ, ಮೊಲೆಗಟ್ಟುಗಳಿಂದ ಸಿಂಗರಿಸಿಕೊಂಡು, ಬೀದಿಯಲ್ಲಿ ಕಾಲುನಡಿಗೆ ಇಲ್ಲವೆ ಕುದುರೆ ಪಲ್ಲಕ್ಕಿಗಳನ್ನೇರಿ ಮಾಸ್ತಿಯಾಗುವವಳು ಬರುತ್ತಿದ್ದಳು. ಆಗ ವೀರರು ಅವಳಿಂದ ಲಿಂಬೆ, ಮುಡಿಯ ಹೂ ಪಡೆಯುತ್ತಿದ್ದರು. ಆಮೇಲೆ ಗೌರಿವ್ರತ ಪೂರೈಸಿ, ಎಣ್ಣೆಯಲ್ಲಿ ಮುಖ ನೋಡಿ, ಕೊಂಡದ ಹತ್ತಿರ ಹಿಡಿದ ತೆರೆಗೆ ಎದುರಾಗಿ ಸತಿ ಕಲ್ಲ ಮೇಲೆ ನಿಲ್ಲುತ್ತಿದ್ದಳು. ಕಟ್ಟಿಗೆ ಕರ್ಪೂರಗಳಿಂದ ಬೆಂಕಿ ಉಜ್ವಲಗೊಳ್ಳುತ್ತಿದ್ದಂತೆ ಆಕೆ ಚಿತೆಯನ್ನು ಪ್ರವೇಶಿಸುವುದೇ ತಡ, ಆಗ ಜನ ಗೋಳಿಡುತ್ತಿದ್ದರೆಂದೂ ಜಯಘೋಷ ಮಾಡುತ್ತಿದ್ದರೆಂದೂ ಉಲ್ಲೇಖಗಳಿವೆ. ಉದಾಹರಣೆಗೆ: ದೇಕಬ್ಬೆಯ ಬೆಳತೂರು ಶಾಸನ. ಗಂಡನ ಶವದೊಂದಿಗೆ ಹೆಂಡತಿಯನ್ನು ಮಲಗಿಸುತ್ತಿದ್ದರೆಂಬ ಒಂದೆರಡು ಸೂಚನೆಗಳು ನಿಕೋಲೋಕೊಂಟೆ ಮೊದಲಾದವರ ವರದಿಯಲ್ಲಿ ಸಿಗುತ್ತದೆ.[೬೫]

ಹೀಗೆ ಮಡಿದವರ ಹೆಸರಿನಲ್ಲಿ ಸ್ಮಾರಕಗಳನ್ನು ಅವರ ಸಂಬಂಧಿಕರು ನಿರ್ಮಿಸುತ್ತಿದ್ದರು. ದೇಕಬ್ಬೆಯ ಮಾಸ್ತಿಯನ್ನು ಅವಳ ತಂದೆ ನಗುನಾಡ ಅಧಿಪತಿ ರವಿಗ, ಜಕ್ಕಬ್ಬೆಯ ಮಾಸ್ತಿಯನ್ನು ತಂಗಿ ಜಾಬೆ, ಬಮ್ಮಕನ ಮಾಸ್ತಿಯನ್ನು ಮಗ ಮಲ್ಲೆಯ, ಕಾಮಾಯಿಯ ಮಾಸ್ತಿಯನ್ನು ಯಾವ ಕೀರ್ತಿಗೊಂಡ ನಿರ್ಮಿಸಿದುದನ್ನು ನೋಡಬಹುದು.[೬೬]

ಮುಂದೆ ಬ್ರಿಟಿಷರ ಕಾಲದಲ್ಲಿಯೂ ಈ ಪದ್ದತಿ ಸಾಗಿ ಬಂದುದನ್ನು ಬಾರ್ಬೋಸ್ (೧೫೦೦), ನ್ಯೂನಿಝ್, ಸೀಜರ್ ಪ್ರೆಡರಿಕ್(೧೫೬೧), ಪಿಯಟ್ರಡಲ್ಲೇವಲ್ಲೆ(೧೬೨೩) ಮೊದಲಾದವರ ದಿನಚರಿಗಳು ತಿಳಿಸುತ್ತವೆ. ಈ ಕಾಲದಲ್ಲಿ ಸತಿ ಹೋಗುವುದನ್ನು ಸರಕಾರಕ್ಕೆ ತಿಳಿಸಿ ಅಪ್ಪಣೆ ಪಡೆಯುವುದು ತೀರ ಕಡ್ಡಾಯವಾಯಿತೆಂದು ತೋರುತ್ತದೆ. "ಸರಕಾರದಿಂದ ಅರಿಷಿಣ, ಕುಂಕುಮ, ಹಳದಿ ಸೀರೆ ಮುಂತಾದವುಗಳನ್ನು ಕಳುಹಿಸುತ್ತಿದ್ದದು ಮಾತ್ರವಲ್ಲದೆ ಬೆಂಕಿಗೆ ಹೆದರಿ ಓಡಿ ಬಂದ ಹೆಣ್ಣಿಂದ ದೇಶಕ್ಕೆ ಹಾನಿಯಾಗುತ್ತದೆಯೆಂದು ಸೂಕ್ತ ಏರ್ಪಡು ಮಾಡುತ್ತಿದ್ದರೂ. ಬ್ರಾಹ್ಮಣ ಸ್ತ್ರೀಗೆ ಸಹಗಮನ ನಿಷಿದ್ದವಿದ್ದರೂ ತಲಕಾಡಿನ ಬ್ರಾಹ್ಮಣತಿಯೊಬ್ಬಳು ಅಗ್ನಿಪ್ರವೇಶಕ್ಕೆ ಹಟಹಿಡಿದಾಗ ಆ ಬಗ್ಗೆ ಮೈಸೂರು ಸರಕಾರಕ್ಕೆ ಬರೆದ ಅರ್ಜಿ ಅದಕ್ಕೆ ನೀಡಿದ ಒಪ್ಪಿಗೆಗಳು ಎಮ್.ಎ.ಆರ್ ೧೯೩೮ರಲ್ಲಿ ಪ್ರಕಟವಾಗಿವೆ.[೬೭] ಕರ್ನಾಟಕದಲ್ಲಿ ವೀರಯುಗದೊಡನೆ (೯–೧೦ನೇ ಶತಮಾನ) ಪ್ರಬಲಗೊಂಡ ಸಹಗಮನ ಪದ್ಧತಿಯು ಹೊಯ್ಸಳ ವಿಜಯನಗರ ಸಾಮ್ರಾಜ್ಯಗಳ ಕಾಲದಲ್ಲಿ ತನ್ನ ತುದಿಯನ್ನು ಮುಟ್ಟಿತು.[೬೮]

ಪ್ರಸ್ತುತ ಗುಲಬರ್ಗಾ ಪರಿಸರಕ್ಕೆ ಸೀಮಿತವಾಗಿರಿಸಿ ನೋಡಿದಲ್ಲಿ, ಕ್ಷೇತ್ರಕಾರ್ಯ ಕೈಗೊಂಡಾಗ ಸುಮಾರು ಆರು ಮಾಸ್ತಿಗಲ್ಲುಗಳು ದೊರಕಿವೆ. ಇವುಗಳನ್ನು ಆಧಾರವಾಗಿಟ್ಟುಕೊಂಡು ಗುಲಬರ್ಗಾ ಪರಿಸರದಲ್ಲಿ ಮಹಾಸತಿ ಆಚರಣೆ ಇತ್ತು ಎಂದು ಕಟ್ಟಿಕೊಡಲು ಸಾಕ್ಷಿಯಾಗಿ ನಿಂತಿದೆ.

ಗ್ರಾಮ–ನಾಗನಳ್ಳಿ   ಸ್ಥಳ–ಕೊರಮ್ಮನ ದೇವಸ್ಥಾನ

ಕಾಲ–೧೫ನೇ ಶತಮಾನ   ವಸ್ತು–ಕಪ್ಪುಶಿಲೆ

ಪ್ರಕಟಣೆ–ಅಪ್ರಕಟಿತ

ಗುಲಬರ್ಗಾ ಪರಿಸರದ ನಾಗನಳ್ಳಿಯಲ್ಲಿ ಈ ಮಾಸ್ತಿಕಲ್ಲು ಇದೆ. ಇದು ನಾಗಲಿಂಗೇಶ್ವರ ದೇವಾಲಯ ಪಕ್ಕದಲ್ಲಿರುವ ಕೊರೆಮ್ಮನ ದೇವಸ್ಥಾನ ಬಲಭಾಗದಲ್ಲಿದೆ. ಮಹಿಳೆ ತನ್ನ ಕೈಯನ್ನು ತೋರಿಸಿದ್ದಾಳೆ. ಅದರ ಮೇಲೆ ಒಂದು ಅಗ್ನಿ ಕುಂಡಲದ ಚಿತ್ರಣವಿದೆ.

ಗ್ರಾಮ–ನಾಗನಳ್ಳಿ ಸ್ಥಳ–ಕೊರಮ್ಮನ ದೇವಸ್ಥಾನ

ಕಾಲ–೧೫ನೇ ಶತಮಾನ ವಸ್ತು–ಕಪ್ಪುಶಿಲೆ

ಪ್ರಕಟಣೆ–ಅಪ್ರಕಟಿತ

ಇದು ಕೊರೆಮ್ಮ ದೇವಾಲಯದ ಗರ್ಭಗುಡಿಯ ಮೂರ್ತಿಶಿಲ್ಪವಾಗಿದೆ. ಆ ಅಂಗೈ ಮೇಲೆ ಉರಿಯುತ್ತಿರುವ ಅಗ್ನಿಕುಂಡಲದ ಚಿತ್ರವಿದೆ. ಈ ದೇವಾಲಯವು ಪಶ್ಚಿಮಾಭಿಮುಖವಾಗಿದೆ. ಊರಿನ ಅಗಸೆ ಬಾಗಿಲಿನ ಒಳಗೆ ಬಲಭಾಗದಲ್ಲಿ ಈ ದೇವಾಲಯವಿದೆ. ದೇವಾಲಯದ ಹೊರಭಾಗದಲ್ಲಿ ಗರ್ಭಗೃಹದ ಹೊರಗಡೆ ಮೂರು ಹೂವಿನ ಚಿತ್ರವಿದೆ.

ಗ್ರಾಮ–ನಾಗನಳ್ಳಿ ಸ್ಥಳ–ನಾಗಲಿಂಗೇಶ್ವರ ದೇವಾಲಯ

ಕಾಲ–೧೫ನೇ ಶತಮಾನ ವಸ್ತು–ಕಪ್ಪು

ಪ್ರಕಟಣೆ–ಅಪ್ರಕಟಿತ

ಈ ದೇವಾಲಯವನ್ನು ಪ್ರವೇಶಿಸಿದ ನಂತರ ಗರ್ಭಗೃಹಕ್ಕೆ ಮುಖ ಮಾಡಿ ನಿಂತರೆ ಬಲಕ್ಕೆ ಕಂಡುಬರುವುದೇ ಒಕ್ಕೈ ಮಾಸ್ತಿಕಲ್ಲು. ಈ ಕಲ್ಲಿನ ಕೆಳಭಾಗದಲ್ಲಿ ಗಮನಿಸಿದಾಗ ಪತಿಯೊಂದಿಗೆ ಅವಳು ಚಿತೆಯ ಮೇಲೆ ಮಲಗಿರುವಂತಹ ದೃಶ್ಯವಿದೆ. ಇದರ ಮೇಲೆ ಸ್ತ್ರೀಯು ತನ್ನ ಬಲಗೈಯನ್ನು ತೋರಿಸಿರುವ ಚಿತ್ರವಿದೆ. ಆ ಕೈಗೆ ತೋಳ್ಬಂದಿ ಧರಿಸಿರುವುದರ ಬಗ್ಗೆ ಅಂಗೈ ಬಳಿಯಲ್ಲಿ ಮತ್ತೊಂದು ಕೈಬಂದಿಯನ್ನು ಹೊಂದಿರುವ ದೃಶ್ಯವಿದೆ. ಅವಳ ಅಂಗೈಯೊಂದಿಗೆ ಐದು ಬೆರಳುಗಳು ಸ್ಪಷ್ಟವಾಗಿ ಮೂಡಿರುವ ಚಿತ್ರಣವಿದೆ. ಕೈ ಚಿತ್ರದ ಮೇಲ್ಭಾಗದಲ್ಲಿ ಒಂದು ಶಿವಲಿಂಗ ಅದರ ಅಕ್ಕಪಕ್ಕದಲ್ಲಿ ದಂಪತಿಯರು ಕೈ ಮುಗಿದು ಆ ಲಿಂಗವನ್ನು ಪೂಜಿಸುತ್ತಿರುವ ಚಿತ್ರವಿದೆ. ಮೇಲ್ಭಾಗದಲ್ಲಿ ಸೂರ್ಯ ಚಂದ್ರರ ಚಿತ್ರವಿದೆ. ಈ ಎಲ್ಲ ಸನ್ನಿವೇಶಗಳನ್ನು ಒಂದೇ ಕಲ್ಲಿನಲ್ಲಿ ಬಿಡಿಸಲಾಗಿದೆ.

ಗ್ರಾಮ–ಹರಸೂರು ಸ್ಥಳ–ಬಸವಣ್ಣನ ಗುಡಿ

ಕಾಲ–೧೫ನೇ ಶತಮಾನ ವಸ್ತು–ಬಿಳಿಕಲ್ಲು

ಪ್ರಕಟಣೆ–ಅಪ್ರಕಟಿತ

ಹರಸೂರಿನ ಕರಿಬಸವೇಶ್ವರ ದೇವಾಲಯಕ್ಕೆ ಹೋಗುವ ದಾರಿಯ ಎಡಕ್ಕೆ ಈ ಬಸವಣ್ಣ ದೇವರ ದೇವಸ್ಥಾನವಿದೆ. ಈ ದೇವಸ್ಥಾನದ ಆವರಣದಲ್ಲಿ ಕಂಡುಬರುವುದೇ ಈ ಮಾಸ್ತಿಕಲ್ಲು. ಇದನ್ನು ದಕ್ಷಿಣಕ್ಕೆ ಮುಖ ಮಾಡಿ ನಿಲ್ಲಿಸಲಾಗಿದೆ. ಈ ಮಾಸ್ತಿಕಲ್ಲಿನ ಕೆಳಭಾಗದಲ್ಲಿ ಮಹಾಸತಿಯು

ಕುದುರೆಯ ಮೇಲೆ ಕುಳಿತು ಮಹಾಸತಿಯಾಗಲು ಚಿತೆಯ ಕಡೆ ಹೊರಟ ಸನ್ನಿವೇಶವಿದೆ. ಅದರ ಮೇಲೆ ಅವಳು ತನ್ನ ಬಲಗೈಯನ್ನು ತೋರಿಸಿದ ಚಿತ್ರವಿದೆ. ಈ ಕೈಗೆ ತೋಳ್ಬಂದಿ ಧರಿಸಿದಂತಿದೆ. ಸ್ತ್ರೀಯ ಅಂಗೈ ಸ್ಪಷ್ಟವಾಗಿ ಗೋಚರವಾಗಿದೆ. ಕೈಗೆ ಬಳೆಗಳನ್ನು ಧರಿಸಿದ್ದನ್ನು ಕಾಣುತ್ತೇವೆ. ಈ ಚಿತ್ರದಲ್ಲಿ ಮಾಸ್ತಿಕಲ್ಲಿನ ಕೊನೆಯ ಭಾಗದಲ್ಲಿ ಚಂದ್ರ, ಶಿವಲಿಂಗ ಮತ್ತು ಸೂರ್ಯನ ಚಿತ್ರಗಳನ್ನು ಕಾಣಬಹುದು.

ಗ್ರಾಮ–ಪಾಳಾ ಸ್ಥಳ–ಹನುಮಂತನ ಗುಡಿ

ಕಾಲ–೧೫ನೇ ಶತಮಾನ ವಸ್ತು–ಬಿಳಿಕಲ್ಲು

ಪ್ರಕಟಣೆ–ಅಪ್ರಕಟಿತ

ಈ ಮಾಸ್ತಿಕಲ್ಲು ಹನುಮಂತನ ಗುಡಿಯ ಪಕ್ಕದ ಪಂಪ್‌ಸೆಟ್‌ನ ಹತ್ತಿರವಿದೆ. ಈತೋಳ್ಬಂದಿ ಧರಿಸಿರುವುದು, ಬಳೆಗಳನ್ನು ಧರಿಸಿರುವುದು ಶಿಲ್ಪದಲ್ಲಿದೆ. ಕೈ ತೋರಿಸುವುದರ ಬಲಭಾಗಕ್ಕೆ ಮಹಾಸತಿಯು ಆನೆಯ ಮೇಲೆ ಕುಳಿತು ಹೋರಾಡಿ; ಮಡಿದು ಮಹಾಸತಿಯಾದ ಸ್ಮಾರಕವಾಗಿದೆ. ಅದರ ಮೇಲೆ ಚಂದ್ರ, ಶಿವಲಿಂಗ ಮತ್ತು ಸೂರ್ಯನ ಚಿತ್ರಗಳು ಇವೆ.

ಗ್ರಾಮ–ಪಾಳಾ ಸ್ಥಳ–ಹಜರತ್ ನಜಮುಲ್ಲಾ ಹುಸೇನಿ ದರ್ಗಾ

ಕಾಲ–೧೫ನೇ ಶತಮಾನ ವಸ್ತು–ಬಿಳಿಕಲ್ಲು

ಪ್ರಕಟಣೆ–ಅಪ್ರಕಟಿತ

ಪ್ರಸ್ತುತ ಅಧ್ಯಯನದಲ್ಲಿ ದೊರೆತ ಮಾಸ್ತಿಗಲ್ಲುಗಳಲ್ಲಿ ಇದು ಅತ್ಯಂತ ವಿಶಿಷ್ಟವಾದ ಮಾಸ್ತಿಗಲ್ಲಾಗಿದೆ. ಈ ಕಲ್ಲಿನ ಕೆಳಭಾಗದಲ್ಲಿ ಚಿತೆಯಲ್ಲಿ ಹಾರುತ್ತಿರುವ ಮಹಿಳೆಯ ದೃಶ್ಯವಿದೆ. ಅದರ ಪಕ್ಕದಲ್ಲೆ ಕುದುರೆಯ ಚಿತ್ರವು ಸಹ ಕಂಡುಬರುತ್ತದೆ. ಇದರ ಮೇಲೆ ಕೈ ತೋರಿಸಿರುವ ಚಿತ್ರವಿದೆ. ಈ ಕೈಗೆ ತೋಳ್ಬಂದಿ ಮತ್ತು ಬಳೆಗಳು ಧರಿಸಿರುವುದನ್ನು ಸಹ ಕಾಣುತ್ತೇವೆ. ಕೈ ಚಿತ್ರದ ಎದುರುಗಡೆ ಒಂದು ತಂಬಿಗೆಯ ಮೇಲೆ ತೆಂಗಿನಕಾಯಿ ಇದೆ. ಈ ಮಾಸ್ತಿಗಲ್ಲಿನ ಕೊನೆಯಲ್ಲಿ ದಂಪತಿಯರು ಕೈ ಜೋಡಿಸಿ ಶಿವಲಿಂಗವನ್ನು ಪ್ರಾರ್ಥಿಸುವಂತ ದೃಶ್ಯವಿದೆ. ತನ್ನ ಪತಿಯ ಮರಣದೊಂದಿಗೆ ಅವನ ಪತ್ನಿಯೂ ಮರಣ ಹೊಂದಿದರೆ ಅವರಿಬ್ಬರೂ ಸ್ವರ್ಗವನ್ನು ಪಡೆಯುತ್ತಾರೆ ಎಂಬ ನಂಬಿಕೆಯಿಂದ ಸ್ತ್ರೀಯು ತನ್ನ ಗಂಡನ ಚಿತೆಯಲ್ಲಿ ಹಾರಿ ಪ್ರಾಣಾರ್ಪಣೆ ಮಾಡುತ್ತಿದ್ದಳು. ಈ ಕಲ್ಲಿನ ಕೊನೆಯ ಘಟ್ಟದಲ್ಲಿ ಸೂರ್ಯ, ಚಂದ್ರರ ಕೆತ್ತನೆ ಇದೆ.

ಗ್ರಾಮ–ಗುಲಬರ್ಗಾ ಸ್ಥಳ–ಬಿದ್ದಾಪುರ ಕಾಲೋನಿ

ಕಾಲಮಾನ–೧೫ನೇ ಶತಮಾನ ವಸ್ತು–ಕಪ್ಪುಶಿಲೆ

ಪ್ರಕಟಣೆ–ಪ್ರಜಾವಾಣಿ ದಿನಪತ್ರಿಕೆ

ಈ ಮಹಾಸತಿಕಲ್ಲು ಗುಲಬರ್ಗಾದಿಂದ ಬಿದ್ದಾಪುರ ಕಾಲೋನಿಯಲ್ಲಿರುವ ಹನುಮಂತನ ಗುಡಿಯ ಪಕ್ಕದಲ್ಲಿ ಈ ಮಹಾಸತಿ ಕಲ್ಲನ್ನು ಗೋಡೆಗೆ ಹೊಂದಿಕೊಂಡಂತೆ ನಿಲ್ಲಿಸಲಾಗಿದೆ. ವೀರನಾರಿ ಮಹಾಸತಿಯಾದ ಸನ್ನಿವೇಶವನ್ನು ಈ ಚಿತ್ರ ತಿಳಿಸುತ್ತದೆ. ಈ ಕಲ್ಲಿನ ಕೊನೆಯ ಭಾಗದಲ್ಲಿ ಸೂರ್ಯ, ಚಂದ್ರ ಮತ್ತು ಶಿವಲಿಂಗದ ಚಿತ್ರಗಳು ಕಂಡುಬಂದಿವೆ.

ಅಡಿಟಿಪ್ಪಣಿಗಳು

೧. ಶೇಷಶಾಸ್ತ್ರಿ ಆರ್., ಕ.ವಿ. ಪುಟ-೬

೨. ಶಿವಾನಂದ ವಿ., ಹೈ.ಕ.ಭಾ.ಕ.ಶಿ. ಪುಟ-೨೬

೩. ಅದೇ, ಪುಟ-೫೮

೪. ಅದೇ, ಪುಟ-೧೭೭

೫. ಶಿವಾನಂದ ವಿ., ಪೂರ್ವೋಕ್ತ, ಪುಟ-೧೯೦

೬. ಅದೇ, ಪುಟ-೨೧೮

೭. ಅದೇ, ಪುಟ-೪೧

೮. ಹನುಮಾಕ್ಷಿಗೋಗಿ, ಕ.ಜಿ.ಶಾ. ಪುಟ-೯೧

೯. ಅದೇ, ಪುಟ-೧೦೩

೧೦. ಯಾಸಿನ್ ಖುದ್ದೊಸಿ ಎಂ. ಮತ್ತು ಸೀತಾರಾಮ ಜಾಗಿರದಾರ, ಕ.ಪ.ಅ.ಉ.ಶಾ. ಪುಟ-೧೬೦

೧೧. ಅದೇ, ಪುಟ-೧೬೦

೧೨. ಅದೇ, ಪುಟ-೧೬೧

೧೩. ಅದೇ, ಪುಟ-೧೬೨

೧೪. ಅದೇ, ಪುಟ-೧೬೩

೧೫. ಅದೇ, ಪುಟ-೧೬೩

೧೬. ಅದೇ, ಪುಟ-೧೫೫

೧೭. ಅದೇ, ಪುಟ-೧೫೬

೧೮. ಅದೇ, ಪುಟ-೧೬೪

೧೯. ಅದೇ, ಪುಟ-೧೬೫

೨೦. ಅದೇ, ಪುಟ-೧೬೬

೨೧. ಅದೇ, ಪುಟ-೧೬೭

೨೨. ಯಾಸಿನ್ ಖುದ್ದೊಸಿ ಎಂ. ಮತ್ತು ಸೀತಾರಾಮ ಜಾಗಿರದಾರ, ಕ.ರ.ಅ.ಮ.ಉ.ಖಿ. ಪು.೧೬೭

೨೩. ಅದೇ, ಪುಟ-೧೬೮

೨೪. ಅದೇ, ಪುಟ-೧೬೮

೨೫. ಅದೇ, ಪುಟ-೧೬೯

೨೬. ಅದೇ, ಪುಟ-೧೬೯

೨೭. ಅದೇ, ಪುಟ-೧೭೦

೨೮. ಅದೇ, ಪುಟ-೧೭೦

೨೯. ಅದೇ, ಪುಟ-೧೭೧

೩೦. ಅದೇ, ಪುಟ-೧೭೧

೩೧. ಅದೇ, ಪುಟ-೧೭೨

೩೨. ಅದೇ, ಪುಟ-೧೭೩

೩೩. ಶಿವಾನಂದ ವಿ., ಪೂರ್ವೋಕ್ತ ಪುಟ-೨೬೨

೩೪. ಯಾಸಿನ್ ಖುದ್ದೊಸಿ ಎಂ. ಮತ್ತು ಸೀತಾರಾಮ ಜಾಗಿರದಾರ, ಪೂರ್ವೋಕ್ತ, ಪು.೧೭೩

೩೫. ಅದೇ, ಪುಟ-೧೭೪

೩೬. ಅದೇ, ಪುಟ-೧೭೫

೩೭. ಅದೇ, ಪುಟ-೧೭೫

೩೮. ಅದೇ, ಪುಟ-೧೭೬

೩೯. ಅದೇ, ಪುಟ-೧೭೭

೪೦. ಅದೇ, ಪುಟ-೧೭೭

೪೧. ಅದೇ, ಪುಟ-೧೭೮

೪೨. ಅದೇ, ಪುಟ-೧೭೯

೪೩. ಅದೇ, ಪುಟ-೧೭೯

೪೪. ಅದೇ, ಪುಟ-೧೮೦

೪೫. ಅದೇ, ಪುಟ-೧೮೧

೪೬. ಅದೇ, ಪುಟ-೧೮೧

೪೭. ಅದೇ, ಪುಟ-೧೮೧

೪೮. ಅದೇ, ಪುಟ-೧೮೨

೪೯. ಅದೇ, ಪುಟ-೧೮೩

೫೦. ಅದೇ, ಪುಟ-೧೮೩

೫೧. ಅದೇ, ಪುಟ-೧೮೪

೫೨. ಅದೇ, ಪುಟ-೧೮೪

೫೩. ಅದೇ, ಪುಟ-೧೮೫

೫೪. ಶೇಷಶಾಸ್ತ್ರಿ ಆರ್., ಪೂರ್ವೋಕ್ತ, ಪುಟ-೨೫

೫೫. ಅದೇ., ಪುಟ-೩೪

೫೬. ಗೋಪಾಲ್ ಆರ್., ಗು.ಜಿ.ಇ. ಮತ್ತು ಪು. ಪುಟ-೩೧

೫೭. ಶೇಷಶಾಸ್ತ್ರಿ, ಪೂರ್ವೋಕ್ತ, ಪುಟ-೪೩

೫೮. ಅದೇ, ಪುಟ-೯೨

೫೯. ಕಲಬುರ್ಗಿ ಎಂ.ಎಂ. ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು, ಪುಟ-೭೧

೬೦. ಅದೇ, ಪುಟ-೨೭

೬೧. ಬಸವರಾಧ್ಯ. ಎನ್(ಸಂ); ಕನ್ನಡ ನಿಘಂಟು, ಸಂಪುಟ ೭ ಪುಟ-೭೧

೬೨. ಬಸವರಾಜ ಕಲ್ಗುಡಿ, ಮಹಾಸತಿ ಆಚರಣೆ : ಒಂದು ಅಧ್ಯಯನ, ಪುಟ-೩

೬೩. ಭಗವತಿ ಎಸ್.ಎಸ್. ಮತ್ತು ಮೇಲಿನಮನಿ ಎಚ್.ಎಸ್, ಕ.ಶಾ.ಅಧ್ಯಯನ, ಪುಟ-೧೩೪

೬೪. ಎ.ಕ.-VIII ಸೊರಬ ಪುಟ–೫೨೩ ಕವಡಿ ಕ್ರಿ.ಶ.೬ನೆಯ ಶತಮಾನ

೬೫. ಭಗವತಿ ಎಸ್.ಎಸ್. ಮತ್ತು ಮೇಲಿನಮನಿ ಎಚ್‌ಎಸ್. ಪೂರ್ವೋಕ್ತ, ಪುಟ-೧೩೫

೬೬. ನಾಗೇಗೌಡ H.L. ಪ್ರವಾಸಿ ಕಂಡ ಇಂಡಿಯಾ ಸಂಪುಟ ೨, ಪುಟ-೧೨೫

೬೭. ಭಗವತಿ ಎಸ್.ಎಸ್. ಮತ್ತು ಮೇಲಿನಮನಿ ಎಚ್.ಎಸ್. ಪೂರ್ವೋಕ್ತ, ಪುಟ-೧೩೬

೬೮. ಕಲಬುರ್ಗಿ ಎಂ.ಎಂ., ಪೂರ್ವೋಕ್ತ, ಪುಟ-೩೭

೬೯. ಚಿದಾನಂದ ಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ-೩೫೧

♦ ♦ ♦

ಅಧ್ಯಾಯ ೪

ಸ್ಮಾರಕಗಳು

ಅಧ್ಯಾಯ ೪

ಸ್ಮಾರಕಗಳು

೧.೧ ಪೀಠಿಕೆ :

ಭಾರತದಲ್ಲಿನ ಪ್ರತಿ ಹಳ್ಳಿ ಹಳ್ಳಿಯಲ್ಲೂ ಬೆಟ್ಟ, ಊರ ಸಾರ್ವಜನಿಕ ಸ್ಥಳದಲ್ಲಿ ಒಂದು ಕಡೆ ದೇವಾಲಯಗಳು ಮತ್ತು ಸ್ಮಾರಕಗಳು ಕಾಣಬರುತ್ತವೆ. ಆ ದೇವಸ್ಥಾನದಲ್ಲಿರುವ ದೇವತೆ ಗ್ರಾಮದೇವತೆಯಾಗಿರಬಹುದು, ಗ್ರಾಮದ ಒಂದು ಪಂಗಡದ ಅಧಿದೇವತೆಯಾಗಿರಬಹುದು. ಆ ದೇವಸ್ಥಾನವನ್ನು ಕಟ್ಟಿಸಿ ಪೋಷಿಸಿದವನು ಇಷ್ಟದೇವತೆಯಾಗಿರಬಹುದು. ದೇವತೆ ಯಾವುದಾದರೂ ಅದರ ಆರಾಧನೆಯ ಉದ್ದೇಶ, ಹಿನ್ನೆಲೆ ಎಲ್ಲರಿಗೂ ಒಂದೇ. ಈ ಕಾರಣದಿಂದಲೇ ರಾಜರ, ಅಧಿಕಾರಿಗಳ ಆಶ್ರಯದೊಂದಿಗೆ ಗ್ರಾಮದ ಜನರ ಪೋಷಣೆಯಲ್ಲಿ ದೇವಸ್ಥಾನಗಳು ಬೆಳೆದು ಬಂದಿವೆ.[೧]

ಗರ್ಭಗೇಹಂ ಶಿರ:ಪ್ರೋಕ್ತೋ ಶಿಖಾ ಶಿಖರಮುಚ್ಯತೇ
ನಾಸಿಕಾ ಶುಕನಾಸೀ ಸ್ಯಾತ್ ಅಂತರಲಾಂಗುಲಂ ಸ್ಮೃತಂ
ಮಂಟಪಂ ದೇಹಮಿತ್ಯುಕ್ತಂ ಪ್ರಕಾರ: ಕರ ಉಚ್ಯತೇ
ಗೋಪುರಂ ಪಾದ ಇತ್ಯುಕ್ತಂ ದೇವಸ್ಥಾನ ಪ್ರಕಥ್ಯತೇ[೨]

ಪ್ರಸ್ತುತ ಗುಲಬರ್ಗಾ ಪರಿಸರದ ಸ್ಮಾರಕಗಳ ಪ್ರಸ್ತಾವನೆ ಇಲ್ಲಿ ಮಾಡಲಾಗಿದೆ.

೪.೨. ಶೈವ ದೇವಾಲಯಗಳು :

ಶೈವಾರಾಧನೆ ಭಾರತದ ಪ್ರಾಚೀನ ಆರಾಧನೆಗಳಲ್ಲೊಂದಾಗಿದ್ದು ಸಿಂಧೂ ನಾಗರೀಕತೆ ಮತ್ತು ವೈದಿಕ ಯುಗಗಳಲ್ಲಿಯೇ ಈ ಕುರಿತು ಕುರುಹುಗಳು ಲಭ್ಯವಾಗಿವೆ. ತರುವಾಯದಲ್ಲಿ ಇದು ಹಲವು ಪಂಥಗಳಾಗಿ ಬೆಳೆದು ಭಾರತದಾದ್ಯಂತ ಹರಡಿತು. ಪ್ರಸ್ತುತ ಗುಲಬರ್ಗಾ

ಪರಿಸರದಲ್ಲಿ ಶೈವದೇವಾಲಯಗಳು ಬಹಳಷ್ಟಿದ್ದು ಅವುಗಳನ್ನು ಒಂದೆಡೆ ಸೆರೆಹಿಡಿದು ಅವುಗಳ ಬಗ್ಗೆ ಮಾಹಿತಿ ಕೊಡುವ ಪ್ರಯತ್ನ ಇದಾಗಿದೆ.

ಗ್ರಾಮ–ಫಿರೋಜಬಾದ	ಸ್ಥಳ–ಸರಕಾರಿ ಶಾಲೆಯ ಎದುರಿಗೆ
ಸ್ಮಾರಕ–ಈಶ್ವರ ದೇವಾಲಯ	ಕಾಲ–ಆಧುನಿಕ
ಧರ್ಮ–ಶೈವ	ಪ್ರಕಟಣೆ–ಅಪ್ರಕಟಿತ

ಈ ದೇವಾಲಯವು ಫಿರೋಜಾಬಾದ ಗ್ರಾಮದ ಮಧ್ಯದಲ್ಲಿದೆ. ಇದು ಪೂರ್ವಾಭಿಮುಖ ವಾಗಿದ್ದು ಗರ್ಭಗೃಹದಲ್ಲಿ ಎರಡು ಶಿವಲಿಂಗಗಳಿರುವುದನ್ನು ಕಾಣುತ್ತೇವೆ. ಇವುಗಳ ಹಿಂದೆ ಗಣೇಶನ ಮೂರ್ತಿಯಿದೆ. ಗರ್ಭಗೃಹದಲ್ಲಿರುವ ಎರಡು ಶಿವಲಿಂಗಗಳಲ್ಲಿ ಒಂದು ದೊಡ್ಡದ್ದು ಮತ್ತೊಂದು ಚಿಕ್ಕದಾಗಿವೆ. ಈ ದೇವಾಲಯ ಹೊರಭಿತ್ತಿಯ ಮೇಲೆ ಮಂಟಪದಲ್ಲಿ ಶಿವಲಿಂಗವಿದೆ. ಇದರ ಬಲ ಎಡಕ್ಕೆ ನಂದಿ ಶಿಲ್ಪಗಳಿವೆ. ಒಂದು ಶಾಸನ ಶಿಲ್ಪವಿದೆ. ಇದು ಈ ದೇವಾಲಯದ ಎಡಕ್ಕೆ ಇದೆ. ಬಲಕ್ಕೆ ಕೂಡ ಭಿತ್ತಿಯ ಮೇಲೆ ವಾದ್ಯಮೇಳಗಳ ಶಿಲ್ಪವಿದೆ. ಈ ದೇವಾಲಯ ಮೂಲತಃವಾಗಿ ಪ್ರಾಚೀನವಾಗಿದೆ. ಆದರೆ ಈಗ ಇದು ಆಧುನಿಕ ಸ್ವರೂಪವನ್ನು ಪಡೆದುಕೊಂಡಿದೆ. ಈ ದೇವಾಲಯದ ಎದುರಿಗೆ ಒಂದೇ ಕಲ್ಲಿನಲ್ಲಿ ಬರೆದ ಶಾಸನವಿದೆ.

ಗ್ರಾಮ–ಫಿರೋಜಾಬಾದ	ಸ್ಥಳ–ಕೋಟೆಗೆ ಹೋಗುವ ದಾರಿಯಲ್ಲಿ
ಸ್ಮಾರಕ:ಸೊಪ್ಪಿ ಬಸವೇಶ್ವರ ದೇವಾಲಯ	ಕಾಲ–ಆಧುನಿಕ
ಧರ್ಮ–ಶೈವ	ಪ್ರಕಟಣೆ–ಅಪ್ರಕಟಿತ

ಈ ದೇವಾಲಯ ಪೂರ್ವಭಿಮುಖವಾಗಿದ್ದು ಕೋಟೆಗೆ ಹೋಗುವ ದಾರಿಯ ಬಲಭಾಗಕ್ಕಿದೆ. ಇದು ಸಂಪೂರ್ಣವಾಗಿ ಆಧುನಿಕ ಶೈಲಿಯಲ್ಲಿದೆ. ಗರ್ಭಗೃಹದಲ್ಲಿ ಸೊಪ್ಪಿಬಸವೇಶ್ವರ ದೇವರ ಮೂರ್ತಿ ಇದೆ. ಈ ಮೂರ್ತಿಯ ಮೇಲೆ ಪಂಚಲೋಹದ ಐದು ಹೆಡೆಯ ಹಾವು ಹೆಡೆ ತೆಗೆದುಕೊಂಡು ನಿಂತಂತಿದೆ. ಪ್ರದಕ್ಷಿಣ ಪಥ, ಸಭಾಮಂಟಪವಿದೆ. ಈ ದೇವಸ್ಥಾನದ ಭಿತ್ತಿಯ ಮೇಲೆ ಆನೆಗಳು ಒಂದೇ ಸಾಲಿನಲ್ಲಿವೆ.

ಗ್ರಾಮ–ಫಿರೋಜಾಬಾದ	ಸ್ಥಳ–ಕೋಟೆಗೆ ಹೋಗುವ ದಾರಿಯಲ್ಲಿ
ಸ್ಮಾರಕ–ಗಣೇಶ ದೇವಾಲಯ	ಕಾಲ–ಆಧುನಿಕ
ಧರ್ಮ–ಶೈವ	ಪ್ರಕಟಣೆ–ಅಪ್ರಕಟಿತ

ಫಿರೋಜಾಬಾದ ಕೋಟೆಗೆ ಹೋಗುವ ಬಲಭಾಗದಲ್ಲಿದೆ. ಪೂರ್ವಭಿಮುಖವಾಗಿರುವ ಈ ದೇವಾಲಯದ ಗರ್ಭಗೃಹದಲ್ಲಿ ಗಣೇಶನ ಮೂರ್ತಿ ಇದೆ. ದೇವಾಲಯದ ಎದುರು ಪುಷ್ಕರಣಿಯಿದೆ. ದೇವಾಲಯದ ಆವರಣದಲ್ಲಿ ಭಗ್ನವಾದ ಮೂರ್ತಿಗಳು ಕಂಡುಬರುತ್ತವೆ.

ನಗರ–ಗುಲಬರ್ಗಾ ಸ್ಥಳ–ಗುಲಬರ್ಗಾ ನಗರದ ಕೇಂದ್ರದಲ್ಲಿ

ಸ್ಮಾರಕ–ಶರಣಬಸವೇಶ್ವರ ದೇವಸ್ಥಾನ ಕಾಲ–ಆಧುನಿಕ

ಧರ್ಮ–ಶೈವ ಪ್ರಕಟಣೆ–ಅಪ್ರಕಟಿತ

ಗುಲಬರ್ಗಾ ನಗರದ ಬ್ರಹ್ಮಪೂರದಲ್ಲಿ ಈ ದೇವಾಲಯವಿದೆ. ಇದು ಗುಲಬರ್ಗಾದ ಕೇಂದ್ರಸ್ಥಾನ. ದೇವಾಲಯವು ಪೂರ್ವಭಿಮುಖವಾಗಿದೆ. ಗರ್ಭಗೃಹದ ಲಲಾಟವು ಎರಡು ಪಟ್ಟಿಕೆಯಿಂದ ಕೂಡಿದೆ. ಮೊದಲನೆ ಲಲಾಟ ಪಟ್ಟಿಕೆಯ ಮಧ್ಯದಲ್ಲಿ ಗಣೇಶನ ಉಬ್ಬು ಶಿಲ್ಪವಿದೆ. ನಂತರ ಎರಡನೆಯ ಲಲಾಟ ಪಟ್ಟಿಕೆಯ ಮಧ್ಯದಲ್ಲಿ ಶಿವಲಿಂಗವಿದೆ. ಇದಕ್ಕೆ ಹೊಂದಿಕೊಂಡಂತೆ ಇದರ ಮೇಲೆ ಶರಣಬಸವೇಶ್ವರ ಮೂರ್ತಿಯ ಉಬ್ಬು ಶಿಲ್ಪವಿದೆ. ಅಂತರಾಳದ ಬಾಗಿಲು ಪಂಚಲೋಹದಿಂದ ಕೂಡಿದೆ. ನಂತರ ಸಭಾಮಂಟಪವಿದೆ. ಇದರ ಜೊತೆಗೆ ಪ್ರದಕ್ಷಿಣಾಪಥವು ಇದೆ. ಈ ಸಭಾಮಂಟಪದಲ್ಲಿ ಗರ್ಭಗುಡಿಗೆ ಅಭಿಮುಖವಾಗಿ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ಗಿಳಿ, ಗರುಡ ಮತ್ತಿತರ ಪಕ್ಷಿಗಳ ಚಿತ್ರವನ್ನು ಭಿತ್ತಿಯ ಮೇಲೆ ಚಿತ್ರಿಸಲಾಗಿದೆ. ಈ ದೇವಾಲಯಕ್ಕೆ ಪ್ರವೇಶಿಸಲು ಮೂರುಕಡೆ ಮೆಟ್ಟಿಲುಗಳ ವ್ಯವಸ್ಥೆಯಿದೆ. ಈ ದೇವಸ್ಥಾನದ ಎದುರಿಗೆ ದೀಪಸ್ತಂಭಗಳಿವೆ. ಈ ದೇವಾಲಯದ ಗೋಪುರ ದ್ರಾವಿಡ ಶೈಲಿಯಲ್ಲಿದ್ದು ಇದರ ನಾಲ್ಕು ದಿಕ್ಕಿಗೆ ಆನೆಗಳ ಸ್ತಂಭವಿರುವುದನ್ನು ಕಾಣುತ್ತೇವೆ. ಸ್ತೂಪಿಯು ಪಂಚಲೋಹದಿಂದ ಕೂಡಿದೆ. ಈ ದೇವಾಲಯದ ಹಿಂದುಗಡೆ ದಾಸೋಹ ಮಹಾಮನೆ ಇದೆ. ಇದರ ಬಲ ಮತ್ತು ಎಡಕ್ಕೆ ಅಲಂಕೃತಗೊಂಡ ಆನೆಗಳ ಮೂರ್ತಿಗಳಿವೆ. ದಾಸೋಹ ಮಹಾಮನೆಯ ಎಡಭಾಗದಲ್ಲಿ ಅನುಭವ ಮಂಟಪವಿದೆ.[೩]

ನಗರ–ಗುಲಬರ್ಗಾ ಸ್ಥಳ–ಚೆಕ್ ಪೋಸ್ಟ ಹಿಂದುಗಡೆ

ಸ್ಮಾರಕ–ರಾಮತೀರ್ಥ ಕಾಲ–ಆಧುನಿಕ

ಧರ್ಮ–ಶೈವ ದಿಕ್ಕು–ಪೂರ್ವ

ಪ್ರಕಟಣೆ–ಅಪ್ರಕಟಿತ

ಪೂರ್ವಾಭಿಮುಖವಾಗಿ ಈ ದೇವಾಲಯ ನಿರ್ಮಿಸಲಾಗಿದೆ. ಗರ್ಭಗೃಹದಲ್ಲಿ ಶಿವಲಿಂಗವಿದೆ. ಇದರ ತಲೆಯ ಮೇಲೆ ಒಂದು ಹೆಡೆಯ ಪಂಚಲೋಹದ ನಾಗರ

ವಿಗ್ರಹವಿದೆ. ಇದರ ಹಿಂದುಗಡೆ ಐದು ಹೆಡೆಯ ಪಂಚಲೋಹದ ನಾಗ ಹೆಡೆಯ ವಿಗ್ರಹವಿದೆ. ಇದರ ಹಿಂದುಗಡೆ ಶಿವನ ಮೂರ್ತಿ ಇದೆ. ಗರ್ಭಗೃಹದ ಎಡಭಾಗದಲ್ಲಿ ಗಣೇಶನ ಮೂರ್ತಿ ಇದೆ. ಲಿಂಗದ ಎದುರು ನಂದಿಯ ಮೂರ್ತಿಶಿಲ್ಪವಿದೆ. ಗೋಪುರವು ದ್ರಾವಿಡ ಶೈಲಿಯಲ್ಲಿದೆ. ಈ ದೇವಾಲಯದ ಎಡಭಾಗದಲ್ಲಿ ಪುಷ್ಕರಣಿ ಇದೆ.[೪]

ಗ್ರಾಮ–ಹರಸೂರು	ಸ್ಥಳ–ಗ್ರಾಮದ ಕೊನೆಯಲ್ಲಿ
ಸ್ಮಾರಕ–ಕರಿಬಸವೇಶ್ವರ ದೇವಸ್ಥಾನ	ಕಾಲ–ಆಧುನಿಕ
ಧರ್ಮ–ಶೈವ	ದಿಕ್ಕು–ಪೂರ್ವ
ಪ್ರಕಟಣೆ–ಅಪ್ರಕಟಿತ	

ಈ ದೇವಾಲಯವು ಪೂರ್ವಭಿಮುಖವಾಗಿದೆ. ಈ ದೇವಾಲಯದ ಗರ್ಭಗೃಹದಲ್ಲಿ ಶಿವಲಿಂಗದ ಅಧಿಷ್ಠಾನವಿದೆ. ಗರ್ಭಗೃಹದ ಬಾಗಿಲ ಲಲಾಟದ ಮಧ್ಯದಲ್ಲಿ ಒಂದು ಸಣ್ಣ ಶಿವಲಿಂಗದ ಉಬ್ಬು ಶಿಲ್ಪವಿದೆ. ಇದರಿಂದ ಮೇಲೆ ಎಡಕ್ಕೆ ಮತ್ತು ಬಲಕ್ಕೆ ಕಲ್ಲಿನ ಕುದುರೆಯ ಮುಖಗಳಿವೆ. ಗರ್ಭಗೃಹಕ್ಕೆ ಮುಖಮಾಡಿ ನಂದಿ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಈ ದೇವಾಲಯವು ಇಂಡೋ–ಇಸ್ಲಾಮಿಕ್ ಶೈಲಿಯಲ್ಲಿದೆ. ಆದರೆ ಇದು ಹಿಂದು ದೇವಾಲಯ ಗರ್ಭಗೃಹಕ್ಕೆ ಹೊಂದಿಕೊಂಡಂತೆ ಇದ್ದು ಅದರ ಮೇಲ್ಭಾಗ ಮುಸ್ಲಿಂರ ಮಜೀದಕಾರ ಗೋಳಾಕಾರವಾಗಿದೆ. ಸ್ತೂಪಿಯನ್ನು ಆ ಗೋಳಾಕಾರದ ಗುಮ್ಮಟದ ಮೇಲಿದೆ. ಈ ದೇವಾಲಯದ ಎದುರಿಗೆ ಎಡಕ್ಕೆ ಮತ್ತು ಬಲಕ್ಕೆ ದೀಪ ಸ್ತಂಭಗಳಿವೆ. ದೇವಾಲಯದ ಆವರಣದಲ್ಲಿ ನಾಗರಶಿಲ್ಪಗಳು ಕಂಡುಬರುತ್ತವೆ.[೫]

ಗ್ರಾಮ–ಹರಸೂರು	ಸ್ಥಳ–ಗ್ರಾಮದ ಕೊನೆಯಲ್ಲಿ
ಸ್ಮಾರಕ–ಬೋರಲಿಂಗೇಶ್ವರ ದೇವಾಲಯ	ಕಾಲ–ಆಧುನಿಕ
ಧರ್ಮ–ಶೈವ	ದಿಕ್ಕು–ಪೂರ್ವ
ಪ್ರಕಟಣೆ–ಅಪ್ರಕಟಿತ	

ಈ ಗ್ರಾಮದ ಕರಿಬಸವೇಶ್ವರ ದೇವಾಲಯದ ಪಕ್ಕದಲ್ಲಿಯೆ ಈ ದೇವಾಲಯವಿದೆ. ಈ ದೇವಾಲಯದ ಒಳಭಾಗದ ಗರ್ಭಗೃಹದಲ್ಲಿ ಪೀಠದ ಮೇಲೆ ಶಿವಲಿಂಗ ಪ್ರತಿಷ್ಠಾಪಿಸಲಾಗಿದೆ. ತೆರೆದ ಅಂತರಾಳ, ಸಭಾಮಂಟಪವಿದೆ. ಇಲ್ಲಿ ಎಡಭಾಗದಲ್ಲಿ ಕಲ್ಯಾಣ ಚಾಲುಕ್ಯರ ಕಾಲದ ಶಾಸನವಿದೆ. ಇದಕ್ಕೆ ಹೊಂದಿಕೊಂಡು ಇದರ ಎದುರಿಗೆ ಬ್ರಹ್ಮ, ವಿಷ್ಣು, ಮಹೇಶ್ವರರ

ಮೂರು ಮುಖವುಳ್ಳ ಬ್ರಹ್ಮನ ಮೂರ್ತಿ ಶಿಲ್ಪವಿದೆ. ಈ ಶಾಸನದ ಎಡಕ್ಕೆ ಸಪ್ತಮಾತೃಕೆಯರ ಮೂರ್ತಿ ಶಿಲ್ಪವಿದೆ. ದೇವಾಲಯದ ಎದುರಿಗೆ ನಂದಿಯ ಮೂರ್ತಿ ಇದೆ. ಇದರ ಮುಂದೆ ಸಣ್ಣದೊಂದು ಶಿವಲಿಂಗವಿದೆ. ದೇವಾಲಯ ಎಡಭಾಗದಲ್ಲಿ ಭಗ್ನಗೊಂಡ ವೀರಗಲ್ಲು, ವಿಷ್ಣು, ಉಮಾಮಹೇಶ್ವರ ದೇವಾಲಯ, ಭ್ರಮಾರಾಂಭಿಕಾದೇವಿ, ಗುಂಪಾ(ಶರಣಪ್ಪ ಮುತ್ಯ) ಶಿವಲಿಂಗೇಶ್ವರ ದೇವಾಲಯಗಳಿವೆ.[೬]

ಗ್ರಾಮ–ಹಿರಾಪುರ
ಸ್ಥಳ–ಗ್ರಾಮದ ಮಧ್ಯದಲ್ಲಿದೆ.
ಸ್ಮಾರಕ–ನಗರೇಶ್ವರ ದೇವಸ್ಥಾನ
ಕಾಲ–೧೬ನೇ ಶತಮಾನ
ಧರ್ಮ–ಶೈವ
ದಿಕ್ಕು–ಪೂರ್ವ
ಪ್ರಕಟಣೆ–ಅಪ್ರಕಟಿತ

ಹಿರಾಪುರ ಗ್ರಾಮದ ಮಧ್ಯಭಾಗದಲ್ಲಿದೆ. ಗರ್ಭಗೃಹದಲ್ಲಿ ಪಂಚಲೋಹದ ಶಿವನ ಮೂರ್ತಿ ಇದೆ. ಈ ಗರ್ಭಗೃಹದ ಪಕ್ಕದಲ್ಲಿ ಮಾಡದಲ್ಲಿ ಒಂದು ವೀರಗಲ್ಲು ಎರಡು ನಾಗಶಿಲ್ಪಗಳಿವೆ. ಇದರ ಪಕ್ಕದಲ್ಲಿ ಮತ್ತೊಂದು ಗರ್ಭಗೃಹದಲ್ಲಿ ಗಣಪತಿಯ ಮೂರ್ತಿ ಇದೆ. ಈ ದೇವಾಲಯದ ಮುಖ್ಯದ್ವಾರದ ಎಡಬಲಕ್ಕೆ ಆನೆಗಳ ಮೂರ್ತಿಶಿಲ್ಪಗಳಿವೆ.

ಗ್ರಾಮ–ಹಿರಾಪುರ
ಸ್ಥಳ–ಗ್ರಾಮದಿಂದ ಸ್ವಲ್ಪ ದೂರ
ಸ್ಮಾರಕ–ಶಂಕರಲಿಂಗೇಶ್ವರ ದೇವಸ್ಥಾನ
ಕಾಲ–೧೬ನೇ ಶತಮಾನ
ಧರ್ಮ–ಶೈವ
ದಿಕ್ಕು–ಪೂರ್ವ
ಪ್ರಕಟಣೆ–ಅಪ್ರಕಟಿತ

ಈ ದೇವಾಲಯದ ಗರ್ಭಗೃಹದಲ್ಲಿ ಶಿವಲಿಂಗವಿದೆ. ನಂತರ ತೆರೆದ ಅಂತರಾಳವಿದೆ. ಈಗ ದೇವಾಲಯವು ಸಂಪೂರ್ಣ ಜೀರ್ಣೋದ್ಧಾರವಾಗಿದೆ. ಶಿಖರದಲ್ಲಿ ಶಿವಪಾರ್ವತಿಯರ ಮೂರ್ತಿಶಿಲ್ಪಗಳಿವೆ. ಇದರ ಎದುರಿಗೆ ದೊಡ್ಡದಾದ ಬಾವಿ ಇದ್ದು, ಇಲ್ಲಿ ಸಂಸ್ಕೃತ ಶಾಸನ ದೊರಕಿದೆ.

ಗ್ರಾಮ–ಸೈಯದ ಚಿಂಚೋಳಿ
ಸ್ಥಳ–ಗ್ರಾಮದ ಮಧ್ಯದಲ್ಲಿದೆ.
ಸ್ಮಾರಕ–ಸಂಗಮೇಶ್ವರ ದೇವಸ್ಥಾನ
ಕಾಲ–ಆಧುನಿಕ
ಧರ್ಮ–ಶೈವ
ದಿಕ್ಕು–ಪೂರ್ವ
ಪ್ರಕಟಣೆ–ಅಪ್ರಕಟಿತ

ಈ ದೇವಾಲಯದ ಗರ್ಭಗೃಹದಲ್ಲಿ ಪೀಠದ ಮೇಲೆ ಸಂಗಮೇಶ್ವರ ದೇವರ ಕಂಚಿನ ವಿಗ್ರಹ ಇದೆ. ಈ ಮೂರ್ತಿಯ ಕೊರಳಲ್ಲಿ ರುದ್ರಾಕ್ಷಿ ಇದೆ. ಹಣೆಯ ಮೇಲೆ ವಿಭೂತಿ ತಿಲಕ ತಲೆಯ ಮೇಲೆ ಐದು ಹೆಡೆಯ ಸರ್ಪ ಹೆಡೆ ಎತ್ತಿ ನಿಂತಿದೆ. ಗರ್ಭಗೃಹದ ಮುಂದೆ ಸಭಾಮಂಟಪವಿದೆ. ಇಲ್ಲಿಯ ಗರ್ಭಗೃಹಕ್ಕೆ ಮುಖಮಾಡಿ ನಂದಿಯ ಮೂರ್ತಿ ಇದೆ. ಈ ದೇವಾಲಯ ಎಡಕ್ಕೆ ಶಾಕ್ತ ಮೂರ್ತಿಶಿಲ್ಪ, ವೀರಗಲ್ಲು ಭಗ್ನ ಅವಸ್ಥೆಯಲ್ಲಿದೆ.[೭]

ಗ್ರಾಮ–ಸೈಯದ ಚಿಂಚೊಳಿ	ಸ್ಥಳ–ಗ್ರಾಮದ ಮಧ್ಯ
ಸ್ಮಾರಕ–ಮಲ್ಲಿಕಾರ್ಜುನ ದೇವಾಲಯ	ಕಾಲ–ಆಧುನಿಕ
ಧರ್ಮ–ಶೈವ	ದಿಕ್ಕು–ಪೂರ್ವ

ದೇವಾಲಯದ ಗರ್ಭಗೃಹದಲ್ಲಿ ಪೀಠದಲ್ಲಿ ಶಿವಲಿಂಗವಿದೆ. ಇದರ ಎದುರಿಗೆ ಸಭಾಮಂಟಪದಲ್ಲಿ ನಂದಿಯ ಮೂರ್ತಿ ಇದೆ. ಈ ದೇವಾಲಯದ ಬಲಭಾಗದಲ್ಲಿ ಒಂದು ಮೂರ್ತಿಶಿಲ್ಪ ಮತ್ತು ವೀರಗಲ್ಲು ದೊರಕಿದೆ.[೮]

ಗ್ರಾಮ–ಶ್ರೀನಿವಾಸ ಸರಡಗಿ	ಸ್ಥಳ–ಗ್ರಾಮದ ಮಧ್ಯ
ಸ್ಮಾರಕ–ರೇವಣಸಿದ್ದೇಶ್ವರ	ಕಾಲ–ಆಧುನಿಕ
ಧರ್ಮ–ಶೈವ	ದಿಕ್ಕು–ಪೂರ್ವ

ದೇವಾಲಯದ ಗರ್ಭಗೃಹದ ಪೀಠದಲ್ಲಿ ರೇವಣಸಿದ್ದೇಶ್ವರರ ಒಂದೇ ತರದ ಕಂಚಿನ ಎರಡು ವಿಗ್ರಹಗಳಿವೆ. ಕೊರಳಲ್ಲಿ ರುದ್ರಾಕ್ಷಿ ತಲೆಯ ಮೇಲೆ ಐದು ಹೆಡೆಯ ಸರ್ಪದ ಜೊತೆಗೆ ಮೂರ್ತಿಯ ಎದುರಿಗೆ ಪಾದುಕೆಗಳು ಇವೆ. ಇದರ ಎದುರಿಗೆ ಸಭಾಮಂಟಪ ಇದೆ. ಪ್ರದಕ್ಷಿಣಾ ಇಲ್ಲಿ ಕಂಡು ಬರುತ್ತದೆ. ಗರ್ಭಗೃಹಕ್ಕೆ ಹೊಂದಿಕೊಂಡಂತೆ ಭುವನೇಶ್ವರಿ ಇದೆ. ನಂದಿಯ ಗರ್ಭಗೃಹದ ಎದುರಿಗೆ ಇದೆ.[೯]

ಗ್ರಾಮ–ಹಿರೆನಂದೂರು	ಸ್ಥಳ–ಗಂಗೆಯ ಗುಡ್ಡ
ಸ್ಮಾರಕ–ಈಶ್ವರ ದೇವಸ್ಥಾನ	ಕಾಲ–ಆಧುನಿಕ
ಧರ್ಮ–ಶೈವ	ದಿಕ್ಕು–ಉತ್ತರ
ಪ್ರಕಟಣೆ–ಅಪ್ರಕಟಿತ	

ದೇವಾಲಯವು ಗಂಗೆಯ ಗುಡ್ಡದ ಮೇಲಿದೆ. ದೇವಾಲಯದ ಗರ್ಭಗೃಹದಲ್ಲಿ ಪೀಠದಲ್ಲಿ ಶಿವಲಿಂಗವಿದೆ. ಗರ್ಭಗೃಹಕ್ಕೆ ಹೊಂದಿಕೊಂಡೆ ಶಿಖರ ಇದರ ಮೇಲೆ ಗ್ರೀವ ಇದೆ. ನಂತರ

ಸ್ತೂಪ ಕಂಡು ಬರುತ್ತದೆ. ಈ ದೇವಾಲಯದ ಗರ್ಭಗುಡಿಯ ಎದುರು ನಂದಿಯ ಮೂರ್ತಿ ಇದೆ. ನಂದಿ ಈ ದೇವಾಲಯದ ಎದುರಿಗೆ ಕಾಣುತ್ತದೆ. ದೇವಾಲಯದ ಪಕ್ಕದಲ್ಲಿ ಒಂದು ಗುಹೆ ಇದೆ. ಈ ದೇವಾಲಯದ ಆವರಣದಲ್ಲಿ ಬಾವಿ ಇದೆ. ಈ ನೀರು ಗಂಗಾ ನದಿಯಿಂದ ಇಲ್ಲಿಗೆ ಬರುತ್ತದೆ. ಈ ಬಾವಿಗೆ ಒಂದು ಐತಿಹ್ಯ ಹೇಳಿದರು– ಅದೇನೆಂದರೆ ಮಲೆಶಾಂತೇಶ್ವರ ದೇವರು ಕಾಶಿಯಲ್ಲಿ ಅನುಷ್ಠಾನಕ್ಕೆ ಕುಳಿತಿದ್ದರು. ಆಗ ಗಂಗಾ ಮಾತಾ ಪ್ರತ್ಯಕ್ಷವಾಗಿ ನಿನಗೇನು ಬೇಕು ಕೇಳು ಎಂದಾಗ ಮಲೆಶಾಂತೇಶ್ವರರು ನಾನಿರುವ ಸ್ಥಳದಲ್ಲಿ ನಿನ್ನ ಅನುಷ್ಠಾನವಿರಬೇಕೆಂದು ಕೇಳಿಕೊಂಡಾಗ ಗಂಗಾಮಾತೆ ಒಪ್ಪಿ ಕೊಂಡಳು. ನಂತರ ಅವನಿಗೆ ಒಂದು ಹೂವನ್ನು ಕೊಟ್ಟಳು ಎಂಬ ಪ್ರತೀತಿ ಇದೆ. ಆ ಹೂವನ್ನು ತಂದು ಹಿರೆನಂದೂರನ ಹತ್ತಿರವಿರುವ ಗುಡ್ಡದ ಮೇಲೆ ಇಟ್ಟಾಗ ಅಲ್ಲಿ ಗಂಗೆ ಉದ್ಭವವಾಗಿ ತನ್ನ ಮಾತಿಗೆ ತಪ್ಪಲಾರದ ಹಾಗೆ ನಡೆದು ಕೊಂಡುಬಂದಳು. ಅಂದಿನಿಂದ ಅದು ಗಂಗೆ ಗುಡ್ಡಾವಾಯಿತು. ಆ ಹೂವಿಟ್ಟ ಸ್ಥಳದಲ್ಲಿ ನೀರು ಸದಾಕಾಲ ಹರಿಯುತ್ತಲೇ ಇರುತ್ತದೆ.

ಗ್ರಾಮ–ಹೊನ್ನಕಿರಣಗಿ	ಸ್ಥಳ–ಗ್ರಾಮದ ಪಂಚಾಯತಿಯ ಪಕ್ಕದಲ್ಲಿ
ಕಾಲ–ಆಧುನಿಕ	ಸ್ಮಾರಕ–ಶ್ರೀಕೇಶವ ಈಶ್ವರಲಿಂಗೇಶ್ವರ ದೇವಾಲಯ
ಧರ್ಮ–ಶೈವ	ದಿಕ್ಕು–ಪೂರ್ವ
ಪ್ರಕಟಣೆ–ಅಪ್ರಕಟಿತ	

ದೇವಾಲಯದ ಒಳಭಾಗ ಗರ್ಭಗೃಹದಲ್ಲಿ ಶಿವಲಿಂಗವಿದೆ. ಇದರ ಬಲಕ್ಕೆ ಅಕ್ಕಮಹಾದೇವಿ, ವಿಷ್ಣು, ಗಣಪತಿ, ಲಕ್ಷ್ಮಿ ಮತ್ತು ವಿಷ್ಣುವಿನ ಮೂರ್ತಿಗಳಿವೆ. ಶಿವಲಿಂಗದ ಹಿಂದಿನ ಭಿತ್ತಿಯ ಮೇಲೆ ವೀರಗಲ್ಲು ಶಿಲ್ಪವಿದೆ. ಗರ್ಭಗೃಹ, ಅಂತರಾಳ, ನವರಂಗವಿದೆ. ನವರಂಗದಲ್ಲಿ ನಾಲ್ಕು ಕಂಬಗಳಿವೆ. ಇದಕ್ಕೆ ಹೊಂದಿಕೊಂಡೆ ದೇವಾಲಯದ ಪ್ರವೇಶದ್ವಾರವಿದೆ.

ಗ್ರಾಮ–ಹೊನ್ನಕಿರಣಗಿ	ಸ್ಥಳ–ಗ್ರಾಮದ ಮುಖ್ಯದಾರಿಯ ಎಡಕ್ಕೆ
ಕಾಲ–೧೨ನೇ ಶತಮಾನ	ಸ್ಮಾರಕ–ಮಹಾದೇವ ದೇವಾಲಯ
ಧರ್ಮ–ಶೈವ	ದಿಕ್ಕು–ಉತ್ತರ
ಪ್ರಕಟಣೆ–ಅಪ್ರಕಟಿತ	

ದೇವಾಲಯದ ಒಳಭಾಗದ ಗರ್ಭಗೃಹದಲ್ಲಿ ಪೀಠದ ಮೇಲೆ ಶಿವಲಿಂಗವಿದೆ. ಗರ್ಭಗೃಹದ ಲಲಾಟದ ಮೇಲೆ ಹೂವಿನ ಚಿತ್ರವಿದೆ. ದೇವಾಲಯದಲ್ಲಿ ಅಂತರಾಳ, ಸಭಾಮಂಟಪವಿದೆ.

ಇಲ್ಲಿ ಆರು ಕಲ್ಲಿನ ಕಂಬಗಳು ಕಂಡು ಬರುತ್ತವೆ. ಇದಕ್ಕೆ ಹೊಂದಿಕೊಂಡೆ ದೇವಾಲಯದ ಪ್ರವೇಶದ್ವಾರವಿದೆ. ಉಳಿದ ಭಾಗ ತ್ರುಟಿತಗೊಂಡಿದೆ.

ಗ್ರಾಮ–ಹೊನ್ನಕಿರಣಗಿ	ಸ್ಥಳ–ಗ್ರಾಮದ ಪಂಚಾಯತಿಯ ರಸ್ತೆಯ ಬಲಭಾಗ
ಕಾಲ–೧೨ನೇ ಶತಮಾನ	ಸ್ಮಾರಕ–ತ್ರಿಲಿಂಗೇಶ್ವರ ದೇವಾಲಯ
ಧರ್ಮ–ಶೈವ	ದಿಕ್ಕು–ದಕ್ಷಿಣ
ಪ್ರಕಟಣೆ–ಅಪ್ರಕಟಿತ	

ಈ ಗ್ರಾಮದ ಪಂಚಾಯಿತಿ ರಸ್ತೆಯ ಬಲಭಾಗಕ್ಕೆ ದಕ್ಷಿಣಕ್ಕೆ ಮುಖಮಾಡಿ ಈ ದೇವಾಲಯವಿದೆ. ತ್ರಿಪದಿ ಶೈವ ದೇವಾಲಯವಾಗಿದೆ. ಮೂರು ಗರ್ಭಗೃಹದಲ್ಲಿ ಶಿವಲಿಂಗವಿದೆ. ತೆರೆದ ಅಂತರಾಳ, ಸಭಾಮಂಟಪವಿದೆ. ಇದಕ್ಕೆ ಅಭಿಮುಖವಾಗಿ ನಂದಿ ಇದೆ. ಬಲಭಾಗಕ್ಕೆ ಮತ್ತು ಎಡಭಾಗಕ್ಕೆ ಗರ್ಭಗೃಹವಿದೆ. ಇದಕ್ಕೆ ಹೊಂದಿಕೊಂಡೆ ದೇವಾಲಯದ ಪ್ರವೇಶ ದ್ವಾರವಿದೆ. ಈ ದೇವಾಲಯ ಎದುರು ೧೨ನೇ ಶತಮಾನದ ಮತ್ತೊಂದು ಶೈವ ದೇವಾಲಯವಿದೆ. ಇದರ ಕೆಲವು ಭಾಗಗಳು ತ್ರುಟಿತವಾಗಿವೆ.

ಗ್ರಾಮ–ಹೊನ್ನಕಿರಣಗಿ	ಸ್ಥಳ–ಗ್ರಾಮದ ಪ್ರವೇಶಿಸಿದ ನಂತರ ಬಲಭಾಗಕ್ಕೆ
ಕಾಲ–೧೨ನೇ ಶತಮಾನ	ಸ್ಮಾರಕ–ವೀರಭದ್ರೇಶ್ವರ ದೇವಾಲಯ
ಧರ್ಮ–ಶೈವ	ದಿಕ್ಕು–ದಕ್ಷಿಣ
ಪ್ರಕಟಣೆ–ಅಪ್ರಕಟಿತ	

ಈ ಗ್ರಾಮವನ್ನು ಪ್ರವೇಶಿಸುವ ದಾರಿ ಬಲಭಾಗಕ್ಕೆ ಈ ದೇವಾಲಯವಿದೆ. ದೇವಾಲಯದ ಒಳಭಾಗ ಗರ್ಭಗೃಹದ ಪೀಠದ ಮೇಲೆ ವೀರಭದ್ರೇಶ್ವರನ ಮೂರ್ತಿ ಇದೆ. ಗರ್ಭಗೃಹದ ಲಲಾಟದ ಮಧ್ಯದಲ್ಲಿ ಶಿವಲಿಂಗ ಉಬ್ಬು ಶಿಲ್ಪವಿದೆ. ಇದರ ಎದುರಿಗೆ ಸಭಾಮಂಟಪವಿದೆ. ಈ ದೇವಾಲಯದ ಬಲಭಾಗಕ್ಕೆ ಕಾಳಿಕಾಂಬ ದೇವಾಲಯವಿದೆ. ಅದರಲ್ಲಿ ಕಾಳಿಕಾದೇವಿ ಮೂರ್ತಿ ಇದೆ. ಎಡಭಾಗಕ್ಕೆ ಇನ್ನೊಂದು ದೇವಾಲಯವಿದೆ. ಆದರೆ ಅದನ್ನು ಜೀರ್ಣೋದ್ದಾರಗೊಳಿಸುತ್ತಿದ್ದಾರೆ. ವೀರಭದ್ರ ದೇವಾಲಯ ಗರ್ಭಗೃಹದ ಎದುರು ನಂದಿ ಮೂರ್ತಿ ಇದೆ.

ಗ್ರಾಮ–ಹುಣಸಿ ಹಡಗಿಲ	ಸ್ಥಳ–ಗ್ರಾಮದ ಮಧ್ಯದಲ್ಲಿ
ಕಾಲ–ಆಧುನಿಕ	ಸ್ಮಾರಕ–ಅಲ್ಲಮಪ್ರಭು ಮಠ
ಧರ್ಮ–ಶೈವ	ದಿಕ್ಕು–ಪೂರ್ವ

ಹುಣಸಿ ಹಡಗಿಲ ಗ್ರಾಮದ ಮಧ್ಯದಲ್ಲಿ ಈ ದೇವಾಲಯವಿದೆ. ಈ ದೇವಾಲಯ ಸಂಪೂರ್ಣ ಆಧುನಿಕ ಶೈಲಿಯಲ್ಲಿ ನಿರ್ಮಾಣಗೊಂಡಿದೆ. ಈ ದೇವಾಲಯದ ಗರ್ಭಗುಡಿಯಲ್ಲಿ ಅಲ್ಲಮಪ್ರಭುವಿನ ಮೂರ್ತಿ ಇದೆ. ಭಿತ್ತಿಯ ಮೇಲೆ ಅಲ್ಲಮಪ್ರಭು ಶಿಲ್ಪವಿದೆ. ಇದಕ್ಕೆ ಹೊಂದಿಕೊಂಡಂತೆ ಪ್ರಸ್ತಾರವಿದೆ. ಇದರ ಮೇಲೆ ಶಿಖರ, ಸ್ತೂಪವಿದೆ. ಗ್ರೀವ ದೇವಾಲಯದ ಪಕ್ಕದಲ್ಲಿ ಅಲ್ಲಮಪ್ರಭುವಿನ ಮಠವಿದೆ.[೧೦]

ಗ್ರಾಮ–ಮಹಾಗಾಂವ	ಸ್ಥಳ–ಅಗಸಿ ಬಾಗಿಲದಿಂದ ಬಲಕ್ಕೆ
ಕಾಲ–ಆಧುನಿಕ	ಸ್ಮಾರಕ–ಸಂಗಯ್ಯ ದೇವರ ಗುಡಿ
ಧರ್ಮ–ಶೈವ	ದಿಕ್ಕು–ಪೂರ್ವ

ಮಹಾಗಾಂವ ಗ್ರಾಮವೊಂದರಲ್ಲಿ ಅಗಸಿ ಬಾಗಿಲ ಬಲಕ್ಕೆ ಸ್ವಲ್ಪ ದೂರದಲ್ಲಿ ಸಂಗಯ್ಯದೇವರ ಗುಡಿ ಇದೆ. ಇದರ ಒಳಭಾಗದ ಗರ್ಭಗೃಹದಲ್ಲಿ ಶಿವಲಿಂಗವಿದೆ. ಎದುರಿಗೆ ಸಭಾಮಂಟಪವಿದೆ. ಈ ದೇವಾಲಯದ ಬಲಭಾಗದಲ್ಲಿ ಮತ್ತೊಂದು ಶಿವಲಿಂಗ ಮತ್ತು ವೀರಗಲ್ಲಿದೆ. ಎಡಕ್ಕೆ ಮತ್ತೊಂದು ವೀರಗಲ್ಲನ್ನು ಕಾಣುತ್ತೇವೆ. ಶಿಖರ ಹೊಂದಿಲ್ಲ.

ಗ್ರಾಮ–ಮಹಾಗಾಂವ	ಸ್ಥಳ–ಗ್ರಾಮದ ಪಂಚಾಯತಿ ಹತ್ತಿರ
ಕಾಲ–ಆಧುನಿಕ	ಸ್ಮಾರಕ–ಅಕ್ಕಮಹಾದೇವಿ ಗುಡಿ
ಧರ್ಮ–ಶೈವ	ದಿಕ್ಕು–ಪೂರ್ವ

ದೇವಾಲಯದ ಒಳಭಾಗದ ಗರ್ಭಗೃಹದಲ್ಲಿ ಅಕ್ಕಮಹಾದೇವಿಯ ಮೂರ್ತಿ ಇದೆ. ಗರ್ಭಗೃಹದ ಲಲಾಟದ ಮೇಲೆ ಯಾವುದೇ ಉಬ್ಬು ಶಿಲ್ಪಗಳಿಲ್ಲ. ಇದರ ಎದುರಿಗೆ ಸಭಾಮಂಟಪವಿದೆ. ಇದರ ಆವರಣದಲ್ಲಿ ಹೈದ್ರಾಬಾದ ಕರ್ನಾಟಕದ ಸ್ವತಂತ್ರ ಹೋರಾಟಗಾರ ಚಂದ್ರಶೇಖರ ಪಾಟೀಲ ಮಹಾಗಾಂವರ ಸಮಾಧಿಯಿದೆ.

ಗ್ರಾಮ–ಮಹಾಗಾಂವ	ಸ್ಥಳ–ಪಂಚಾಯತಿಯ ಹಿಂದುಗಡೆ
ಕಾಲ–ಆಧುನಿಕ	ಸ್ಮಾರಕ–ಗೌರಿಶಂಕರ
ಧರ್ಮ–ಶೈವ	ದಿಕ್ಕು–ಪೂರ್ವ

ಈ ದೇವಾಲಯದ ಒಳಭಾಗದ ಗರ್ಭಗೃಹದಲ್ಲಿ ಶಿವಲಿಂಗವಿದೆ. ಸಾಧಾರಣ ಲಲಾಟಬಿಂಬ ಹೊಂದಿದೆ. ಗರ್ಭಗೃಹದ ಭಿತ್ತಿಯ ಮೇಲೆ ಪ್ರಸ್ತಾರ, ಶಿಖರ, ಗ್ರೀವ ಮತ್ತು ಸ್ತೂಪಗಳಿವೆ. ಗರ್ಭಗೃಹಕ್ಕೆ ಪ್ರದಕ್ಷಿಣಾ ಪಥವಿದೆ.

ಗ್ರಾಮ–ಮಹಾಗಾಂವ		ಸ್ಥಳ–ಗ್ರಾಮದ ಮಧ್ಯ

ಕಾಲ–ಆಧುನಿಕ		ಸ್ಮಾರಕ–ಮಲ್ಲಿಕಾರ್ಜುನ ದೇವಾಲಯ

ಧರ್ಮ–ಶೈವ		ದಿಕ್ಕು–ಪೂರ್ವ

ಈ ದೇವಾಲಯ ಎರಡು ಅಂತಸ್ತನ್ನು ಹೊಂದಿದ್ದು ಒಳಭಾಗದ ಗರ್ಭಗೃಹದಲ್ಲಿ ಪೀಠದ ಮೇಲೆ ಮಲ್ಲಿಕಾರ್ಜುನ ದೇವರ ಮೂರ್ತಿ ಇದೆ. ಗರ್ಭಗೃಹದ ಲಲಾಟದ ಮೇಲೆ ಹೂವಿನ ಚಿತ್ರವಿದೆ. ಗರ್ಭಗೃಹದ ಬಲಭಾಗಕ್ಕೆ ಅಂಬಾಭವಾನಿ ಮೂರ್ತಿ ಶಿಲ್ಪ ಪೀಠದ ಮೇಲಿದೆ. ಎಡಭಾಗಕ್ಕೆ ಪೀಠದ ಮೇಲೆ ಗಣಪತಿಯ ಮೂರ್ತಿ ಇದೆ. ಈ ದೇವಾಲಯದ ಗರ್ಭಗೃಹ ಎರಡನೆ ಅಂತಸ್ತಿನಲ್ಲಿದೆ. ಕೆಳಅಂತಸ್ತಿನಲ್ಲಿ ನವಗ್ರಹಗಳ ಮೂರ್ತಿಶಿಲ್ಪ, ಮೂರು ವೀರಗಲ್ಲುಗಳು, ನಾಗಮೂರ್ತಿಶಿಲ್ಪಗಳು ಇವೆ.

ಗ್ರಾಮ–ಮಹಾಗಾಂವ		ಸ್ಥಳ–ಮಾಳಿ ಸಿದ್ದೇಶ್ವರ ದೇವಾಲಯದ ಹತ್ತಿರ

ಕಾಲ–ಆಧುನಿಕ		ಸ್ಮಾರಕ–ನಾಗನಾಥ ಮಠ

ಧರ್ಮ–ಶೈವ		ದಿಕ್ಕು–ಪೂರ್ವ

ಪ್ರಕಟಣೆ–ಅಪ್ರಕಟಿತ

ಈ ದೇವಾಲಯದ ಒಳಭಾಗದ ಗರ್ಭಗೃಹದಲ್ಲಿ ಶಿವಲಿಂಗ ಮತ್ತು ನಂದಿಯ ಮೂರ್ತಿಗಳು ಎದುರು ಬದುರಾಗಿವೆ. ಹೂವಿನಿಂದ ಕೂಡಿದ ಸಾಧಾರಣ ಲಲಾಟಬಿಂಬ ಹೊಂದಿದೆ. ಈ ಮಠ ಸಂಪೂರ್ಣ ಪಾಳು ಬಿದ್ದಿದೆ. ಇದರಲ್ಲಿ ಒಂದು ಗವಿ ಇದೆ. ಈ ಗವಿಯ ಒಳಗಡೆ ಹೋಗಿ ನೋಡಿದರೆ ಮಠದ ಅಧಿಕಾರಿಯ ಗದಿಗೆ ಇದೆ. ಇದರ ಹಿಂದುಗಡೆ ಶಿವಲಿಂಗವಿದೆ. ಈ ದೇವಾಲಯದ ಅವರಣದಲ್ಲಿ ಎರಡು ಮೂರು ಪೀಠಾಧಿಪತಿಗಳ ಸಮಾಧಿಗಳಿವೆ.

ಗ್ರಾಮ–ಮಹಾಗಾಂವ		ಸ್ಥಳ–ನಾಗನಾಥ ಮಠದಿಂದ ಸ್ವಲ್ಪದೂರ

ಕಾಲ–ಆಧುನಿಕ		ಸ್ಮಾರಕ–ಮಾಳಿಸಿದ್ದೇಶ್ವರ ದೇವಾಲಯ

ಧರ್ಮ–ಶೈವ		ದಿಕ್ಕು–ಪೂರ್ವ

ಪ್ರಕಟಣೆ–ಅಪ್ರಕಟಿತ

ದೇವಾಲಯದ ಹೊರಭಾಗ ಅಧಿಷ್ಠಾನ, ಭಿತ್ತಿ, ಪ್ರಸ್ತಾರ, ಶಿಖರ, ಗ್ರೀವ ಮತ್ತು ಸ್ತೂಪ ಇದೆ. ಈ ದೇವಾಲಯದ ಆವರಣದಲ್ಲಿ ಎರಡು ದೀಪಸ್ತಂಭಗಳಿವೆ.

ಗ್ರಾಮ–ಕಮಲಾಪುರ ಸ್ಥಳ–ಗ್ರಾಮದ ಪ್ರವೇಶದ ಎಡಭಾಗಕ್ಕೆ

ಕಾಲ–೧೨ನೇ ಶತಮಾನ ಸ್ಮಾರಕ–ಸಂಗಮೇಶ್ವರ ದೇವಾಲಯ

ಧರ್ಮ–ಶೈವ ದಿಕ್ಕು–ಪೂರ್ವ

ಪ್ರಕಟಣೆ–ಅಪ್ರಕಟಿತ

ದೇವಾಲಯದ ಒಳಭಾಗ ಗರ್ಭಗೃಹದಲ್ಲಿ ಶಿವಲಿಂಗವಿದೆ. ಇದಕ್ಕೆ ಮುಖಮಾಡಿ ಸಭಾಮಂಟಪದಲ್ಲಿ ನಂದಿಯ ಮೂರ್ತಿ ಇದೆ. ಈ ದೇವಾಲಯವು ಮಜೀದ್ ಆಕಾರವಿದೆ. ಇದರ ಎದುರುಗಡೆ ಮತ್ತೊಂದು ದೇವಾಲಯವಿದೆ. ಇದರ ಗರ್ಭಗೃಹದಲ್ಲಿ ನಂದಿಯ ಮೂರ್ತಿ ಇದೆ. ಭಿತ್ತಿ ಪ್ರಸ್ತರ, ಶಿಖರ ಗ್ರೀವ ಸ್ತೂಪವನ್ನು ಒಳಗೊಂಡ ಭಾಗಗಳು ಕಂಡು ಬರುತ್ತವೆ.

ಗ್ರಾಮ–ಕಮಲಾಪುರ ಸ್ಥಳ–ಗ್ರಾಮದ ಮಧ್ಯ

ಕಾಲ–ಆಧುನಿಕ ಸ್ಮಾರಕ–ನಗರೇಶ್ವರ ದೇವಾಲಯ

ಧರ್ಮ–ಶೈವ ದಿಕ್ಕು–ಉತ್ತರ

ಪ್ರಕಟಣೆ–ಅಪ್ರಕಟಿತ

ದೇವಾಲಯದ ಒಳಭಾಗದಲ್ಲಿ ಪೀಠದ ಮೇಲೆ ನಗರೇಶ್ವರ ದೇವರ ಮೂರ್ತಿ ಇದೆ. ಕೊರಳಲ್ಲಿ ರುದ್ರಾಕ್ಷಿ ಇರುವ ಮೂರ್ತಿ ಪದ್ಮಾಸನದಲ್ಲಿದೆ. ಗರ್ಭಗೃಹದ ಲಲಾಟ ಬಿಂಬ ಸಾಧಾರಣವಾಗಿದೆ. ಎದುರಿಗೆ ನಂದಿಯ ವಿಗ್ರಹವಿದೆ. ಈ ದೇವಾಲಯದ ಎದುರಿಗೆ ಹನುಮಂತನ ದೇವರ ಗುಡಿ ಇದೆ. ಅಷ್ಟೇ ಅಲ್ಲದೆ ಈ ದೇವಾಲಯ ಗರ್ಭಗೃಹ ಸಭಾಮಂಟಪಗಳನ್ನು ಹೊಂದಿದೆ. ದೇವಾಲಯದ ಆವರಣದಲ್ಲಿ ತ್ರುಟಿತಗೊಂಡ ಎರಡು ಶಿವಲಿಂಗ ಎರಡು ನಾಗಶಿಲ್ಪಗಳು, ಹನುಮಂತನ ಮೂರ್ತಿ ಶನೇಶ್ವರನ ಪೋಟೊ ಇದೆ.

ಗ್ರಾಮ–ಕಮಲಾಪುರ ಸ್ಥಳ–ಸಾಯಿ ಪ್ರಾಥಮಿಕ ಶಾಲೆಯ ಆವರಣ

ಕಾಲ–ಆಧುನಿಕ ಸ್ಮಾರಕ–ಶಂಕರಲಿಂಗ ದೇವಸ್ಥಾನ

ಧರ್ಮ–ಶೈವ ದಿಕ್ಕು–ಪೂರ್ವ

ಪ್ರಕಟಣೆ–ಅಪ್ರಕಟಿತ

ಈ ದೇವಾಲಯದ ಒಳಭಾಗದಲ್ಲಿ ಗರ್ಭಗೃಹದಲ್ಲಿ ಪೀಠದ ಮೇಲೆ ಶಿವಲಿಂಗವಿದೆ. ಮುಸ್ಲಿಂ ಕಮಾನಿನ ಆಕಾರದಲ್ಲಿ ಅದರ ಪ್ರವೇಶದ್ವಾರ ಮತ್ತು ಗರ್ಭಗೃಹಗಳ ಬಾಗಿಲುಗಳಿವೆ.

ಈ ದೇವಾಲಯದ ಸಮೀಪದಲ್ಲೆ ಸಿದ್ದರಾಮೇಶ್ವರ ದೇವಾಲಯ ಈಶ್ವರ ದೇವಾಲಯ ಮತ್ತು ವೀರಭದ್ರೇಶ್ವರ ದೇವಾಲಯಗಳಿವೆ.

ಗ್ರಾಮ–ಕಮಲಾಪುರ	ಸ್ಥಳ–ಗ್ರಾಮದ ಹೊರಗೆ
ಕಾಲ–ಆಧುನಿಕ	ಸ್ಮಾರಕ–ರಾಮತೀರ್ಥ
ಧರ್ಮ–ಶೈವ	ದಿಕ್ಕು–ಪಶ್ಚಿಮ
ಪ್ರಕಟಣೆ–ಅಪ್ರಕಟಿತ	

ಈ ದೇವಾಲಯ ಪಶ್ಚಿಮಾಭಿಮುಖವಾಗಿದೆ. ಇಲ್ಲಿ ಮೊದಲಿಗೆ ಬಾವಿ ಕಂಡು ಬರುತ್ತದೆ. ಅದರ ದಂಡೆಯ ಮೇಲೆ ರಾಮಲಿಂಗೇಶ್ವರ ದೇವಾಲಯ, ಇಲ್ಲಿಯೇ ನಾಲ್ಕು ಗರ್ಭಗೃಹಗಳಿವೆ. ಒಂದರಲ್ಲಿ ಶಿವಲಿಂಗ ನಂದಿಯ ಮೂರ್ತಿಗಳಿವೆ. ಮತ್ತೊಂದರಲ್ಲಿ ವೀರಭದ್ರ, ರಾಮಲಕ್ಷ್ಮಣ, ಸೀತೆಯರ ಮೂರ್ತಿಶಿಲ್ಪಗಳಿವೆ. ರಾಮಲಕ್ಷ್ಮಣರು ಭೇಟಿ ನೀಡಿದರು ಎನ್ನುವದಕ್ಕೆ ಸಾಕ್ಷಿಯಾಗಿ ಇಲ್ಲಿರುವ ಒಂದು ತಂಬಿಗೆ ಸಾಕ್ಷಿಯಾಗಿದೆ. ಈ ಮಾಹಿತಿಯನ್ನು ಈ ದೇವಾಲಯ ಅರ್ಚಕ ಮಹಾದೇವ ಮಾಹಿತಿ ನೀಡಿದರು. ಅಷ್ಟೇ ಅಲ್ಲದೆ ಈ ಗ್ರಾಮದಲ್ಲಿ ದಶರಥ ಮಹಾರಾಜನ ಕೆರೆ ಇದೆ.

ಗ್ರಾಮ–ಸಣ್ಣೂರು	ಸ್ಥಳ–ಗ್ರಾಮ ಮಧ್ಯ
ಕಾಲ–ಆಧುನಿಕ	ಸ್ಮಾರಕ–ರಾಮಲಿಂಗೇಶ್ವರ ದೇವಾಲಯ
ಧರ್ಮ–ಶೈವ	ದಿಕ್ಕು–ಪೂರ್ವ
ಪ್ರಕಟಣೆ–ಅಪ್ರಕಟಿತ	

ಈ ದೇವಾಲಯದ ಒಳಭಾಗದಲ್ಲಿ ಗರ್ಭಗೃಹದಲ್ಲಿ ಶಿವಲಿಂಗವಿದೆ. ಇದರ ತಲೆ ಮೆಲೆ ಐದು ಹೆಡೆ ಸರ್ಪ ಮತ್ತು ಸಪ್ತಮಾತೃಕೆಯ ಚಿತ್ರ ಕಾಣುತ್ತೇವೆ. ಗರ್ಭಗೃಹದ ಲಲಾಟ ಸಾಧರಣವಾಗಿದ್ದು ಅದರ ಮೇಲಿನ ಭಿತ್ತಿಯಲ್ಲಿ ಶಿವಲಿಂಗವಿದ್ದು ಅದರ ಬಲ ಮತ್ತು ಎಡಕ್ಕೆ ನಂದಿಯ ಉಬ್ಬು ಶಿಲ್ಪಗಳಿವೆ. ಗರ್ಭಗೃಹಕ್ಕೆ ಹೊಂದಿಕೊಂಡು ಸಭಾ ಮಂಟಪವಿದೆ. ಇಲ್ಲಿ ಆರು ಕಂಬಗಳು ಕಂಡುಬರುತ್ತದೆ. ಶಿಖರದ ಮೇಲೆ ಶಿವಲಿಂಗ ಪೂಜಿಸುತ್ತಿರುವ ದೃಶ್ಯ, ಹಲವು ಋಷಿ ಮುನಿಯರು ನಿಂತಿರುವ ಉಬ್ಬುಶಿಲ್ಪಗಳಿವೆ. ಭಿತ್ತಿಗಳಿಗೆ ಹೊಂದಿಕೊಂಡು ಪ್ರಸ್ತಾರವಿದೆ. ಇದರ ಮೇಲೆ ಶಿಖರ, ಗ್ರೀವ ಮತ್ತು ಸ್ತೂಪಿಗಳಿವೆ. ಗರ್ಭಗೃಹಕ್ಕೆ ಮುಖಮಾಡಿ ಈ ದೇವಾಲಯದ ಆವರಣದಲ್ಲಿ ನಂದಿ ಮೂರ್ತಿ, ದ್ವೀಪಕಂಬ, ಎರಡು ವೀರಗಲ್ಲು, ಎರಡು ನಾಗಶಿಲ್ಪ, ಒಂದು ಗಣೇಶನ ಮೂರ್ತಿಗಳಿವೆ.

ಗ್ರಾಮ–ನಾಗನಳ್ಳಿ	ಸ್ಥಳ–ಗ್ರಾಮದ ಅಗಸಿ ಬಾಗಿಲ ನಂತರ
ಕಾಲ–ಆಧುನಿಕ	ಸ್ಮಾರಕ–ನಾಗಲಿಂಗೇಶ್ವರ ದೇವಾಲಯ
ಧರ್ಮ–ಶೈವ	ದಿಕ್ಕು–ಉತ್ತರ

ಈ ದೇವಾಲಯದ ಒಳಭಾಗದ ಗರ್ಭಗೃಹದಲ್ಲಿ ಶಿವಲಿಂಗವಿದೆ. ಲಲಾಟದ ಮೇಲೆ ಯಾವುದೇ ಉಬ್ಬುಶಿಲ್ಪಗಳಿಲ್ಲ. ಇದರ ಎದುರಿಗೆ ನಂದಿಯ ಮೂರ್ತಿಇದೆ. ಇದರ ಎಡಭಾಗಕ್ಕೆ ಐದು ಹೆಡೆ ನಾಗಶಿಲ್ಪವಿದೆ. ಗರ್ಭಗೃಹದ ನಂತರ ಸಭಾಮಂಟಪವಿದೆ. ಇದರಲ್ಲಿ ಒಕ್ಕೈ ಮಾಸ್ತಿಗಲ್ಲಿದೆ. ಭಿತ್ತಿಯ ಮೇಲೆ ನಾಗಶಿಲ್ಪದ ಚಿತ್ರಗಳಿವೆ. ಗರ್ಭಗೃಹಕ್ಕೆ ಹೊಂದಿಕೊಂಡು ಶಿಖರ ಅದರ ಮೇಲೆ ಗ್ರೀವ ಮತ್ತು ಸ್ತೂಪಯನ್ನು ಕಾಣುತ್ತೇವೆ.[೧೧]

ನಗರ–ಗುಲಬರ್ಗಾ	ಸ್ಥಳ–ಗುಲಬರ್ಗಾ ಕೋಟೆ
ಕಾಲ–೧೪ನೇ ಶತಮಾನ	ಸ್ಮಾರಕ–ಸೋಮೇಶ್ವರ ದೇವಾಲಯ
ದಿಕ್ಕು–ಅಗ್ನೇಯ	ಧರ್ಮ–ಶೈವ

ಗುಲಬರ್ಗಾ ನಗರದ ಕೋಟೆಯ ಒಳಗೆ ಆಗ್ನೇಯ ದಿಕ್ಕಿನಲ್ಲಿ ಕೋಟೆಗೆ ಹೊಂದಿಕೊಂಡಂತೆ ಇರುವ ದೇವಾಲಯವಿದು. ಇಂದು ಪಾಳು ಬಿದ್ದಿದೆ. ಭಾಗಶಃ ಕೋಟೆಯೊಳಗೆ ಸೇರಿಹೋಗಿರುವ ಈ ದೇಗುಲದ ಕಲಾತ್ಮಕವಾದ ೨೪ ಕಂಬಗಳಷ್ಟೇ ಉಳಿದಿದ್ದು, ಸಾಂದರ್ಭಿಕ ಆಧಾರಗಳಿಂದ ಇದು ತ್ರಿಕೂಟವಾಗಿದ್ದಿರಬಹುದು. ಪ್ರಸ್ತುತ ಸಂಪೂರ್ಣವಾಗಿ ಜೀರ್ಣೋದ್ದಾರಗೊಳ್ಳುತ್ತಲಿದೆ.

೪.೩. ವೈಷ್ಣವ ದೇವಾಲಯ :

ಗ್ರಾಮ–ಹೊನ್ನಕಿರಣಗಿ	ಸ್ಥಳ–ಗ್ರಾಮ ಪಂಚಾಯತಿಯ ಪಕ್ಕದಲ್ಲಿ
ಕಾಲ–ಆಧುನಿಕ	ಸ್ಮಾರಕ–ಶ್ರೀಕೇಶವ ಈಶ್ವರಲಿಂಗೇಶ್ವರ ದೇವಾಲಯ
ಧರ್ಮ–ವೈಷ್ಣವ	ದಿಕ್ಕು–ಪೂರ್ವ ಪ್ರಕಟಣೆ–ಅಪ್ರಕಟಿತ

ದೇವಾಲಯದ ಒಳಭಾಗದ ಗರ್ಭಗೃಹದಲ್ಲಿ ಪೀಠದ ಮೇಲೆ ಚತುರ್ಭುಜಧಾರಿಯಾದ ವಿಷ್ಣುವಿನ ಎರಡು ಮೂರ್ತಿಗಳಿವೆ. ಇದರಲ್ಲಿ ಒಂದು ಮೂರ್ತಿ ದೊಡ್ಡದಿದೆ. ಇನ್ನೊಂದು ಚಿಕ್ಕದಿದ್ದು, ಚಿಕ್ಕ ವಿಷ್ಣುವಿನ ಮೂರ್ತಿಯಲ್ಲಿ ತನ್ನ ಬಲಗೈಯಲ್ಲಿ ಶಂಕ ಇನ್ನೊಂದು ಕೈಯಲ್ಲಿ ಕಮಲವಿದೆ. ತನ್ನ ಎಡಗೈಯಲ್ಲಿ ಚಕ್ರ ಮತ್ತು ಗದೆ ಇದೆ. ಉದ್ದನೆಯ ಕಿರೀಟ ತೋಳಲ್ಲಿ ಮತ್ತು ಕೈಯಲ್ಲಿ ತೋಳಬಂದಿ ಮತ್ತು ಕೈಬಳೆ ಇದೆ. ಕೊರಳಲ್ಲಿ ಕಂಠಹಾರವಿದೆ.

೪.೪. ಜೈನ ದೇವಾಲಯಗಳು

ಕರ್ನಾಟಕದಲ್ಲಿ ಭದ್ರಬಾಹು ಭಟಾರಕರ ಕಾಲದಿಂದಲೂ ಜೈನ ಧರ್ಮವು ಪ್ರಚಲಿತದಲ್ಲಿತ್ತು. ಸು.ಕ್ರಿ.ಶ.೬-೭ನೇ ಶತಮಾನಗಳಲ್ಲಿ ಕರ್ನಾಟಕದ ವಿವಿಧೆಡೆಗಳಲ್ಲಿ ಜೈನಧರ್ಮವಿತ್ತೆಂದು ಆ ಸ್ಥಳಗಳಲ್ಲಿ ದೊರೆತಿರುವ ಶಾಸನಗಳು ಮತ್ತು ಜಿನಾವಶೇಷಗಳು ಸಾಕ್ಷಿಯಾಗಿವೆ. ಗುಲಬರ್ಗಾ ಪರಿಸರದಲ್ಲಿ ಸು.ಕ್ರಿ.ಶ.೭ನೇ ಶತಮಾನದಿಂದ ಜೈನ ಮತವು ಪ್ರಚಲಿತದಲ್ಲಿದೆ. ವಿಶೇಷವಾಗಿ ಕಲ್ಯಾಣಿ ಚಾಲುಕ್ಯರು ಮತ್ತು ರಾಷ್ಟ್ರಕೂಟರು ಈ ಭಾಗವನ್ನು ಆಳುತ್ತಿದ್ದಾಗ ಜೈನಮತಕ್ಕೆ ಹೆಚ್ಚಿನ ಪ್ರಾಶಸ್ತ್ಯ ದೊರೆಯಿತು. ಮಳಖೇಡ, ಸೇಡಂ, ಭಂಕೂರು, ಹರಸೂರು, ಆಡಕಿ ಇಂಗಳಿಗೆ, ಹುಣಸಿಹಡಗಿಲ ಮುಂತಾದ ಸ್ಥಳಗಳು ಪ್ರಮುಖ ಜೈನ ಕೇಂದ್ರಗಳಾಗಿದ್ದವು. ಎ.ಎಸ್. ಅಲ್ತೇಕರ್‌ರವರು "ರಾಷ್ಟ್ರಕೂಟರ ಕಾಲದಲ್ಲಿ ರಾಜ್ಯದ ಸು.ಮೂರನೇ ಒಂದು ಭಾಗದ ಜನರು ಜೈನರಾಗಿದ್ದರೆಂದು ತಿಳಿಸಿದ್ದಾರೆ.[೧೨] ಜಿಲ್ಲೆಯಲ್ಲಿ ಪ್ರಕೃತಿ ವಿಕೋಪದ ಫಲವಾಗಿ ಸಾಕಷ್ಟು ಶಾಸನಗಳೂ, ದೇವಾಲಯಗಳೂ ನಶಿಸಿವೆ. ಉಳಿದಿರುವ ಎಷ್ಟೋ ಶಾಸನ ಲಿಪಿಗಳು ನೆಲದಲ್ಲಿ ಹೂತುಹೋಗಿವೆ. ತ್ರುಟಿತ ಶಾಸನಗಳಿಂದ ಪೂರ್ಣಪಾಠ ಲಭ್ಯವಿಲ್ಲ.

ಜೈನ ಧರ್ಮ

ಜೈನ ಧರ್ಮದಲ್ಲಿ ದಿಗಂಬರ, ಶ್ವೇತಾಂಬರ, ಯಾಪನೀಯ, ಶಾಕ್ತ ಮುಂತಾದ ಪಂಥಗಳಿದ್ದು ದಿಕ್ಷಾ ಸಂಪ್ರದಾಯದ ಮೂಲಕ ಸನ್ಯಾಸ ಜೀವನವನ್ನು ಸ್ತ್ರೀ ಪುರುಷರಿಬ್ಬರೂ ನಡೆಸಲು ಅವಕಾಶವಿದೆ. ಇಂತಹ ಜೀವನ ನಡೆಸುವ ಜೈನರನ್ನು 'ನಿರ್ಗ್ರಥಿ', 'ಸಾಧು', 'ಮುನಿ', 'ಸಾಧ್ವಿ' ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಸನ್ಯಾಸಕ್ಕಾಗಿ ಇರುವ ನಾನಾ ರೀತಿಯ ಉಪಾಸನಾ ಮಾರ್ಗಗಳಲ್ಲಿ ಧ್ಯಾನ ವಿಧಾನಗಳು, ತಂತ್ರಗಳು ಮತ್ತು ದೇಹ ದಂಡನೆಗಳು ಮುಖ್ಯವಾದವು. ಸನ್ಯಾಸಿಗಳು ಮಸ್ತಕದ ಮತ್ತು ಮೈನ ಕೂದಲುಗಳನ್ನು ಕೀಳಿಸಿಕೊಳ್ಳುವುದು, 'ಸಲ್ಲೇಖನ' ಎಂಬ ನಿರಾಹಾರ ವತ್ರವನ್ನು ಹಿಡಿದು ದೇಹತ್ಯಾಗ ಮಾಡುವುದು ಮುಂತಾದ ದೇಹದಂಡನೆ ಜೈನಧರ್ಮದಲ್ಲಿ ಸಾಮಾನ್ಯ. ಪ್ರಪಂಚದ ಧರ್ಮಗಳಲ್ಲಿ 'ಸಾವನ್ನು' ಆಹ್ವಾನಿಸುವುದು ಇದೊಂದೇ ಎಂದು ಕಂಡುಬರುತ್ತದೆ. ಜೈನಧರ್ಮ ಸಂಸ್ಕೃತಕ್ಕೆ ಬದಲಾಗಿ 'ಅರ್ಧಮಾಗದಿ' ಎನ್ನುವ ಜನಸಾಮಾನ್ಯರ ಆಡುಭಾಷೆಯನ್ನು ಸಂಹನಕ್ಕಾಗಿ ಬಳಸಿಕೊಂಡಿದ್ದರಿಂದ ಬಹುಜನತೆಯನ್ನು ತಲುಪಲು ಕಾರಣವಾಯಿತು.[೧೩] ಪ್ರಸ್ತುತ ಗುಲಬರ್ಗಾ ಪರಿಸರದ ಜೈನ ಬಸದಿಗಳ ವೈಶಿಷ್ಟ್ಯತೆಯನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ಜೈನ ಜಿನಾಲಯಗಳು

ಗ್ರಾಮ–ಹರಸೂರು | ಸ್ಥಳ–ಗ್ರಾಮದ ಮಧ್ಯ

ಕಾಲ–೧೧ನೇ ಶತಮಾನ | ಸ್ಮಾರಕ–ಜೈನ ಜಿನಾಲಯಗಳು

ಧರ್ಮ–ಜೈನಧರ್ಮ | ದಿಕ್ಕು–ಪೂರ್ವ

ಈ ಜಿನಾಲಯ ಪೂರ್ವಾಭಿಮುಖವಾಗಿ ಇದೆ. ಈ ಜಿನಾಲಯ ತ್ರಿಪದಿಯಲ್ಲಿದೆ. ಇಲ್ಲಿ ಮೂರು ಗರ್ಭಗೃಹಗಳು ಇವೆ. ಮಧ್ಯದ ಗರ್ಭಗೃಹದಲ್ಲಿ ಪೀಠದ ಮೇಲೆ ಪದ್ಮಾಸನದಲ್ಲಿ ವಿಘ್ನಹಾರ ಪಾರ್ಶ್ವನಾಥ ಕಪ್ಪುಶಿಲೆಯ ಮೂರ್ತಿ ಇದೆ. ಈ ಮಧ್ಯದ ಗರ್ಭಗೃಹದ ಲಲಾಟದ ಮೇಲೆ ಪದ್ಮಾಸನದಲ್ಲಿ ಕುಳಿತಿರುವ ಜೈನಯತಿಯ ಮೂರ್ತಿ ಇದೆ. ಈ ಗರ್ಭಗೃಹ ಬಲಕ್ಕೆ ೨೪ ತೀರ್ಥಂಕರ ಚಿತ್ರವಿರುವ ಒಂದು ಜೈನ ಮೂರ್ತಿ ಇದೆ. ಇದರ ಎಡಭಾಗಕ್ಕೆ ಮತ್ತೊಂದು ಗರ್ಭಗೃಹವಿದೆ. ಅದರ ಪೀಠದ ಮೇಲೆ ಚಿಂತಾಮಣಿ ಪಾರ್ಶ್ವನಾಥರ ಮೂರ್ತಿ ಇದೆ. ಈ ಮೂರ್ತಿಯ ಬಲಕ್ಕೆ ಮತ್ತು ಎಡಕ್ಕೆ ಜೈನಯತಿಗಳ ಚಿತ್ರಗಳಿವೆ. ಗರ್ಭಗೃಹದ ಬಾಗಿಲಾದ ಲಲಾಟದ ಮೇಲೆ ಪಾರ್ಶ್ವನಾಥರ ಉಬ್ಬುಶಿಲ್ಪವಿದೆ. ಇದರ ಬಲಭಾಗಕ್ಕೆ ಧರಣೇಂದ್ರ ಮತ್ತು ಪದ್ಮಾವತಿಯ ಮೂರ್ತಿಶಿಲ್ಪಗಳಿವೆ. ಇದೇ ಬಾಗಿಲಿನ ಕೆಳಭಾಗದಲ್ಲಿ ಬಲಕ್ಕೆ ಮತ್ತು ಎಡಕ್ಕೆ ಜೈನ ಯಕ್ಷ ಯಕ್ಷಿಣಿಯರ ಉಬ್ಬುಶಿಲ್ಪಗಳಿವೆ. ಗರ್ಭಗೃಹದ ಎದುರಿಗೆ ಆದಿಪಾರ್ಶ್ವನಾಥರ ಗರ್ಭಗೃಹವಿದೆ. ಇದರಲ್ಲಿ ಪೀಠದ ಮೇಲೆ ಆದಿಪಾರ್ಶ್ವನಾಥರ ಮೂರ್ತಿ ಇದೆ. ಇದರ ಬಲಕ್ಕೆ ಮತ್ತು ಎಡಕ್ಕೆ ಜೈನ ಯತಿಗಳ ಚಿತ್ರಗಳಿವೆ. ಗರ್ಭಗೃಹದ ಬಾಗಿಲದ ಲಲಾಟದ ಮೇಲೆ ಪಾರ್ಶ್ವನಾಥರ ಮೂರ್ತಿ ಇದೆ. ಇದೆ ಬಾಗಿಲದ ಕೆಳಭಾಗದಲ್ಲಿ ಜೈನ ಯಕ್ಷ ಯಕ್ಷಣಿಯರ ಉಬ್ಬುಶಿಲ್ಪಗಳಿವೆ. ಈ ಗರ್ಭಗೃಹದ ಹೊರಭಾಗದ ಬಲಕ್ಕೆ ಬಿಳಿಕಲ್ಲಿನ ನಗ್ನ ಬಾಹುಬಲಿಯ ನಿಂತ ಮೂರ್ತಿಶಿಲ್ಪವಿದೆ. ಇದರ ಎದುರಿಗೆ ಸರಸ್ವತಿಯ ಮೂರ್ತಿ ಇದೆ. ಈ ಮೂರು ಗರ್ಭಗೃಹಗಳು ಒಂದೇ ಸಭಾಮಂಟಪಕ್ಕೆ ಹೊಂದಿಕೊಂಡಿವೆ. ಆ ಸಭಾಮಂಟಪದಲ್ಲಿ ಕ್ಷೇತ್ರಪಾಲ, ಪಾರ್ಶ್ವನಾಥರ ಮೂರ್ತಿ ಮತ್ತು ನಾಗಶಿಲ್ಪದಲ್ಲಿ ಪದ್ಮಾವತಿ ಮತ್ತು ಧರಣೇಂದ್ರರ ಮೂರ್ತಿ ಇದೆ. ಪಕ್ಕದಲ್ಲಿ ಒಂದು ಗಣೇಶನ ಮೂರ್ತಿ ಇದೆ. ಈ ಜಿನಾಲಯದ ಮುಖ್ಯದ್ವಾರದ ಲಲಾಟದ ಮೇಲೆಯು ಪಾರ್ಶ್ವನಾಥರ ಉಬ್ಬುಶಿಲ್ಪ ಇದೆ. ಈ ದ್ವಾರದ ಕೆಳಭಾಗದಲ್ಲಿ ಎಡ ಮತ್ತು ಬಲಭಾಗಕ್ಕೆ ಹೊಂದಿಕೊಂಡಂತೆ ಜೈನ ಯಕ್ಷ ಯಕ್ಷಿಣಿಯರ ಉಬ್ಬುಶಿಲ್ಪಗಳಿವೆ. ಈ ಜಿನಾಲಯದ ಹೊರ ಬಿತ್ತಿಯ ಮೇಲೆಯೂ ಸಹ

ಜೈನ ಯಕ್ಷ ಯಕ್ಷಿಣಿಯರ ಉಬ್ಬುಶಿಲ್ಪಗಳು ಬಲ ಮತ್ತು ಎಡಭಾಗಕ್ಕೆ ಇವೆ. ಈ ಜಿನಾಲಯ ದ್ವಾರಬಾಗಿಲ ಮೇಲೆ ಶ್ರೀ ೧೦೦೮ ಪಾರ್ಶ್ವನಾಥ ಭಗವಾನ್ ದಿ.ಜೈನ ಅತಿಶಯ ಕ್ಷೇತ್ರ ಈ ಹೆಸರಿನ ಜೊತೆಗೆ ಕೆಳಭಾಗದಲ್ಲಿ ೧೧ನೇ ಶತಮಾನದ ಪಂಚಕೂಟ ದಿಗಂಬರ ಜೈನ ಮಂದಿರ ಎಂದು ಭಿತ್ತಿಯ ಮೇಲೆ ಬರೆಯಲಾಗಿದೆ. ಈ ಜಿನಾಲಯದ ಮುಂದೆ ಮಾನಸ್ಥಂಭ/ದೀಪಸ್ಥಂಭವಿದೆ. ತ್ರಿಕೂಟ ಬಸದಿ ಜಿನಾಲಯವಾಗಿರುವ ಈ ಜಿನಾಲಯದ ಎಡಕ್ಕೆ ಮತ್ತು ಬಲಕ್ಕೆ ಜಿನಾಲಯಗಳಿವೆ. ಗರ್ಭಗೃಹದಲ್ಲಿ ಯಾವುದೇ ಮೂರ್ತಿ ಕಂಡುಬಂದಿಲ್ಲ. ಅವುಗಳನ್ನು ಜೀರ್ಣೋದ್ದಾರಗೊಳಿಸಿ ಅದರಲ್ಲಿ ಮೂರ್ತಿ ಪ್ರತಿಷ್ಠಾಪಿಸುವ ಹಂತದಲ್ಲಿದ್ದರು.[೧೪]

ಗ್ರಾಮ–ಹುಣಸಿ ಹಡಗಿಲ   ಸ್ಥಳ–ಅಲ್ಲಮಪ್ರಭು ದೇವಸ್ಥಾನದ ಹತ್ತಿರ

ಕಾಲ–೧೧ನೇ ಶತಮಾನ   ಸ್ಮಾರಕ–ಜೈನ ಜಿನಾಲಯ

ಧರ್ಮ– ಜೈನ   ದಿಕ್ಕು–ಪೂರ್ವ

ಈ ಜಿನಾಲಯದ ಗರ್ಭಗೃಹದಲ್ಲಿ ನಿಂತ ಪಾರ್ಶ್ವನಾಥನ ಕಪ್ಪುಶಿಲೆಯ ಮೂರ್ತಿ ಇದೆ. ಬಾಗಿಲು ಕಪ್ಪುಶಿಲೆಯಿಂದ ಕೂಡಿದೆ. ಇದರ ಒಳಗಡೆ ಎಡಭಾಗಕ್ಕೆ ನಿಂತ ಕಪ್ಪುಶಿಲೆಯ ನಗ್ನ ಬಾಹುಬಲಿಯ ಮೂರ್ತಿ ಇದೆ. ಇದರ ಪಕ್ಕದಲ್ಲಿ ಲಕ್ಷ್ಮಿ ಮತ್ತು ಕ್ಷೇತ್ರಪಾಲರ ಮೂರ್ತಿಶಿಲ್ಪಗಳಿವೆ. ಗರ್ಭಗೃಹದ ಬಲಭಾಗಕ್ಕೆ ಧರಣೇಂದ್ರ ಮತ್ತು ಪದ್ಮಾವತಿಯ ಮೂರ್ತಿಶಿಲ್ಪಗಳಿವೆ. ಈ ಎಲ್ಲ ಮೂರ್ತಿಶಿಲ್ಪಗಳು ಸಭಾಮಂಟಪದಲ್ಲಿ ಕಂಡುಬರುತ್ತವೆ. ಈ ದ್ವಾರದ ಲಲಾಟದ ಮೇಲೆ ಪದ್ಮಾಸನದಲ್ಲಿ ಕುಳಿತಿರುವ ತೀರ್ಥಂಕರನ ಉಬ್ಬುಶಿಲ್ಪವಿದೆ. ಈ ದ್ವಾರದ ಕೆಳಭಾಗದಲ್ಲಿ ಜೈನ ಯಕ್ಷಯಕ್ಷಣಿಯರ ಮೂರ್ತಿಶಿಲ್ಪಗಳಿರುವುದನ್ನು ಕಾಣುತ್ತೇವೆ. ಗರ್ಭಗೃಹದ ಮೇಲೆ ಶಿಖರವಿದೆ. ಇದರ ಮೇಲೆ ಗ್ರೀವ ಸ್ತೂಪಿಯು ಕಂಡುಬರುತ್ತದೆ. ಈಗ ಈ ಜಿನಾಲಯ ಸಂಪೂರ್ಣ ಜೀರ್ಣೋದ್ಧಾರವಾಗಿದೆ.[೧೫]

ಗ್ರಾಮ–ಶ್ರೀನಿವಾಸ ಸರಡಗಿ   ಸ್ಥಳ–ಹೊಲದಲ್ಲಿದೆ.

ಕಾಲ–೧೧ನೇ ಶತಮಾನ   ಧರ್ಮ–ಜೈನ

ದಿಕ್ಕು–ಪೂರ್ವ   ಪ್ರಕಟಣೆ–ಅಪ್ರಕಟಿತ

ಇದು ಮೂಲತಃ ಇರುವುದು ಜೈನ ಜಿನಾಲಯ. ಆದರೆ ಊರಿನ ಜನ ಇದಕ್ಕೆ ಯಲ್ಲಮ್ಮನ ದೇವಸ್ಥಾನವೆಂದು ಪೂಜಿಸುತ್ತಾರೆ. ಈ ಜಿನಾಲಯದ ಗರ್ಭಗೃಹದಲ್ಲಿ ಪೀಠದ ಮೇಲೆ ಜೈನ ತೀರ್ಥಕರನ ಮೂರ್ತಿ ಮತ್ತು ತಲೆ ಮೇಲೆ ಛತ್ರಿ ಇದೆ. ಶಿಖರವು

ಚೌಕಕಾರದ ರೀತಿಯಲ್ಲಿದ್ದು, ಅದರ ಮೇಲೆ ಹೂವಿನ ಎಸಳು ಮಧ್ಯದಲ್ಲಿ ಗ್ರೀವ ಇದೆ. ಈ ಜಿನಾಲಯದ ಬಲಭಾಗಕ್ಕೆ ಭಗ್ನಗೊಂಡ ಜೈನ ಯಕ್ಷಿಣಿಯರ ಮೂರ್ತಿಶಿಲ್ಪವಿದೆ. ಜಿನಾಲಯದ ಎದುರಿಗೆ ದ್ವೀಪಸ್ಥಂಭವಿದೆ. ಇದರ ಎಡಭಾಗಕ್ಕೆ ಸ್ವಲ್ಪ ದೂರದಲ್ಲಿ ವೀರಗಲ್ಲುಗಳು ಕಂಡುಬರುತ್ತವೆ. ಇದರ ಸಮೀಪದಲ್ಲಿಯೇ ಪಾಳುಬಿದ್ದ ಪ್ರಾಚೀನ ಕಾಲದ ಬಾವಿ ಇದೆ. ಒಟ್ಟಿನಲ್ಲಿ ಈ ಜೈನ ಜಿನಾಲಯ ಊರಿನ ಜನರ ದೃಷ್ಟಿಯಲ್ಲಿ, ಯಲ್ಲಮ್ಮನ ದೇವಸ್ಥಾನವಾಗಿದೆ.

೪.೫. ಕೋಟೆಗಳು

ಭಾರತೀಯ ಇತಿಹಾಸದಲ್ಲಿ ಕೋಟೆಯ ಪ್ರಾಚೀನತೆ ಪುರಾಣದ ಕಾಲಕ್ಕೆ ಹೋಗುತ್ತದೆ. ಇಂದ್ರ ಪ್ರಸ್ಥನಗರದ ಪಾಂಡವರ ಕೋಟೆಯ ಒಂದು ಭಾಗವನ್ನು ದೆಹಲಿಯ ಹುಮಾಯೂನನು ಸರಿಪಡಿಸಿದನೆಂಬುದು ಪ್ರತೀತಿ. ವಾಲ್ಮೀಕಿಯ ರಾಮಾಯಣದಲ್ಲಿ ಮತ್ತು ವ್ಯಾಸರ ಮಹಾಭಾರತದಲ್ಲಿಯೂ ಕೋಟೆಗಳ ಉಲ್ಲೇಖ ಇದೆ. ಹರಪ್ಪಾ ಮತ್ತು ಮೆಹೆಂಜದಾರೊಗಳಲ್ಲಿ ಕೋಟೆಗಳಿದ್ದುದು ಉತ್ಖನನ ವರದಿಗಳಿಂದ ತಿಳಿಯುತ್ತದೆ. ಮೌರ್ಯ ಸಾಮ್ರಾಜ್ಯದ ಕಾಲದಲ್ಲಿ ಗ್ರೀಕರ ರಾಯಭಾರಿಯಾಗಿ ಮೊದಲನೆ ಚಂದ್ರಗುಪ್ತನ ಆಸ್ಥಾನಕ್ಕೆ ಬಂದಿದ್ದ ಮೇಗಸ್ತಾನಿಸನು ಪಾಟಲಿಪುತ್ರ ನಗರದ ಕೋಟೆಯನ್ನು ವರ್ಣಿಸಿದ್ದಾನೆ.

ರಾಜರ ಮತ್ತು ಚಿಕ್ಕ ಸಂಸ್ಥಾನದ ಮುಖ್ಯಸ್ಥರ ಅತಿ ಹೆಚ್ಚಿನ ಬಲ ಈ ಕೋಟೆಗಳೇ. ಕೋಟೆಯಿಂದ ರಕ್ಷಿತವಾಗಿಲ್ಲದ ಪಟ್ಟಣಗಳನ್ನು ಶತ್ರುಗಳು ಬಹು ಸುಲಭವಾಗಿ ಸ್ವಾಧೀನಪಡಿಸಿ ಕೊಳ್ಳಬಲ್ಲರು. ಆದ್ದರಿಂದ ಆಳುವವರು ಅತ್ಯವಶ್ಯಕವಾಗಿ ಕೋಟೆಯನ್ನು ಕಟ್ಟಬೇಕೆಂದು ಸಾಮ್ರಾಜ್ಯ ಲಕ್ಷ್ಮಿ ಪೀಠಿಕಾದಲ್ಲಿ ಪ್ರಸ್ತಾಪವಾಗಿದೆ.[೧೬]

ಕರ್ನಾಟಕದ ಉತ್ತರ ಭಾಗದಲ್ಲಿ ಮುಸ್ಲಿಮರ ರಾಜ್ಯಗಳು ಸ್ಥಾಪನೆಯಾದವು. ಇದರಲ್ಲಿ ಮೊದಲು ರಾಜ್ಯಭಾರ ಪ್ರಾರಂಭಿಸಿದವರು ಗುಲಬರ್ಗಾದ ಬಹುಮನಿ ಅರಸರು ೧೪ ರಿಂದ ೧೬ನೇ ಶತಮಾನದವರೆಗೆ ಆಳಿದ ಈ ವಂಶದ ಅರಸರು ಗುಲಬರ್ಗಾ, ಫಿರೋಜಾಬಾದ್, ಬೀದರ, ಸಗರ ಕೋಟೆಗಳನ್ನು ಕಟ್ಟಿಸಿದರು. ನನ್ನ ಅಧ್ಯಾಯದ ವ್ಯಾಪ್ತಿಗೆ ಸಂಬಂಧಪಟ್ಟಂತೆ ಕೋಟೆಗಳ ಬಗ್ಗೆ ಮಾಹಿತಿ ಸೆರೆ ಹಿಡಿಯುವ ಪ್ರಯತ್ನ ಮಾಡಲಾಗಿದೆ.

ಗುಲಬರ್ಗಾ ಕೋಟೆ

ಗುಲಬರ್ಗಾದ ಕೋಟೆಯನ್ನು ವಾರಂಗಲ್‌ನ ಅರಸ ರಾಜಾ ಗುಲಚಂದನು ನಿರ್ಮಿಸಿದ್ದು. ಅದನ್ನು ಅಲ್ಲಾವುದ್ದೀನ್ ಬಹಮನ್ ಷಾನು ಬಲಿಷ್ಠಗೊಳಿಸಿದನೆಂಬ ಅಭಿಪ್ರಾಯವಿದೆಯಾದರೂ,

ರಾಜಾ ಗುಲಚಂದನೇ ಈ ಕೋಟೆಯನ್ನು ಕಟ್ಟಿಸಿದನೆಂದು ಹೇಳಲು ಚಾರಿತ್ರಿಕ ಪುರಾವೆಗಳ ಕೊರತೆ ಇದೆ. ಸುಮಾರು ೨೦ ಎಕರೆಯಷ್ಟು ವಿಶಾಲವಾದ ಪ್ರದೇಶವನ್ನು ಹೊಂದಿರುವ ಮೂರು ಕಿ.ಮೀ.ಸುತ್ತಳತೆಯ ಈ ಕೋಟೆಯು ಎರಡು ಎರಡು ಸುತ್ತಿನದಾಗಿದ್ದು, ಹೊರ ಕೋಟೆಯು ಎತ್ತರದಲ್ಲಿ ಕಿರಿದಿದ್ದು, ಒಳಕೋಟೆ ಎತ್ತರವಾಗಿದ್ದು, ಸುತ್ತ ೩೦ ಅಡಿಯ ಕಂದಕವಿದೆ.[೧೭] ಅನಿಯಮಿತಾಕಾರದ ಕೋಟೆಯು ಜೋಡಿ ಗೋಡೆಗಳಿಂದ ನಿರ್ಮಿತವಾಗಿದೆ. ಕೋಟೆಯ ಸುತ್ತಲು ಆಳ ಮತ್ತು ಅಗಲವಾದ ಕಂದಕವಿದೆ. ಪೂರ್ವ ಮತ್ತು ವಾಯುವ್ಯ ದಿಕ್ಕುಗಳಲ್ಲಿ ದೊಡ್ಡ ಬಾಗಿಲುಗಳು, ಪೂರ್ವಕ್ಕೆ ಎರಡು ಮತ್ತು ದಕ್ಷಿಣಕ್ಕೆ ಒಂದು ಚಿಕ್ಕ ಬಾಗಿಲುಗಳಿವೆ. ಪೂರ್ವಕ್ಕಿರುವ ಮುಖ್ಯ ಬಾಗಿಲಿನ ಪ್ರವೇಶದ ಪಾರ್ಶ್ವಗಳಲ್ಲಿ ಕಾವಲುಗಾರರ ಕೊಠಡಿಗಳಿವೆ. ವಾಯುವ್ಯ ದಿಕ್ಕಿನಲ್ಲಿರುವ ಬಾಗಿಲು ಐದು ಬಾಗಿಲುಗಳ ದೊಡ್ಡ ಸಂಕೀರ್ಣವಾಗಿದೆ. ಉತ್ತರಾಭಿಮುಖವಾಗಿರುವ ಹೊರಬಾಗಿಲಿನ ಎದುರಿಗೆ ಕಂದಕದ ಮತ್ತೊಂದು ಬದಿಗೆ ಕಾವಲುಗಾರರ ಕೊಠಡಿಗಳಿವೆ. ಕಮಾನಿನಾಕಾರದ ಈ ಬಾಗಿಲು ಅರ್ಧವೃತ್ತಾಕಾರದ ಎರಡು ಬುರುಜುಗಳ ಮಧ್ಯದಲ್ಲಿದೆ. ಹೊರಬಾಗಿಲಿನ ದಪ್ಪವಾದ ಮರದ ಕದಗಳಿಗೆ ಕಬ್ಬಿಣದ ಅಡ್ಡ ಮತ್ತು ಉದ್ದ ಪಟ್ಟಿಗಳನ್ನು ಮತ್ತು ಚೂಪು ತಲೆಯ ದಪ್ಪ ಮೊಳೆಯನ್ನು ಹೊಡೆದಿದೆ. ಕದಗಳ ಮಧ್ಯಭಾಗದಲ್ಲಿ ಉದ್ದವಾದ ಶೂಲದಂತಹ ತಿರುಗಣಿ ಮೊಳೆಗಳಿವೆ. ಒಂದೇ ತಳಭಾಗದಿಂದ ನಾಲ್ಕು ಶೂಲಗಳು ಹೊರಬರುವಂತೆ ವಿನ್ಯಾಸಗೊಳಿಸಿ, ಬೇರೊಂದು ದಪ್ಪ ಮೊಳೆಯಿಂದ ಕದಕ್ಕೆ ಸೇರಿಸಿದೆ. ಪ್ರತಿ ಕದದ ಮೇಲೆ ಇಂತಹ ೩೬(೪x೯) ಮೊಳೆಗಳಿವೆ. ಈ ಮೊಳೆಗಳು ಸರಿಯಾಗಿ ಆನೆಯ ತಲೆಯ ಎತ್ತರಕ್ಕಿವೆ. ಆನೆಯಿಂದ ಕದವನ್ನು ತೆರೆಯಲು ಪ್ರಯತ್ನಿಸಿದರೆ, ಈ ಮೊಳೆಗಳು ಆನೆಯ ತಲೆಗೆ ಚುಚ್ಚುತ್ತವೆ. ಕದಗಳನ್ನು ಮುಚ್ಚಿದಾಗ ಉಪಯೋಗಿಸಲು ಪಕ್ಕದಲ್ಲಿ 'L' ಆಕಾರದ ಚಿಕ್ಕ ಉಪಬಾಗಿಲಿದೆ. ನಿರ್ದಿಷ್ಟ ಅಂತರದಲ್ಲಿ ಬೃಹತ್ ತೆನೆಗಳನ್ನು ಹೊಂದಿರುವ ಈ ಕೋಟೆಯು ೧೫ ಬುರುಜುಗಳನ್ನು ಹೊಂದಿದ್ದು, ಇಲ್ಲಿ ಸುಮಾರು ೨೬ ಫಿರಂಗಿಗಳಿವೆ. ಇವುಗಳಲ್ಲಿ ಒಂದು ಸುಮಾರು ೨೫ ಅಡಿಯಷ್ಟು ಉದ್ದವಿದೆ. ಇದರ ಹೆಬ್ಬಾಗಿಲ ಬಳಿ-ಕಾಮನಬಾವಿ ಇದ್ದು, ಕೋಟೆಯ ಒಳಗೆ ನಡುವೆ ಎತ್ತರದ ವಾಡೆಯಿದ್ದು, ಮೇಲೆ ಮೂರ್ನಾಲ್ಕು ತೋಪುಗಳಿವೆ. ಗುಲ್ಬರ್ಗಾದ ಕೋಟೆಯ ರಚನೆಯಲ್ಲಿ ಪಶ್ಚಿಮ ಏಷ್ಯಾ ಮತ್ತು ಐರೋಪ್ಯ ಕ್ಷಾತ್ರ ವಾಸ್ತುವಿನ ಪ್ರಭಾವ ಗಾಢವಾಗಿದೆಯೆಂಬ ಅಭಿಪ್ರಾಯವಿದೆ. ಇದು ಅಲ್ಲಾವುದ್ದೀನ್ ಬಹಮನ್ ಷಾ(೧೩೪೭-೫೮)ನ ಕಾಲದ ಸುಭದ್ರ ರಚನೆಯಾಗಿದೆ.[೧೮]

ದೊಡ್ಡ ಬರುಜಿನ ಮೇಲೆ ಉದ್ದ ಪಟ್ಟಿ ಮತ್ತು ಬಳೆಗಳಿಂದ ಮಾಡಿದ ದೊಡ್ಡ ತೋಪಿದೆ. ತೋಪನ್ನು ಹೊತ್ತಿರುವ ನಿಲುವು(Mount) ಸುಸ್ಥಿತಿಯಲ್ಲಿದೆ. ನಿಲುವಿನ ಕೆಳಭಾಗದ ಚೂಪಾದ ತುದಿಯನ್ನು ಕೆಳಗಿನ ಕಲ್ಲಿನ ರಂಧ್ರದಲ್ಲಿ ಸಿಕ್ಕಿಸಿದೆ. ನಿಲುವಿನ ಮೇಲ್ಭಾಗ 'U' ಅಕಾರದಲ್ಲಿದೆ. ಈ ಕೈಗಳು ತೋಪಿನಿಂದ ಹೊರಚಾಚಿದ ಹಿಡಿಗಳನ್ನು ಹಿಡಿಯುತ್ತವೆ. ಈ ಐದು ಬಾಗಿಲುಗಳ ಅಂಗಳಗಳಲ್ಲಿಯ ಬುರುಜುಗಳ ಬಾಗಿಲುಗಳ ಮತ್ತು ಕೋಟೆ ಗೋಡೆಯ ಮೇಲಿನ ಕಾವಲು ಭಟರಿಂದ ತಪ್ಪಿಸಿಕೊಂಡು ಕೋಟೆಯೊಳಗೆ ಹೋಗುವುದು ಬಹಳ ಕಷ್ಟಕರ.[೧೯]

ತೋಪುಗಳ ರಚನೆ

ಟರ್ಕಿ, ಸ್ಪೇನ್ ಮತ್ತು ಪರ್ಶಿಯಾದಿಂದ ಬಂದ ಸೈನಿಕರು ಮತ್ತು ಲೋಹ ತಯಾರಕರು ಗುಲ್ಬರ್ಗಾದ ಬಹುಮನಿಯಲ್ಲಿ ಸೇವೆಗೆ ಸೇರಿ ವಿವಿಧ ಆಕೃತಿಯ ತೋಪುಗಳ ಬಿಡಿ ಭಾಗಗಳನ್ನು ನಿರ್ಮಿಸಲು ಆರಂಭಿಸಿದರು. ಮೊದಲು ತೋಪಿನ ಬಿಡಿಭಾಗವನ್ನು ನಿರ್ಮಿಸಿ ಅದನ್ನು ನಿಗಧಿಪಡಿಸಿದ ಸ್ಥಳದಲ್ಲಿ ಕ್ರಮಬದ್ಧವಾಗಿ ಜೋಡಿಸಿ ಸ್ವಲ್ಪ ಪ್ರಮಾಣದಲ್ಲಿ ಶಾಖ ನೀಡಿ ಅದನ್ನು ಭದ್ರಗೊಳಿಸುತ್ತಿದ್ದರು. ತೋಪುಗಳ ರಚನೆಯ ಕ್ರಮ ಈ ರೀತಿಯಲ್ಲಿದೆ.

ಮೊದಲು ೪ ಇಂಚು ಅಗಲ ೧೫ ಅಡಿ ಉದ್ದ ಮತ್ತು ಒಂದು ಇಂಚು ದಪ್ಪನೆಯ ಲೋಹದ ಪಟ್ಟಿಯನ್ನು ಸಿದ್ಧಪಡಿಸಿ ನಂತರದಲ್ಲಿ ೨ ಇಂಚು ಅಗಲದ ಒಂದು ಇಂಚು ದಪ್ಪನೆಯ ಲೋಹದ ಬಳೆಗಳನ್ನು ತಯಾರಿಸುವುದು. ನಂತರ ಮುಂಭಾಗದಲ್ಲಿ ಮತ್ತು ಹಿಂಭಾಗಕ್ಕೆ ಅತಿ ದಪ್ಪನೆಯ ಬಳೆಗಳನ್ನು ತಯಾರಿಸಿಕೊಂಡು ಅದನ್ನು ಕ್ರಮಬದ್ಧವಾಗಿ ಜೋಡಿಸಲಾಗುವುದು. ಜೊತೆಗೆ ಅದನ್ನು ತಿರುಗಿಸಲು ಪ್ರತಿ ಎರಡು ಅಡಿಗೆ ಒಂದೊಂದು ಬಳೆಗಳನ್ನು ಜೋಡಿಸಲಾಗುವುದು. ಅತಿ ಭಾರವಾದ ತೋಪನ್ನು ಕೇವಲ ಕೆಲವೇ ಸೈನಿಕರು ತಿರುಗಿಸುವಂತೆ ಜೋಡಿಸಲಾಗುವುದು. ಗುಲಬರ್ಗ್ ಕೋಟೆಯ ಸುತ್ತಲು ೨೬ ತೋಪು ಕಟ್ಟೆಯನ್ನು ಗುರುತಿಸಲಾಗಿದೆ. ಅದರಲ್ಲಿ ೧೫ ಅಡಿ ಉದ್ದದ ೫ ತೋಪುಗಳು ೧೦ ಅಡಿ ಉದ್ದದ ೪ ತೋಪುಗಳು, ೪ ಅಡಿ ಉದ್ದದ ೨ ತೋಪುಗಳು ಮತ್ತು ೨೫ ಅಡಿ ಉದ್ದದ ದೈತ್ಯಾಕಾರದ ಒಂದು ತೋಪು ಇಂದಿಗೂ ಕೋಟೆಯ ಗೋಡೆಯ ಮೇಲಿದೆ. ಬೃಹದಾಕಾರದ ೨ ಅಥವಾ ೩ ತೋಪುಗಳಿದ್ದರೆ ಅದಕ್ಕಾಗಿ ದಪ್ಪನೆಯ ವೇದಿಕೆಯನ್ನು ನಿರ್ಮಿಸಲಾಗಿದೆ.[೨೦]

ಕೋಟೆಯ ಮಧ್ಯದಲ್ಲಿ ಜಾಮಿ ಮಸೀದಿಯ ದೊಡ್ಡ ಕಟ್ಟಡವಿದೆ. ಅನೇಕ ಕಮಾನುಗಳ ಕಟ್ಟಡದ ಮಳಿಗೆಯನ್ನು ಅನೇಕ ಗುಮ್ಮಟಗಳಿಂದ ನಿರ್ಮಿಸಿದೆ. ಇದರ ವಾಸ್ತುವಿನ್ಯಾಸ-

ಸ್ಪೇನಿನ ಕಾರ್ಡೋವದ ಪ್ರಸಿದ್ಧ ಮಸೀದಿಯನ್ನು ಹೋಲುತ್ತದೆಂದು ಹೇಳುತ್ತಾರೆ. ಈ ವಿನ್ಯಾಸದ ಮಸೀದಿ ಏಶಿಯಾದಲ್ಲಿ ಇರುವುದು ಇದೊಂದೆ.[೨೫] ಕ್ರಿ.ಶ.೧೪೨೪ರಲ್ಲಿ ಗುಲಬರ್ಗಾದ ಬಹುಮನಿ ಸುಲ್ತಾನರ ರಾಜಧಾನಿಯು ಬೀದರಕ್ಕೆ ಸ್ಥಳಾಂತರಿಸಲಾಯಿತು. ಈ ಕ್ರಮ ಕೈಗೊಂಡವ ೭ನೇ ವಂಶಾವಳಿಯ ಬಾದಶಹನಾದ ಶಹಬುದ್ದಿನ್ ಅಹಮ್ಮದಶಹ. ತನನಂತರ ಈ ಕೋಟೆಯ ಮಹತ್ವ ಕಡಿಮೆಯಾಗಿ ಅದು ಬೀದರಕ್ಕೆ ಹೋಯಿತು.[೨೧]

ಫಿರೋಜಾಬಾದ ಕೋಟೆ

ಗುಲಬರ್ಗಾದಿಂದ ದಕ್ಷಿಣಕ್ಕೆ ಭೀಮಾ ನದಿಯ ಬಲದಂಡೆಯ ಮೇಲಿರುವ ಚಾರಿತ್ರಿಕ ಮಹತ್ವದ ಸ್ಥಳಾಗಿದ್ದು, ರಾಜ್ಯ ಹೆದ್ದಾರಿ ಸಂಖ್ಯೆ ೧೬ಕ್ಕೆ ಹೊಂದಿ ಕೊಂಡಂತಿದೆ.[೪೦] ಮೊಘಲ ದೊರೆ ಅಕ್ಬರನು ಫತೇಪುರ ಸಿಕ್ರಿಯನ್ನು ಕಟ್ಟಿಸಿದಂತೆ ಬಹಮನಿ ಅರಸ ತಾಜುದ್ದೀನ್ ಫಿರೋಜ್ ಶಾಹ ಫೀರೋಜಾಬಾದನ್ನು ಕ್ರಿ.ಶ.೧೪೦೦ರಲ್ಲಿ ಕಟ್ಟಿಸಿದನು. ಗುಲಬರ್ಗಾದಿಂದ ರಾಜಧಾನಿಯನ್ನು ಇಲ್ಲಿಗೆ ವರ್ಗಾಯಿಸಬೇಕೆಂದು ಇಲ್ಲಿ ನಗರ ಮತ್ತು ಕೋಟೆಯನ್ನು ಕಟ್ಟಿಸಿದನು.[೨೨]

ಬಲಿಷ್ಟವಾದ ಕೋಟೆ, ಭದ್ರಬಾಗಿಲುಗಳು, ತೆನೆಗಳು, ಬುರುಜುಗಳು, ಪ್ರವೇಶ ಸುಂದರ ದ್ವಾರಗಳು, ಅಂಗಳ, ತೋಪುಗಳು, ಕಮಾನುಗಳುಳ್ಳ ಕಾವಲುಗಾರರ ಕೋಣೆಗಳು, ಬಂದೂಕು ಕಿಂಡಿಗಳು(Gunslits) ದಿಕ್ಕು ತಪ್ಪಿಸುವ ತಿರುಗುಗಳು(Barbicans) ಅಗಲವಾದ ಕೋಟೆ ಗೋಡೆಗಳು (Limestone) ಉದ್ದುದಾದ ಸುಣ್ಣದ ಕಲ್ಲುಗಳಿಂದ ಸಂದಿ ಇಲ್ಲದೆ ಕಟ್ಟಲ್ಪಟ್ಟಿವೆ. ಪೂರ್ವದ ಬಾಗಿಲು ಬಲು ಭದ್ರ, ಪಶ್ಚಿಮ ದಿಕ್ಕಿನಲ್ಲಿ ನಂದಿಯು ಸ್ವಾಭಾವಿಕ ರಕ್ಷಣಾವಲಯವನ್ನು ನಿರ್ಮಿಸಿದೆ. ಪೂರ್ವದ ಹಾಗೂ ಪಶ್ಚಿಮದ ಪ್ರವೇಶ ದ್ವಾರಗಳನ್ನು ಜೋಡಿಸುವ ಅಗಲ ರಸ್ತೆ, ಎಡಬಲ ಬದಿಗೆ ಅಳಿದುಳಿದ ಕಟ್ಟಳೆಗಳು. ನೀರಿನ ಸರಬರಾಜಿನ ವ್ಯವಸ್ಥೆ. ಅರಮನೆ ಅವರಣದ ಪೂರ್ವಕ್ಕೆ ದೊಡ್ಡ ಸುಂದರ ಜಾಮೀ ಮಸೀದಿ(೯೫x೯೫) ಮೀಟರ್ ಸಭಾಂಗಣ (avclience hall) ಇವೆ. ಕೋಟೆಯ ಉತ್ತರಕ್ಕೆ ೨ ಕಿ.ಮೀ. ದೂರದಲ್ಲಿ ಬಹುಮನಿ ಕಾಲದ ಖಲೀಫಲ್ ಆಲ್ ರಹಮಾನನ ದರ್ಗಾ ಇದೆ. ದಕ್ಷಿಣ ಭಾರತದಲ್ಲಿ ಇಸ್ಲಾಂ ಅರಸರು ಕಟ್ಟಿಸಿದ ಸುಂದರ ಕೋಟೆಗಳಲ್ಲಿ ಇದೊಂದು ಮೈಲುಗಲ್ಲಾಗಿದೆ.[೨೩]

ಕೋಟೆಯ ಮಧ್ಯದಲ್ಲಿ ಪಶ್ಚಿಮ ಬಾಗಿಲಿನಿಂದ ಪೂರ್ವಬಾಗಿಲಿಗೆ ಹೋಗುವ ಬೀದಿಯ ಉತ್ತರಕ್ಕೆ ಒಂದು ಶಿಥಿಲವಾದ ಕಟ್ಟಡವಿದೆ. ಇದರ ಗೋಡೆ ಮತ್ತು ಕಮಾನುಗಳನ್ನು

ನೋಡಿದರೆ ಇದು ೨೫೨ ಕಮಾನಿನ ಅಂಕಣಗಳ ಕಟ್ಟಡವೆಂದು ಗೊತ್ತಾಗುವುದು. ಇದರ ಕಮಾನುಗಳ ಮತ್ತು ಗೋಡೆಗಳ ಮೇಲೆ ಕತ್ತರಿಸಿದ ಗಾರೆಯಿಂದ ಮಾಡಿದ ವಿವಿಧ ವಿನ್ಯಾಸದ ಸುಂದರವಾದ ಅಲಂಕಾರಗಳಿವೆ. ಕೋಟೆಯೊಳಗೆ ಇನ್ನೂ ಅನೇಕ ಶಿಥಿಲವಾದ ಕಟ್ಟಡಗಳಿವೆ. ಕೋಟೆಯೊಳಗೆ ಜನ ವಾಸವಿಲ್ಲ. ಇಲ್ಲಿಯ ಭೂಮಿಯಲ್ಲಿ ಉಳುಮೆ ಮಾಡಲಾಗುತ್ತದೆ. ಈಗಿನ ಊರು ಕೋಟೆಯ ಪಶ್ಚಿಮಕ್ಕಿದೆ.[೨೪]

೪.೬. ಮಸೀದಿಗಳು

ಗುಲಬರ್ಗಾವನ್ನಾಳಿದ ಬಹಮನಿ ಅರಸರು ಕೇವಲ ರಾಜಕೀಯಕ್ಕೆ ಅಷ್ಟೇ ಮಹತ್ವ ಕೊಡದೆ, ಧಾರ್ಮಿಕತೆಗೂ ಅಷ್ಟೇ ಮಹತ್ವವನ್ನು ಕೊಟ್ಟಿದ್ದಾರೆ ಎನ್ನುವುದಕ್ಕೆ ಸಾಕ್ಷಿಯಾಗಿ ಅವರ ಕಾಲದಲ್ಲಿ ನಿರ್ಮಿಸಲಾದ ಮಸೀದಿಗಳು. ಇವರ ಕಾಲದಲ್ಲಿ ಮಸೀದಿಗಳು ಬಹಳಷ್ಟಿವೆ. ಆದರೆ ನನ್ನ ಅಧ್ಯಾಯನಕ್ಕೆ ಪ್ರಮುಖವಾಗಿರುವ ಕೆಲವು ಮಸೀದಿಗಳು ಇರುವ ಮಾಹಿತಿಯನ್ನು ಇಲ್ಲಿ ನೀಡಲಾಗಿದೆ.

೧. ಬಂದೇ ನವಾಜ ದರ್ಗಾ

೨. ಸಾತ್ ಗುಂಬಜ್

೩. ಜಾಮಿಯಾ ಮಜೀದ್

೪. ಲಂಗರಕಿ ಮಜಿದ್

೫. ಶಿಕಂದರಿಯಾ ಮಸೀದ್

೬. ಹಿರಾಬಿಬಿ ಮಸೀದಿ

೭. ಹಜರತ್ ರುಕ್ಮಾದಿನ್ ತೋಲ

೮. ಖಾದರ್ ಭಾಷಾ ದರ್ಗಾ

೯. ಬೋಡ್ಕೆ ಗೋರಿ ಗೂಮಜ್

೧೦. ಅಲ್ಲಾವುದ್ದೀನ್ ಹಸನ್ ಗಂಗೂ ಬಹುಮನಿಯ ಗೋರಿಗುಮ್ಮಟ

೧೧. ಚೊರ್ ಗುಮ್ಮಟ

ನಗರ–ಗುಲಬರ್ಗಾ	ಸ್ಥಳ–ರೋಜ ಬುರ್ಜ್
ಕಾಲ–೧೫ನೇ ಶತಮಾನ	ಸ್ಮಾರಕ– ಹಜರತ್ ಬಂದೇ ನವಾಜ್ ದರ್ಗಾ
ಧರ್ಮ–ಇಸ್ಲಾಂ	ದಿಕ್ಕು–ದಕ್ಷಿಣ

ಬಂದೇನವಾಜ್‌ರ ದರ್ಗಾ ಗುಲಬರ್ಗಾದ ರೋಜಬುರ್ಜ್ ಸಮೀಪದಲ್ಲಿದೆ. ದರ್ಗಾಕ್ಕೆ ಒಂದು ಚೌಕಾದ ಬೃಹತ್ ಕಟ್ಟಡವಿದ್ದು ಅದರ ಮೇಲೆ ಎತ್ತರದ ಗುಮ್ಮಟವಿದೆ. ಇದಕ್ಕೆ ಮೂರು ಕಡೆಗಳಲ್ಲಿ ಮೂರು ಕಮಾನುಗಳುಳ್ಳ ಪ್ರವೇಶದ್ವಾರಗಳಿದ್ದು, ನೋಡಲು ಎರಡು ಅಂತಸ್ತಿನ ಕಟ್ಟಡದಂತೆ ಇದೆ. ಒಳಗಡೆಗೆ ಮೂರು ಗೋರಿಗಳಿದ್ದು, ನಡುವಿನದೇ 'ಹಜರತ್ ಖ್ವಾಜಾ ಬಂದೇನವಾಜ್' ರದ್ದಾಗಿದೆ. ಪಕ್ಕದ ಎರಡು ಗೋರಿಗಳು ಅವರ ಮಕ್ಕಳಾದ 'ಅಕ್ಬರ್ ಹುಸ್ಸೇನಿ' ಮತ್ತು 'ಅಸ್ಗರ್ ಹುಸ್ಸೇನಿ'ಯರದ್ದಾಗಿದೆ. ಈ ಗೋರಿಗಳ ತುದಿ ಭಾಗಗಳೂ ಕಿರಿದಾದ ಕಮಾನುಗಳಿಂದ ಕೂಡಿದೆ. ಈ ಗೋರಿಗಳು ಉತ್ತರ-ದಕ್ಷಿಣಾಭಿಮುಖವಾಗಿದೆ. ಒಳಗಡೆಗೆ ಮೂರು ಕಮಾನುಗಳು ಒಂದೇ ಗೋಡೆಗಳಲ್ಲಿವೆ. ಒಂದಕ್ಕೆ ಕಮಾನುಳ್ಳ ದ್ವಾರವಿದ್ದು ಗೋಡೆಯ ಬದಿಯ ಕಮಾನುಗಳಲ್ಲಿ ತೋರಣಗಳ ಬದಿಗಳಲ್ಲಿ ವೃತ್ತಪದಕಗಳ ಅಲಂಕರಣೆ ಇದೆ. ಪಶ್ಚಿಮದ ಗೋಡೆಯಲ್ಲಿನ ಕಮಾನುಗಳಿಗೆ ತಗ್ಗುಗಳ ಕೆತ್ತನೆಯಿದೆ. ಪ್ರವೇಶದ್ವಾರದ ಕಮಾನುಗಳ ಬಾಗಿಲು ಫಲಕಗಳಲ್ಲಿ ಒಂದರ ಮೇಲೊಂದು ಕುಂಭಗಳ ಅಲಂಕರಣವಿದೆ. ದಕ್ಷಿಣ ದ್ವಾರದ ಮೇಲೆ ಪವಿತ್ರ ಖುರಾನನ್ನು ಪರ್ಷಿಯನ್ ಭಾಷೆಯಲ್ಲಿ ಬರೆಸಲಾಗಿದೆ.[೨೫]

ನಗರ-ಗುಲಬರ್ಗಾ	ಸ್ಥಳ–ನ್ಯಾಷನಲ್ ಪದವಿ ಕಾಲೇಜಿನ ಪಕ್ಕ
ಕಾಲ–೧೫ನೇ ಶತಮಾನ	ಸ್ಮಾರಕ–ಹಫ್ತ್ ಗುಂಬಜ್
ಧರ್ಮ–ಇಸ್ಲಾಂ	ದಿಕ್ಕು–ಉತ್ತರ

ಒಂದೇ ಪ್ರದೇಶದಲ್ಲಿ ಏಳು ಗುಂಬಜ್‌ಗಳು ಕಂಡುಬರುವುದರಿಂದ ಈ ಸ್ಮಾರಕವನ್ನು ಹಫ್ತ್ ಗುಂಬಜ್ ಎಂದು ಕರೆಯಲಾಗುತ್ತದೆ. ಇದೊಂದು ಉತ್ತಾರಾಭಿಮುಖವಾಗಿರುವ ಇದು ಜೋಡು ಗುಮ್ಮಟವಾಗಿದೆ. ಜೋಡು ಗುಮ್ಮಟಗಳೆರಡು ಚೌಕದ ಎರಡು ವಿಶಾಲ ಎತ್ತರದ ಕೋಣೆಗಳ ಮೇಲಿದೆ. ಇವುಗಳ ನಡುವಿನ ಗೋಡೆಗೆ ದಾರಿಯಿದೆ. ಈ ಗೋರಿ ಸ್ಮಾರಕದ ತಳಪಾಯ, ಗೋಡೆಗಳು, ಕಮಾನುಗಳು ಮತ್ತು ಗುಮ್ಮಟಗಳ ಪಕ್ಕ ಮುಜಾಹಿರ್ ಷಾಹನ ಗೋರಿಯಿದೆ. ತಲಾ ಒಂದು ಸ್ಮಾರಕದ ಮೂರು ಗೋಡೆಗಳಲ್ಲಿ ಮೂರು ಕಮಾನುಳ್ಳ ಪ್ರವೇಶದ್ವಾರಗಳಿವೆ. ಎಡ ಗೋಡೆಯ ಸ್ಮಾರಕದ ಗೋಡೆಯ ನಡುವೆ ಒಂದು ಸಣ್ಣ ಗೂಡಿದೆ. ಒಳಗಡೆಗೆ ಗೋಡೆಯ ಮೇಲೆ ಕಮಾನಿನ ತೋರಣಕ್ಕೆ ಹೂಬಳ್ಳಿಗಳ ಅಲಂಕರಣವಿದೆ.

ಎರಡು ಸಾಲಿನಲ್ಲಿ ಖುರಾನ್ ಶ್ಲೋಕವನ್ನು ಬರೆಯಲಾಗಿದೆ. ದೊಡ್ಡ ಕಮಾನಿನ ಮತ್ತು ಗೋಡೆಯ ಮೇಲಿನ ಸಣ್ಣ ಕಮಾನುಗಳಲ್ಲಿರುವ ಅರೆಗಂಬಗಳಲ್ಲಿ ಒಂದರ ಮೇಲೆ ಪೂರ್ಣ ಕುಂಭಗಳಿದ್ದು ಅವುಗಳ ಮೇಲೆ ಎಲೆಗಳಲ್ಲಿ ವೃತ್ತಪದಕಗಳಿವೆ. ಈ ಸ್ಮಾರಕದ ಒಳಗಡೆಗೆ ನಡುವೆ ಒಂದು ಆಯತಾಕಾರದ ಗೋರಿಯಿದೆ. ಇದಕ್ಕೂ ಸಹ ಆಯಾತಾಕಾರದ ಪಟ್ಟಿಕೆಯ ಮೇಲೆ ಕಮಾನಿನಕಾರ ಗುಮ್ಮಟವಿದೆ. ಇದನ್ನು ಇಟ್ಟಿಗೆ ಮತ್ತು ಗಾರೆಯಿಂದ ಕಟ್ಟಲಾಗಿದೆ.

ಇಮ್ಮಡಿ ಮಹಮ್ಮದ್ ಷಾನ ಗೋರಿ ಗುಮ್ಮಟ

ಈ ಗೋರಿ ಗುಮ್ಮಟವು ಹಾಫ್ತ್ ಗುಂಬಜ್‌ನಲ್ಲಿ ಒಂದಾಗಿದೆ. ಜೋಡು ಚೌಕೋಣೆಗಳ ಮೇಲೆ ಗುಮ್ಮಟಗಳನ್ನು ಏಕ ಜಗತಿಯ ಮೇಲೆ ನಿರ್ಮಿಸಲಾಗಿದೆ. ಇದಕ್ಕೆ ಮೂರು ದ್ವಾರಗಳು ಮೂರು ಕಡೆಗಳಲ್ಲಿವೆ. ಪಶ್ಚಿಮದ ಗೋಡೆಗೆ ಯಾವುದೇ ದ್ವಾರಗಳಿಲ್ಲ. ಅದು ಏಕಗೋಡೆಯಾಗಿದ್ದು, ಇದರ ಮಧ್ಯ ಭಾಗದಲ್ಲಿ ಮಿಹರಬ್‌ಯಿದೆ. ಒಳಗಿನ ನೆಲ ಸಾಕಷ್ಟು ಶಿಥಿಲವಾಗಿದೆ. ಇಲ್ಲಿ ಯಾವ ಗೋರಿಗಳು ಇರುವುದಿಲ್ಲ. ಮಾಳಿಗೆಯ ಅಂಚಿನ ಸುತ್ತಲಿನ ಗೋಡೆಯಲ್ಲಿ ಚೂಪಾದ ಕಮಾನು ತಲೆಗಳಿವೆ. ಇದರ ನಾಲ್ಕು ಮೂಲೆಗಳಲ್ಲಿ ನಾಲ್ಕು ಕಿರು ಎತ್ತರದ ಮಿನರೆಟ್ಸ್‌ಗಳಿವೆ. ಇವುಗಳಲ್ಲಿ ತಲಾ ಒಂದಕ್ಕೆ ಕಿರು ಎತ್ತರದ ಕಂಬಗಳ ಮೇಲೆ ಗುಮ್ಮಟಗಳಿವೆ.

ತಾಜುದ್ದೀನ್ ಫಿರೋಜ್ ಷಾಹ ಬಹುಮನಿ ಗೋರಿ ಗುಮ್ಮಟ

ಹಾಫ್ತ್ ಗುಮ್ಮಜ್ ಸಂಕೀರ್ಣದಲ್ಲಿ ದಾವೂದ್ ಗೋರಿಗುಮ್ಮಟ ಪೂರ್ವಕ್ಕೆ ಫಿರೋಜ್ ಷಾಹ ಬಹುಮನಿಯ ಗೋರಿ ಗುಮ್ಮಟವಿದೆ(೧೪೨೨). ಇದರಲ್ಲಿ ಮೊಟ್ಟ ಮೊದಲ ಎರಡು ಅಂತಸ್ತಿನ ಭಿತ್ತಿಯನ್ನು ಕಾಣಬಹುದು. ಹೊರ ಗೋಡೆಗಳಲ್ಲಿ ಎರಡು ಸಾಲುಗಳುಳ್ಳ ಕಮಾನುಗಳಿವೆ. ಈ ಎರಡು ಸಾಲುಗಳ ನಡುವೆ ಸರಳ, ಅಡ್ಡ ಪಟ್ಟಿಯಿದೆ. ಕೆಳ ಸಾಲಿನಲ್ಲಿ ತಲಾ ಒಂದು ಕೋಣೆಯ ಪ್ರವೇಶ ದ್ವಾರದ ಬದಿಗಳಲ್ಲಿ ಎರಡೆರಡು ಕಮಾನುಗಳಿವೆ. ತಲಾ ಒಂದಕ್ಕೆ ಪ್ರವೇಶ ದ್ವಾರದ ಬದಿಯಲ್ಲಿ ಕಿರು ಕಿಂಡಿಗಳಿವೆ. ಕಮಾನುಗಳ ಹೊರ, ಒಳ ಮುಖಗಳಲ್ಲಿ ಹೂ, ಬಳ್ಳಿ ಮತ್ತು ರೇಖಾಚಿತ್ರಗಳ ಅಲಂಕರಣಗಳಿವೆ. ಮಾಳಿಗೆಯ ಸುತ್ತಲೂ ಅಂಚಿನಲ್ಲಿ ಕೋಣೆಗಳ ಮೇಲೆ ಆರು ಕಿರು ಎತ್ತರದ ವೃತ್ತಾಕಾರದ ಚಿತ್ರಣವಿದೆ. ತಲಾ ಒಂದಕ್ಕೆ ಕಿರು ಕಂಬದ ಮೇಲೆ ಗುಮ್ಮಟಗಳಿವೆ. ಇನ್ನುಳಿದ ಗುಮ್ಮಟಗಳು ಇದೆ ಶೈಲಿಯನ್ನು ಹೋಲುತ್ತವೆ. ಇವುಗಳ ವೈಶಿಷ್ಟ್ಯವೆಂದರೆ ೭ ಗೋರಿ ಗುಮ್ಮಟಗಳು ಒಂದೇ ಸ್ಥಳದಲ್ಲಿ ಕಂಡುಬರುತ್ತವೆ.[೨೪]

ನಗರ–ಗುಲಬರ್ಗಾ　　　　ಸ್ಥಳ–ಕೋಟೆಯ ಮಧ್ಯದಲ್ಲಿದೆ.

ಕಾಲ– ೧೪ನೇ ಶತಮಾನ　　　　ಸ್ಮಾರಕ– ಜಾಮಿಯಾ ಮಸೀದಿ

ಧರ್ಮ– ಇಸ್ಲಾಂ　　　　ದಿಕ್ಕು–ಉತ್ತರ

ಈ ಮಸೀದಿ ಗುಲಬರ್ಗಾ ನಗರದ ಮಧ್ಯದಲ್ಲಿರುವ ಕೋಟೆಯಲ್ಲಿದೆ. ಇದು ಕ್ರಿ.ಶ.೧೩೬೭ರ ಕಾಲದ ವಿಶಿಷ್ಟ ರೀತಿಯ ಭವ್ಯ ಮಸೀದಿಯಾಗಿದೆ. ಈ ಮಸೀದಿಯಲ್ಲಿ ಯಾವುದೇ ರೀತಿಯ ಮಜರ(ಸಮಾಧಿ) ಕಂಡುಬರುವುದಿಲ್ಲ. ಜಾಮಿಯಾ ಪದ ಈ ರೀತಿ ಅರ್ಥ ಕೊಡುತ್ತದೆ, ಜಮಾ ಎಂದರೆ ಒಂದೆಡೆ ಸೇರು ಎಂಬರ್ಥವಿದೆ. ಅದೇ ಮುಂದೆ ಜಾಮಿಯಾ ಮಸೀದಾಗಿ ಪರಿವರ್ತನೆ ಹೊಂದಿದೆ. ಈ ಮಸೀದಿಯನ್ನು ವಾಯುವ್ಯ ಪರ್ಶಿಯಾದ ಕ್ವಾಜ್ವಿನ್ ಪ್ರಾಂತದ ವಾಸ್ತುಶಿಲ್ಪ ತಂತ್ರಜ್ಞನಾದ 'ಮಹಮ್ಮದ್ ರಫಿ ಬಿನ್ ಮನಸೂರ್ ಕಾಜ್ವಿನ್' ಎಂಬುವವನು ಹಸನ ಗಂಗೂ ಬಹುಮನಿಯ ಕಾಲದಲ್ಲಿ ಕಟ್ಟಿಸಿದನು. ಇದರಲ್ಲಿ ೧೪೦ ಸ್ತಂಭಗಳುಳ್ಳ ವಿಶಾಲವಾದ ಪ್ರಾರ್ಥನಾ ಮಂದಿರವಿದೆ. ೫ ದೊಡ್ಡ ಮತ್ತು ೭೩ ಗುಮ್ಮಟಗಳಿವೆ. ೨೫೦ ಕಮಾನುಗಳಿವೆ. ಇಂಡೋ-ಇಸ್ಲಾಮಿಕ್ ಪ್ರಭಾವ ಇಲ್ಲಿದೆ. ಇದರ ವಿನ್ಯಾಸ ಮತ್ತು ರಚನೆ ಸ್ಪೇನಿನ ಪ್ರಸಿದ್ದ ಕಾರ್ಡೋವಾ ಮಸೀದಿಯ ಹೋಲಿಕೆಯನ್ನು ಹೊಂದಿದೆ.[೨೬]

ತಳಪಾಯದಲ್ಲಿ ವಿಶಾಲವಾದ ಪ್ರಾರ್ಥನಾ ಮಂದಿರಕ್ಕೆ ಮಿಹರಬ್ ಇದೆ. ಈ ಮಸೀದಿಯ ಕಟ್ಟಡದ ಹೊರ ಇಕ್ಕೆಲಗಳಲ್ಲಿ ಮೂರು ಮುಖಗಳಲ್ಲಿ(ಪೂರ್ವ, ಉತ್ತರ ಮತ್ತು ದಕ್ಷಿಣಕ್ಕೆ) ಒಂದೇ ಉತ್ತರ ಮತ್ತು ನಮೂನೆಯ ಕಂಬಗಳ ಮೇಲೆ ಕಮಾನುಗಳಿವೆ. ಕೆಲವುಗಳಿಗೆ ಜಾಲಿಗಳನ್ನು ಕೂಡಿಸಲಾಗಿದೆ. ಪಕ್ಕದ ಅಂಚುಗಳಲ್ಲಿ ತಲಾ ಒಂದು ಕಡೆಗೆ ವಿಶಾಲವಾದ ೧೩ ಕಮಾನುಗಳಿವೆ. ಮುಂದಿನ ಅಂಚಿನಲ್ಲಿ ಮಾತ್ರ ಒಂಬತ್ತು ಕಮಾನುಗಳ ಏಕ ಸಾಲಿದೆ. ಒಳ ಆವರಣದಲ್ಲಿ ಪೂರ್ವ ಮುಖದಲ್ಲಿ ಪ್ರವೇಶ ಕಮಾನುಗಳು ೧೨ ಸಾಲುಗಳಲ್ಲಿವೆ. ಅದರ ಅಳತೆ ಪೂರ್ವ-ಪಶ್ಚಿಮವಾಗಿ ೬೩.೮೦ ಮೀ. ಉದ್ದ ಮತ್ತು ಉತ್ತರ-ದಕ್ಷಿಣಾಭಿಮುಖವಾಗಿ ೫೦.೧೨ ಮೀ. ಅಗಲವಾಗಿದೆ. ಒಟ್ಟಾರೆ ಹೊರ ಅಂಚಿನ ಹಜಾರಿನ ಕಮಾನುಗಳು ವಿಶಾಲವಾಗಿದೆ. ಅಲ್ಲಿಂದ ಪಶ್ಚಿಮದ ಕಡೆಯ ಆರಾಧನ ಭಾಗದ ಮಿಹರಬ್‌ನಲ್ಲಿ ಸ್ವಲ್ಪ ಎತ್ತರದ ವೇದಿಕೆ ಚೌಕಾಗಿದೆ. ಇದರಲ್ಲಿ ನಾಲ್ಕು ಕಂಬಗಳಿವೆ. ಮೇಲೆ ಮೂರು ಕಡೆಗಳಲ್ಲಿ ಕಮಾನುಗಳಿವೆ. ನಾಲ್ಕನೆಯ ಕಮಾನು ಪಶ್ಚಿಮದ ಗೋಡೆಯನ್ನು ಒಳಗೊಂಡಿದೆ. ಈ ಮೂರು ಅಂಚಿನ ಭಾಗಗಳ ಕಮಾನುಗಳ ಮೇಲೆ ಸ್ವಲ್ಪ ದೊಡ್ಡದಾದ ನಾಲ್ಕು ಗುಮ್ಮಟಗಳಿವೆ.

ಮಾಳಿಗೆಯಲ್ಲಿ ಮಳೆನೀರು ಹೊರಗಡೆಗೆ ಹರಿದು ಹೋಗಲು ಪ್ರನಾಳಗಳ ಜೋಡಣೆಯಿದೆ. ಪಾರ್ಶ್ವ ಅಂಚಿನ ಮತ್ತು ಪೂರ್ವದಲ್ಲಿ ಚೂಪು ತುದಿಗಳುಳ್ಳ ಆಯತಾಕಾರದ ಕಮಾನುಗಳು, ಶಾಲಾ ಮಾದರಿಯ ಗುಮ್ಮಟಗಳ ಸಾಲಿನ ಛತ್ತಿದೆ. ಈ ಗುಮ್ಮಟಗಳ ನಡುವೆ ಛತ್ತಿನಲ್ಲಿಯೇ ಚಪ್ಪಟೆಯಾಕಾರದ ಕಿರು ಎತ್ತರದ ೬೩ ಗುಮ್ಮಟಗಳಿವೆ. ಪ್ರಾರ್ಥನಾ ವೇದಿಕೆಗೆ ಹೊಂದಿಕೊಂಡು ಒಂದು ದೊಡ್ಡದಾದ ಗುಮ್ಮಟವಿದೆ. ಅದರ ಮೇಲೆ ಸ್ತೂಪ ಇದೆ. ಇದರ ನಾಲ್ಕು ಮೂರ್ತಿಗಳಲ್ಲಿ ಸಣ್ಣ ಸಣ್ಣ ಮಿನಾರುಗಳಿವೆ.[೨೭]

ನಗರ–ಗುಲಬರ್ಗಾ	ಸ್ಥಳ–ತಾಜ ನಗರದಲ್ಲಿದೆ.
ಕಾಲ–೧೪ನೇ ಶತಮಾನ	ಸ್ಮಾರಕ–ಲಂಗರ ಕೀ ಮಸೀದಿ
ಧರ್ಮ–ಇಸ್ಲಾಂ	ದಿಕ್ಕು–ಪಶ್ಚಿಮ

ಗುಲಬರ್ಗಾ ನಗರದ ತಾಜ್ ನಗರದಲ್ಲಿ ಈ ಮಸೀದಿಯಿದೆ. ಇದರ ಹೆಚ್ಚು ಭಾಗ ನಾಶವಾಗಿದೆ. ೧ ಮೀ. ಉತ್ತರದ ಜಗತಿಯ ಮೇಲೆ ಕಟ್ಟಲಾಗಿದೆ. ಪಾರ್ಥನಾ ಮಂಟಪಕ್ಕೆ ಮೂರು ಭಾಗಗಳಿದ್ದು, ಅದರ ಉದ್ದಗಲ ೧೪.೯೨೧ x ೯.೭೫ ಮೀ. ಗೋಡೆಯ ದಪ್ಪ ೧.೧೫ ಮೀ. ದ್ವಾರದಲ್ಲಿ ಅಗಲವಾದ ಗಾರೆಯ ಹಿಂಚಾಚು ಮುಂಚಾಚುಳ್ಳ ಮೂರು ಕಮಾನುಗಳು ಅಲಂಕೃತಗೊಂಡಿವೆ. ಅದಕ್ಕೆ ಇಳಿಜಾರಾದ ಛಜ್ಜವಿದೆ. ಛತ್ತಿನ ಮೇಲೆ ಮಿನರೆಟ್ಸ್ ಪಕ್ಕದಲ್ಲಿ ಕಮಾನುಗಳ ಸಾಲಿರುವುದು ಗಮನಾರ್ಹ. ಆಯತಾಕಾರದ ಶಿಲೆಯ ಕಟ್ಟಡವನ್ನು ದ್ವಾರ ಪ್ರವೇಶದ ನಡುವೆ ಛತ್ತಿನ ಮೇಲೆ ಕಟ್ಟಲಾಗಿದೆ. ಇದರ ಹೆಚ್ಚಿನ ವಾಸ್ತು ಲಕ್ಷಣಗಳು ಫಿರೋಜ್ ಷಾಹಾ ಬಹಮನಿಯ ಕಾಲದ ಶೈಲಿಯನ್ನು ಹೋಲುತ್ತದೆ. ಈ ಮಸೀದಿಯ ಒಳ ಛತ್ತಿನಲ್ಲಿ ಚೂಪಾದ ಕಮಾನಿನಾಕಾರದ ಸಮಾಂತರ ತೊಲೆಗಳ ಪಟ್ಟಿಕೆಗಳ ನಿರೂಪಣೆ ಅಪರೂಪದ್ದಾಗಿದೆ. ಛತ್ತನ್ನು ಮೂರು ಭಾಗಗಳನ್ನಾಗಿ ವಿಂಗಡಿಸಿದೆ. ಇದಕ್ಕೆ ದುಂಡು ಕಂಬಗಳುಳ್ಳ ಕಳಸಗಳಿವೆ.[೨೮]

ನಗರ–ಗುಲಬರ್ಗಾ	ಸ್ಥಳ–ಎನ್.ವಿ.ಆಟದ ಬಯಲಿನ ಹತ್ತಿರ
ಕಾಲ–೧೬ನೇ ಶತಮಾನ	ಸ್ಮಾರಕ–ಶಿಕಂದರಿಯಾ ಮಸೀದಿ
ಧರ್ಮ–ಇಸ್ಲಾಂ	ದಿಕ್ಕು–ಪೂರ್ವ

ಈ ಮಸೀದಿಯನ್ನು ಶಿಲೆ ಮತ್ತು ಗಾರೆಯಿಂದ ಕಟ್ಟಲಾಗಿದೆ. ಈ ಮಸೀದಿಗೆ ಐದು ತೆರೆದ ಕಮಾನುಗಳ ಸಾಲಿದೆ. ಮಂಟಪವನ್ನು ಐದು ಭಾಗಗಳನ್ನಾಗಿ ವಿಂಗಡಿಸಿದೆ. ಇದರ

ಉದ್ದಗಲ ೨೦x೧೫ ಮೀ. ಇಲ್ಲಿ ಛತ್ತಿನಲ್ಲಿ ೧೫ ಕಿರಿದಾದ ಗುಮ್ಮಟಗಳಿವೆ. ಗೋಡೆಯಲ್ಲಿ ಕಮಾನುಗಳಿವೆ. ಮತ್ತು ಆಯತಾಕಾರದ ಕಿಟಕಿಗಳಿವೆ. ಛತ್ತಿನ ಗೋಡೆಯ ಮೇಲೆ ಮೂರು ದಳಗಳ್ಳುಳ್ಳ ತೆನೆಗಳಿವೆ.[೨೯]

ನಗರ–ಗುಲಬರ್ಗಾ	ಸ್ಥಳ–ಹಿರಾಪುರ ಊರ ಪ್ರವೇಶದಲ್ಲಿ
ಕಾಲ–೧೧ನೇ ಶತಮಾನ	ಸ್ಮಾರಕ–ಹಿರಾಬಿಬಿ ಮಸೀದಿ
ಧರ್ಮ–ಇಸ್ಲಾಂ	ದಿಕ್ಕು–ಪೂರ್ವ

ಈ ಮಸೀದಿಯು ಎತ್ತರವಾದ ಜಗತಿಯ ಮೇಲಿದೆ. ಕುತೂಹಲವೆಂದರೆ ಪಶ್ಚಿಮ ಗೋಡೆಯಲ್ಲಿ ಒಂದು ಕಮಾನುಳ್ಳ ಕೋಣೆಯನ್ನು ಜೋಡಿಸಲಾಗಿದೆ. ಇದು ಹಿಂದೂ ಗರ್ಭಗೃಹವನ್ನು ನೆನಪಿಸುತ್ತದೆ. ಮುಂದೆ ನೀರಿನ ತೊಟ್ಟಿಯಿದೆ. ಸುತ್ತಲೂ ಪ್ರಕಾರ ಗೋಡೆಯಿದೆ.[೩೦] ಚಾಂದ್ ಬೀಬಿ ಸುಲ್ತಾನಳು ಕ್ರಿ.ಶ.೧೫೮೫ರಲ್ಲಿ ನಿರ್ಮಿಸಿದ ಸುಂದರವಾದ ಹೀರಾಬಿಬಿ ಮಸೀದಿ ಹಾಗೂ ಸೈಯದ್ ಅಬೀಬ್ ಷಾ ವಲಿ ದರ್ಗಾಗಳು ಇಲ್ಲಿದ್ದು, ಇದರ ಉರುಸು ರಂಜಾನ್ ತಿಂಗಳಲ್ಲಿ ನಡೆಯುತ್ತದೆ. ರಾಣಿ ಚಾಂದ್ ಬೀಬಿ ಸುಲ್ತಾನಳ ದಾದಿಯಾದ ಪರಡೋನಾ ಖಮುರ್ಝಾಳ ಸಮಾಧಿಯೂ ಇಲ್ಲಿದೆ.[೩೧] ಚಾಂದಬೀಬಿ ಮಸೀದಿಯ ಮುಂಭಾಗದಲ್ಲಿ ತೆರೆದ ಮೂರು ಕಮಾನುಗಳಲ್ಲಿ ನಡುವಿನದ್ದು ದೊಡ್ಡದಾಗಿದೆ. ಅವುಗಳು ಅರೆಗಂಬ ಪಟ್ಟಿಕೆಗಳನ್ನು ಹೊಂದಿವೆ. ಕಮಾನು ಬದಿಗಳಲ್ಲಿ ವೃತ್ತ ಪಟ್ಟಿಕೆಗಳಿದ್ದು, ಅವುಗಳನ್ನು ಆನೆಗಳ ಸೊಂಡಿಲಗಳು ಹಿಡಿದಿವೆ. ಈ ವೃತ್ತಪಟ್ಟಿಕೆಗಳ ನಡುವೆ ಹೂ,ಬಳ್ಳಿಗಳಿಂದ ಅಲಂಕೃತಗೊಳಿಸಿದೆ. ಈ ಮಸೀದಿಯ ನಾಲ್ಕು ಮೂಲೆಗಳಲ್ಲಿ ಬಲಿಷ್ಠವಾದ ದಪ್ಪದುಂಡನೆಯ ಕಂಬಗಳನ್ನು ಹೊಂದಿದೆ. ಮುಂದುಗಡೆಗೆ ಛತ್ತಿನಲ್ಲಿ ಛಜ್ಜವಿದ್ದು, ಛತ್ತಿನ ಗೋಡೆಯ ಮೇಲೆ ಕಮಾನು ಆಕಾರದ ತೆನೆಗಳಿವೆ. ದಪ್ಪ ದುಂಡನೆಯ ಕಂಬಗಳ ಮೂಲೆಗಳಲ್ಲಿನ ನಾಲ್ಕು ಮಿನರೆಟ್ಸ್‌ಗಳು, ಇನ್ನೆರಡು ಮಿನರೆಟ್ಸ್‌ಗಳು ನಡುವಿನ ಭಾಗದಲ್ಲಿದೆ. ತಲಾ ಒಂದರ ಮೂರು ಗೋಡೆಗಳ ನಡುವೆ ಕಮಾನುಗಳಿವೆ. ಮಂಟಪಕ್ಕೆ ಎಂಟು ಕಮಾನುಗಳಿದ್ದು, ಅದನ್ನು ಅಷ್ಟ ಮುಖಗಳನ್ನಾಗಿ ವಿಂಗಡಿಸಲಾಗಿದೆ. ಮಂಟಪದ ಹಿಂದೆ ಮೇಲ್ಗಡೆ ಚಪ್ಪಟೆಯಾಕಾರದ ಕಿರು ಗುಮ್ಮಟವಿದೆ. ಅದರ ಮೇಲೆ ಮತ್ತೊಂದು ಕೋಣೆಯಿದೆ. ಅದರ ಛತ್ತಿನಲ್ಲಿ ಗುಮ್ಮಟವಿದೆ. ಗುಮ್ಮಟಕ್ಕೆ ಪಟ್ಟಿಕೆಗಳಿವೆ. ಮೇಲಿನ ಗುಮ್ಮಟದ ಸುತ್ತಲೂ ಪ್ರದಕ್ಷಿಣಾ ಪಥವಿದೆ. ಗೊಮ್ಮಟದ ಛತ್ತಿನಲ್ಲಿ ಸುತ್ತಲೂ ವೃತ್ತಾಕಾರದಲ್ಲಿ ಸರಪಳಿಗಳ ಅಲಂಕಾರವಿದೆ. ಸರಪಳಿಗಳ ತುದಿಗಳನ್ನು ವೃತ್ತ ಪಟ್ಟಿಕೆಗೆ ಜೋಡಿಸಲಾಗಿದೆ.

ಮಸೀದಿಯ ಒಳಗಡೆ ಚಾಂದ್ ಬೀಬಿಯ ಪಂಜರವಿದೆ(ಸಮಾಧಿ) ಇದೆ. ಮಹಾದ್ವಾರಕ್ಕೆ ಕಿರು ಕಮಾನುಗಳುಳ್ಳ ಬಾಗಿಲಿದೆ. ಕಮಾನಿನ ಅಂಚುಗಳಲ್ಲಿ ಕಮಾನುಗಳಿವೆ. ಮೇಲೆ ಮೂರು ಕಮಾನುಗಳಿವೆ. ಅದರ ಛಜ್ಜ ಇಳಿಜಾರಾಗಿದೆ. ಛಜ್ಜ ಅದರ ಗೋಡೆಯ ಮೇಲೆ ಏಕಸಾಲಿನಲ್ಲಿ ಕಮಾನಿನಕಾರದ ತೆನೆಗಳಿವೆ. ಮಹಾದ್ವಾರಕ್ಕೆ ಹೊಂದಿ ಮೇಲೆ ಹತ್ತಲು ಮೆಟ್ಟಿಲುಗಳಿವೆ. ದ್ವಾರಕ್ಕೆ ಆಯಾತಾಕಾರದ ವಿಶಾಲವಾದ ಕೋಣೆಯಿದ್ದು, ಅದನ್ನು ವಿಶ್ರಾಂತಿ ಕೋಣೆ(ಸೆರೈಖಾನ್) ಎನ್ನುವರು. ಈ ಮಸೀದಿಯ ಪಶ್ಚಿಮ ಗೋಡೆಯಲ್ಲಿಯ ಮಿಹರ್ ಬನ್ ಏಕ ಕೋಟೆಯು ಹಿಂದೂ ದೇವಾಲಯದ ಗರ್ಭಗೃಹವನ್ನು ನೆನಪಿಸುತ್ತದೆ.[೩೨]

ನಗರ-ಗುಲಬರ್ಗಾ	ಸ್ಥಳ-ಪೀಲಾಪುರದ ಎತ್ತರದ ಗುಡ್ಡದ ಮೇಲಿದೆ.
ಕಾಲ–೧೪ನೇ ಶತಮಾನ	ಸ್ಮಾರಕ–ಹಜರತ್ ರುಕ್ಮದ್ದೀನ್ ತೋಲ ದರ್ಗಾ
ಧರ್ಮ– ಇಸ್ಲಾಂ	ದಿಕ್ಕು–ಪೂರ್ವ

ನಗರದ ಬದಿಯ ಪೀಲಾಪುರದ ಸಮೀಪದ ಎತ್ತರದ ಗುಡ್ಡದ ಮೇಲೆ ಹಜರತ್ ರುಕ್ಮದ್ದೀನ್ ತೊಲ ದರ್ಗಾವಿದೆ. ಅಲ್ಲಿ ಕೇವಲ ಹಜರತ್ ರುಕ್ಮುದ್ದೀನ್ ತೋಲ ಸಂತರ ಬೃಹತ್ ಸಮಾಧಿ ತೆರೆದ ಬಯಲಿನಲ್ಲಿದೆ. ಅದನ್ನು ನಯವಾದ ಟ್ರ್ಯಾಪ್ ಶಿಲೆಯಿಂದ ನಿರ್ಮಿಸಲಾಗಿದೆ. ಏಕಶಿಲೆಯಂತಿರುವ ಇದು ಆಯತಾಕಾರದಲ್ಲಿ ಎತ್ತರವಾಗಿದ್ದು, ಮೇಲ್ಭಾಗ ಕಮಾನಿನಾಕಾರದಲ್ಲಿದೆ. ಈ ದರ್ಗಾದ ಎದುರುಗಡೆಗೆ ಅಂತಹುದೇ ಇನ್ನೊಂದು ಬೃಹತ್ ಗೋರಿಯಿದ್ದು, ಅದು ಹಜರತ್ ಷಾಹ ಖಾದ್ರಿಯವರದ್ದಾಗಿದೆ. ಈ ಖಾದ್ರಿಯು ಮೂಲತಃ ಬ್ರಾಹ್ಮಣ ಮತ್ತು ರುಕ್ಮದ್ದೀನ್ ತೋಲ ಸಂತರ ಶಿಷ್ಯ. ಇಲ್ಲಿಯ ಗುರು-ಶಿಷ್ಯರ ದರ್ಗಾಗಳನ್ನು ಹಿಂದೂ-ಮುಸ್ಲಿಮರು ಗೌರವಾದರಗಳಿಂದ ಪೂಜಿಸುವರು. ಈ ದರ್ಗಾವು ಹಜರತ್ ಬಂದೇ ನವಾಜರ ಸಮಕಾಲೀನದ್ದಾಗಿದೆ.[೩೩]

ನಗರ–ಗುಲಬರ್ಗಾ	ಸ್ಥಳ–ಸುಲ್ತಾನಪುರ ರಸ್ತೆಯ ಪಕ್ಕ
ಕಾಲ–೧೪ನೇ ಶತಮಾನ	ಸ್ಮಾರಕ–ಖಾದರ್ ಭಾಷಾ ದರ್ಗಾ
ಧರ್ಮ–ಇಸ್ಲಾಂ	ದಿಕ್ಕು–ಪೂರ್ವ

ಗುಲಬರ್ಗಾದ ಸುಲ್ತಾನಪುರದ ರಸ್ತೆಯ ಪಕ್ಕದ ಒಂದು ಹೊಲದಲ್ಲಿ ಖಾದರ ಭಾಷಾ ದರ್ಗಾವಿದೆ. ಈ ದರ್ಗಾವನ್ನು ಎತ್ತರದ ಅಧಿಷ್ಠಾನದ ಮೇಲೆ ಕಟ್ಟಲಾಗಿದೆ. ಆದರೆ ಇದು ದುಃಸ್ಥಿತಿಯಲ್ಲಿದೆ. ದರ್ಗಾದ ಸುತ್ತಲೂ ಪ್ರದಕ್ಷಿಣಾ ಪಥವಿರುವುದು ವಿಶೇಷ. ಈ

ಕಟ್ಟಡದಲ್ಲಿ ಎರಡು ಗೋರಿಗಳು ಒಂದೇ ಸಾಲಿನಲ್ಲಿ ಉತ್ತರ-ದಕ್ಷಿಣಾಭಿಮುಖವಾಗಿವೆ. ಇದಕ್ಕೆ ಉತ್ತರದ ಕಮಾನುಳ್ಳ ದ್ವಾರಗಳಿವೆ. ತಲಾ ಒಂದು ದ್ವಾರದ ಅಗಲ ೧.೫೦ ಮೀ. ಈ ದ್ವಾರದಲ್ಲಿ ಎರಡು ಹಿಂಬಾಚು, ಮುಂಚಾಚುಗಳಿವೆ. ಕಮಾನುಗಳು ಅರೆಗಂಬಗಳ ಮೇಲೆ ಕೂಡಿಸಲಾಗಿದೆ. ಮೇಲ್ಗಡೆಗೆ ಮೂಲೆಗಳಲ್ಲಿ ನಾಲ್ಕು ಆಳವಾದ ಕಮಾನುಗಳಿವೆ. ಮೂರು ಗೋಡೆಗಳಲ್ಲಿಯ ನಡುಭಾಗದಲ್ಲಿ ಗೂಡಿರುವುದು ವಿಶೇಷತೆ. ಈ ಎಲ್ಲ ಕಮಾನುಗಳು ಒಂದೇ ಮಾದರಿಯಲ್ಲಿ ಕಾಣಬಹುದು. ಈ ಎಲ್ಲ ಕಮಾನುಗಳ ತುದಿಯಲ್ಲಿ ವೃತ್ತಾಕಾರದ ಪಟ್ಟಿಕೆಯನ್ನು ರೇಖಾಲಂಕಾರ ಮತ್ತು ಹೂಬಳ್ಳಿಗಳಿಂದ ಅಲಂಕರಣಗೊಳಿಸಿ ಅದರ ಮೇಲೆ ಅರ್ಧವೃತ್ತಾಕಾರದ ಗುಮ್ಮಟ ಇದೆ.[೩೪]

ಗುಮ್ಮಟದ ಪಟ್ಟಿಕೆಯ ಮೇಲೆ ಕಮಾನುಗಳ ಅಲಂಕಾರಗಳಿವೆ. ಗುಮ್ಮಟದ ನಡುವೆ ಎರಡು ವೃತ್ತಗಳಿವೆ. ಗುಮ್ಮಟದ ಒಳಭಾಗದಲ್ಲಿದ್ದ ಅರೆಗಂಬಗಳನ್ನು ಕಡಿದು ಹಾಕಲಾಗಿದೆ. ತಳಪಾಯ ಚೌಕಾಗಿ ಕಂಡುಬರುತ್ತದೆ. ಆದರೆ ಗೋಡೆಯನ್ನು ಎಂಟು ಮುಖಗಳಲ್ಲಿ ಕಟ್ಟಿರುವುದು ವಿಶೇಷತೆಯಾಗಿದೆ. ತಲಾ ಒಂದರ ಅಳತೆಯ ೪.೨ ಮೀ. ಮೂಲೆಗಳ ಹೊರ ಗೋಡೆಗಳ ಮೇಲೆ ಕಮಾನುಗಳಿವೆ. ಆಳವಿಲ್ಲದ ಗೂಡು ತಳಪಾಯದಿಂದ ೧.೨೦ ಮೀ. ಎತ್ತರದಲ್ಲಿದೆ. ಇದರಿಂದ ಈ ಭಾಗ ಎಂಟು ಮುಖಗಳಲ್ಲಿದೆ. ವೃತ್ತ ಪಟ್ಟಿಕೆಗಳಲ್ಲಿ ರೇಖಾಲಂಕಾರವನ್ನು ಗೂಡುಗಳ ಮೇಲೆ, ಬಾಗಿಲುಗಳ ಮೇಲೆ ಕಾಣಬಹುದು. ಪಶ್ಚಿಮ ಗೋಡೆಯ ಕಮಾನಿನ ಮೇಲೆ ಮತ್ತು ಮೂಲೆ ಗೋಡೆಗಳ ಮೇಲೆ ಇಳಿಜಾರಾದ ಛಜ್ಜಗಳನ್ನು ನಿರ್ಮಿಸಲಾಗಿದೆ.[೩೫]

ನಗರ–ಗುಲಬರ್ಗಾ	ಸ್ಥಳ–ನಗರದ ಖಾದರಿ ಚೌಕ ಹತ್ತಿರ
ಕಾಲ–೧೪ನೇ ಶತಮಾನ	ಸ್ಮಾರಕ–ಬೋಡ್ಕೆ ಗೋರಿಗುಮ್ಮಜ್
ಧರ್ಮ–ಇಸ್ಲಾಂ	ದಿಕ್ಕು–ಪೂರ್ವ

ಗುಲಬರ್ಗಾದ ಆಳಂದ ರಸ್ತೆಯಲ್ಲಿ ಖಾದರಿ ಚೌಕದ ಸಮೀಪದಲ್ಲಿ ಭವ್ಯವಾದ ಎತ್ತರದ ಬೋಡ್ಕೆ ಗುಮ್ಮಜ್ ಇದೆ. ಇದನ್ನು ಎತ್ತರದ ಜಗತಿಯ ಮೇಲೆ ಕಟ್ಟಲಾಗಿದ್ದು, ಮೂರು ಕಮಾನಿನಾಕಾರದ ದ್ವಾರಗಳಿವೆ. ಒಳಭಾಗದ ಮಧ್ಯದಲ್ಲಿ ಆಯತಾಕಾರದ ಜಗತಿಯ ಮೇಲೆ ಒಂದು ಗೋರಿಯಿದೆ. ಕೋಣೆಯ ಹೊರ ಮತ್ತು ಒಳಗೋಡೆಗಳ ಮೇಲೂ ಒಂದೇ ರೀತಿಯ ಮತ್ತು ಎತ್ತರದ ಕಮಾನುಗಳಿವೆ. ಇಲ್ಲಿಯೂ ಅಷ್ಟಪಟ್ಟಿಕೆಯ ಕಮಾನುಗಳ ಮೇಲೆ ಎತ್ತರದ ವೃತ್ತಾಕಾರದ ಗೋಡೆಯನ್ನು ಕಟ್ಟಲಾಗಿದೆ. ಮೇಲ್ಗಡೆ ಗೊಮ್ಮಟವನ್ನು ಕಾಣದಿರುವುದು ವಿಶೇಷವಾಗಿದೆ. ಹೀಗಾಗಿ ಈ ಭವ್ಯ ಸ್ಮಾರಕವನ್ನು ಗುಮ್ಮಟವಿಲ್ಲದ ಸ್ಮಾರಕ ಅಂದರೆ ಬೋಡ್ಕೆ ಗುಮ್ಮಜ್ ಎನ್ನುವರು.[೩೬]

ನಗರ–ಗುಲಬರ್ಗಾ	ಸ್ಥಳ–ಶಹಾಬಜಾರ
ಕಾಲ–೧೪ನೇ ಶತಮಾನ	ಸ್ಮಾರಕ–ಅಲ್ಲಾವುದ್ದೀನ್ ಹಸನ್ ಗಂಗೂ
ಧರ್ಮ–ಇಸ್ಲಾಂ	ದಿಕ್ಕು–ಪೂರ್ವ

ಈ ಸ್ಮಾರಕವು ಗುಲಬರ್ಗಾದ ಶಹಾಬಜಾರಿನಲ್ಲಿ ಕಾಣುತ್ತೇವೆ. ಬಹಮನಿ ಸಾಮ್ರಾಜ್ಯದ ಮೊದಲ ಸುಲ್ತಾನ ಅಲ್ಲಾವುದ್ದೀನ್ ಹಸನ್ ಗಂಗುನ ಸ್ಮಾರಕ ಇದಾಗಿದೆ. ಕ್ರಿ.ಶ. ೧೩೫೮ರಲ್ಲಿ ಹಸನ್ ಗಂಗೂ ಬಹಮನ್ ಮಡಿಯುವ ಪೂರ್ವದಲ್ಲಿ ತಯಾರಿಸಿದ ಈ ಗುಮ್ಮಟದಲ್ಲೇ ಆತನನ್ನು ಹೂಳಲಾಗಿದೆ. ಈ ಸ್ಮಾರಕವು ಕೋಟೆಯ ದಕ್ಷಿಣ ದ್ವಾರದ ಸಮೀಪ ಮತ್ತು ಇಲ್ಲಿಯ ಶಹಾ ಬಜಾರ್‌ನಲ್ಲಿದೆ. ಚೌಕಾಕಾರದ ದೊಡ್ಡ ಕೋಣೆಯನ್ನು ಎತ್ತರದ ಜಗತಿಯ ಮೇಲೆ ಕಟ್ಟಲಾಗಿದೆ. ಇದಕ್ಕೆ ಮೂರು ಕಡೆಗಳಲ್ಲಿಯ ಗೋಡೆಗಳಲ್ಲಿ ತೆರೆದ ಕಮಾನುಗಳುಳ್ಳ ಪ್ರವೇಶ ದ್ವಾರಗಳಿವೆ. ಪಶ್ಚಿಮ ಗೋಡೆಯಲ್ಲಿ ಮಾತ್ರ ಪ್ರವೇಶ ದ್ವಾರವಿಲ್ಲ.[೩೭] ಆದರೆ ಅದೇ ನಮೂನೆಯ ಅಷ್ಟೇ ಎತ್ತರದ ಕಮಾನಿದೆ. ಅರೆಗಂಬಗಳಲ್ಲಿ ಒಂದರ ಮೇಲೆ ಒಂದು ಕುಂಭಗಳಿವೆ. ಎತ್ತರದ ಗೋಡೆಗಳು ಮೇಲಿನಿಂದ ಕೆಳಕ್ಕೆ ಇಳಿಜಾರಾಗಿ ಕಟ್ಟಲ್ಪಟ್ಟಿದೆ. ಇದು ಈ ಕಾಲದ ವಿಶಿಷ್ಟ ಲಕ್ಷಣವೂ ಹೌದು. ಈ ಗೋಡೆಗಳು ಸುಮಾರು ೬ ಮೀಟರ್ ಎತ್ತರದಲ್ಲಿದೆ. ಕಮಾನುಗಳ ಮೇಲ್ಭಾಗದಲ್ಲಿ ಅಷ್ಟಮುಖ ಪಟ್ಟಿಕೆಯ ಮೇಲೆ ಎತ್ತರವಾದ ಚಪ್ಪಟೆಯಾಕಾರದ ಗುಮ್ಮಟವಿದೆ. ಮೂಲೆಗಳಲ್ಲಿ ಕಳಸಗಳಿವೆ. ಗೋಡೆಗಳ ಮೇಲೆ ನೀಲಿ ಹಂಚುಗಳ ಪಟ್ಟಿಕೆಯನ್ನು ಕೂಡಿಸಲಾಗಿದೆ. ಈ ಸ್ಮಾರಕದ ಒಳಗಡೆಗೆ ಮಧ್ಯದಲ್ಲಿ ಕ್ರಿ.ಶ.೧೩೫೮ರಲ್ಲಿ ಮಡಿದ ಹಸನ್ ಗಂಗೂ ಮತ್ತು ಕ್ರಿ.ಶ.೧೩೬೧ರಲ್ಲಿ ಮಡಿದ ಆತನ ರಾಣಿ ಬೇಗಂ ಮಲಿಕ್ ಜಹಾನ್‌ರ ಬೃಹತ್ ಗೋರಿಗಳಿವೆ. ಹಸನ್‌ನ ಗೋರಿಯ ಮೇಲ್ಭಾಗ ಕಮಾನಿನಾಕಾರದ್ದಾಗಿದ್ದರೆ, ಆತನ ರಾಣಿಯ ಗೋರಿಯು ಮೇಲ್ಭಾಗದಲ್ಲಿ ಸಮತಟ್ಟಾಗಿದೆ.[೩೮]

ನಗರ–ಗುಲಬರ್ಗಾ	ಸ್ಥಳ–ಫಿಲ್ಟರ ಬೇಡ್ ಸಮೀಪ ಗುಡ್ಡದ ಮೇಲೆ
ಕಾಲ–೧೪ನೇ ಶತಮಾನ	ಸ್ಮಾರಕ–ಚೋರ್ ಗೊಮ್ಮಟ
ಧರ್ಮ– ಇಸ್ಲಾಂ	ದಿಕ್ಕು–ಉತ್ತರ

ಗುಲಬರ್ಗಾ ನಗರದಿಂದ ಪಶ್ಚಿಮಕ್ಕೆ ಸುಮಾರು ೧ ಕಿ.ಮೀ. ದೂರದ ಎತ್ತರದ ಗುಡ್ಡದ ಮೇಲೆ ಮತ್ತು ಖದೀಮ್ ಈದ್ಗಾ ಹತ್ತಿರ ಈ ಸ್ಮಾರಕವನ್ನು ಕಟ್ಟಲಾಗಿದೆ.(೧೪೨೦) ಒಬ್ಬ ವ್ಯಾಪಾರಿ ಗೇಸುದ್‌ರಾಜ್ ಅವರಿಗೆ ಇದನ್ನು ಕಟ್ಟಿಸಿದನೆಂಬ ಪ್ರತೀತಿ ಇದೆ. ಆದರೆ

ಈ ಸಂತರು ಇದನ್ನು ಉಪಯೋಗಿಸಲು ನಿರಾಕರಿಸಿದರು. ಏಕೆಂದರೆ ಈ ವ್ಯಾಪಾರಿ ಬಹಳ ಆಸೆಬುರುಕ ಪಠಾಣನಾಗಿದ್ದ. ಮುಂದೆ ಖಾಲಿ ಉಳಿದ ಈ ಸ್ಮಾರಕವನ್ನು ಕಳ್ಳರು ತಾವು ಕದ್ದ ಸಾಮಾನುಗಳನ್ನು ಇಲ್ಲಿ ಸಂಗ್ರಹಿಸಿ ಇಡುತ್ತಿದ್ದರಂತೆ. ಇದರಿಂದ ಈ ಸ್ಮಾರಕಕ್ಕೆ ಚೋರ್ ಗುಮ್ಮಜ್ ಎಂದು ಹೆಸರು ಬಂದಿತೆಂದು ಮೆಡೋಸ್ ಟೇಲರ್ ಅವರ ಅಭಿಪ್ರಾಯ.[೩೯]

ಈ ಗುಮ್ಮಟವನ್ನು ಎತ್ತರದ ಜಗತಿಯ ಮೇಲೆ ಕಟ್ಟಲಾಗಿದೆ. ಈ ಜಗತಿ ೬.೨೦ ಚ.ಮೀ. ಗೋಡೆಯ ಎತ್ತರ ೧೯.೪೦ ಮೀ. ಹೊರಗೋಡೆಯ ಸುತ್ತ ಪ್ರದಕ್ಷಿಣಾ ಪಥವಿದೆ. ಈ ಸ್ಮಾರಕ ಚೌಕಾಗಿದೆ. ಈ ಸ್ಮಾರಕದ ಗೋಡೆಯಲ್ಲಿಯೂ ಎರಡು ಅಂತಸ್ತುಗಳಿವೆ. ಇವುಗಳ ಗೋಡೆಗಳಲ್ಲಿ ಎರಡು ಸಾಲುಗಳಲ್ಲಿ ಕಮಾನುಗಳಿವೆ. ಒಂದು ಗೋಡೆಯಲ್ಲಿ ಪ್ರವೇಶಕ್ಕೆ(ಉತ್ತರ) ದೊಡ್ಡ ಕಮಾನುಳ್ಳ ದ್ವಾರವಿದೆ. ಇದರ ಒಳಗಡೆಗೆ ಯಾವುದೇ ಗೋರಿಯಿರುವುದಿಲ್ಲ. ಇದರ ನೆಲ ಮತ್ತು ಜಗತಿ ಹೆಚ್ಚು ಹಾಳಾಗಿದೆ. ಚೌಕ ಗೋಡೆಯ ಮೇಲೆ ಅರ್ಧವೃತ್ತಾಕಾರದ ಗುಮ್ಮಟವಿದೆ. ಈ ಗುಮ್ಮಟದ ಒಳಗಡೆಗೆ ದುಂಡಾಕಾರದ ಮತ್ತು ವೃತ್ತಪಟ್ಟಿಕೆಗಳಲ್ಲಿ ವರ್ಣಚಿತ್ರಗಳಿವೆ. ದಕ್ಷಿಣ ಗೋಡೆಯ ಮಧ್ಯಭಾಗದಲ್ಲಿ ಒಂದು ಕಿರು ಕಿಟಕಿಯಿದೆ. ಕಮಾನುಗಳ ಬದಿಯಲ್ಲಿ ಗೋಡೆಗಳ ದೊಡ್ಡ ಕಮಾನುಗಳಲ್ಲಿ (ಹೊರಗೆ ಮತ್ತು ಒಳಗಡೆಗೆ) ವೃತ್ತಾಲಂಕಾರಿಕ ಪದಕಗಳಿವೆ. ಹೊರ ಗೋಡೆಗಳ ಕಮಾನುಗಳು ಒಂದೇ ಎತ್ತರ ಮತ್ತು ನಮೂನೆಯಲ್ಲಿವೆ. ಕೆಳ ಸಾಲಿನ ಮಧ್ಯದ ಕಮಾನುಗಳ ಮೇಲೆ ಒಂದು ಕಮಾನಿದೆ. ತಲಾ ಒಂದರ ನಡುವೆ ಸಣ್ಣ ಗೂಡಿದೆ. ಕೆಳಭಾಗ ೭.೨೦ ಮೀ. ಎತ್ತರವಿದೆ. ಒಳಗಡೆ ಕಮಾನುಗಳು ಕಮಾನು ಛಾವಣಿ ಮೂರ್ತಿಗಳ ಮೇಲಿವೆ. ಮಾಳಿಗೆ ಅಂಚಿನ ಗೋಡೆಗೆ ಕಮಾನು ತಲೆಗಳ ತೆನೆಯಿದೆ.[೪೦]

ಮಳೆ ನೀರು ಹೊರಗಡೆ ಹೋಗಲು ನಳಿಕೆಗಳನ್ನು ಕೂಡಿಸಲಾಗಿದೆ. ಮೆಟ್ಟಿಲಿಕೆಗಳನ್ನು ಪೂರ್ವಗೋಡೆಯಿಂದ ಎರಡು ಅಂತಸ್ತುಗಳ ಎಡಗಡೆಗೆ ನಿರ್ಮಿಸಲಾಗಿದೆ. ಮೇಲು ಸಾಲಿನ ಕಮಾನುಗಳಲ್ಲಿ ಜಾಲಿಗಳನ್ನು ಕೂಡಿಸಲಾಗಿದೆ. ಮೇಲು ಸಾಲಿನ ಕಮಾನುಗಳ ಮೇಲೆ ಮೂಲೆಯಲ್ಲಿ ೪ ಕಮಾನುಗಳಿವೆ. ಇದರಿಂದ ಇದು ಅಷ್ಟ ಮುಖವಾಗಿ ರೂಪಾಂತರವಾಗಿದೆ. ಇದರ ಮೇಲಿನ ಭಾಗ ವೃತ್ತಾಕಾರವನ್ನಾಗಿಸಿ ಅದರ ಮೇಲೆ ಅರ್ಧವೃತ್ತಾಕಾರದ ಗುಮ್ಮಟವನ್ನು ಕಟ್ಟಲಾಗಿದೆ. ಈ ಗುಮ್ಮಟದ ಬುಡದ ಸುತ್ತಲೂ ಸಣ್ಣ ಕಮಾನುಗಳು ಒಂದರ ಮೇಲೆ ಒಂದಿದೆ. ಕೆಳಗಿನ ಕಮಾನುಗಳು ಸ್ವಲ್ಪ ದೊಡ್ಡದಾಗಿದೆ. ಈ ಕಮಾನುಗಳಲ್ಲಿ ರೇಖಾಚಿತ್ರಗಳಿವೆ. ಇವುಗಳಲ್ಲಿ ಬಣ್ಣವನ್ನು ತುಂಬಲಾಗಿದೆ. ಉತ್ತರಕ್ಕೆ ಜಗತಿಯ ಮೇಲೆ ಒಂದು ನೀರಿನ ತೊಟ್ಟಿಯನ್ನು ಕಟ್ಟಲಾಗಿದೆ.

ಅಡಿಟಿಪ್ಪಣಿಗಳು

೧. ಅಪರ್ಣಾ ಕೂ.ಸ., ದೇವಾಲಯ, ವಾಸ್ತುಶಿಲ್ಪ ಪರಿಚಯ, ಪು.೧

೨. ಪ್ರಭಾಕರ್ ಎಂ.ಎನ್., ದೇವಾಲಯ, ವಾಸ್ತುಶಿಲ್ಪ, ಪು.೭, ೮

೩. ಪಾಟೀಲ ಎಂ.ಬಿ. ಗುಲಬರ್ಗಾ ಜಿಲ್ಲಾ ಗೆಜೆಟಿಯರ್, ಪು.೭೧೨-೧೩

೪. ಅದೇ, ಪು.೭೧೪

೫. ಅದೇ, ಪು.೭೯೬

೬. ಅದೇ, ಪು.೭೯೬

೭. ಅದೇ, ಪು.೭೯೧

೮. ಅದೇ, ಪು.೭೯೧

೯. ಅದೇ, ಪು.೭೮೦

೧೦. ಅದೇ, ಪು.೮೦೧

೧೧. ಅದೇ, ಪು.೭೧೪

೧೨. ಯಳನಾಡು ಅಂಜನಪ್ಪ, ಧರ್ಮ ಮತ್ತು ಮುಕ್ತಿವಿಚಾರ, ಪು.೧೧೪-೧೧೫

೧೩. ಪಾಟೀಲ ಎಂ.ಬಿ., ಪೂರ್ವೋಕ್ತ, ಪು.೭೯೬

೧೪. ಪಾಟೀಲ್ ಎಂ.ಬಿ., ಪೂರ್ವೋಕ್ತ, ಪು.೮೦೧

೧೫. ದೇವಿರಪ್ಪ ಎಚ್. ಪೂರ್ವೋಕ್ತ, ಪು.೩೭

೧೬. ಗೋಪಾಲ್ ಆರ್., ಗುಲಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪು.೪೯೫-೯೬

೧೭. ಚನ್ನಬಸಪ್ಪ ಎಸ್. ಪಾಟೀಲ, ಕರ್ನಾಟಕದ ಕೋಟೆಗಳು, ಪು.೧೧೬

೧೮. ಪಾಟೀಲ ಎಂ.ಬಿ., ಪೂರ್ವೋಕ್ತ, ಪು.೭೧೧

೧೯. ಚನ್ನಬಸಪ್ಪ ಎಸ್.ಪಾಟೀಲ್, ಪೂರ್ವೋಕ್ತ, ಪು.೧೧೬

೨೦. ಗೋಪಾಲ ಆರ್., ಪೂರ್ವೋಕ್ತ, ಪು.೨೧೮

೨೧. ಪಾಟೀಲ್ ಎಂ.ಬಿ., ಪೂರ್ವೋಕ್ತ, ಪು.೭೪೩

೨೨. ಚನ್ನಬಸಪ್ಪ ಎಸ್. ಪಾಟೀಲ್, ಪೂರ್ವೋಕ್ತ, ಪು.೧೨೦

೨೩. ಗೋಪಾಲ ಆರ್., ಪೂರ್ವೋಕ್ತ, ಪು.೪೯೭

೨೪. ಚನ್ನಬಸಪ್ಪ ಎಸ್. ಪಾಟೀಲ್, ಪೂರ್ವೋಕ್ತ, ಪು.೧೨೧

೨೫. ಗೋಪಾಲ ಆರ್., ಪೂರ್ವೋಕ್ತ, ಪು.೪೭೭

೨೬. ಗೋಪಾಲ ಆರ್., ಪೂರ್ವೋಕ್ತ, ಪು.೪೬೫

೨೭. ಗೋಪಾಲ ಆರ್., ಪೂರ್ವೋಕ್ತ, ಪು.೪೬೬

೨೮. ಗೋಪಾಲ ಆರ್., ಪೂರ್ವೋಕ್ತ, ಪು.೪೬೮

೨೯. ಗೋಪಾಲ ಆರ್., ಪೂರ್ವೋಕ್ತ, ಪು.೪೬೦

೩೦. ಗೋಪಾಲ ಆರ್., ಪೂರ್ವೋಕ್ತ, ಪು.೪೬೮-೬೯

೩೧. ಪಾಟೀಲ ಎಂ.ಬಿ., ಪೂರ್ವೋಕ್ತ, ಪು.೭೧೫

೩೨. ಗೋಪಾಲ ಆರ್., ಪೂರ್ವೋಕ್ತ, ಪು.೪೬೯

೩೩. ಗೋಪಾಲ ಆರ್., ಪೂರ್ವೋಕ್ತ, ಪು.೪೭೧

೩೪. ಗೋಪಾಲ ಆರ್., ಪೂರ್ವೋಕ್ತ, ಪು.೪೭೧

೩೫. ಗೋಪಾಲ ಆರ್., ಪೂರ್ವೋಕ್ತ, ಪು.೪೭೨

೩೬. ಗೋಪಾಲ ಆರ್., ಪೂರ್ವೋಕ್ತ, ಪು.೪೭೪

೩೭. ಅದೇ,

೩೮. ಅದೇ, ಪು.೪೭೩

೩೯. ಅದೇ, ಪು.೪೭೯

೪೦. ಅದೇ,

♦ ♦ ♦

ಅಧ್ಯಾಯ ೫

ಮೂರ್ತಿಶಿಲ್ಪಗಳು

ಅಧ್ಯಾಯ ೫

ಮೂರ್ತಿಶಿಲ್ಪಗಳು

೫.೧. ಪೀಠಿಕೆ

ದೇವಾಲಯ ಕಟ್ಟುವ ಉದ್ದೇಶವೇ ಮೂರ್ತಿಶಿಲ್ಪಗಳ ಇರುವಿಕೆಗಾಗಿ. ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಕ್ಕೆ ಒಂದಕ್ಕೊಂದು ಅವಿನಾಭಾವ ಸಂಬಂಧವಿದೆ. ವಾಸ್ತುಶಿಲ್ಪಕ್ಕಿಂತ ಮೂರ್ತಿಶಿಲ್ಪಕ್ಕೆ ಪ್ರಾಚೀನ ಇತಿಹಾಸವಿದೆ. ದೇವಾಲಯ ಎಂದರೆ ದೇವರಿಗಾಗಿ ಅಥವಾ ಮೂರ್ತಿಗಾಗಿ ಕಟ್ಟಲ್ಪಟ್ಟ ಮಂದಿರ ಎಂದರ್ಥ. ಮೂರ್ತಿಗಳನ್ನು ಕುರಿತು ಶಾಸ್ತ್ರೀಯವಾಗಿ ಅಧ್ಯಯನ ಮಾಡುವ ಶಾಸ್ತ್ರವನ್ನು ಸ್ಥೂಲವಾಗಿ 'ಮೂರ್ತಿಶಾಸ್ತ್ರ' ಎಂದು ಕರೆಯಬಹುದು.

ಪ್ರಸ್ತುತ ಗುಲಬರ್ಗಾ ಪರಿಸರದ್ಯಾಂತ ಕಂಡುಬರುವ ಮೂರ್ತಿಶಿಲ್ಪಗಳು ವಿವಿಧ ಅರಸು ಮನೆತನಗಳಿಗೆ ಸಂಬಂಧಿಸಿವೆ. ಈ ಪರಿಸರದ ಅತಿ ಪ್ರಾಚೀನ ಮೂರ್ತಿಶಿಲ್ಪವೆಂದರೆ ಫಿರೋಜಾಬಾದನ ಈಶ್ವರ ದೇವಾಲಯ ಎಂದು ಹೇಳಬಹುದು. ರಾಷ್ಟ್ರಕೂಟರ ಕಾಲದ ಶಿಲ್ಪಗಳು ವಿರಳವಾಗಿದ್ದು ಕಲ್ಯಾಣ ಚಾಲುಕ್ಯರ ಆಳ್ವಿಕೆಗೆ ಸಂಬಂಧಿಸಿದ ಶಿಲ್ಪಗಳು ಹೆಚ್ಚು ಪ್ರಚಲಿತದಲ್ಲಿವೆ.

೫.೨. ಗಾಣಪತ್ಯ ಶಿಲ್ಪಗಳು :

ಪುರಾಣಗಳಲ್ಲಿ, ಆಗಮಶಾಸ್ತ್ರಗಳಲ್ಲಿ ಬ್ರಾಹ್ಮಣ ಸೂತ್ರಗಳಲ್ಲಿ, ಧರ್ಮಶಾಸ್ತ್ರಗಳಲ್ಲಿ ಗಣಪತಿಯ ಮಹಿಮೆಯನ್ನು ತಿಳಿಸುವಲ್ಲಿ ಇವು ಆಕರ ಗ್ರಂಥಗಳಾಗಿವೆ. ಗಣೇಶನ ಹುಟ್ಟಿನ ಬಗ್ಗೆ ಅನೇಕ ದಂತಕಥೆಗಳಿವೆ. ವೈದಿಕ ಸಂಪ್ರದಾಯದ ಹಲವು ದೇವತೆಗಳಂತೆ ಹಿಂದೂಗಳ ಆದಿದೇವಗಣದಲ್ಲಿ ಗಣೇಶನು ಒಬ್ಬನಾಗಿದ್ದಾನೆ. ಬುದ್ಧಿಶೀಲನಾದ ವಿನಾಯಕನು ರುದ್ರನ ಪುತ್ರನಾಗಿ ಬೃಹಸ್ಪತಿಯಾಗಿದ್ದನು. ವಿದ್ವಾಂಸರ ಅಭಿಪ್ರಾಯದಂತೆ ವೈದಿಕ ದೇವತೆಗಳೇ ಪುರಾಣ ಕಾಲದ ಗಜಮುಖ, ವಿನಾಯಕ ಎಂದಿದ್ದಾರೆ.[೧] ಪ್ರಾಚೀನ ಕಾಲದಿಂದಲೂ ಗಣೇಶನನ್ನು ಎಲ್ಲ ಮತದವರೂ ಆರಾಧಿಸುತ್ತಾ ಬಂದಿದ್ದಾರೆ.

ಪ್ರಸ್ತುತವಾಗಿ ಹುಣಸಿಹಡಗಿಲ, ಹರಸೂರು, ಗುಲಬರ್ಗಾ, ಹಿರಾಪುರ, ಪಟ್ಟಣ, ಖಣದಾಳ, ಶ್ರೀನಿವಾಸ ಸರಡಗಿ, ಮಹಾಗಾಂವ, ಸಣ್ಣೂರ ಪ್ರದೇಶಗಳಲ್ಲಿ ದೊರೆತ ಮೂರ್ತಿಶಿಲ್ಪಗಳಿವೆ.

ಗ್ರಾಮ–ಹುಣಸಿಹಡಗಿಲ ಸ್ಥಳ–ಹುಣಸಿಹಡಗಿಲ

ಶಿಲ್ಪ–ಗಣಪತಿ ಕಾಲ–೧೨ನೇ ಶತಮಾನ

ವಸ್ತು–ಕಪ್ಪುಶಿಲೆ (ಕೆಂಪು ಬಣ್ಣದ ಲೇಪನ) ಪ್ರಕಟಣೆ–ಅಪ್ರಕಟಿತ

ಈ ಮೂರ್ತಿಶಿಲ್ಪ ಜೈನ ಬಸದಿಯ ಹೊರಗಡೆ ಗಿಡಕ್ಕೆ ಹೊಂದಿಕೊಂಡಿದೆ. ದ್ವಿಭುಜನಾದ ವಿಘ್ನವಿನಾಶಕನ ತಲೆಯ ಮೇಲೆ ಕಿರೀಟವಿದೆ. ಈತ ಸುಖಾಸನದಲ್ಲಿ ಕುಳಿತಿದ್ದಾನೆ. ಕೈಯಲ್ಲಿ ದಂತ, ಪರಶು, ಅಂಕುಶಗಳಿವೆ. ಕೊರಳಲ್ಲಿ ಜನಿವಾರ ಇದರ ಸೊಂಡಿಯು ಎಡಕ್ಕೆ ವಾಲಿದೆ. ಮೊರಗಳಂತೆ ದೊಡ್ಡ ದೊಡ್ಡ ಕಿವಿಗಳಿವೆ. ತೋಳಿಗೆ ಭುಜಬಂದ, ಉದರಬಂದ, ಕಂಕಣ, ಖಡ್ಗಗಳನ್ನು ಹಿಡಿದಿರುವುದು ಶಿಲ್ಪದಲ್ಲಿದೆ.

ಗ್ರಾಮ–ಹರಸೂರು ಸ್ಥಳ–ಹರಸೂರ

ಶಿಲ್ಪ–ಗಣಪತಿ ಕಾಲ–೧೨ನೇ ಶತಮಾನ

ವಸ್ತು–ಕಪ್ಪುಶಿಲೆ (ಕೆಂಪು ಬಣ್ಣದ ಲೇಪನ) ಪ್ರಕಟಣೆ–ಅಪ್ರಕಟಿತ

ಈ ಮೂರ್ತಿಶಿಲ್ಪ ಜೈನ ಬಸದಿಯಲ್ಲಿದೆ. ಸಂಕಟಹರಣ ಗಣೇಶನ ಮೂರ್ತಿಯು ದ್ವಿಭುಜನಾಗಿದ್ದಾನೆ. ತಲೆಯ ಮೇಲೆ ಕಿರೀಟವಿದೆ. ಕೈಯಲ್ಲಿ ಪರಶು, ದಂತ, ಅಂಕುಶವಿದೆ. ಈತನು ಸುಖಾಸನದಲ್ಲಿ ಕುಳಿತಿದ್ದಾನೆ. ತನ್ನ ಮಡಚಿದ ಎಡಗಾಲನ್ನು ನೆಲದ ಮೇಲೆ ಇಟ್ಟಿದ್ದಾನೆ. ಉದರಬಂದ ಧರಿಸಿದ್ದಾನೆ. ಬಲಬದಿಯಲ್ಲಿ ವಿಘ್ನಗೊಂಡ ದಂತ ಇದೆ.

ಗ್ರಾಮ–ಹಿರಾಪುರ ಸ್ಥಳ–ಹಿರಾಪುರ

ಶಿಲ್ಪ–ಗಣಪತಿ ಕಾಲ–೧೨ನೇ ಶತಮಾನ

ವಸ್ತು–ಕಪ್ಪುಶಿಲೆ (ಕೆಂಪು ಬಣ್ಣದ ಲೇಪನ) ಪ್ರಕಟಣೆ–ಅಪ್ರಕಟಿತ

ನಗರೇಶ್ವರ ದೇವಾಲಯದಲ್ಲಿ ಈ ಶಿಲ್ಪವಿದೆ. ಚತುರ್ಭುಜಧಾರಿಯಾದ ಗಣೇಶನ ತಲೆಯ ಮೇಲೆ ಕಿರೀಟವಿದೆ. ಆನೆಯ ಮುಖವಿದೆ. ಸೊಂಡಿಲು ಎಡಕ್ಕೆ ಬಾಗಿದೆ. ಕೈಯಲ್ಲಿ ಮೋದಕ, ಅಂಕುಶ, ಪರಶು, ದಂತ ಹೊಂದಿರುವುದನ್ನು ಕಾಣುತ್ತೇವೆ. ತನ್ನ ಸೊಂಡಿಯಿಂದ ಮೋದಕಗಳನ್ನು ತೆಗೆದುಕೊಳ್ಳುತ್ತಿರುವುದನ್ನು ಈ ಶಿಲ್ಪದಲ್ಲಿ ಶಿಲ್ಪಿ ಚಿತ್ರಿಸಿದ್ದಾನೆ.

ತನ್ನ ಬಲಗಾಲನ್ನು ಮಡಿಚಿ ಕುಳಿತಿದ್ದಾನೆ. ಎಡಗಾಲನ್ನು ಪೀಠದಲ್ಲಿ ಇಟ್ಟಿದ್ದಾನೆ. ಎಡಗಾಲಿನ ಬಳಿ ಅವನ ವಾಹನವಾದ ಇಲಿ ಇದೆ.

ಗ್ರಾಮ–ಖಣದಾಳ	ಸ್ಥಳ–ಖಣದಾಳ
ಶಿಲ್ಪ–ಗಣಪತಿ	ಕಾಲ–೧೨ನೇ ಶತಮಾನ
ವಸ್ತು–ಕಪ್ಪುಶಿಲೆ	ಪ್ರಕಟಣೆ–ಅಪ್ರಕಟಿತ

ಹನುಮಂತನ ಗುಡಿಯ ಭಿತ್ತಿಯಲ್ಲಿ ಈ ಮೂರ್ತಿಶಿಲ್ಪವಿದೆ. ದ್ವಿಭುಜಾಧಾರಿಯಾದ ವಿನಾಯಕನ ತಲೆ ಮೇಲೆ ಕಿರೀಟವಿದೆ. ಆನೆಯ ಮುಖ ಹೊಂದಿರುವ ಗಣೇಶನ ಸೊಂಡಿಲು ಎಡಕ್ಕೆ ವಾಲಿಕೊಂಡಿದ್ದು, ಕೊರಳಲ್ಲಿ ಕಂಠಹಾರವಿದೆ. ಜೊತೆಗೆ ಉಪವೀತವಿದೆ. ತನ್ನ ಕೈಗಳಲ್ಲಿ ಮೋದಕ, ಪರಶು, ದಂತ, ಅಂಕುಶ ಇದೆ. ಭುಜಬಂದ, ಯಜ್ಞೋಪವೀತಹಾರ, ಉದರಬಂದ, ಕಂಕಣ, ಕಡಗ ಧರಿಸಿದ್ದು ಈತ ಸುಖಾಸನದಲ್ಲಿದ್ದಾನೆ. ತನ್ನ ಎಡಗಾಲಿನ ಕೆಳಗೆ ಇಲಿ ಇರುವುದು ಕಾಣುತ್ತೇವೆ.

ಗ್ರಾಮ–ಶ್ರೀನಿವಾಸ ಸರಡಗಿ	ಸ್ಥಳ–ಶ್ರೀನಿವಾಸ ಸರಡಗಿ
ಶಿಲ್ಪ–ಗಣಪತಿ	ಕಾಲ–೧೨ನೇ ಶತಮಾನ
ವಸ್ತು–ಕಪ್ಪುಶಿಲೆ	ಪ್ರಕಟಣೆ–ಅಪ್ರಕಟಿತ

ಗಣಪತಿಯ ಈ ಮೂರ್ತಿಶಿಲ್ಪವು ಶ್ರೀನಿವಾಸ ಸರಡಗಿಯ ನಾಗಾವಿ ಯಲ್ಲಮ್ಮನ ದೇವಸ್ಥಾನದಲ್ಲಿದೆ. ಆದರೆ ಇದು ಈಗ ದೇವಾಲಯ ಸಂಪೂರ್ಣ ಆಧುನಿಕ ಸ್ವರೂಪವನ್ನು ಪಡೆದುಕೊಂಡಿದೆ. ಈತ ಸುಖಾಸನದಲ್ಲಿ ಕುಳಿತಿದ್ದು ಚತುರ್ಭುಜಧಾರಿಯಾದ ಈತನ ತಲೆಯ ಮೇಲೆ ಕಿರೀಟವಿದೆ. ಕೈಯಲ್ಲಿ ಪರಶು, ದಂತ, ಮೋದಕ, ಅಂಕುಶಗಳಿವೆ. ಸೊಂಡಿಲು ಎಡಕ್ಕೆ ವಾಲಿದ್ದು ಮೋದಕವನ್ನು ತೆಗೆದುಕೊಳ್ಳುತ್ತಿರುವಂತಿದೆ. ಕಿವಿಗಳು ಅಗಲವಾಗಿವೆ. ಯಜ್ಞೋಪವೀತ ಹಾರ, ಉದರಬಂದ, ಭುಜಬಂದಗಳನ್ನು ಧರಿಸಿದ್ದಾನೆ.

ಗ್ರಾಮ–ಕಮಲಾಪುರ	ಸ್ಥಳ–ಕಮಲಾಪುರ
ಶಿಲ್ಪ–ಗಣಪತಿ	ಕಾಲ–೧೨ನೇ ಶತಮಾನ
ವಸ್ತು–ಕಪ್ಪುಶಿಲೆ	ಪ್ರಕಟಣೆ–ಅಪ್ರಕಟಿತ

ಈ ಮೂರ್ತಿ ಕಮಲಾಪುರದ ರಾಮತೀರ್ಥ ಗುಡಿಯಲ್ಲಿದೆ. ಗಣಪತಿ ಅಧಿಷ್ಠಾನದ ಮೇಲೆ ಸುಖಾಸನದಲ್ಲಿ ಕುಳಿತಿದ್ದಾನೆ. ತಲೆಯ ಮೇಲೆ ಕಿರೀಟವಿದೆ. ತಲೆಯ ಹಿಂದೆ

ಪ್ರಭಾತಮಂಡಲವಿದೆ. ಸೊಂಡಿಯು ಎಡಕ್ಕೆ ವಾಲಿದೆ. ಚತುರ್ಭುಜನಾಗಿದ್ದು, ಬಲಗೈ ಅಭಯ ಮುದ್ರೆಯಲ್ಲಿದೆ. ಕೊಡಲಿಯನ್ನು ಕೈಯಲ್ಲಿ ಹಿಡಿದಿದ್ದಾನೆ. ಎಡಗೈಯಲ್ಲಿ ಅಂಕುಶ, ಮೋದಕಗಳಿವೆ. ಕೊರಳಲ್ಲಿ ಕಂಠಹಾರಗಳಿವೆ. ಭುಜಬಂದ, ಉದರಬಂದವಿದೆ.

ಗ್ರಾಮ–ಮಹಾಗಾಂವ ಸ್ಥಳ–ಮಹಾಗಾಂವ

ಶಿಲ್ಪ–ಗಣಪತಿ ಕಾಲ–೧೨ನೇ ಶತಮಾನ

ವಸ್ತು–ಕಪ್ಪುಶಿಲೆ (ಕೆಂಪು ಬಣ್ಣದ ಲೇಪನ) ಪ್ರಕಟಣೆ–ಅಪ್ರಕಟಿತ

ಚತುರ್ಭುಜಧಾರಿಯಾದ ಗಣೇಶನ ಮೂರ್ತಿಶಿಲ್ಪ ಮಲ್ಲಿಕಾರ್ಜುನ ದೇವಾಲಯದಲ್ಲಿದೆ. ಇಲ್ಲಿ ಸುಖಾಸನ ಭಂಗಿಯಲ್ಲಿ ಕುಳಿತಿದ್ದಾನೆ. ಕೊರಳಲ್ಲಿ ಕಂಠಹಾರಗಳಿವೆ. ತಲೆಯ ಮೇಲೆ ಕಿರೀಟವಿದೆ. ಕೈಯಲ್ಲಿ ಕೊಡಲಿ, ಅಂಕುಶ, ದಂತ, ಪರಶು, ಮೊದಕಗಳಿವೆ. ಕಿವಿಗಳು ಅಗಲವಾಗಿವೆ. ಭುಜಬಂದ, ಯಜ್ಞೋಪವೀತ, ಉದರಬಂದಗಳನ್ನು ಧರಿಸಿದ್ದಾನೆ. ಸೊಂಡಿಲು ಎಡಕ್ಕೆ ಬಾಗಿದೆ. ಬಲಕ್ಕೆ ದಂತ ಕಾಣುತ್ತದೆ. ತನ್ನ ಬಲಗಾಲಿನ ಕೆಳಗೆ ಅವನ ವಾಹನವಾದ ಇಲಿ ಇದೆ.

ಗ್ರಾಮ–ಸಣ್ಣೂರು ಸ್ಥಳ–ಸಣ್ಣೂರು

ಶಿಲ್ಪ–ಗಣಪತಿ ಕಾಲ–೧೨ನೇ ಶತಮಾನ

ವಸ್ತು–ಕಪ್ಪುಶಿಲೆ ಪ್ರಕಟಣೆ–ಅಪ್ರಕಟಿತ

ಈ ಮೂರ್ತಿಶಿಲ್ಪ ರಾಮಲಿಂಗೇಶ್ವರ ದೇವಾಲಯದ ಎದುರಿಗೆ ದ್ವೀಪಸ್ತಂಭಕ್ಕೆ ಹೊಂದಿಕೊಂಡಿದೆ. ಪೀಠದ ಮೇಲೆ ಸುಖಾಸನ ಭಂಗಿಯಲ್ಲಿ ಕುಳಿತಿದ್ದಾನೆ. ಈತನ ಸೊಂಡಿಯು ಎಡಕ್ಕೆ ವಾಲಿದೆ. ಬಲಕ್ಕೆ ಭಗ್ನಗೊಂಡ ದಂತ ಕಾಣುತ್ತೇವೆ. ತಲೆಯ ಮೇಲೆ ಕಿರೀಟವಿದೆ. ಅಗಲವಾದ ಕಿವಿಗಳಿವೆ. ತನ್ನ ಬಲಗೈಯನ್ನು ಮೊಳಕಾಲಿನ ಮೇಲಿಟ್ಟಿದ್ದಾನೆ. ಎಡಗೈಯಲ್ಲಿ ಮೊದಕಗಳಿವೆ. ತನ್ನ ಸೊಂಡಿಲಿನಿಂದ ಮೋದಕಗಳನ್ನು ತೆಗೆದುಕೊಳ್ಳುತ್ತಿರುವುದನ್ನು ಕಾಣುತ್ತೇವೆ.

ಗ್ರಾಮ–ಸಣ್ಣೂರು ಸ್ಥಳ–ಸಣ್ಣೂರು

ಶಿಲ್ಪ–ಗಣಪತಿ ಕಾಲ–೧೨ನೇ ಶತಮಾನ

ವಸ್ತು–ಕಪ್ಪುಶಿಲೆ ಪ್ರಕಟಣೆ–ಅಪ್ರಕಟಿತ

ಚತುರ್ಭುಜಧಾರಿಯಾದ ವಿಘ್ನಹಾರಕನ ಈ ಶಿಲ್ಪ ಹನುಮಂತನ ಗುಡಿಯ ಬಲಭಾಗಕ್ಕಿದೆ. ತಲೆಯ ಮೇಲೆ ಕಿರೀಟವಿದೆ. ಆನೆಯ ಮುಖವಿದೆ. ಸೊಂಡಿಲು ಎಡಕ್ಕೆ ವಾಲಿದೆ. ಭಗ್ನಗೊಂಡ ದಂತ ಕಾಣುತ್ತಿದೆ. ಕೊರಳಲ್ಲಿ ಕಂಠಹಾರಗಳಿವೆ. ಕೈಯಲ್ಲಿ ಕೊಡಲಿ, ಅಂಕುಶ, ದಂತ, ಪರಶು ಮೋದಕಗಳನ್ನು ಹಿಡಿದಿದ್ದಾನೆ. ಕೊರಳಲ್ಲಿ ಜನಿವಾರವಿದೆ. ಸುಖಾಸನ ಭಂಗಿಯಲ್ಲಿ ಕುಳಿತಿದ್ದಾನೆ. ಭುಜಬಂಧ, ಯಜ್ಞೋಪವೀತ, ಉದರಬಂಧ, ಕಂಕಣ, ಕಡಗ, ಮುತ್ತಿನ ಅಲಂಕರಣವಿದೆ.

೫.೩. ಶೈವ ಮೂರ್ತಿಶಿಲ್ಪಗಳು:

ಶಿವನನ್ನು ಲಿಂಗರೂಪದಲ್ಲಿ ಹೆಚ್ಚಾಗಿ ಪೂಜಿಸಲಾಗುತ್ತದೆ. ಪ್ರಾಚೀನ ಲಿಂಗರೂಪದ ಸ್ತಂಭಗಳಿದ್ದು ಅವುಗಳಿಗೆ ಯಾವುದೇ ಪೀಠ, ಪಾಣಿಪಟ್ಟಿಲು ಇರುವುದಿಲ್ಲ. ನಂತರ ಕಾಲದಲ್ಲಿ ಲಿಂಗಗಳಿಗೆ ಪೀಠ, ಪಾಣಿಪಟ್ಟಿಲು ಮತ್ತು ಜಲಹರಿಗಳನ್ನು ಸೇರಿಸಲು ಪ್ರಾರಂಭ ವಾಯಿತು. ಪ್ರಾಚೀನ ಲಿಂಗರೂಪದ ಸ್ಥಂಭಗಳಿದ್ದು ಅವುಗಳಿಗೆ ಪೀಠ ಪಾಣಿಪಟ್ಟಿಲು ಇರುವುದಿಲ್ಲ. ನಂತರ ಕಾಲದಲ್ಲಿ ಲಿಂಗಗಳಿಗೆ ಪೀಠ ಪಾಣಿಪಟ್ಟಿಲು ಮತ್ತು ಜಲಹರಿಗಳನ್ನು ಸೇರಿಸಲು ಪ್ರಾರಂಭವಾಯಿತು.

ಶಿವಲಿಂಗಗಳು ಕಂಬಗಳಂತೇ ಇದ್ದು ಅವುಗಳಲ್ಲಿ ಬ್ರಹ್ಮ, ವಿಷ್ಣು ಮತ್ತು ರುದ್ರ ಭಾಗಗಳಿರುತ್ತವೆ. ವಿಷ್ಣು ಮತ್ತು ರುದ್ರಭಾಗಗಳು ಸಮಭಾಗಗಳಾಗಿದ್ದು. ಲಿಂಗದ ಬ್ರಹ್ಮಭಾಗದಲ್ಲಿ ನಾಲ್ಕು ಮುಖ, ವಿಷ್ಣು ಭಾಗದಲ್ಲಿ ಎಂಟುಭಾಗ ಮತ್ತು ರುದ್ರಭಾಗವು ವೃತ್ತಾಕಾರವಾಗಿರುತ್ತದೆ. ರುದ್ರಭಾಗವೇ ಪೂಜಾಭಾಗವಾಗಿದೆ. ಈ ಪೂಜಾಭಾಗದಲ್ಲಿ ಕೆಲವೊಮ್ಮೆ ಬ್ರಹ್ಮಸೂತ್ರವನ್ನು ಅಳವಡಿಸಲಾಗಿರುತ್ತದೆ. ಎರಡು ಲಿಂಗದ ಮೇಲ್ಭಾಗ ಅರ್ಧಚಂದ್ರಾಕೃತಿಯಲ್ಲಿರುತ್ತದೆ. ಈ ರೀತಿಯ ಶಿವಲಿಂಗಗಳು ಪಟ್ಟಣ, ಫಿರೋಜಾಬಾದ ಮತ್ತು ರಾಮತೀರ್ಥದಲ್ಲಿ ಕಾಣಬಹು ದಾಗಿದೆ. ಈ ಶಿವಲಿಂಗಗಳು ಜಲಹರಿವು, ತೀರ್ಥದ್ವಾರವನ್ನು ಹೊಂದಿದೆ. ಲಿಂಗದ ಬ್ರಹ್ಮಭಾಗ ಪೀಠದಲ್ಲಿ ಸೇರಿಕೊಂಡಿರುತ್ತವೆ. ಕೆಲವು ಶಿವಲಿಂಗದ ಮೇಲೆ ಬ್ರಹ್ಮಸೂತ್ರ ಇರುವುದಿಲ್ಲ. ಅದರೆ ಬ್ರಹ್ಮಸೂತ್ರವಿರುವ ಶಿವಲಿಂಗದ ಮೇಲೆ ಬ್ರಹ್ಮಸೂತ್ರ ಇರುವುದಿಲ್ಲ. ಆದರೆ ಬ್ರಹ್ಮಸೂತ್ರವಿರುವ ಶಿವಲಿಂಗಗಳು ಕೆರೆಭೊಸಗಾದ ಗ್ರಾಮದಲ್ಲಿ ಇರುವ ಶಿವ ದೇವಾಲಯದಲ್ಲಿ ಕಂಡುಬರುತ್ತದೆ.

ಮುಖ ಲಿಂಗಗಳು:

ಪ್ರಸ್ತುತ ಅಧ್ಯಯನದಲ್ಲಿ ಕೆರೆಭೊಸಗಾ ಗ್ರಾಮದಲ್ಲಿ ಒಂದು ಚಿಕ್ಕ ಗುಡಿಯಲ್ಲಿ ಪಂಚಮುಖವುಳ್ಳ ಒಂದು ಶಿವಲಿಂಗವಿದೆ. ಇದೇ ರೀತಿ ಫಿರೋಜಾಬಾದನಲ್ಲಿ ಚತುರ್ಮುಖಲಿಂಗವಿದ್ದು ಇಲ್ಲಿ ಚೌಕಾಕಾರದ ಪೀಠ ಪೀಠಕ್ಕೆ ವೃತ್ತಾಕಾರದ ಜಲಹರಿ ಇದೆ. ನಾಳದಲ್ಲಿ ನಾಲ್ಕು ದಿಕ್ಕಿಗೆ ಶಿವನ ಮುಖಭಾಗವನ್ನು ಕಂಡರಿಸಲಾಗಿದೆ. ಮೇಲ್ಭಾಗದಲ್ಲಿ ಶಿವಲಿಂಗದ ಕಿರುಭಾಗವಿದೆ. ಪಟ್ಟಣದ ಸಾವಳಗಿ ಮಠದಲ್ಲಿಯ ಶಿವಲಿಂಗವು ವಿಶೇಷತೆಯಿಂದ ಕೂಡಿದೆ. ಅದರ ರುದ್ರಭಾಗದ ಅರ್ಧಭಾಗ ತ್ರುಟಿತಗೊಂಡಿವೆ.

೫.೪. ವೈಷ್ಣವ ಮೂರ್ತಿಶಿಲ್ಪಗಳು:

ವೈಷ್ಣವ ಧರ್ಮಕ್ಕೆ ಪ್ರಾಶಸ್ತ್ಯವಿದ್ದರೂ ದೇವಾಲಯ ನಿರ್ಮಾಣದಲ್ಲಿ ದ್ವಿತಿಯ ಸ್ಥಾನವನ್ನು ಕಲ್ಯಾಣ ಚಾಲುಕ್ಯರು ನೀಡಿದ್ದುದ್ದನ್ನು ಗಮನಿಸಬಹುದಾಗಿದೆ. ವೈಷ್ಣವ ಶಿಲ್ಪಗಳು ನಾಲ್ಕು ವಿಧಗಳಲ್ಲಿ ರಚನೆಯಾಗುತ್ತಿದ್ದು ಅವು ಈ ಕೆಳಗಿನಂತಿವೆ.

೧. **ಸ್ಥಾನಿಕ ಮೂರ್ತಿ:** ಸಮಸ್ಥಾನದಲ್ಲಿ ನಿಂತಿರುವ ವಿಷ್ಣುವಿನ ವಿವಿಧ ರೂಪಗಳ ಸ್ಥಾನಿಕ ಮೂರ್ತಿಗಳಾಗಿವೆ.

೨. **ಆಸನ ಮೂರ್ತಿ:** ಪೀಠದ ಮೇಲೆ ಪದ್ಮಾಸನ ಅಥವಾ ಅರ್ಧ ಪರ್ಯಂಕಾಸದಲ್ಲಿ ಕುಳಿತಿರುವ ವಿಷ್ಣುವಿನ ವಿವಿಧ ರೂಪಗಳ ಶಿಲ್ಪಗಳೆ ಆಸನ ಮೂರ್ತಿಗಳು.

೩. **ಶಯನ ಮೂರ್ತಿ:** ವಿಷ್ಣುವಿನ ಅನಂತಶಯನ ರೂಪದಲ್ಲಿ ಐದು, ಏಳು ಹೆಡೆಗಳ ನಾಗಸರ್ಪದ ಮೇಲೆ ಪವಡಿಸಿರುವಂತೆ ಈ ಶಿಲ್ಪದ ನಿರ್ಮಾಣವಿರುತ್ತದೆ.

೪. **ಅವತಾರ ಮೂರ್ತಿ:** ವಿಷ್ಣುವಿನ ದಶಾವತಾರಕ್ಕೆ ಸಂಬಂಧಿಸಿದಂತೆ ವಿಭಿನ್ನ ಮೂರ್ತಿಗಳಿದ್ದು ಇವು ವಿಷ್ಣುವಿನ ದಶಾವತಾರದ ಶಿಲ್ಪಗಳನ್ನು ಪ್ರತಿನಿಧಿಸುತ್ತವೆ. ಹಾಗೆಯೇ ಕೆಲವೊಮ್ಮೆ ಗರ್ಭಗೃಹ, ಅಂತರಾಳ ತೋರಣದಲ್ಲಿ ನವರಂಗದ ಕಂಬಗಳಲ್ಲಿ ದಶಾವತಾರದ ಶಿಲ್ಪಗಳು ಕಂಡುಬರುತ್ತವೆ.[೨]

ಪ್ರಸ್ತುತವಾಗಿ ವೈಷ್ಣವರ ಮೂರ್ತಿಶಿಲ್ಪಗಳಿಗೆ ಸಂಬಂಧಪಟ್ಟಂತೆ ಖಣದಾಳ, ಹೊನ್ನಕಿರಣಗಿ, ಗುಲಬರ್ಗಾ ಪ್ರದೇಶಗಳಲ್ಲಿ ಶಿಲ್ಪಗಳು ದೊರಕಿವೆ. ಅವೆಲ್ಲವು ಅಪ್ರಕಟಿತವಾಗಿದ್ದ ಅವುಗಳ ಎಲ್ಲದರ ಮಾಹಿತಿಯನ್ನು ಅಧ್ಯಯನದಲ್ಲಿ ಸೇರಿಹಿಡಿಯುವ ಪ್ರಯತ್ನ ಮಾಡಲಾಗಿದೆ.

ನಗರ–ಗುಲಬರ್ಗಾ ಸ್ಥಳ–ರಾಮರ್ಧಿತ ಗುಡಿ

ಶಿಲ್ಪ–ವಿಷ್ಣು ಕಾಲ–೧೧ನೇ ಶತಮಾನ

ವಸ್ತು–ಕಪ್ಪುಶಿಲೆ ಪ್ರಕಟಿತ–ಅಪ್ರಕಟಿತ

ಚತುರ್ಭುಜಧಾರಿಯಾದ ವಿಷ್ಣುವಿನ ಶಿಲ್ಪ ಗುಲಬರ್ಗಾ ಪರಿಸರದಲ್ಲಿರುವ ರಾಮತೀರ್ಥ ಗುಡಿಯ ಪಕ್ಕದಲ್ಲಿದೆ. ಈ ಶಿಲ್ಪದಲ್ಲಿ ವಿಷ್ಣುವಿನ ತಲೆಯ ಮೇಲೆ ಕಿರೀಟ ಕೊರಳಲ್ಲಿ ಕಂಠಹಾರವಿದೆ. ತನ್ನ ಬಲಗೈಯಲ್ಲಿ ಖಡ್ಗ ಇನ್ನೊಂದು ಕೈಯಲ್ಲಿ ಶಂಖ ಹಿಡಿದಿರುವದು ಶಿಲ್ಪದಲ್ಲಿದೆ. ಕೈಗೆ ರುದ್ರಾಕ್ಷಿ ಕಟ್ಟಿದೆ. ತನ್ನ ಎಡಗೈಯಲ್ಲಿ ತ್ರಿಶೂಲ ಇನ್ನೊಂದು ಕೈಯಲ್ಲಿ ಡಮರುಗವನ್ನು ಹಿಡಿದಿರುವುದು ಸ್ಪಷ್ಟವಾಗಿ ಕಾಣಬರುತ್ತದೆ. ಈ ವಿಷ್ಣುವಿನ ಶಿಲ್ಪವು ನಿಂತ ಭಂಗಿಯಲ್ಲಿದೆ. ಇದರ ಬಲ ಎಡಕ್ಕೆ ಸ್ತ್ರೀ ಸೇವಕಿಯರ ಚಿತ್ರಗಳನ್ನು ಸಹ ಶಿಲ್ಪದಲ್ಲಿ ಕಾಣಬರುತ್ತದೆ.

ಗ್ರಾಮ–ಹೊನ್ನಕಿರಣಗಿ ಸ್ಥಳ–ಶ್ರೀಕೇಶವ ಈಶ್ವರಲಿಂಗೇಶ್ವರ ಗುಡಿ

ಶಿಲ್ಪ–ವಿಷ್ಣು ಕಾಲ–೧೧ನೇ ಶತಮಾನ

ವಸ್ತು–ಕಪ್ಪುಶಿಲೆ(ಆಧುನಿಕ ಸ್ವರೂಪ) ಪ್ರಕಟಣೆ–ಅಪ್ರಕಟಿತ

ಇಲ್ಲಿ ವಿಷ್ಣು ಚತುರ್ಭುಜಾಕೃತಿದಲ್ಲಿದ್ದು, ಶಿಲ್ಪದ ತಲೆಯ ಮೇಲೆ ಕಿರೀಟ ಎರಡು ಭುಜಕ್ಕೆ ತೋಳಭಂದಿ ಇದೆ. ಬಲಗೈಯಲ್ಲಿ ಪದ್ಮ ಇನ್ನೊಂದು ಕೈಯಲ್ಲಿ ಶಂಖವಿದೆ. ಎಡಗೈಯಲ್ಲಿ ಗದೆ ಮತ್ತು ಇನ್ನೊಂದು ಕೈಯಲ್ಲಿ ಚಕ್ರವಿದೆ. ಕೊರಳಲ್ಲಿ ಕಂಠಹಾರಗಳಿವೆ. ಇದರ ಉಪವೀತ ಧರಿಸಿದ್ದಾನೆ. ಇದರ ಬಲ ಮತ್ತು ಎಡಗೈ ಹಾಗೂ ಕಾಲುಗಳಲ್ಲಿ ರುದ್ರಾಕ್ಷಿಗಳನ್ನು ಹೊಂದಿದೆ. ಎಡಕ್ಕೆ ಮತ್ತು ಬಲಕ್ಕೆ ಸೇವಕಿಯರಿದ್ದಾರೆ.

ಗ್ರಾಮ–ಹೊನ್ನಕಿರಣಗಿ ಸ್ಥಳ–ಶ್ರೀಕೇಶವ ಈಶ್ವರಲಿಂಗೇಶ್ವರ ಗುಡಿ

ಶಿಲ್ಪ–ವಿಷ್ಣು ಕಾಲ–೧೧ನೇ ಶತಮಾನ

ವಸ್ತು–ಕಪ್ಪುಶಿಲೆ ಪ್ರಕಟಣೆ–ಅಪ್ರಕಟಿತ

ಈ ವಿಷ್ಣು ಶಿಲ್ಪವು ಚತುರ್ಭುಜನಾಗಿದ್ದು, ತಲೆಯ ಮೇಲೆ ಕಿರೀಟವಿದೆ. ಕೊರಳಲ್ಲಿ ಕಂಠಹಾರವಿದೆ. ತನ್ನ ಬಲಗೈಯಲ್ಲಿ ಪದ್ಮ ಇನ್ನೊಂದು ಕೈಯಲ್ಲಿ ಶಂಖ ಹಾಗೂ ಕೈ ಬಂದಿಯಾಗಿ ರುದ್ರಾಕ್ಷಿಗಳನ್ನು ಧರಿಸಿದೆ. ಎಡಗೈಯಲ್ಲಿ ಗದೆ, ಇನ್ನೊಂದು ಕೈಯಲ್ಲಿ ಚಕ್ರ ವಿದೆ. ಉಪವೀತ ಧರಿಸಿದ್ದಾನೆ. ಈ ಮೂರ್ತಿಶಿಲ್ಪದ ಬಲ ಮತ್ತು ಎಡಕ್ಕೆ ಸೇವಕಿಯರಿದ್ದಾರೆ.

ಗ್ರಾಮ–ಖಣದಾಳ
ಸ್ಥಳ–ಹನುಮಂತನ ಗುಡಿಯ ಆವರಣ

ಶಿಲ್ಪ–ವಿಷ್ಣು
ಕಾಲ–೧೨ನೆಯ ಶತಮಾನ

ವಸ್ತು–ಕಪ್ಪುಶಿಲೆ
ಪ್ರಕಟಣೆ–ಪ್ರಕಟಿತ

ವಿಷ್ಣುವಿನ ಮೂರ್ತಿ ಚರ್ತುಭುಜನಾಗಿದ್ದು, ತಲೆಯ ಮೇಲಿನ ಕಿರೀಟ ಮೂರು ಪಟ್ಟಿಕೆಗಳಿಂದ ಕೂಡಿದೆ. ಕಿವಿಯಲ್ಲಿ ಕಿವಿಯೊಲೆ ಧರಿಸಿದ್ದಾನೆ. ಕೊರಳಲ್ಲಿ ಕಂಠಹಾರ ತೋಳಲ್ಲಿ ತೋಳಬಂದಿ ಇದೆ. ಯಜ್ಞೋಪವೀತ ಧರಿಸಿದ್ದಾನೆ. ಬಲಗೈಯಲ್ಲಿ ಒಂದು ತ್ರುಟಿತವಾಗಿದೆ. ಎಡಗೈಯಲ್ಲಿ ಡಮರುಗವಿದೆ.

ಗ್ರಾಮ–ಖಣದಾಳ
ಸ್ಥಳ–ಹನುಮಂತನ ಗುಡಿಯ ಭಿತ್ತಿ

ಶಿಲ್ಪ–ವಿಷ್ಣು
ಕಾಲ–೧೨ನೆಯ ಶತಮಾನ

ವಸ್ತು–ಬಿಳಿಶಿಲೆ
ಪ್ರಕಟಣೆ–ಅಪ್ರಕಟಿತ

ಗುಲಬರ್ಗಾ ಪರಿಸರದಲ್ಲಿ ದೊರೆತ ವಿಷ್ಣು ಮೂರ್ತಿಯಲ್ಲಿ ಈ ಮೂರ್ತಿ ವಿಶಿಷ್ಟವಾಗಿದೆ. ಇಲ್ಲಿ ವಿಷ್ಣು ಐದು ಹೆಡೆ ಸರ್ಪದ ಮೇಲೆ ಶಯನ(ಮಲಗಿರುವ) ವಾಗಿರುವುದನ್ನು ಕಾಣುತ್ತೇವೆ. ಶಯನಾಸನದಲ್ಲಿರುವ ವಿಷ್ಣು ಚರ್ತುಭುಜದಾರಿಯಾಗಿದ್ದಾನೆ. ಐದು ಹೆಡೆಯ ಸರ್ಪದ ಮೇಲೆ ಮಲಗಿರುವ ವಿಷ್ಣುವಿನ ತಲೆಯ ಮೇಲೆ ಕಿರೀಟವಿದೆ. ಕಿವಿಯೊಲೆ ಧರಿಸಿದ್ದಾನೆ. ಕೊರಳಲ್ಲಿ ಕಂಠಹಾರವಿದೆ. ತನ್ನ ಬಲಗೈಯನ್ನು ತಲೆಕೆಳಗೆ ತಲೆದಿಂಬಿನಂತಹ ಆಸರೆಯನ್ನು ಪಡೆದುಕೊಂಡಿದ್ದಾನೆ. ಇದರ ಕೆಳಗೆ ಶಂಖ ಇದೆ. ತನ್ನ ಇನ್ನೊಂದು ಕೈ ಎದೆ ಮೇಲೆ ಇಟ್ಟುಕೊಂಡಿದ್ದಾನೆ. ಎಡಗೈಯಲ್ಲಿ ಚಕ್ರ ಮತ್ತು ಇನ್ನೊಂದು ಕೈಯನ್ನು ತೊಡೆಯ ಮೇಲೆ ಇಟ್ಟಿದ್ದಾನೆ. ಇದರ ಪಕ್ಕದಲ್ಲಿಯೇ ಗದೆ ಇದೆ. ಈ ಕೈ ಮೇಲೆ ಪದ್ಮ ಇದೆ. ತನ್ನ ಎಡಗಾಲನ್ನು ಬಲಗಾಲಿನ ಮೇಲೆ ಇಟ್ಟಿದ್ದಾನೆ. ಕೈಗಳಲ್ಲಿ ಮತ್ತು ಕಾಲುಗಳಲ್ಲಿ ರುದ್ರಾಕ್ಷಿಯನ್ನು ಹೊಂದಿದ್ದಾನೆ. ಈತನ ಬಲಗಾಲಿನ ಎದುರಿಗೆ ಸೇವಕಿಯರು ಗಾಳಿ ಹಾಕುತ್ತಿರುವುದನ್ನು ಕಾಣುತ್ತೇವೆ. ಒಟ್ಟಿನಲ್ಲಿ ಐದು ಹೆಡೆ ಸರ್ಪವನ್ನು ತನ್ನ ಹಾಸಿಗೆಯಾಗಿ ಮಾಡಿಕೊಂಡು ಅದರ ಮೇಲೆ ಮಲಗಿರುವ ದೃಶ್ಯವಿದೆ. ಈ ಶಿಲ್ಪದ ಎರಡನೆಯ ಪಟ್ಟಿಕೆಯಲ್ಲಿ ಸಪ್ತಮಾತೃಕೆಯರು ಅವರೊಂದಿಗೆ ಅವರ ವಾಹನವನ್ನು ಸಹ ಕಾಣಬಹುದಾಗಿದೆ.

ಗ್ರಾಮ–ಕಮಲಾಪುರ
ಸ್ಥಳ–ರಾಮತೀರ್ಥ

ಶಿಲ್ಪ–ವಿಷ್ಣು
ಕಾಲ–ಆಧುನಿಕ

ವಸ್ತು–ಕಪ್ಪುಶಿಲೆ
ಪ್ರಕಟಣೆ–ಅಪ್ರಕಟಿತ

ವಿಷ್ಣುವಿನ ಈ ಶಿಲ್ಪದ ತಲೆಯ ಮೇಲೆ ಕಿರೀಟ ಕೊರಳಲ್ಲಿ ಕಂಠಹಾರವಿದೆ. ಈ ಮೂರ್ತಿಯು ಚತುರ್ಭುಜನಾಗಿದ್ದಾನೆ. ಬಲಗೈಯಲ್ಲಿ ಚಕ್ರವಿದೆ. ಇನ್ನೊಂದು ಕೈ ಅಭಯ ನೀಡುತ್ತಿರುವದನ್ನು ಕಾಣುತ್ತೇವೆ. ಎಡಗೈಯಲ್ಲಿ ಪದ್ಮಕುಂಡಲ, ಇನ್ನೊಂದು ಕೈಯಲ್ಲಿ ಗದೆಯಿದೆ. ತೋಳುಬಂದಿ ಹೊಂದಿರುವುದನ್ನು ಕಾಣುತ್ತೇವೆ. ಈ ಮೂರ್ತಿಶಿಲ್ಪವು ನಿಂತಿರುವುದನ್ನು ಕಾಣುತ್ತೇವೆ.

ಗ್ರಾಮ–ಪಾಳ	ಸ್ಥಳ–ಹನುಮಂತನಗುಡಿಯ ಎಡಭಾಗ
ಶಿಲ್ಪ–ವಿಷ್ಣು	ಕಾಲ–೧೨ನೇ ಶತಮಾನ
ವಸ್ತು–ಕಪ್ಪುಶಿಲೆ	ಪ್ರಕಟಣೆ–ಅಪ್ರಕಟಿತ

ಈ ಮೂರ್ತಿಶಿಲ್ಪವು ತ್ರುಟಿತಗೊಂಡಿದೆ. ಕೊರಳಲ್ಲಿ ಕಂಠಹಾರ ಹೊಂದಿರುವ ಶಿಲ್ಪ ಚತುರ್ಭುಜನಾಗಿದ್ದಾನೆ. ಬಲಗೈಯಲ್ಲಿ ಡಮರುಗವಿದೆ. ಇನ್ನೊಂದು ಕೈ ತ್ರುಟಿತಗೊಂಡಿದೆ. ಎರಡು ಎಡಗೈಗಳು ತ್ರುಟಿತಗೊಂಡಿವೆ. ಯಜ್ಞೋಪವೀತ, ತೋಳಬಂದಿ ಧರಿಸಿದೆ. ಈ ಶಿಲ್ಪದ ಬಲ ಮತ್ತು ಎಡಕೈ ಸೇವಕಿಯರ ಮೂರ್ತಿಶಿಲ್ಪಗಳಿವೆ.

ಗ್ರಾಮ–ಶ್ರೀನಿವಾಸ ಸರಡಗಿ	ಸ್ಥಳ–ಬಸವೇಶ್ವರ ದೇವಸ್ಥಾನ
ಶಿಲ್ಪ–ವಿಷ್ಣು	ಕಾಲ–೧೨ನೇ ಶತಮಾನ
ವಸ್ತು–ಕಪ್ಪುಶಿಲೆ	ಪ್ರಕಟಣೆ–ಅಪ್ರಕಟಿತ

ವಿಷ್ಣುವಿನ ಮೂರ್ತಿಶಿಲ್ಪ ಹೊರತುಪಡಿಸಿ ಕಪ್ಪುಶಿಲೆ ಮೇಲೆ ಮಕರತೋರಣ ಚಿತ್ರಣವಿದೆ. ಕಿರೀಟಧಾರಿಯಾದ ವಿಷ್ಣುವಿನ ಕೊರಳಲ್ಲಿ ಕಂಠಹಾರವಿದೆ. ಈ ಮೂರ್ತಿ ಕೂಡ ಚತುರ್ಭುಜಾಕೃತಿಯಲ್ಲಿದೆ. ಬಲಗೈಯಲ್ಲಿ ಶಂಖವಿದೆ. ಇನ್ನೊಂದು ಕೈಯಲ್ಲಿ ಪದ್ಮವಿದೆ. ಎಡಗೈಯಲ್ಲಿ ಚಕ್ರ ಮತ್ತು ಗದೆಗಳಿವೆ, ಜನಿವಾರವಿದೆ, ಕಾಲಲ್ಲಿ ರುದ್ರಾಕ್ಷಿಗಳಿವೆ. ಈತನ ಬಲ ಮತ್ತು ಎಡಕ್ಕೆ ಸೇವಕಿಯರು ಕುಳಿತಿರುವುದನ್ನು ಕಾಣಬಹುದಾಗಿದೆ.

ಗ್ರಾಮ–ಖಣದಾಳ	ಸ್ಥಳ–ಹನುಮಂತನ ಗುಡಿ
ಶಿಲ್ಪ–ಹನುಮಂತ	ಕಾಲ–೧೨ನೇ ಶತಮಾನ
ವಸ್ತು–ಕಪ್ಪುಶಿಲೆ	ಪ್ರಕಟಣೆ–ಅಪ್ರಕಟಿತ

ಈ ಮೂರ್ತಿಶಿಲ್ಪವು ಶಾಸನಶಿಲ್ಪವಾಗಿದೆ. ಎರಡು ಪಟ್ಟಿಕೆಗಳಿಂದ ಇದು ಕೂಡಿದೆ. ಮೊದಲಿನ ಪಟ್ಟಿಕೆಯಲ್ಲಿ ಹನುಮಂತನ ಮೂರ್ತಿಶಿಲ್ಪವಿದೆ. ಈ ಮೂರ್ತಿಶಿಲ್ಪದಲ್ಲಿ ಚಕ್ರವಿದೆ.

ಪದ್ಮವಿದೆ. ಇವುಗಳ ಮೇಲೆ ಸೂರ್ಯ, ಚಂದ್ರರನ್ನು ಕಂಡರಿಸಲಾಗಿದೆ. ಇದಕ್ಕೆ ಹೊಂದಿಕೊಂಡ ಎರಡನೆಯ ಪಟ್ಟಿಕೆಯಲ್ಲಿ ಶಾಸನವಿದೆ. ಆದರೆ ಅದರ ನಾಲ್ಕು ಸಾಲುಗಳು ಮಾತ್ರ ಕಾಣುತ್ತವೆ. ಉಳಿದ ಭಾಗ ತ್ರುಟಿತಗೊಂಡಿದೆ.

೫.೫. ಶಾಕ್ತ ಮೂರ್ತಿಶಿಲ್ಪಗಳು:

ಸಪ್ತಮಾತೃಕೆಯರು:

ವರಾಹ ಪುರಾಣದಲ್ಲಿ ಹೇಳಿದಂತೆ ಈ ಮಾತೃಕೆಯರು ನೈತಿಕವಾಗಿ ಎಂಟು ಮಾನಸಿಕ ಗುಣಗಳನ್ನು ಹೊಂದಿದ್ದಾರೆ. ಅವುಗಳೆಂದರೆ ಯೋಗೇಶ್ವರಿಯ ಕಾಮ, ಮಹೇಶ್ವರಿಯ ಕ್ರೋಧ, ವೈಷ್ಣವಿಯ ಲೋಭ, ಬ್ರಾಹ್ಮಿಣಿಯ ಮದ, ಕೌಮಾರಿ ಮೋಹ, ಇಂದ್ರಾಣಿ ಮಾತ್ಸರ್ಯ, ಚಾಮುಂಡಿಯ ಪ್ರಶನ್ಯ, ವರಾಹಿ ಅಸೂಯೆ ಹೀಗೆ ಇವುಗಳ ಬಗ್ಗೆ ವರ್ಣನೆಯಿದೆ. ಸಪ್ತಮಾತೃಕೆಯರ ಉಲ್ಲೇಖವು ವರಾಹ ಪುರಾಣದಲ್ಲಿ ಮತ್ತು ಆಗಮಗಳಲ್ಲಿ ಇದ್ದು ಈ ಸಪ್ತಮಾತೃಕೆಯರು ಬ್ರಹ್ಮನಿಂದ ಸೃಷ್ಟಿಸಲ್ಪಟ್ಟವರಾಗಿದ್ದಾರೆ. ಹಾಗೆಯೆ ಇವರನ್ನು ತಾಯಿ ದೇವರೆಂದು ಪೂಜಿಸಲಾಗುತ್ತಿದೆ. ಆದರೆ ಈ ಆಗಮಗಳಲ್ಲಿ ಸಪ್ತಮಾತೃಕೆಗಳು ಏಳು ಎಂದು ಉಲ್ಲೇಖವಿದೆ. ಈ ರೀತಿಯ ಶಿಲ್ಪಗಳನ್ನು ಪಟ್ಟಣ, ಗುಲಬರ್ಗಾ, ಕೆರೂರು, ಪಾಳಾ, ಫಿರೂಜಾಬಾದಗಳ ಗ್ರಾಮಗಳಲ್ಲಿ ಗುರುತಿಸಲಾಗಿದೆ.

ಗ್ರಾಮ–ಕೆರೂರು	ಸ್ಥಳ–ಹನುಮಂತನ ಗುಡಿ
ಶಿಲ್ಪ–ಸಪ್ತಮಾತೃಕೆ	ಕಾಲ–೧೨ನೇ ಶತಮಾನ
ವಸ್ತು–ಕಪ್ಪುಶಿಲೆ	ಪ್ರಕಟಣೆ–ಅಪ್ರಕಟಿತ

ಒಂದೇ ಪಟ್ಟಿಕೆಯಲ್ಲಿ ಸಪ್ತಮಾತೃಕೆಯರನ್ನು ಸಾಲಾಗಿ ಕಂಡರಿಸಿದ್ದಾರೆ. ವೀರಭದ್ರನ ಮತ್ತು ಗಣೇಶನ ಶಿಲ್ಪವಿದೆ. ಅಯಾ ದೇವತೆಯರ ಕೆಳಭಾಗದಲ್ಲಿ ಕುಳಿತ ಅವರ ವಾಹನಗಳನ್ನು ತೋರಿಸಲಾಗಿದೆ. ಈ ಸಪ್ತಮಾತೃಕೆಯರು ಚತುರ್ಭುಜಧಾರಿಗಳಾಗಿದ್ದು ಆಯುಧಗಳನ್ನು ಹೊಂದಿದ್ದಾರೆ. ಕೀರಿಟ, ಪತ್ರಕುಂಡಲ, ಹಾರ, ಫಲ, ಕಂಠ, ಉಪವೀತ ಕಂಕಣ, ಕಿಂಕಿಣಿ ಇನ್ನು ಮುಂತಾದ ಆಭರಣಗಳಿಂದ ಅಲಂಕೃತಗೊಂಡಿದ್ದಾರೆ.

ಗ್ರಾಮ–ಪಾಳಾ	ಸ್ಥಳ–ದೇವಾಲಯದ ಬಲಭಾಗ
ಶಿಲ್ಪ–ಸಪ್ತಮಾತೃಕೆ	ಕಾಲ–೧೨ನೇ ಶತಮಾನ
ವಸ್ತು–ಕಪ್ಪುಶಿಲೆ	ಪ್ರಕಟಣೆ–ಅಪ್ರಕಟಿತ

ಒಂದೇ ಪಟ್ಟಿಕೆಯಲ್ಲಿ ಸಪ್ತಮಾತೃಕೆಯರನ್ನು ಸಾಲಾಗಿ ಕಂಡರಿಸಿದ್ದಾರೆ. ಇಲ್ಲಿ ಮಾತೃಕೆಯರು ದ್ವಿಭುಜವಾಗಿರುವುದನ್ನು ಕಾಣುತ್ತೇವೆ. ಈ ಸಪ್ತಮಾತೃಕೆಯರ ಸಾಲಿನಲ್ಲಿ ವೈಷ್ಣವಿ, ಇಂದ್ರಾಣಿ, ಚಾಮುಂಡಾ, ಮಾರಿಯ ಮತ್ತು ಇನ್ನಿತರ ಮಾತೃಕೆಯರ ಶಿಲ್ಪಗಳು ಕಾಣುತ್ತೇವೆ. ಅವುಗಳು ಸವೆದಿರುವುದರಿಂದ ಅವುಗಳನ್ನು ಗುರುತಿಸಲು ಕಷ್ಟವಾಗಿದೆ. ಆದರೆ ಈ ಎಲ್ಲ ಸಪ್ತಮಾತೃಕೆಯರು ಸುಖಾಸನದಲ್ಲಿದ್ದಾರೆ. ಕೈಯಲ್ಲಿ ಆಯುಧಗಳನ್ನು ಹಿಡಿದಿರುವುದು ಈ ಪಟ್ಟಿಕೆಯಲ್ಲಿದೆ.

ಗ್ರಾಮ–ಪಟ್ಟಣ	ಸ್ಥಳ–ಬೋರಲಿಂಗೇಶ್ವರ ದೇವಾಲಯ
ಶಿಲ್ಪ–ಸಪ್ತಮಾತೃಕೆ	ಕಾಲ–೧೨ನೇ ಶತಮಾನ
ವಸ್ತು–ಕಪ್ಪುಶಿಲೆ(ಆಧುನಿಕ ಸ್ವರೂಪ)	ಪ್ರಕಟಣೆ–ಅಪ್ರಕಟಿತ

ಒಂದೇ ಪಟ್ಟಿಕೆಯಲ್ಲಿರುವ ಸಪ್ತಮಾತೃಕೆಯರು ಸುಲಲಿತಾಶನದಲ್ಲಿ ಕುಳಿತಿದ್ದಾರೆ, ಇಲ್ಲಿ ಮಹೇಶ್ವರಿ, ಬ್ರಹ್ಮ, ವೈಷ್ಣವಿ, ಮಾಹಿ, ಇಂದ್ರಾಣಿ, ಚಾಮುಂಡಿ ಶಿಲ್ಪಗಳಿರುವುದು ಕಾಣುತ್ತೇವೆ. ಎಲ್ಲ ಮಾತೃಕೆಯರು ದ್ವಿಭುಜಧಾರಿಗಳಾಗಿದ್ದು ತಮ್ಮ ಕೈಯಲ್ಲಿ ಆಯುಧಗಳನ್ನು ಹೊಂದಿದ್ದಾರೆ. ಕಂಠಿ, ಉಪವೀತ, ಕಂಕಣ, ಕಿಂಕಿಣಿ, ಕಿರೀಟ, ಪತ್ರಕುಂಡಲ ಆಯುಧಗಳು ಅವರ ಕೈಯಲ್ಲಿ ಇದೆ.

ಗ್ರಾಮ–ಪಟ್ಟಣ	ಸ್ಥಳ–ಬೋರಲಿಂಗೇಶ್ವರ ದೇವಾಲಯ
ಶಿಲ್ಪ–ಸಪ್ತಮಾತೃಕೆ	ಕಾಲ–೧೨ನೇ ಶತಮಾನ
ವಸ್ತು–ಕಪ್ಪುಶಿಲೆ(ಆಧುನಿಕ ಸ್ವರೂಪ)	ಪ್ರಕಟಣೆ–ಅಪ್ರಕಟಿತ

ಈ ಸಪ್ತಮಾತೃಕೆಯರ ಪಟ್ಟಿಕೆಯ ತ್ರುಟಿತಗೊಂಡಿದ್ದು ಕೇವಲ ಐದು ಮಾತೃಕೆಯರು ಮಾತ್ರ ಪಟ್ಟಿಕೆಯಲ್ಲಿ ಕಾಣುತ್ತೇವೆ. ದ್ವಿಭುಜಾಧಾರಿಗಳಾಗಿದ್ದಾರೆ. ತಲೆಯ ಮೇಲೆ ಕಿರೀಟ, ಕೈಯಲ್ಲಿ, ಪತ್ರಕುಂಡಲ, ಹಾರ, ಕಂಠಿ, ಕಂಕಣ ಮತ್ತು ಕಿಂಕಿಣವನ್ನು ಹೊಂದಿರುವುದನ್ನು ಕಾಣುತ್ತೇವೆ. ಗಣೇಶನ ಮೂರ್ತಿಯು ಸಹ ಕಂಡುಬರುತ್ತದೆ. ಈ ಎಲ್ಲ ಮಾತೃಕೆಯರ ವಾಹನಗಳನ್ನು ಮೂರ್ತಿಶಿಲ್ಪದ ಪೀಠದಲ್ಲಿ ಎಲ್ಲ ಮಾತೃಕೆಯರ ವಾಹನಗಳನ್ನು ಕಂಡರಿಸಲಾಗಿದೆ. ಸೌಮ್ಯ ಲಲಿತಾಸನದಲ್ಲಿ ಮಾತೃಕೆಯರು ಕುಳಿತಿರುವುದನ್ನು ಕಾಣುತ್ತೇವೆ.

ಗಜಲಕ್ಷ್ಮಿ ಮೂರ್ತಿಶಿಲ್ಪಗಳು:

ಗಜಲಕ್ಷ್ಮಿಯು ವಿಷ್ಣುವಿನ ಪತ್ನಿ ಅಥವಾ ವೈಷ್ಣವಿ ಮಾತ್ರ ಆಗಿರದೆ. ಮಾತೃದೇವತೆ, ಗ್ರಾಮ ದೇವತೆಯಾಗಿಯೂ ಪೂಜಿಸಲ್ಪಡುತ್ತಾಳೆ. ಗಜಲಕ್ಷ್ಮಿಯನ್ನು ಬಾದುಬ್ಬೆ ಎಂದು ಕರೆಯುವ ವಾಡಿಕೆಯಿದೆ. ಈ ದೇವತೆಯನ್ನು ಬಾದುಬ್ಬೆ ಎಂದು ಗುರುತಿಸುವುದರಿಂದ ಆದಿ ಚಾಲುಕ್ಯರ ರಾಜಧಾನಿಯನ್ನು ನೆನೆಸಿ ಸ್ಪಷ್ಟಪಡಿಸಬೇಕಾಗಿದೆ. ಈಕೆಯನ್ನು ಶಿಲ್ಪದಲ್ಲಿ ತೋರಿಸುವ ಪರಂಪರೆ ಕ್ರಿ.ಶ.೭ನೇ ಶತಮಾನದಿಂದ ಪ್ರಾರಂಭವಾಗಿದೆ.[೩]

ಗಜಲಕ್ಷ್ಮಿ ಶಿಲ್ಪಗಳು ದೇವಾಲಯಗಳ ಬಾಗಿಲುವಾಡದ ಲಲಾಟ ಪಟ್ಟಿಕೆಯಲ್ಲಿರುತ್ತದೆ. ಪ್ರತ್ಯೇಕ ಪಟ್ಟಿಕೆಗಳನ್ನು ಕೆಲವೊಮ್ಮೆ ಕೆರೆಯ ತೂಬಿಗೂ, ಗ್ರಾಮದ ಅಗಸಿ ಬಾಗಿಲಗಳಿಗೂ ಬಳಸಿರುವುದುಂಟು, ಉತ್ತರ ಕರ್ನಾಟಕದ ಕೆಲವು ಹಳ್ಳಿಗಳಲ್ಲಿ ಸೀಮೆ, ಲಕ್ಕವ್ವ ಎಂಬ ದೇವತೆಯ ಗುಡಿ, ಗ್ರಾಮದ ಹೊಲಗಳು ಸೀಮೆಯ ಮೇಲೆ ಕಂಡುಬರುತ್ತದೆ. ಈ ಗಜಲಕ್ಷ್ಮಿ ಶಿಲ್ಪಗಳನ್ನು ಬಾಣಂತಿ ಕಲ್ಲುಗಳೆಂದು ಜನರು ಕರೆಯುತ್ತಾರೆ. ಹಾಗೂ ಹೆರಿಗೆಯಾಗುವ ವೇಳೆಯಲ್ಲಿ ಮುಖ ಕೆಳಮಾಡಿ ಮಲಗಿಸಿ ಹೆರಿಗೆಯಾದ ನಂತರ ಮೊದಲಿನಂತೆ ನಿಲ್ಲಿಸಿ ಪೂಜೆ ಮಾಡುವ ಪದ್ದತಿಯು ಇನ್ನು ಕೂಡ ಗ್ರಾಮಾಂತರ ಪ್ರದೇಶಗಳಲ್ಲಿ ಜಾರಿಯಲ್ಲಿದೆ.[೪] ಗುಲಬರ್ಗಾ, ಪಾಳಾ ಮತ್ತು ಇಟಗಿಯಲ್ಲಿ ಈ ಗಜಲಕ್ಷ್ಮಿಯ ಮೂರ್ತಿಶಿಲ್ಪಗಳು ಕಂಡುಬರುತ್ತವೆ. ಇವುಗಳನ್ನು ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಸೇರಿಸಲಾಗಿದೆ.

ನಗರ–ಗುಲಬರ್ಗಾ	ಸ್ಥಳ–ರಾಜಾಪುರದ ಹನುಮಂತನ ಗುಡಿ
ಶಿಲ್ಪ–ಗಜಲಕ್ಷ್ಮಿ	ಕಾಲ–೧೨ನೇ ಶತಮಾನ
ವಸ್ತು–ಕಪ್ಪುಶಿಲೆ(ಆಧುನಿಕ ಸ್ವರೂಪ)	ಪ್ರಕಟಣೆ–ಅಪ್ರಕಟಿತ

ಗಜಲಕ್ಷ್ಮಿಯ ಈ ಮೂರ್ತಿಶಿಲ್ಪದ ಲಕ್ಷ್ಮಿಯು ಪದ್ಮಾಸನದಲ್ಲಿ ಕುಳಿತಿದ್ದಾಳೆ. ಇವಳ ಬಲ ಮತ್ತು ಎಡಕ್ಕೆ ಗಜಗಳು ಎಲೆ ಮೇಲೆ ನಿಂತು ಅವಳಿಗೆ ತನ್ನ ಸೊಂಡಿಲು ಮೂಲಕ ನೀರನ್ನು ಅವಳ ತಲೆಯ ಮೇಲೆ ಎರಡು ಗಜ ಒಮ್ಮೆಲೆ ಸುರಿಯುತ್ತಿರುವುದನ್ನು ಕಾಣಬಹುದಾಗಿದೆ. ಆನೆಗಳ ಬೆನ್ನು ಮೇಲೆ ಬಟ್ಟೆಗಳ ಹೊದಿಕೆ ಇದೆ.

ಗ್ರಾಮ–ಪಾಳಾ	ಸ್ಥಳ–ಮಲ್ಯಯನಗುಡಿಯ ಕಟ್ಟೆಯ ಭಿತ್ತಿ
ಶಿಲ್ಪ–ಗಜಲಕ್ಷ್ಮಿ	ಕಾಲ–೧೨ನೇ ಶತಮಾನ
ವಸ್ತು–ಕಪ್ಪುಶಿಲೆ	ಪ್ರಕಟಣೆ–ಅಪ್ರಕಟಿತ

ಪದ್ಮಕಂಠದ ಮೇಲೆ ಪದ್ಮಾಸನ ಭಂಗಿಯಲ್ಲಿ ಕುಳಿತಿರುವ ಲಕ್ಷ್ಮಿಯ ತಲೆಯ ಮೇಲೆ ಕಿರೀಟ ಕಿವಿಯೊಲೆ ಕೊರಳಲ್ಲಿ ಕಂಠಹಾರವನ್ನು ಧರಿಸಿದ್ದು ಸ್ಪಷ್ಟವಾಗಿದೆ. ತನ್ನ ಎರಡು ಕೈಯಲ್ಲಿ ಕಮಲವಿದೆ. ಈ ಶಿಲ್ಪದ ಬಲ ಮತ್ತು ಎಡಕ್ಕೆ ಗಜಗಳು ಬಲಗಾಲನ್ನು ಎತ್ತರಿಸಿ ಲಕ್ಷ್ಮೀಯ ಮೇಲೆ ಜಲಧಾರೆ ಹೊಯ್ಯುತ್ತಿರುವುದನ್ನು ಕಾಣುತ್ತೇವೆ. ಈ ಆನೆಗಳ ಕೊರಳಲ್ಲಿ ಹಾರವಿರುವದು ಕಾಣುತ್ತೇವೆ. ಬೆನ್ನಿನ ಮೇಲೆ ಬಟ್ಟೆ ಹೊದಿಕೆ ಇದೆ,

ಗ್ರಾಮ–ಇಟಗಿ	ಸ್ಥಳ–ಹನುಮಂತನ ಗುಡಿ ಹತ್ತಿರ
ಶಿಲ್ಪ–ಗಜಲಕ್ಷ್ಮಿ	ಕಾಲ–೧೨ನೇ ಶತಮಾನ
ವಸ್ತು–ಕಪ್ಪುಶಿಲೆ	ಪ್ರಕಟಣೆ–ಅಪ್ರಕಟಿತ

ಈ ಗಜಲಕ್ಷ್ಮಿ ಪದ್ಮಾಸನ ಭಂಗಿಯಲ್ಲಿ ಪದ್ಮದಲ್ಲಿ ಮೇಲೆ ಕುಳಿತಿದೆ. ತಲೆಯ ಮೇಲೆ ಕಿರೀಟ, ಕೊರಳಲ್ಲಿ ಕಂಠಹಾರವಿದೆ. ಈ ಶಿಲ್ಪದ ಬಲ ಮತ್ತು ಎಡಕ್ಕೆ ಗಜಗಳು ತಮ್ಮ ಸೊಂಡಿಲಿನಲ್ಲಿ ನೀರನ್ನು ಅವಳ ಮೇಲೆ ಹಾಕುತ್ತಿವೆ.

ಮಹಿಷಾಸುರ ಮರ್ಧಿನಿ:

ಒಂದು ಐತಿಹ್ಯದ ಪ್ರಕಾರ ಸ್ತ್ರೀಯನ್ನು ಬಿಟ್ಟು ದೇವಗಂಧರ್ವರಾದಿಯಾಗಿ ಯಾರಿಂದಲೂ ಸಾವು ಬರಬಾರದೆಂಬ ವರವನ್ನು ಮಹಿಷನು ಪಡೆದು ಮೂರು ಲೋಕ ಗಳನ್ನು ವಶಪಡಿಸಿಕೊಂಡು ದೇವತೆಗಳನ್ನು ಆತಂಕಕ್ಕೀಡು ಮಾಡಿದನು. ಇದರಿಂದ ಅವಮಾನಿತ ರಾದ ದೇವತೆಗಳು ಮತ್ತು ಶಕ್ತಿಹೀನ ವೀರ್ಯಾತನಕ್ಕೆ ನಾಚಿಕೆಪಟ್ಟು ಅದನ್ನು ಹೊರಹಾಕಿದರು. ಅದು ಒಂದುಗೂಡಿ ಸುಂದರ ಹೆಣ್ಣಿನ ರೂಪ ತಳೆಯಿತು. ಅವಳು ಶಿವನಿಂದ ತ್ರಿಶೂಲ, ವಿಷ್ಣುವಿನಿಂದ ಚಕ್ರ, ಯಮನಿಂದ ಕೆದರಿದ ಜಟಾರಾಶಿ, ಇತರರಿಂದ ಸೂಕ್ತಯುಧಗಳನ್ನು ಪಡೆದಳು, ಹಿಮವಂತನು ಅವಳಿಗೆ ದೇಹವನ್ನು ವಾಹನವಾಗಿ ಕೊಟ್ಟಳು ದುಷ್ಟ ಮಹಿಷಾಸುರ ನನ್ನು ತನ್ನ ಮಾಯಾಜಾಲದಲ್ಲಿ ಬಂಧಿಸಿ ಸಂಹರಿಸಿದಳು.[೫]

ಮಹಿಷಾಸುರ ಮರ್ದಿನಿಯ ಮೂರ್ತಿಶಿಲ್ಪಗಳನ್ನು ಸೈಯದ ಚಿಂಚೋಳಿ, ಖಣದಾಳ, ಹರಸೂರುಗಳಲ್ಲಿ ಕಂಡುಬರುತ್ತವೆ. ಇವುಗಳ ಅಪ್ರಕಟಿತವಾದವುಗಳಾಗಿದ್ದು ಅಧ್ಯಯನದ ವ್ಯಾಪ್ತಿಗೆ ಒಳಪಟ್ಟಿವೆ.

ಗ್ರಾಮ–ಸೈಯದ್ ಚಿಂಚೋಲಿ	ಸ್ಥಳ–ಸಂಗಮೇಶ್ವರ ದೇವಸ್ಥಾನ ಪಕ್ಕ
ಶಿಲ್ಪ–ಮಹಿಶಾಸುರಮರ್ದಿನಿ	ಕಾಲ–೧೨ನೇ ಶತಮಾನ
ವಸ್ತು–ಕಪ್ಪುಶಿಲೆ	ಪ್ರಕಟಣೆ–ಅಪ್ರಕಟಿತ

ತಲೆಯ ಮೇಲೆ ಕಿರೀಟ ಧರಿಸಿದ್ದಾಳೆ. ಮುಖ ಸಂಪೂರ್ಣವಾಗಿ ತ್ರುಟಿತಗೊಂಡಿದೆ. ಕೊರಳಲ್ಲಿ ಕಂಠಹಾರಗಳಿವೆ. ದ್ವಿಭುಜಧಾರಿ ತೋಳಬಂದಿ ಮತ್ತು ಬಳೆಗಳು ಧರಿಸಿದ್ದಾಳೆ. ಬಲಗೈ ತ್ರುಟಿತಗೊಂಡಿದೆ. ಎಡಗೈಯಲ್ಲಿ ಶಂಖವಿದೆ. ಇನ್ನೊಂದು ಕೈಯನ್ನು ತನ್ನ ಕಾಲಲ್ಲಿರುವ ಮಹಿಷನ ಮೇಲೆ ಇಟ್ಟಿದ್ದಾಳೆ. ಮಹಿಷ ತನ್ನ ಎದುರಿನ ಕಾಲು ಮಡಿಚಿ ಕುಳಿತಿದ್ದಾನೆ.

ಗ್ರಾಮ–ಖಣದಾಳ	ಸ್ಥಳ–ಹನುಮಂತನ ಗುಡಿಯ ಭಿತ್ತಿ
ಶಿಲ್ಪ–ಮಹಿಷಾಸುರಮರ್ಧಿನಿ	ಕಾಲ–೧೨ನೇ ಶತಮಾನ
ವಸ್ತು–ಕಪ್ಪುಶಿಲೆ	ಪ್ರಕಟಣೆ–ಅಪ್ರಕಟಿತ

ಮಹಿಷಾಸುರಮರ್ಧಿನಿಯ ತಲೆಯ ಮೇಲೆ ಕಿರೀಟ, ಕಿವಿಯೋಲೆ ಧರಿಸಿದ್ದಾಳೆ. ಕೊರಳಲ್ಲಿ ಕಂಠಹಾರಗಳಿವೆ. ಚತುರ್ಭುಜವಿದೆ. ಬಲ ಕೈಯ ನಾಲ್ಕು ಕೈಗಳಲ್ಲಿ ಒಂದು ಕೈಯಲ್ಲಿ ಚಕ್ರ, ಪದ್ಮ, ಬಟ್ಟಲು ಮತ್ತು ತನ್ನ ಇನ್ನೊಂದು ಕೈಯಿಂದ ತ್ರಿಶೂಲ ಹಿಡಿದಿದ್ದಾಳೆ. ಎಡಗೈಯ ನಾಲ್ಕು ಕೈಗಳಿವೆ. ಒಂದರಲ್ಲಿ ಶಂಖ, ಹಿಡಿದಿದ್ದಾಳೆ. ಇನ್ನೊಂದು ಎರಡು ಕೈಗಳಲ್ಲಿ ಆಯುಧಗಳನ್ನು ಹಿಡಿದಿದ್ದಾಳೆ. ತನ್ನ ಬಲ ಮತ್ತು ಎಡಗೈಯಿಂದ ತ್ರಿಶೂಲ ಹಿಡಿದು ಕೆಳಗೆ ಇರುವ ಮಹಿಷನನ್ನು ಸಂಹರಿಸುತ್ತಿದ್ದಾಳೆ. ಸಿಂಹದ ಮೇಲೆ ಕುಳಿತಿದ್ದಾಳೆ. ಇದಕ್ಕೆ ತ್ರಿಶೂಲದಿಂದ ಇರಿಯುತ್ತಿದ್ದಾಳೆ. ಹಂದಿ ಅಲ್ಲೆ ಕಾಲಿನ ಒತ್ತಡಕ್ಕೆ ಕುಳಿತಿದೆ. ಎಡಗಾಲು ಕೆಳಗಡೆ ಇದೆ. ಒಟ್ಟಿನಲ್ಲಿ ಇದೊಂದು ಮಹತ್ವದ ಶಿಲ್ಪವಾಗಿದೆ.

ಗ್ರಾಮ–ಶ್ರೀನಿವಾಸ ಸರಡಗಿ	ಸ್ಥಳ–ಬಸವೇಶ್ವರ ದೇವಸ್ಥಾನ
ಶಿಲ್ಪ–ಶಾಕ್ತ(ಕಾಳಿಕಾದೇವಿ)	ಕಾಲ–೧೨ನೇ ಶತಮಾನ
ವಸ್ತು–ಕಪ್ಪುಶಿಲೆ	ಪ್ರಕಟಣೆ–ಅಪ್ರಕಟಿತ

ಈ ಮೂರ್ತಿಶಿಲ್ಪದ ರುಂಡವಿಲ್ಲ, ಕೊರಳಲ್ಲಿ ಕಂಠಹಾರಗಳಿವೆ. ಎರಡು ಸ್ತನಗಳಲ್ಲಿ ಒಂದು ತ್ರುಟಿತಗೊಂಡಿವೆ. ತೋಳಬಂದಿ ಧರಿಸಿದ್ದು ಕಂಡು ಬರುತ್ತದೆ. ಚತುರ್ಭುಜಾ ಕೃತಿಯಲ್ಲಿದೆ. ಬಲಗೈ ತ್ರುಟಿತಗೊಂಡಿದೆ. ಎಡಗೈಯಲ್ಲಿ ಖಡ್ಗ ಮತ್ತು ಪತ್ರಕುಂಡಲಗಳಿವೆ. ಬಲಗಾಲು ಅರ್ಧ ತ್ರುಟಿತವಾಗಿದೆ. ಎರಡು ಕಾಲುಗಳ ಪಾದಗಳು ಒಂದರ ಮೇಲೆ ಮತ್ತೊಂದು ಇಟ್ಟಂತೆ ಕಾಣುತ್ತದೆ. ಪೀಠದಲ್ಲಿ ಬಲಕ್ಕೆ ಮತ್ತು ಎಡಕ್ಕೆ ಎರಡು ರುಂಡಗಳಿವೆ. ಇದರ ಆಧಾರದ ಮೇಲೆ ಇದು ಕಾಳಿಯ ಶಿಲ್ಪವಾಗಿರಬಹುದೆಂದು ಹೇಳಲಾಗಿದೆ.

ಗ್ರಾಮ–ಹರಸೂರು
ಸ್ಥಳ–ಮುಖ್ಯ ರಸ್ತೆಯ ಬಲಭಾಗಕ್ಕೆ

ಶಿಲ್ಪ–ಶಾಕ್ತ ಶಿಲ್ಪ
ಕಾಲ–೧೨ನೇ ಶತಮಾನ

ವಸ್ತು–ಕಪ್ಪುಶಿಲೆ
ಪ್ರಕಟಣೆ–ಅಪ್ರಕಟಿತ

ಈ ಶಿಲ್ಪದ ತಲೆಯ ಮೇಲೆ ಕಿರೀಟವಿದೆ. ಕಿವಿಯೊಲೆ ಮತ್ತು ಕೊರಳಲ್ಲಿ ಕಂಠಹಾರವಿದೆ. ತೋಳಬಂದಿ ಧರಿಸಿದ್ದಾಳೆ. ಬಲಗೈಯಲ್ಲಿ ಡಮರು ಮತ್ತು ಖಡ್ಗವಿದೆ. ಎಡಗೈಯಲ್ಲಿ ತ್ರಿಶೂಲ ಮತು ಪದ್ಮಕುಂಡಲವಿದೆ. ತನ್ನ ಎರಡು ಕಾಲುಗಳನ್ನು ಒಂದು ಪಾದದ ಎದುರು ಮತ್ತೊಂದನ್ನು ಎದುರು ಬದಿರಾಗಿ ಇಟ್ಟು ಕುಳಿತಿದ್ದಾಳೆ.

ಉಮಾಮಹೇಶ್ವರ ಮೂರ್ತಿಶಿಲ್ಪಗಳು:

ಶಿವನೊಂದಿಗೆ ಉಮೆಯ ಶಿಲ್ಪಗಳನ್ನು ತೋರಿಸಿದರೆ ಈ ರೀತಿಯ ಶಿಲ್ಪಗಳನ್ನು ಉಮಾಮಹೇಶ್ವರ ಎಂದು ಕರೆಯಲಾಗುವುದು. ಇವುಗಳು ಆಸೀನ ಅಥವಾ ಸ್ಥಾನಿಕ ಭಂಗಿಯಲ್ಲಿರುತ್ತದೆ. ಈ ರೀತಿ ಶಿಲ್ಪಗಳನ್ನು ಹೊನ್ನಕಿರಣಗಿ, ಪಟ್ಟಣ ಗ್ರಾಮಗಳಲ್ಲಿ ಗುರುತಿಸಲಾಗಿದೆ.

ಗ್ರಾಮ–ಪಟ್ಟಣ
ಸ್ಥಳ–ಬೋರಲಿಂಗೇಶ್ವರ ದೇವಾಲಯ

ಶಿಲ್ಪ–ಉಮಾಮಹೇಶ್ವರ
ಕಾಲ–೧೨ನೇ ಶತಮಾನ

ವಸ್ತು–ಕಪ್ಪುಶಿಲೆ
ಪ್ರಕಟಣೆ–ಅಪ್ರಕಟಿತ

ಉಮಾಮಹೇಶ್ವರನ ಮೂರ್ತಿಶಿಲ್ಪವು ಕಿರೀಟವನ್ನು ಧರಿಸಿದ್ದು, ಕಿವಿಯೊಲೆ ಕೊರಳಲ್ಲಿ ಕಂಠಹಾರ ತೋಳಬಂದಿ ಧರಿಸಿದೆ. ಇವನ ಬಲ ತೊಡೆಯ ಮೇಲೆ ಉಮೆಯು ಕುಳಿತಿದ್ದಾಳೆ. ತನ್ನ ಬಲಗೈಯನ್ನು ಶಿವನ ಕೊರಳ ಹಿಂದೆ ಹಾಕಿಕೊಂಡು ಕುಳಿತಿದ್ದಾಳೆ. ಶಿವನು ತನ್ನ ಎಡಗೈ ಅವಳ ಸೊಂಟದ ಮೇಲಿದೆ. ಉಮೆ ಮುಖವು ಸಂಪೂರ್ಣವಾಗಿ ತ್ರುಟಿತಗೊಂಡಿದೆ. ಉಮೆಯ ಕೊರಳಲ್ಲಿ ಕಂಠಹಾರವಿದೆ. ತೋಳಬಂದಿ ಧರಿಸಿದೆ. ಶಿವನ ಬಲಗೈ ತ್ರುಟಿತಗೊಂಡಿದೆ. ಎಡಗಾಲು ಪೀಠದಿಂದ ಕೆಳಗೆ ಬಿಟ್ಟು ಕುಳಿತಿದೆ. ಈ ಮೂರ್ತಿ ಶಿಲ್ಪವನ್ನು ಹೊರತುಪಡಿಸಿ ಹೂಬಳ್ಳಿಗಳ ಚಿತ್ರಗಳಿರುವುದನ್ನು ಕಾಣುತ್ತೇವೆ.

ಗ್ರಾಮ–ಹೊನ್ನಕಿರಣಗಿ
ಸ್ಥಳ–ವೀರಭದ್ರೇಶ್ವರ ದೇವಾಲಯ

ಶಿಲ್ಪ–ವೀರದಂಪತಿ
ಕಾಲ–೧೨ನೇ ಶತಮಾನ

ವಸ್ತು–ಕಪ್ಪುಶಿಲೆ
ಪ್ರಕಟಣೆ–ಅಪ್ರಕಟಿತ

ತ್ರಿಕೋನಾಕಾರದಲ್ಲಿ ಈ ಮೂರ್ತಿಶಿಲ್ಪವು ಇದೆ. ಈ ಶಿಲ್ಪದಲ್ಲಿ ವೀರ ನಂದಿಯ ಮೇಲೆ ಕುಳಿತಿದ್ದಾನೆ. ಬಲಗೈಯಲ್ಲಿ ಖಡ್ಗವಿದೆ. ಎಡಗೈಯಲ್ಲಿ ಮುಗದಾಣ ಹಿಡಿದಿದ್ದಾನೆ. ಅವನ ಹಿಂದೆ ಉಮೆಯು ಕುಳಿತಿದ್ದಾಳೆ. ನಂದಿಯ ಕೊರಳಲ್ಲಿ ಘಂಟೆ ಇದೆ. ಬೆನ್ನಿನ ಮೇಲೆ ಬಟ್ಟೆಯ ಹೊದಿಕೆಯಿದೆ. ನಂದಿಯ ಮುಂದೆ ಸೈನಿಕರು ಕೈಯಲ್ಲಿ ಖಡ್ಗ ಹಿಡಿದು ಕೊಂಡು ಬರುತ್ತಿದ್ದಾರೆ. ನಂದಿಯ ಹಿಂದೆಯೂ ಸೈನಿಕ ಬರುತ್ತಲಿದ್ದಾನೆ. ಒಟ್ಟಿನಲ್ಲಿ ವೀರದಂಪತಿಗಳು ಹೊರಟಿರುವುದನ್ನು ಈ ಮೂರ್ತಿಶಿಲ್ಪದಲ್ಲಿದೆ.

೫.೬. ಜೈನ ಮೂರ್ತಿಶಿಲ್ಪಗಳು:

ಜೈನ ತೀರ್ಥಂಕರರು ಬಾಹ್ಯ ಸೌಂದರ್ಯಕ್ಕಿಂತ ಆಂತರಿಕ ಸೌಂದರ್ಯಕ್ಕೆ ಹೆಚ್ಚು ಮಹತ್ವ ನೀಡಿದರು. ಹೀಗಾಗಿ ಅತ್ಮದ ಪರಿಶುದ್ದತೆಯನ್ನು ಹೊರತರುವುದು ಹಾಗು ಆತ್ಮದ ಉನ್ನತಿಗಾಗಿ ವ್ಯವಹಾರಿಕ ಮತ್ತು ಸುಮಧುರವಾದ ಹಿನ್ನಲೆಯನ್ನು ಏರ್ಪಡಿಸುವುದು. ಜೈನ ಸಾಹಿತ್ಯ ಕಲೆಯ ಮತ್ತು ಮೂರ್ತಿಶಿಲ್ಪದ ಪ್ರಧಾನ ಉದ್ದೇಶ.[೬]

ಈ ಪ್ರತಿಮೆಯು ಮುಕ್ಕೊಡೆ, ಅಶೋಕವೃಕ್ಷ, ಚಾಮರ, ಸಿಂಹಪೀಠ, ಪ್ರಭಾಮಂಡಲ, ದಿವ್ಯಧ್ವನಿ, ಪುಷ್ಪದೃಷ್ಟಿ ಮತ್ತು ದುಂದುಬಿಗಳೆಂಬ ಅಷ್ಠ ಪ್ರತಿಕಾರ್ಯಗಳನ್ನು ಹೊಂದಿರುತ್ತದೆ. ಪಾದಪೀಠದ ಕೆಳಗೆ ಲಾಂಛನಗಳಿರುತ್ತವೆ. ಎಡಬಲಗಳಲ್ಲಿ ಯಕ್ಷಯಕ್ಷಣಿಯರಿರುತ್ತಾರೆ. ತೀರ್ಥಂಕರರ ಶಿಲ್ಪದ ಇಕ್ಕೆಲಗಳಲ್ಲಿ ಚಾಮರಧಾರಿ ಅಥವಾ ಚಾಮರಧಾರಿಣಿಯರ ಶಿಲ್ಪಗಳಿರುತ್ತವೆ. ಇವರು ತಮ್ಮ ಕೈಯಲ್ಲಿ ಚಾಮರಗಳನ್ನು ಹಿಡಿದು ನಿಂತಿರುತ್ತಾರೆ. ಕೆಲವೊಮ್ಮೆ ಚಾಮರಗಳನ್ನು ಮಾತ್ರ ತೋರಿಸಲಾಗಿರುತ್ತದೆ.[೭]

ಪ್ರಸ್ತುತ ಅಧ್ಯಯನದಲ್ಲಿ ಹರಸೂರು, ಶ್ರೀನಿವಾಸ ಸರಡಗಿ, ಹುಣಸಿಹಡಗಿಲದಲ್ಲಿ ದೊರೆತ ಮೂರ್ತಿಶಿಲ್ಪಗಳನ್ನು ಬೆಳಕಿಗೆ ತರುವ ಪ್ರಯತ್ನ ಮಾಡಲಾಗುತ್ತಿದೆ.

ಗ್ರಾಮ–ಹರಸೂರು	ಸ್ಥಳ–ಹೊಲದಲ್ಲಿ (ಎಲ್ಲಮ್ಮನ ಗುಡಿ)
ಶಿಲ್ಪ–ಜೈನ ತೀರ್ಥಂಕರ	ಕಾಲ–೧೨ನೇ ಶತಮಾನ
ವಸ್ತು–ಕಪ್ಪುಶಿಲೆ	ಪ್ರಕಟಣೆ–ಅಪ್ರಕಟಿತ

ಜೈನ ತೀರ್ಥಂಕರನ ಈ ಮೂರ್ತಿಶಿಲ್ಪ ತನ್ನ ಮೂಲಸ್ವರೂಪವನ್ನು ಕಳೆದುಕೊಂಡಿದೆ. ಗ್ರಾಮದವರು ಇದನ್ನು ಎಲ್ಲಮ್ಮನ ಗುಡಿಯನ್ನಾಗಿ ಮಾಡಿಕೊಂಡು ತೀರ್ಥಂಕರ ಮೂರ್ತಿಗೆ ಕಣ್ಣುಬೊಟ್ಟು ಇಟ್ಟು ಕೊರಳಲ್ಲಿ ತಾಳಿ ಕಟ್ಟಿದ್ದಾರೆ. ಆದರೆ ಜೈನ ತೀರ್ಥಂಕರ ಈ ಮೂರ್ತಿಶಿಲ್ಪ ಪದ್ಮಾಸನ ಭಂಗಿಯಲ್ಲಿ ಕುಳಿತಿದೆ.

ಗ್ರಾಮ–ಹರಸೂರು ಸ್ಥಳ–ಹರಸೂರಿನ ಮಧ್ಯ

ಶಿಲ್ಪ–ಪಾರ್ಶ್ವನಾಥ ಕಾಲ–೧೨ನೇ ಶತಮಾನ

ವಸ್ತು–ಕಪ್ಪುಶಿಲೆ ಪ್ರಕಟಣೆ–ಅಪ್ರಕಟಿತ

ಪಾರ್ಶ್ವನಾಥರ ತಲೆಯ ಮೇಲೆ ಐದು ಹೆಡೆಯ ಸರ್ಪ ಹೆಡೆ ಜೈನ ಪ್ರಭಾವ ತೋರಿಸುತ್ತದೆ. ಇದರ ಮೇಲೆ ಛತ್ರಿಯಿದೆ. ತಲೆಯ ಕೂದಲು ಗುಂಗುರ ಇವೆ. ಕಿವಿಗಳು ಉದ್ದವಾಗಿದ್ದು, ಪಾರ್ಶ್ವನಾಥರು ಪದ್ಮಾಸನದಲ್ಲಿ ಕುಳಿತಿದ್ದಾರೆ. ಭುಜಗಳು ಅಗಲವಾಗಿವೆ. ಭುಜದ ಎಡ ಮತ್ತು ಬಲಕ್ಕೆ ಯಕ್ಷ ಯಕ್ಷಿಣಿಯರಿದ್ದಾರೆ.

ಗ್ರಾಮ–ಹರಸೂರು ಸ್ಥಳ–ಹರಸೂರಿನ ಮಧ್ಯ

ಶಿಲ್ಪ–ಮಹಾವೀರ ಕಾಲ–೧೨ನೇ ಶತಮಾನ

ವಸ್ತು–ಕಪ್ಪುಶಿಲೆ ಪ್ರಕಟಣೆ–ಅಪ್ರಕಟಿತ

ಈ ಮೂರ್ತಿಶಿಲ್ಪದಲ್ಲಿ ಜೈನ ತೀರ್ಥಂಕರ ಪೀಠದ ಮೇಲೆ ಪದ್ಮಾಸನ ಭಂಗಿಯಲ್ಲಿ ಧ್ಯಾನಾಸಕ್ತನಾಗಿ ಕುಳಿತಿದ್ದಾನೆ. ತಲೆಯಲ್ಲಿ ಗುಂಗುರು ಕೂದಲುಗಳಿವೆ. ತಲೆ ಹಿಂದೆ ಪ್ರಭಾಮಂಡಲವಿದೆ. ಇದರ ಮೇಲೆ ಛತ್ರಿ ಇದೆ. ಭುಜಗಳು ವಿಶಾಲವಾಗಿವೆ. ಇದರ ಬಲಕ್ಕೆ ಮತ್ತು ಎಡಕ್ಕೆ ಜೈನ ಯಕ್ಷ ಯಕ್ಷಿಣಿಯರ ಚಿತ್ರಗಳಿವೆ. ಚವ್ವಿಸ್ ತೀರ್ಥಂಕರರ ಚಿತ್ರಗಳನ್ನು ಈ ಶಿಲ್ಪದಲ್ಲಿ ಕಾಣುತ್ತೇವೆ. ಮಧ್ಯದಲ್ಲಿ ಮೂವರು ಜೈನ ತೀರ್ಥಂಕರರು ಕಾಯೋತ್ಸರ್ಗ ಮುದ್ರೆಯಲ್ಲಿದ್ದಾರೆ.

ಗ್ರಾಮ–ಹರಸೂರು ಸ್ಥಳ–ಹರಸೂರಿನ ಮಧ್ಯ(ಜೈನ ಬಸದಿ)

ಶಿಲ್ಪ–ಪಾರ್ಶ್ವನಾಥ ಕಾಲ–೧೨ನೇ ಶತಮಾನ

ವಸ್ತು–ಕಪ್ಪುಶಿಲೆ ಪ್ರಕಟಣೆ–ಅಪ್ರಕಟಿತ

ಚಿಂತಾಮಣಿ ಪಾರ್ಶ್ವನಾಥ ಮೂರ್ತಿಶಿಲ್ಪದಲ್ಲಿ ತಲೆಯಲ್ಲಿ ಗುಂಗುರು ಕೂದಲುಗಳಿವೆ. ಕಿವಿಗಳು ಉದ್ದವಾಗಿವೆ. ತಲೆ ಹಿಂದೆ ಐದು ಹೆಡೆ ಸರ್ಪವಿದೆ. ಇದರ ಮೇಲುಗಡೆ ಮುಕ್ಕೊಡೆ ಇದೆ. ಭುಜಗಳು ಬಹಳ ವಿಶಾಲವಾಗಿವೆ. ಎರಡು ಭುಜಗಳ ಅಕ್ಕಪಕ್ಕದಲ್ಲಿ ಜೈನ ಯಕ್ಷಯಕ್ಷಿಣಿಯರ ಚಿತ್ರವಿದೆ. ಪೀಠದ ಮೇಲೆ ಪದ್ಮಾಸನ ಭಂಗಿಯಲ್ಲಿ ಕುಳಿತಿದ್ದು ಧ್ಯಾನಾಸಕ್ತನಾಗಿದ್ದಾನೆ. ಆ ಪೀಠದ ಕೆಳಭಾಗದಲ್ಲಿ ಪ್ರಾಣಿಪಕ್ಷಿಗಳ ಚಿತ್ರಗಳಿವೆ.

ಗ್ರಾಮ–ಹರಸೂರು
ಸ್ಥಳ–ಹರಸೂರಿನ ಮಧ್ಯ(ಜೈನ ಬಸದಿ)

ಶಿಲ್ಪ–ಪಾರ್ಶ್ವನಾಥ
ಕಾಲ–೧೨ನೇ ಶತಮಾನ

ವಸ್ತು–ಕಪ್ಪುಶಿಲೆ
ಪ್ರಕಟಣೆ–ಅಪ್ರಕಟಿತ

ಈ ಮೂರ್ತಿಶಿಲ್ಪದ ತಲೆಯಲ್ಲಿ ಗುಂಗುರು ಕೂದಲುಗಳಿವೆ. ಕಿವಿಗಳು ಉದ್ದವಾಗಿವೆ. ತಲೆ ಹಿಂದೆ ಪ್ರಭಾಮಂಡಲವಿದೆ. ಇದರ ಮೇಲೆ ಛತ್ರಿ ಇದೆ. ಭುಜಗಳು ವಿಶಾಲವಾಗಿವೆ. ಈ ಶಿಲ್ಪದ ಬಲ ಮತ್ತು ಎಡಕ್ಕೆ ಜೈನ ಯಕ್ಷ ಯಕ್ಷಿಣಿಯರ ಶಿಲ್ಪಗಳಿವೆ. ಹೊಟ್ಟೆಯ ಮೇಲೆ ಅರ್ಧಚಂದ್ರಾಕಾರದ ಗೆರೆಗಳಿವೆ. ಪೀಠದ ಮೇಲೆ ಪದ್ಮಾಸನ ಭಂಗಿಯಲ್ಲಿ ಧ್ಯಾನಾಸಕ್ತನಾಗಿ ಕುಳಿತಿರುವುದು ಕಾಣಬಹುದು. ಪೀಠದ ಕೆಳಗೆ ಜಿಂಕೆ, ಸಿಂಹ, ಕುದುರೆಗಳ ಚಿತ್ರಗಳನ್ನು ಈ ಶಿಲ್ಪದಲ್ಲಿ ಕಾಣಬಹುದು.

ಗ್ರಾಮ–ಹರಸೂರು
ಸ್ಥಳ–ಹರಸೂರಿನ ಮಧ್ಯ(ಜೈನ ಬಸದಿ)

ಶಿಲ್ಪ–ಸುಪಾರ್ಶ್ವನಾಥ
ಕಾಲ–೧೨ನೇ ಶತಮಾನ

ವಸ್ತು–ಬಿಳಿ ಶಿಲೆ
ಪ್ರಕಟಣೆ–ಅಪ್ರಕಟಿತ

ಈ ಶಿಲ್ಪದ ತಲೆಯಲ್ಲಿ ಗುಂಗುರು ಕೂದಲುಗಳಿದ್ದು, ಇದರ ಮೇಲ್ಗಡೆ ಐದು ಹೆಡೆ ಸರ್ಪವಿದೆ. ಭುಜಗಳು ವಿಶಾಲವಾಗಿವೆ. ಅಕ್ಕಪಕ್ಕದಲ್ಲಿ ಯಕ್ಷ–ಯಕ್ಷಿಣಿಯರಿದ್ದಾರೆ. ಇಷ್ಟೇ ಅಲ್ಲದೆ ಇಲ್ಲಿ ಆಧುನಿಕವಾದ ಪದ್ಮಾಸನದಲ್ಲಿ ಕುಳಿತ ಇನ್ನು ಎರಡು ಮೂರ್ತಿಶಿಲ್ಪ ಈ ಜೈನಬಸದಿಯಲ್ಲಿ ಕಂಡುಬರುತ್ತವೆ.

ಗ್ರಾಮ–ಹುಣಸಿ ಹಡಗಿಲ
ಸ್ಥಳ–ಹುಣಸಿ ಹಡಗಿಲ(ಜೈನ ಬಸದಿ)

ಶಿಲ್ಪ–ಮಹಾವೀರ
ಕಾಲ–೧೨ನೇ ಶತಮಾನ

ವಸ್ತು–ಕಪ್ಪುಶಿಲೆ
ಪ್ರಕಟಣೆ–ಅಪ್ರಕಟಿತ

ಮಹಾವೀರ ಮೂರ್ತಿಶಿಲ್ಪದ ತಲೆಯಲ್ಲಿ ಗುಂಗುರು ಕೂದಲುಗಳಿವೆ. ತಲೆ ಹಿಂದೆ ಪ್ರಭಾಮಂಡಲವಿದೆ. ಕಿವಿಗಳು ಉದ್ದವಾಗಿದ್ದು, ಕಿವಿಯೋಲೆ ಧರಿಸಿವೆ. ಭುಜಗಳು ವಿಶಾಲ ವಾಗಿವೆ. ತೊಡೆಗಳು ದಪ್ಪವಾಗಿವೆ. ಮೂರ್ತಿಶಿಲ್ಪ ಕಾಯೋತ್ಸರ್ಗ ಮುದ್ರೆಯಲ್ಲಿದೆ. ಪಾದದ ಎಡ ಮತ್ತು ಬಲಕ್ಕೆ ಜೈನ ಯಕ್ಷ–ಯಕ್ಷಿಣಿಯರ ಶಿಲ್ಪಗಳಿವೆ.

ಗ್ರಾಮ–ಹುಣಸಿ ಹಡಗಿಲ
ಸ್ಥಳ–ಹುಣಸಿ ಹಡಗಿಲ

ಶಿಲ್ಪ–ಸುಪಾರ್ಶ್ವನಾಥ
ಕಾಲ–೧೨ನೇ ಶತಮಾನ

ವಸ್ತು–ಕಪ್ಪುಶಿಲೆ
ಪ್ರಕಟಣೆ–ಅಪ್ರಕಟಿತ

ಈ ಮೂರ್ತಿಶಿಲ್ಪದ ತಲೆಯಲ್ಲಿ ಗುಂಗುರು ಕೂದಲುಗಳಿವೆ. ತಲೆ ಹಿಂದೆ ಪ್ರಭಾಮಂಡಲವಿದೆ. ಇದರ ಮೇಲೆ ಐದು ಹೆಡೆಯ ಸರ್ಪ ಹೆಡೆ ಬಿಚ್ಚಿ ನಿಂತ ಸರ್ಪವಿದೆ. ಭುಜಗಳು ವಿಶಾಲವಾಗಿವೆ. ಈ ಮೂರ್ತಿಶಿಲ್ಪದ ಕೊನೆಯಲ್ಲಿ ಮಕರ ತೋರಣಗಳಿವೆ.

ಅಡಿಟಿಪ್ಪಣಿಗಳು

೧. ರಾಮಚಂದ್ರರಾವ್ ಎಸ್.ಕೆ. ಪೂರ್ವೋಕ್ತ, ಪು.೮೯

೨. ಕರುಣಾ ವಿಜಯೇಂದ್ರ, ಕಲ್ಯಾಣ ಚಾಲುಕ್ಯ ಶಿಲ್ಪಕಲೆ, ಪು.೩೨

೩. ಕರ್ನಾಟಕ ಭಾರತಿ ಸಂ.೧೬, ಪು.೧೩೨

೪. ಇತಿಹಾಸ ದರ್ಶನ ಸಂಪುಟ-೨೦, ಪು.೬೯

೫. ರಾಮಚಂದ್ರರಾವ್ ಎಸ್.ಕೆ. ಮೂರ್ತಿಶಿಲ್ಪಗಳ ನೆಲೆ-ಹಿನ್ನೆಲೆ, ಪು.೧೪೫

೬. ದೇವರಕೊಂಡಾರೆಡ್ಡಿ, ಸಪ್ತಮಾತೃಕೆಯರ ಹರಿತಿಸಿರಿ, ಹೆಚ್.ಎ.ವೀರನಾಯ್ಕ ಹರಿತಿ ನೆನಪಿನ ಸಂಪುಟ, ೧೯೮೭, ಪು.೮೪

೭. ರಾಮಚಂದ್ರರಾವ್ ಎಸ್.ಕೆ. ಪೂರ್ವೋಕ್ತ, ಪು.೧೭೪-೧೭೫

♦ ♦ ♦

ಅಧ್ಯಾಯ ೬

ಸಮಾರೋಪ

ಅಧ್ಯಾಯ ೬

ಸಮಾರೋಪ

'ಗುಲಬರ್ಗಾ ಪರಿಸರದ ಶಾಸನಗಳು ಮತ್ತು ಸ್ಮಾರಕಗಳು' ಪ್ರಬಂಧ ಗುಲಬರ್ಗಾ ನಗರದ ಪರಿಸರದ ಹರಸೂರು, ಖಣದಾಳು, ಹೊನ್ನಕಿರಣಗಿ, ಇಟಗಿ, ಹಿರಾಪುರ, ಸೈಯದ್ ಚಿಂಚೋಳಿ, ಶ್ರೀನಿವಾಸ ಸರಡಗಿ, ಮಹಾಗಾಂವ, ಕಮಲಾಪುರ, ತಾವರಗೇರ, ಕೇರೂರ, ಹುಣಸಿಹಡಗಿಲ, ಕೆರೆಭೊಸಗಾ, ಪಟ್ಟಣ, ಸಣ್ಣೂರು, ಫಿರೋಜಾಬಾದ, ಹಿರೇನಂದೂರು, ಪಾಲ, ನಾಗನಳ್ಳಿ, ಕೇಸರಟಗಿ ಗ್ರಾಮಗಳ ವ್ಯಾಪ್ತಿಯನ್ನು ಒಳಗೊಂಡಿದೆ. ಈ ಗ್ರಾಮಗಳ ಪರಿಸರದಲ್ಲಿ ಕಂಡುಬಂದ ಶಾಸನಗಳು ಮತ್ತು ದೇವಾಲಯಗಳಿಗೆ ಈ ಅಧ್ಯಯನ ಸೀಮಿತವಾಗಿದೆ.

ಅಧ್ಯಾಯ ಒಂದರಲ್ಲಿ ಗುಲ್ಬರ್ಗಾ ಹೆಸರಿನ ಉತ್ಪತ್ತಿ, ಅಧ್ಯಯನ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನಗಳ ಕುರಿತು ಚರ್ಚಿಸಲಾಗಿದೆ. ಈ ಅಧ್ಯಾಯವನ್ನು ಮಾಡಲು ಶಾಸನಗಳು ಮತ್ತು ದೇವಾಲಯಗಳು ಇಲ್ಲಿ ಪ್ರಮುಖ ಆಕರಗಳಾಗಿವೆ ಎಂಬುದನ್ನು ಸ್ಪಷ್ಟೀಕರಿಸಲಾಗಿದೆ. ಈ ಅಧ್ಯಯನದ ಉದ್ದೇಶ ಗುಲಬರ್ಗಾ ಪರಿಸರದ ಶಾಸನಗಳು ಮತ್ತು ಸ್ಮಾರಕಗಳ ಮಾಹಿತಿಯನ್ನು ಒಂದೆಡೆ ದಾಖಲಿಸಿ ಅಧ್ಯಯನ ಮಾಡುವುದಾಗಿದೆ. ಪೂರ್ವಾಧ್ಯಯನಗಳ ಸಮೀಕ್ಷೆಯನ್ನು ಇಲ್ಲಿ ಮಾಡುವುದರ ಜೊತೆಗೆ, ಕ್ಷೇತ್ರಕಾರ್ಯ ಕೈಗೊಂಡು ಪ್ರಕಟಿತ ಆಕರಗಳನ್ನು ಪ್ರಧಾನವಾಗಿರಿಸಿಕೊಳ್ಳಲಾಗಿದೆ. ಆಕರಗ್ರಂಥ, ವಿಧಾನ, ತೌಲನಿಕ ಅಧ್ಯಯನ, ಕ್ಷೇತ್ರಕಾರ್ಯವನ್ನೊಳಗೊಂಡು ಎಲ್ಲ ವಿಧಾನಗಳನ್ನು ಅನುಸರಿಸುವುದ ರೊಂದಿಗೆ ಮಾಹಿತಿಯನ್ನು ಒಂದೆಡೆ ಸೆರೆಹಿಡಿದಿರುವುದು ಮೊದಲ ಅಧ್ಯಾಯದ ವಿಶೇಷತೆಯಾಗಿದೆ.

ಅಧ್ಯಾಯ ಎರಡರಲ್ಲಿ ಗುಲಬರ್ಗಾ ಪರಿಸರ ಐತಿಹಾಸಿಕ ಹಿನ್ನೆಲೆಗೆ ಸಂಬಂಧಿಸಿದೆ. ಇಲ್ಲಿನ ಅರಸರುಗಳ ರಾಜಕೀಯ ಚರಿತ್ರೆಯನ್ನು ಶಾಸನಗಳ ಹಿನ್ನೆಲೆಯಾಗಿ ಒಂದೆಡೆ

ಸೆರೆಹಿಡಿಯಲಾಗಿದೆ. ಹಾಗೆಯೇ ಈ ಪ್ರದೇಶದ ಅಂದಿನ ಜನಜೀವನದ ಆರ್ಥಿಕ ಸ್ಥಿತಿಗತಿಗಳನ್ನು ಅರಿಯಲು ಈ ಪರಿಸರದಲ್ಲಿ ದೊರೆತ ಶಾಸನಗಳು ಪ್ರಮುಖ ಆಕರಗಳಾಗಿವೆ. ಈ ಪರಿಸರದ ರಾಜಕೀಯ ಇತಿಹಾಸ ಮೌರ್ಯರ ಕಾಲದಿಂದ ಪ್ರಾರಂಭವಾಗುತ್ತದೆ. ಇಲ್ಲಿನ ರಾಜಕೀಯ ವ್ಯವಸ್ಥೆಯಲ್ಲಿ ಮೌರ್ಯರು, ಶಾತವಾಹನರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಕಲಚೂರ್ಯರು, ವಿಜಯನಗರ ಅರಸರು, ಬಹಮನಿ ಸುಲ್ತಾನರು, ಬಿಜಾಪುರದ ಆದಿಲ್‌ಷಾಹಿಗಳು ಹೀಗೆ ಹಲವು ಅರಸು ಮನೆತನಗಳು ಆಳಿ ಅಳಿದು ಅಂದಿನ ಕುರುಹುಗಳು ಇಂದಿಗೂ ಮೂಕಸಾಕ್ಷಿಗಳಾಗಿವೆ. ಪರಿಸರದ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಈ ಶಾಸನಗಳು ಪ್ರಮುಖ ಪಾತ್ರ ವಹಿಸಿವೆ. ಇತ್ತೀಚೆಗೆ ದೊರೆತ ಶಾಸನಗಳನ್ನು ಅದರ ಮಹತ್ವವನ್ನು ಈ ಅಧ್ಯಾಯದಲ್ಲಿ ಹೇಳಲಾಗಿದೆ. ಸನ್ನತಿಯಲ್ಲಿ ದೊರೆತ ಅಶೋಕನ ಶಿಲಾ ಶಾಸನಗಳು ಕರ್ನಾಟಕದಲ್ಲಿ ದೊರೆತ ಪ್ರಮುಖ ಶಿಲಾ ಶಾಸನಗಳಾಗಿವೆ. ಇಲ್ಲಿನ ಆರ್ಥಿಕ ವ್ಯವಸ್ಥೆಯಲ್ಲಿ ನಾಣ್ಯ ಪದ್ಧತಿ, ಅಳತೆ ಇವೆಲ್ಲವೂ ಆರ್ಥಿಕ ಸ್ಥಿತಿಗತಿಗಳ ಆಕರಗಳಾಗಿ ಪ್ರತಿಬಿಂಬಿಸಿವೆ. ಇಲ್ಲಿನ ಸಾಮಾಜಿಕ ವ್ಯವಸ್ಥೆ, ಶಿಕ್ಷಣ ವ್ಯವಸ್ಥೆ, ಶಿಕ್ಷಣ ಪದ್ಧತಿ, ಜಾತಿಗಳು, ಹಬ್ಬಗಳು, ಮೂರ್ತಿಶಿಲ್ಪಗಳಲ್ಲಿನ ಆಭರಣಗಳು, ಧರ್ಮಗಳು ಅಂದಿನ ಸಾಂಸ್ಕೃತಿಕ ಕುರುಹುಗಳಾಗಿ ಬಿಂಬಿಸಿವೆ.

ಗುಲ್ಬರ್ಗಾ ಪರಿಸರದಲ್ಲಿನ ಶಾಸನಗಳ ವೈವಿಧ್ಯತೆಯಲ್ಲಿ ದಾನ ಶಾಸನಗಳು, ವೀರಗಲ್ಲುಗಳು, ಮಾಸ್ತಿಗಲ್ಲುಗಳು ಇವು ಪ್ರಧಾನ ವಿಧಗಳಾಗಿವೆ. ದೊರೆತ ಹೆಚ್ಚಿನ ಶಾಸನಗಳು ದಾನ ಶಾಸನಗಳಾಗಿವೆ. ವೀರಗಲ್ಲುಗಳಲ್ಲಿನ ಕಲಾ ಸೌಂದರ್ಯ, ಶಾಸನ ಶಿಲ್ಪ ಇವು ಈ ಪರಿಸರ ದಲ್ಲಿನ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ವೀರಗಲ್ಲುಗಳಲ್ಲಿ ಹೆಚ್ಚಿನ ಶಾಸನಗಳೆಲ್ಲವೂ ಅಳಿಸಿವೆ. ಹೀಗಾಗಿ ಶಾಸನಶಿಲ್ಪದ ವೀರಗಲ್ಲುಗಳನ್ನು ಇಲ್ಲಿ ಕಲಾ ದೃಷ್ಟಿಯಿಂದ ನೋಡಲು ಮಾತ್ರ ಸಾಧ್ಯ. ಇವು ಅಂದಿನ ಪರಂಪರೆಯ ಪ್ರತೀಕ. ಇನ್ನು ಕೆಲವು ದೊರೆತ ಶಾಸನಗಳಲ್ಲಿ ಹೆಚ್ಚಿನವು ಅರೆಬಿಕ್ ಮತ್ತು ಪರ್ಶಿಯನ್ ಶಾಸನಗಳಾಗಿವೆ. ಇವುಗಳಲ್ಲಿ ಮಧ್ಯಕಾಲೀನ ಮಹಾಸತಿಗಲ್ಲುಗಳ ಭಾಗದಲ್ಲಿ ಮಹಾಸತಿ ಹೋಗುವ ಬಗೆಯನ್ನು ವಿವರಿಸಿ ಈ ಪರಿಸರದ ಮಹಾಸತಿಗಲ್ಲುಗಳಲ್ಲಿನ ವೈವಿಧ್ಯತೆ, ಮಹಾಸತಿಯಾಗುವ ಸನ್ನಿವೇಶ, ಕಲಾ ಪರಂಪರೆಯನ್ನು ಬಿಂಬಿಸಲಾಗಿದೆ.

ಅಧ್ಯಾಯ ನಾಲ್ಕು ದೇವಾಲಯಗಳ ವಾಸ್ತು ವಿಶೇಷತೆಯನ್ನೊಳಗೊಂಡಿದೆ. ದೇವಾಲಯವನ್ನು ಶೈವ, ಶಾಕ್ತ, ವೈಷ್ಣವ ಮತ್ತು ಜೈನ ದೇವಾಲಯಗಳೆಂದು ವಿಂಗಡಿಸಲಾಗಿದೆ. ಆದರೆ ಹೆಚ್ಚಿನ ದೇವಾಲಯಗಳು ಜೀರ್ಣೋದ್ಧಾರವಾಗಿವೆ. ಈ ಪರಿಸರದ ದೇವಾಲಯದ ವಾಸ್ತು ವಿಶೇಷತೆಯಿಂದ

ನೋಡಿದಲ್ಲಿ, ಹೆಚ್ಚಿನ ದೇವಾಲಯಗಳೆಲ್ಲವೂ ಕಲ್ಯಾಣ ಚಾಲುಕ್ಯರ ಕಾಲಕ್ಕೆ ಸೇರಿವೆ. ಉಳಿದ ಸ್ಥಳಗಳಲ್ಲಿನ ಕಲ್ಯಾಣ ಚಾಲುಕ್ಯರ ಕಾಲದಲ್ಲಿನ ದೇವಾಲಯಗಳಂತೆ, ಕುಸುರಿ ಕೆತ್ತನೆಯ ಜಾಲಾಂಧ್ರದಂತ ಪಟ್ಟಿಯಂತೆ ಇರುವ ಅಧಿಷ್ಠಾನ ಮಾದರಿ, ಲಲಾಟ ಬಿಂಬದಲ್ಲಿ ಹೆಚ್ಚಿನದಾಗಿ ಗಜಲಕ್ಷ್ಮಿ ಇವೆಲ್ಲವೂ ಉಳಿದ ಕಡೆಗಳಲ್ಲಿನ ದೇವಾಲಯದಂತೆ ಸಾಮಾನ್ಯ ಲಕ್ಷಣಗಳಾಗಿವೆ.

ದೇವಾಲಯ ಗರ್ಭಗೃಹದ ಪೀಠದಿಂದ ಮುಖಮಂಟಪದವರೆಗೆ, ಹಾಗೆಯೇ ದೇವಾಲಯದ ಹೊರಭಾಗದಲ್ಲಿ ತಳವಿನ್ಯಾಸದಿಂದ ಕಳಸದವರೆಗಿನ ಭಾಗಗಳನ್ನು ಸ್ಪಷ್ಟವಾಗಿ ಗುರುತಿಸುವ ಮತ್ತು ಅವುಗಳ ಬಗ್ಗೆ ವಿವರಣೆಯನ್ನು ಸಂಗ್ರಹಿಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ. ಶೈವ ದೇವಾಲಯಗಳಲ್ಲಿ ಅತ್ಯಂತ ಪ್ರಾಚೀನ ದೇವಾಲಯ ಹೊನ್ನಕಿರಣಗಿಯ ತ್ರಿಲಿಂಗೇಶ್ವರ ದೇವಾಲಯವಾಗಿದೆ. ಫಿರೋಜಾಬಾದ, ಕೆರೆಬೋಸಗಾದ ಗ್ರಾಮಗಳಲ್ಲಿ ಶೈವ ದೇವಾಲಯ ಗಳಿರುವುದು ಇಲ್ಲಿ ಶೈವ ಧರ್ಮ ಪ್ರಚಲಿತದಲ್ಲಿತ್ತು ಎಂಬುದಕ್ಕೆ ಸಾಕ್ಷಿಯಾಗಿದೆ. ಜೈನ ದೇವಾಲಯಕ್ಕೆ ಸಂಬಂಧಿಸಿದ ದೇವಾಲಯಗಳು ಬಹು ವಿರಳವಾಗಿದ್ದು ಹರಸೂರಿನಲ್ಲಿಯ ಜೈನ ಬಸದಿ ಪ್ರಮುಖವಾಗಿದೆ. ಶ್ರೀನಿವಾಸ ಸರಡಗಿ, ಹೊನ್ನಕಿರಣಗಿಯಲ್ಲಿಯ ಜೈನ ಬಸದಿಗಳಿವೆ. ಇವುಗಳ ವಾಸ್ತುಶೈಲಿಯ ವೈಶಿಷ್ಟ್ಯತೆಯನ್ನು ನಿರೂಪಿಸಿವೆ.

ಅಧ್ಯಾಯ ಐದರಲ್ಲಿ ಮೂರ್ತಿಶಿಲ್ಪಗಳ ಬಗ್ಗೆ ಚರ್ಚಿಸಲಾಗಿದೆ. ಗಾಣಪತ್ಯ, ಶೈವ, ವೈಷ್ಣವ, ಶಾಕ್ತ ಮತ್ತು ಜೈನ ಮೂರ್ತಿಶಿಲ್ಪದ ಕಲೆ ಗುಲಬರ್ಗಾ ಪರಿಸರದಲ್ಲಿ ಬೆಳೆದು ಬಂದಿದೆ. ಗಾಣಪತ್ಯ ಮೂರ್ತಿಶಿಲ್ಪ ಹುಣಸಿ ಹಡಗಿಲ, ಹರಸೂರು, ಹಿರಾಪುರ, ಖಣದಾಳ, ಶ್ರೀನಿವಾಸ ಸರಡಗಿ ಮತ್ತು ಕಮಲಾಪುರ ಗ್ರಾಮಗಳಲ್ಲಿ ದೊರಕಿವೆ. ದೊರೆತ ಗಣಪತಿ ಶಿಲ್ಪಗಳೆಲ್ಲವು ಕ್ರಿ.ಶ.೧೧–೧೨ನೇ ಶತಮಾನಕ್ಕೆ ಸೇರಿದವುಗಳಾಗಿವೆ. ಗಾಣಪತ್ಯ ಮೂರ್ತಿಶಿಲ್ಪಗಳು ಈ ಪರಿಸರದಲ್ಲಿ ಬೆಳೆದಿದ್ದನ್ನು ದೃಢೀಕರಿಸುತ್ತದೆ. ಅಲ್ಲದೆ ೭ ಮತ್ತು ೮ನೇ ಶತಮಾನಗಳ ಹಿಂದೆಯೇ ಗಾಣಪತ್ಯ ಮೂರ್ತಿಶಿಲ್ಪ ಪ್ರಚಲಿತದಲ್ಲಿತ್ತು. ಇವು ಆ ಕಾಲದ ಕಲಾವೈಭವವನ್ನು ಇಂದಿಗೂ ಪ್ರತಿಬಿಂಬಿಸುತ್ತವೆ.

ಗಾಣಪತ್ಯದ ಜೊತೆಗೆ ಇಲ್ಲಿ ಶೈವರ ಪ್ರಭಾವವೂ ಕೂಡ ಹೆಚ್ಚಾಗಿತ್ತು. ಶೈವ ಪಂಥದ ಮೂರ್ತಿಶಿಲ್ಪಗಳು ಪಟ್ಟಣ, ಫಿರೋಜಾಬಾದ್, ರಾಮತೀರ್ಥದಲ್ಲಿ ಕಂಡುಬರುತ್ತದೆ. ಬ್ರಹ್ಮಸೂತ್ರವಿರುವ ಶಿವಲಿಂಗ ಕೆರೆಬೊಸಗಾದ ಗ್ರಾಮದಲ್ಲಿರುವುದು ಇಲ್ಲಿನ ಇನ್ನೊಂದು ವಿಶೇಷತೆಯಾಗಿದೆ. ವಿಷ್ಣುವಿನ ಮೂರ್ತಿಶಿಲ್ಪಗಳು ಖಣದಾಳ, ಹೊನ್ನಕಿರಣಗಿ, ಗುಲಬರ್ಗಾಗಳಲ್ಲಿ ದೊರಕಿದ್ದು ವಿಷ್ಣುವಿನ ವೈವಿಧ್ಯ ಮೂರ್ತಿಶಿಲ್ಪಗಳು ಕಲಾ ಪ್ರೌಢಮೆಯನ್ನು ಬಿಂಬಿಸುತ್ತವೆ. ಇನ್ನು ಜೈನ

ಪರಂಪರೆಯ ೨೪ ತೀರ್ಥಂಕರರಲ್ಲಿ ಸುಪಾರ್ಶ್ವನಾಥ, ಪಾರ್ಶ್ವನಾಥ, ಮಹಾವೀರ ಶಿಲ್ಪಗಳನ್ನು ಹೊಂದಿದ ಗ್ರಾಮಗಳು ಹರಸೂರು ಮತ್ತು ಹೊನ್ನಕಿರಣಗಿಗಳಲ್ಲಿವೆ. ಇವು ಅಂದಿನ ಜೈನ ಧರ್ಮ ಅಸ್ತಿತ್ವದಲ್ಲಿರುವುದನ್ನು ತೋರಿಸುತ್ತವೆ. ಶಾಕ್ತ ಶಿಲ್ಪಗಳಲ್ಲಿ ಮಹಿಷಾಸುರ ಮರ್ದಿನಿ, ಗಜಲಕ್ಷ್ಮಿ, ಸಪ್ತಮಾತೃಕೆಯರು, ಇಲ್ಲಿ ನಾಗಶಿಲ್ಪಗಳು ಕಂಡುಬಂದಿದ್ದು, ನಾಗಾರಾಧನೆ ಪರಿಕಲ್ಪನೆಯನ್ನು ತಿಳಿಸುತ್ತದೆ. ಈ ಎಲ್ಲ ಶಿಲ್ಪಗಳು ಆಯಾ ಧರ್ಮದ ಸಮಕಾಲೀನ ಆಚಾರ-ವಿಚಾರ, ನಂಬಿಕೆ, ಸಂಪ್ರದಾಯಗಳ ಪರಿಕಲ್ಪನೆಗೆ ಇಲ್ಲಿನ ಶಿಲ್ಪಗಳು ಸಾಕ್ಷಿಯಾಗಿ ನಿಂತಿವೆ. ಆದರೆ ಒಂದು ತುಲನಾತ್ಮಕ ಅಧ್ಯಯನ ಮಾಡಿ ನೋಡಿದಲ್ಲಿ ಇಲ್ಲಿ ಶೈವ ಧರ್ಮ ಹೆಚ್ಚು ಪ್ರಚಲಿತದಲ್ಲಿತ್ತೆಂಬುದು ಸ್ಪಷ್ಟ. ಒಟ್ಟಾರೆ ದೇವಾಲಯಗಳಲ್ಲಿ ದೇವರುಗಳ ವೈವಿಧ್ಯತೆಯಿದ್ದರೂ ಇಲ್ಲಿ ಶಕ್ತಿ ಮಾತ್ರ ಒಂದೇ. ಋಗ್ವೇದದಲ್ಲಿ ಏಕಂ ಸತ್ ಫಿಪ್ರಃ ಬಹುದಾ ವದಂತಿ ಎಂದಿದೆ. ದೇವರುಗಳಿಗೆ ನಾಮ ಹಲವಿದ್ದರೂ ಇಲ್ಲಿ ಶಕ್ತಿ ಒಂದೇ ಎಂಬುದನ್ನು ಗುಲಬರ್ಗಾ ಪರಿಸರದಲ್ಲಿ ಲಭ್ಯವಾದ ಮೂರ್ತಿಶಿಲ್ಪಗಳು ತಿಳಿಸುತ್ತವೆ.

ಒಟ್ಟಾರೆ ಗುಲಬರ್ಗಾ ಪರಿಸರದ ಶಾಸನಗಳು ಮತ್ತು ಸ್ಮಾರಕಗಳು ಪ್ರಾದೇಶಿಕವಾಗಿ ನಾಡಿನ ಸಾಂಸ್ಕೃತಿಕ ಇತಿಹಾಸದ ವಿವಿಧ ಮುಖಗಳ ಅಧ್ಯಯನಕ್ಕೆ ತಮ್ಮದೇ ಆದ ಕೊಡುಗೆ ನೀಡಿವೆ. ಪ್ರಸ್ತುತ ಈ ಮೂರ್ತಿಶಿಲ್ಪಗಳು ವಿನಾಶದ ಅಂಚಿನಲ್ಲಿವೆ. ಕೆಲವು ನೈಸರ್ಗಿಕ ವಿಕೋಪದಿಂದ ಭಗ್ನವಾದರೆ, ಇನ್ನು ಕೆಲವು ಗ್ರಾಮದ ಜನರ ಮೂಢನಂಬಿಕೆಗಳಿಗೆ ಬಲಿಯಾಗುತ್ತಲಿವೆ. ಇವುಗಳ ರಕ್ಷಣೆಯನ್ನು ಅವು ಶ್ರೀಸಾಮಾನ್ಯರಿಗೂ ಮೂಡಿಸಿದಲ್ಲಿ ಅಂದಿನ ಪರಂಪರೆಯನ್ನು ರಕ್ಷಣೆ ಮಾಡಿದಂತಾಗುತ್ತದೆ. ಹೀಗೆ ಹನಿ ಹನಿಯಾಗಿ ಹಳ್ಳವಾದಂತೆ, ಗುಲ್ಬರ್ಗಾ ಪರಿಸರದ ಶಾಸನಗಳು, ಸ್ಮಾರಕಗಳು ಇಲ್ಲಿನ ಪರಂಪರೆಯನ್ನು ಪ್ರತಿಬಿಂಬಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿವೆ.

♦ ♦ ♦

ಅನುಬಂಧಗಳು

ಅನುಬಂಧಗಳು

ಆಕರ ಗ್ರಂಥಗಳು

ಲೇಖಕರು	ಪ್ರಕಟಣೆ	ಕೃತಿ ಲೇಖನ ಮತ್ತು ಪ್ರಕಾಶಕರು
ಅನಂತರಂಗಚಾರ್ ಎನ್.	೧೯೫೪	ಭಾರತೀಯ ಶಿಲ್ಪಶಾಸ್ತ್ರದ ಸಂಕ್ಷಿಪ್ತ ಪರಿಚಯ, ಶ್ರೀ ವಿ.ರಂಗಣ್ಣನವರ ಸ್ಮರಣ ಸಂಚಿಕೆ ಮಹಾರಾಜ ಕಾಲೇಜು, ಮೈಸೂರು
ಅಪರ್ಣ ಕೂ.ಸ.	೧೯೯೯	ದೇವಾಲಯ ವಾಸ್ತುಶಿಲ್ಪ ಪರಿಚಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ಅಬ್ದುಲ್ ಕರೀಮ್ ರಾ.ಗಂ. ಕನ್ಯಾಕೋಳೂರು	೨೦೧೧	ಸಗರಾದ್ರಿ ಸ್ಮರಣ ಸಂಚಿಕೆ
ಇಂದುಮತಿ ಪಾಟೀಲ	೨೦೧೧	ಕಲಬುರ್ಗಿ ಜಿಲ್ಲಾ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆ
ಕಲಬುರ್ಗಿ ಎಂ.ಎಂ.	೧೯೮೦	ಸಮಾಧಿ, ಬಲಿದಾನ, ವೀರಮರಣ ಸ್ಮಾರಕಗಳು ಐ.ಬಿ.ಎಚ್. ಪ್ರಕಾಶನ, ಬೆಂಗಳೂರು
ಗೋಪಾಲ್ ಆರ್. (ಸಂ.)	೨೦೦೬	ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು
ಗೋಪಾಲರಾವ್ ಎಚ್.ಎಸ್.	೧೯೯೩	ಕಲ್ಯಾಣ ಚಾಲುಕ್ಯರ ದೇವಾಲಯಗಳ ಒಂದು ಸಾಂಸ್ಕೃತಿಕ ಅಧ್ಯಯನ, ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

ಗೋಪಾಲರಾವ್ ಎಚ್.ಎಸ್.(ಸಂ)	೨೦೦೮	ರಾಷ್ಟ್ರಕೂಟ ಶಿಲ್ಪಕಲೆ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು
ಚಂದ್ರಪೂಜಾರಿ ಎಂ.	೨೦೦೫	ಸಂಶೋಧಕರು ಮತ್ತು ಕ್ಷೇತ್ರಕಾರ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ಚನ್ನಬಸಪ್ಪ ಎಚ್.ಪಾಟೀಲ	೧೯೯೯	ಕರ್ನಾಟಕ ಕೋಟೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ಚಿದಾನಂದ ಮೂರ್ತಿ ಎಂ.	೧೯೬೬	ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು
ಚೆನ್ನಕ್ಕ ಎಲಿಗಾರ	೧೯೯೦	ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ತಿಪ್ಪೇಸ್ವಾಮಿ ಪಿ.ಆರ್.(ಸಂ.)	೧೯೯೭	ಶಿಲ್ಪಕಲಾ ಪ್ರಪಂಚ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
ದೇವರಕೊಂಡಾರೆಡ್ಡಿ	೧೯೮೨	ಸಪ್ತಮಾತೃಕೆಯರು, ಹರತಿಸಿರಿ (ಹೆಚ್.ವಿ.ವೀರನಾಯಕ ನೆನಪಿನ ಸಂಪುಟ) ಚಿತ್ರದುರ್ಗ
ದೇಸಾಯಿ ಪಿ.ಬಿ.	೧೯೮೨	ಕನ್ನಡ ನಾಡಿನ ಶಾಸನಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ನರಸಿಂಹಮೂರ್ತಿ ಎ.ವಿ.	೨೦೦೭	ಕರ್ನಾಟಕ ನಾಣ್ಯ ಪರಂಪರೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
ನಾಗಯ್ಯ ಜೆ.ಎಂ.	೧೯೯೨	ಆರನೆಯ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ, ವೀರಶೈವ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರು ರುದ್ರಾಕ್ಷಿಮಠ, ಬೆಳಗಾವಿ
ನಿರುಪಮಾ	೨೦೦೨	ಸಂಶೋಧನಾ ವಿಧಾನಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಪರಮಶಿವಮೂರ್ತಿ ಡಿ.ವಿ.	೧೯೯೯	ಕನ್ನಡ ಶಾಸನ ಶಿಲ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ಪಾಟೀಲ ಎಂ.ಬಿ.(ಸಂ.)	೧೯೯೭	ಗುಲ್ಬರ್ಗಾ ಜಿಲ್ಲೆಯ ಗೆಜೆಟಿಯರ್, ಕರ್ನಾಟಕ ಸರ್ಕಾರ, ಬೆಂಗಳೂರು
ಪ್ರಭಾಕರ್ ಎಂ.ಎನ್.	೨೦೦೦	ದೇವಾಲಯ ವಾಸ್ತು ಚಂದ್ರಿಕೆ
ಪ್ರಭಾಕರ್ ಎಂ.ಎನ್.	೨೦೧೧	ದೇವಾಲಯ ವಾಸ್ತು
ಭಟ್‌ಸೂರಿ ಕೆ.ಜಿ.	೧೯೯೬	ಗೇರುಸೊಪ್ಪೆ (ನಗರ ಬಸ್ತಿಕೇರಿ)ಯ ವಾಸ್ತು ಮತ್ತು ಮೂರ್ತಿಶಿಲ್ಪ
ಭಾಸ್ಕರ್ ಟಿ.ಎಂ.	೨೦೦೫	ಗುಲ್ಬರ್ಗಾ ಜಿಲ್ಲೆಯ ದರ್ಶನ
ರಮೇಶ ನಾಯಕ	೨೦೦೭	ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ರಾಜಶೇಖರ್ ಎಸ್.,	೧೯೮೮	ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ
ರಾಮಚಂದ್ರರಾವ್ ಎಸ್.ಕೆ.	೧೯೭೫	ಮೂರ್ತಿಶಿಲ್ಪ:ನೆಲೆ–ಹಿನ್ನೆಲೆ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
ಶಿವರಾಮ ಕಾರಂತ	೧೯೭೫	ಭಾರತೀಯ ಶಿಲ್ಪ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
ಶಿವಾನಂದ ವಿ.	೧೯೯೨	ಹೈದ್ರಾಬಾದ್ ಕರ್ನಾಟಕ ಭಾಗದ ಕನ್ನಡ ಶಿಲಾಶಾಸನಗಳು
ಶೇಷಶಾಸ್ತ್ರಿ	೨೦೦೫	ಶಾಸನ ಪರಿಚಯ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
ಶೇಷಶಾಸ್ತ್ರಿ ಆರ್.	೧೯೮೨	ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು
ಶ್ರೀನಿವಾಸ ರಿತ್ತಿ (ಸಂ.)	೨೦೦೦	ಪ್ರಾಚೀನ ಕರ್ನಾಟಕ ಆಡಳಿತ ಪರಿಭಾಷಾ ಕೋಶ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

ಹನುಮಾಕ್ಷಿ ಗೋಗಿ	೧೯೯೬	ಕಲ್ಬುರ್ಗಿ ಜಿಲ್ಲೆಯ ಶಾಸನಗಳು
ಹನುಮಾಕ್ಷಿ ಗೋಗಿ	೨೦೦೫	ಸಂಶೋಧನ ಲೇಖನಗಳು, ಪ್ರಸಾರಾಂಗ,ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ
ಯಾಸೀನ್‌ಖುದ್ದೂಸಿ ಮತ್ತು ಎಂ.ಸೀತಾರಾಮ ಜಾಗಿರದಾರ್(ಸಂ.)	೨೦೦೧	ಕರ್ನಾಟಕದ ಪರ್ಶಿಯನ್ ಅರೇಬಿಕ್ ಉರ್ದು ಶಾಸನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಆಂಗ್ಲಭಾಷೆಯ ಆಕರಗ್ರಂಥಗಳು

Census Report	2011	Government of Karnataka, Directorate of census opera tions Karnataka, Bangalore
D.C. Sircar	1965	Motilal Banarsidas
Dhaky M.A.	1997	Indian Temple from in Karnataka (Inscriptions & Architecture, Abinav publica tion, Delhi

ಅಪ್ರಕಟಿತ ಪ್ರಬಂಧಗಳು


ಪ್ರಹ್ಲಾದ್ ರೆಡ್ಡಿ ಬಿ.	೧೯೯೯	ಹೈದ್ರಾಬಾದ್ ಕರ್ನಾಟಕದ ಜೈನ ಕೇಂದ್ರಗಳು,ಪಿಎಚ್.ಡಿ.ಮಹಾ ಪ್ರಬಂಧ(ಅಪ್ರಕಟಿತ),ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ
ಮೋನಪ್ಪ ಸಾಯಬಣ್ಣ	೨೦೦೮	ಕಲ್ಬುರ್ಗಿ ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಅಧ್ಯಯನ,ಪಿಎಚ್.ಡಿ. ಮಹಾಪ್ರಬಂಧ(ಅಪ್ರಕಟಿತ), ಕನ್ನಡ ವಿಭಾಗ,ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಸಂಕೇತ ಸೂಚಿಗಳು

* ಗು.ಜಿ.ಇ.ಮತ್ತು ಪು. – ಗುಲ್ಬರ್ಗಾ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ
* ಗು.ಜಿ.ಗ್ಯಾ – ಗುಲ್ಬರ್ಗಾ ಜಿಲ್ಲೆ ಗೆಜೆಟಿಯರ್
* ಗು.ಜಿ.ದ – ಗುಲ್ಬರ್ಗಾ ಜಿಲ್ಲಾ ದರ್ಶನ
* ಕ.ಜಿ.ಶಾ. – ಕಲ್ಬುರ್ಗಿ ಜಿಲ್ಲೆಯ ಶಾಸನಗಳು
* ಕ.ಸ.ಗೆ.ಕ.ಜಿ. – ಕರ್ನಾಟಕ ಸರ್ಕಾರದ ರಾಜ್ಯ ಗೆಜೆಟಿಯರ್ ಕಲ್ಬುರ್ಗಿ ಜಿಲ್ಲೆ
* ಹೈ.ಕ.ಭಾ.ಕ.ಶಿ.ಶಾ. – ಹೈದ್ರಾಬಾದ್ ಕರ್ನಾಟಕ ಭಾಗದ ಕನ್ನಡ ಶಿಲಾ ಶಾಸನಗಳು

ಅವಿಭಜಿತ ಗುಲಬರ್ಗಾ ಜಿಲ್ಲೆ




ಸುಳ್ಯ
ತಾಲೂಕಿನ ನಕ್ಷೆ

ದೇವಾಲಯಗಳ ಮತ್ತು ಮೂರ್ತಿಶಿಲ್ಪಗಳ ಛಾಯಾಚಿತ್ರಗಳ ಪಟ್ಟಿ

೧. ಖಣದಾಳದ ಹನುಮಂತನ ಗುಡಿಯಲ್ಲಿರುವ ಗಣೇಶ

೨. ಪಟ್ಟಣದ ರಾಚೋಟೇಶ್ವರ ಗುಡಿಯಲ್ಲಿರುವ ಗಣೇಶ

೩. ಹಿರಾಪುರದ ನಗರೇಶ್ವರ ಗುಡಿಯಲ್ಲಿರುವ ಗಣೇಶ

೪. ತಾವರಗೇರಿಯ ಹನುಮಂತನ ಗುಡಿಯ ಎಣ್ಣೆ ಗಣಪತಿ

೫. ಹೊನ್ನಕಿರಣಗಿಯ ಶ್ರೀ ಕೇಶವ ಈಶ್ವರಲಿಂಗೇಶ್ವರ ಗರ್ಭಗೃಹದ ಗಣೇಶ

೬. ಹರಸೂರಿನ ಈಶ್ವರ ಗುಡಿಯ ಸಭಾಮಂಟಪ

೭. ಹರಸೂರಿನ ಬಸವಣ್ಣನ ಗುಡಿ

೮.. ಹೊನ್ನಕಿರಣಗಿಯ ಅಲ್ಲಮಪ್ರಭು ಗುಡಿಯ ದ್ವಾರಬಾಗಿಲು

೧೦. ಹರಸೂರಿನ ಕರಿಬಸವೇಶ್ವರ ಗುಡಿ

೧೧. ಪಟ್ಟಣದ ಸಾವಳಗಿ ಮಠ

೧೨. ಹರಸೂರಿನ ಶಿವಲಿಂಗೇಶ್ವರ

೧೩. ಹರಸೂರಿನ ಕಲ್‌ಮಠ

೧೪. ಶ್ರೀನಿವಾಸ ಸರಡಗಿಯ ರೇವಣ ಸಿದ್ದೇಶ್ವರ ಗುಡಿ

೧೫. ಸಣ್ಣೂರಿನ ರಾಮಲಿಂಗೇಶ್ವರ ಗುಡಿಯ ಪಾರ್ಶ್ವನೋಟ

೧೬. ಕೋಟೆಯೊಳಗಿನ ಸೋಮೆಶ್ವರ ಗುಡಿ

೧೭. ಹಿರಪೂರದ ನಗರೇಶ್ವರ ಗುಡಿಯ ದ್ವಾರಬಾಗಿಲು

೧೮. ಇಟಗಿಯ ಶೀ ಶಿವಲಿಂಗೇಶ್ವರ ಗುಡಿ

೧೯. ಪಟ್ಟಣದ ಭೋಗಲಿಂಗೇಶ್ವರ ಗುಡಿ

೨೦. ಇಟಗಿಯ ವೀರಭದ್ರೇಶ್ವರ ಗುಡಿ

೨೧. ಗುಲಬರ್ಗಾದ ಶರಣಬಸವೇಶ್ವರ ಗುಡಿಯ ಹೊರನೋಟ

೨೨. ಹಿರಪೂರದ ಶಂಕರಲಿಂಗೇಶ್ವರ ಗುಡಿಯ ಹೊರನೋಟ

೨೩. ಹರಸೂರಿನ ಜೈನ ಬಸದಿಯ ಹೊರನೋಟ

೨೪. ಹುಣಸಿ ಹಡಗಿಲದ ಜೈನ ಬಸದಿಯ ಸಭಾಮಂಟಪ

೨೫. ಹುಣಸಿ ಹಡಗಿಲದ ಜೈನ ಬಸದಿಯ ಹೊರನೋಟ

೨೬. ಹರಸೂರಿನ ಜೈನ ಬಸದಿ

೨೭. ಹರಸೂರಿನ ಜೈನ ಬಸದಿಯ ವಿಘ್ನಹಾರ ಪಾರ್ಶ್ವನಾಥನ ದ್ವಾರಪಟ್ಟಿಕೆ

೨೮. ಹುಣಸಿ ಹಡಗಲಿಯ ಜೈನ ಬಸದಿಯ ಸ್ತಂಭಗಳು

೨೯. ಹರಸೂರಿನ ಜೈನ ಬಸದಿಯ ಹೊರನೋಟ

೩೦. ಗುಲಬರ್ಗಾದ ಚೋರ್ ಗುಂಬಜ್

೩೧. ಗುಲಬರ್ಗಾದ ಶಹಾ ಬಜಾರ್‌ದಲ್ಲಿನ ದರ್ಗಾ

೩೨. ಗುಲಬರ್ಗಾದ ಖಾಜಾ ಬಂದೇನವಾಜ್ ದರ್ಗಾ

೩೩. ಫಿರೋಜಾಬಾದ್‌ನ ಕಲ್ಪತ್ ರಹೇಮಾನ್ ದರ್ಗಾ

೩೪. ಗುಲಬರ್ಗಾದ ಖಾಜಾ ಬಂದೇನವಾಜ್ ಪ್ರವೇಶ ದ್ವಾರ

೩೫. ಖಾಜಾ ಬಂದೇನವಾಜ್ ದರ್ಗಾದ ದರ್ ಉಲ್ ಶಿಫಾ ಖಾನಾ

೩೬. ಗುಲಬರ್ಗಾದ ಹಫ್ತೆ ಗುಂಬಜ್

೩೭. ಜಾಮಿಯ ಮಸೀದ್‌ದ ಭುವನೇಶ್ವರ

೩೮. ಗುಲಬರ್ಗಾ ಕೋಟೆಯ ಒಳಗಿನ ಜಾಮಿಯ ಮಸೀದ್

೩೯. ಜಾಮಿಯ ಮಸೀದ್ ಒಳಗಿನ ಪ್ರಾರ್ಥನಾಲಯ

೪೦. ಜಾಮಿಯ ಮಸೀದ್ ಒಳಗಿನ ಕಮಾನುಗಳು

೪೧. ಗುಲಬರ್ಗಾದ ಕೋಟೆ

೪೨. ಗುಲಬರ್ಗಾದ ಕೋಟೆಯ ಉತ್ತರದ ಭಾಗ

೪೩. ಗುಲಬರ್ಗಾದ ಕೋಟೆಯಲ್ಲಿರುವ ತೋಪು

೪೪. ಗುಲಬರ್ಗಾದ ಕೋಟೆಯಲ್ಲಿರುವ ಶಾಸನೋಕ್ತ ತೋಪು

೪೫. ಅಪ್ರಕಟಿತ ಶಾಸನಗಳು

೧. ಮಹಾಗಾಂವದ ಮಾಳಿಂಗೇಶ್ವರ ಶಾಸನ

೨. ಹರಸೂರಿನ ಜಗನ್ನಾಥ ಶಾಸನ

೩. ಖಣದಾಳದ ಹನುಮಂತನ ಶಾಸನ ಶಿಲ್ಪ

೪. ಸಣ್ಣೂರಿನ ರಾಮಲಿಂಗೇಶ್ವರ ಶಾಸನ

೫. ಹುಣಸಗಿ ಹಡಗಿಲದ ಜೈನ ಶಾಸನ

೪೬. ಸಣ್ಣೂರಿನ ರಾಮಲಿಂಗೇಶ್ವರ ಗುಡಿಯ ಗರ್ಭಗುಡಿಯ ಶಿವಲಿಂಗ

೪೭. ಹೊನ್ನಕಿರಣಗಿಯ ಮಹಾದೇವ ಗುಡಿಯ ಗರ್ಭಗೃಹ

೪೮. ಗುಲಬರ್ಗಾದ ರಾಮತೀರ್ಥದ ಶಿವಲಿಂಗ

೪೯. ಹಿರಾಪುರದ ನಗರೇಶ್ವರ ಗುಡಿಯ ಶಿವಲಿಂಗ

೫೦. ಹೊನ್ನಕಿರಣಗಿಯ ತ್ರಿಲಿಂಗೇಶ್ವರದ ಶಿವಲಿಂಗ

೫೧. ಪಟ್ಟಣದ ಸಾವಳಗಿ ಮಠದ ಶಿವಲಿಂಗ

೫೨. ಕೆರೆಬೋಸಗಾದ ಶಿವನಗುಡಿಯ ಶಿವಲಿಂಗ

೫೩. ಪಟ್ಟಣದ ಬೋರಲಿಂಗೇಶ್ವರ ಗುಡಿಯ ಶಿವಲಿಂಗ

೫೪. ಕೆರೆಬೋಸಗಾದ ಜ್ಯೋತಿರ್ಲಿಂಗ

೫೫. ಫಿರೋಜಾಬಾದ್‌ದ ಈಶ್ವರ ದೇವಸ್ಥಾನದ ಶಿವಲಿಂಗಗಳು

೫೬. ಹೊನ್ನಕಿರಣಗಿಯ ಶ್ರೀಕೇಶವ ಈಶ್ವರಲಿಂಗೇಶ್ವರ ಗರ್ಭಗೃಹದ ವಿಷ್ಣು

೫೭. ಗುಲಬರ್ಗಾದ ರಾಮತೀರ್ಥದ ಗುಡಿಯ ಪಕ್ಕದ ವಿಷ್ಣು

೫೮. ಖಣದಾಳದ ಹನುಮಂತನ ಗುಡಿಯ ಪಕ್ಕದ ವಿಷ್ಣು

೫೯. ಖಣದಾಳದ ಹನುಮಂತನ ಗುಡಿಯ ಶಯನ ವಿಷ್ಣು

೬೦. ಹೊನ್ನಕಿರಣಗಿಯ ಶ್ರೀಕೇಶವ ಈಶ್ವರಲಿಂಗೇಶ್ವರ ಗರ್ಭಗೃಹದ ವಿಷ್ಣು

೬೧. ಹುಣಸಿಹಡಗಿಲದ ಜಿನಾಲಯದ ಮಹಾವೀರ

೬೨. ಹರಸೂರಿನ ಜಿನಾಲಯದ ವಿಘ್ನಹಾರ ಪಾರ್ಶ್ವನಾಥ

೬೩. ಹರಸೂರಿನ ಜಿನಾಲಯದ ಚಿಂತಾಮಣಿ ಪಾರ್ಶ್ವನಾಥ

೬೪. ಹುಣಸಿ ಹಡಗಿಲದ ಜಿನಾಲಯ ಗರ್ಭಗುಡಿಯ ಪಾರ್ಶ್ವನಾಥ

೬೫. ಹರಸೂರಿನ ಜಿನಾಲಯದ ತೀರ್ಥಂಕರ

೬೬. ಹರಸೂರಿನ ಜಿನಾಲಯದ ಚವ್ವೀಸ್ ತೀರ್ಥಂಕರರ ಮೂರ್ತಿಶಿಲ್ಪ

೬೭. ಸಣ್ಣೂರಿನ ಹನುಮಂತನ ಗುಡಿಯ ಎದುರಿನ ವೀರಗಲ್ಲು

೬೮. ಸಣ್ಣೂರಿನ ರಾಮಲಿಂಗೇಶ್ವರ ಗುಡಿಯ ಎದುರಿನ ವೀರಗಲ್ಲು

೬೯. ಸಣ್ಣೂರಿನ ರಾಮಲಿಂಗೇಶ್ವರ ಗುಡಿಯ ಎದುರಿನ ವೀರಗಲ್ಲು

೭೦. ಹರಸೂರಿನ ಮುಖ್ಯರಸ್ತೆಯಲ್ಲಿರುವ ವೀರಗಲ್ಲುಗಳು

೭೧. ಹರಸೂರಿನ ಈಶ್ವರ ಗುಡಿಯ ಸಪ್ತಮಾತೃಕೆಯರು

೭೨. ಗುಲಬರ್ಗಾದ ರಾಜಾಪುರದಲ್ಲಿಯ ಹನುಮಂತನ ಗುಡಿಯ ಪಕ್ಕದಲ್ಲಿರುವ ಸಪ್ತಮಾತೃಕೆಯರು

೭೩. ಹರಸೂರ ಹನುಮಂತನ ಗುಡಿಯ ಪಕ್ಕದಲ್ಲಿರುವ ಸಪ್ತಮಾತೃಕೆಯರು

೭೪. ಪಟ್ಟಣದ ಬೋಗಲಿಂಗೇಶ್ವರ ಗುಡಿಯಲ್ಲಿರುವ ಸಪ್ತಮಾತೃಕೆಯರು


೭೫. ಗುಲಬರ್ಗಾದ ರಾಜಾಪುರದಲ್ಲಿಯ ಹನುಮಂತನ ಗುಡಿಯ ಪಕ್ಕದಲ್ಲಿರುವ ಗಜಲಕ್ಷ್ಮಿ ಶಿಲ್ಪ

೭೬. ಖಣದಾಳದ ಹನುಮಂತನ ದೇವಾಲಯದ ಭಿತ್ತಿಯಲ್ಲಿರುವ ಮಹಿಷಾಸುರ ಮರ್ದಿನಿ

೭೭. ಪಟ್ಟಣದ ಬೋಗಲಿಂಗೇಶ್ವರ ಗುಡಿಯ ಪಕ್ಕದಲ್ಲಿರುವ ಉಮಾಮಹೇಶ್ವರಿ




ಖಣದಾಳದ ಹನುಮಂತನ
ಗುಡಿಯಲ್ಲಿಯ ಗಣೇಶ



ಪಟಣದ ರಾಚೋಟೇಶ್ವರ
ಗುಡಿಯಲ್ಲಿಯ ಗಣೇಶ




ಹಿರಾಪುರದ ನಗರೇಶ್ವರ ಗುಡಿಯಲ್ಲಿಯ ಗಣೇಶ



ತಾವರಗೇರಿಯ ಹನುಮಂತನ ಗುಡಿಯ
ಎಣ್ಣೆ ಗಣಪತಿ



ಹೊನ್ನಕಿರಣಗಿಯ ಶ್ರೀ ಕೇಶವ ಈಶ್ವರಲಿಂಗೇಶ್ವರ
ಗುಡಿಯ ಗರ್ಭಗೃಹದ ಗಣೇಶ



ಹರಸೂರಿನ ಈಶ್ವರ ಗುಡಿಯ ಸಭಾಮಂಟಪ



ಹರಸೂರಿನ ಬಸವಣ್ಣನ ಗುಡಿ



ಹೋನ್ನಕಿರಣಗಿಯ ಅಲ್ಲಮ ಪ್ರಭು ಗುಡಿಯ ದ್ವಾರಬಾಗಿಲು




ಹರಸೂರಿನ ಕರಿಬಸವೇಶ್ವರ ಗುಡಿ



ಪಟ್ಟಣ್ಣದ ಸಾವಳಗಿಮಠ



ಹರಸೂರಿನ ಶಿವಲಿಂಗೇಶ್ವರ



ಹರಸೂರಿನ ಕಲ್‌ಮಠ



ಶ್ರೀನಿವಾಸ ಸರಡಿಗಿಯ ರೇವಣಸಿದ್ದೇಶ್ವರ ಗುಡಿ



ಸಣ್ಣೂರಿನ ರಾಮಲಿಂಗೇಶ್ವರ
ಗುಡಿಯ ಪಾರ್ಶ್ವನೋಟ



ಕೋಟೆಯೊಳಗಿನ ಸೋಮೇಶ್ವರ ಗುಡಿ



ಹಿರಮೂರದ ನಗರೇಶ್ವರ
ಗುಡಿಯ ದ್ವಾರಬಾಗಿಲು



ಇಟಗಿಯ ಶ್ರೀ ಶಿವಲಿಂಗೇಶ್ವರಗುಡಿ



ಪಟ್ಟಣ್ಣದ ಭೋಗಲಿಂಗೇಶ್ವರ ಗುಡಿ



ಇಟಗಿಯ ವೀರಭದ್ರೇಶ್ವರ ಗುಡಿ



ಗುಲಬರ್ಗಾದ ಶರಣಬಸವೇಶ್ವರ
ಗುಡಿಯ ಹೊರನೋಟ



ಹಿರಮೂರದ ಶಂಕರಲಿಂಗೇಶ್ವರ
ಗುಡಿಯ ಹೊರನೋಟ



ಹರಸೂರಿನ ಜೈನ ಬಸಿದಿಯ ಹೊರನೋಟ




ಹುಣಸಿ ಹಡಗಲಿನ ಜೈನ
ಬಸಿದಿಯ ಸಭಾಮಂಟಪ



ಹುಣಸಿ ಹಡಗಲಿನ
ಜೈನ ಬಸಿದಿಯ ಹೊರನೋಟ



ಹರಸೂರಿನ ಜೈನ ಬಸಿದಿ



ಹುಣಸಿ ಹಡಗಲಿಯ ಜೈನ ಬಸಿದಿಯ
ಸ್ತಂಭಗಳು



ಹರಸೂರಿನ ಜೈನ ಬಸಿದಿಯ
ವಿಘ್ನಹಾರ ಪಾರ್ಶ್ವನಾಥನ ದ್ವಾರ ಪಟ್ಟಿಕೆ



ಹರಸೂರಿನ ಜೈನ ಬಸಿದಿಯ
ಹೊರನೋಟ



ಗುಲಬರ್ಗಾದ ಚೋರ್ ಗುಂಬಜ್



ಗುಲಬರ್ಗಾ ಶಹಾ
ಬಜಾರ್‌ದಲ್ಲಿನ ದರ್ಗಾ



ಗುಲಬರ್ಗಾದ ಖಾಜಾ
ಬಂದೇನವಾಜ್ ದರ್ಗಾ



ಫಿರೋಜಾಬಾದ್‌ದ ಕಲ್ಫತ್
ರಹೇಮಾನ್ ದರ್ಗಾ



ಗುಲಬರ್ಗಾದ ಖಾಜಾ ಬಂದೇನವಾಜ್
ಪ್ರವೇಶ ದ್ವಾರ




ಖಾಜಾ ಬಂದೇನವಾಜ್ ದರ್ಗಾದ
ದರ್ ಉಲ್ ಶಿಫಾ ಖಾನಾ



ಗುಲಬರ್ಗಾದ ಸಾತ್ ಗುಂಬಜ್



ಜಾಮಿಯ ಮಸಿದ್‌ದ ಭುವನೇಶ್ವರ



ಗುಲಬರ್ಗಾ ಕೋಟೆಯ ಒಳಗಿನ ಜಾಮಿಯ ಮಸಿದ್



ಜಾಮಿಯ ಮಸಿದ್ ಒಳಗಿನ ಪ್ರಾರ್ಥನಾಲಯ




ಜಾಮಿಯ ಮಸಿದ್ ಒಳಗಿನ ಕಮಾನುಗಳು



ಗುಲಬರ್ಗಾದ ಕೋಟೆ



ಗುಲಬರ್ಗಾದ ಕೋಟೆಯ ಉತ್ತರದ ಭಾಗ



ಗುಲಬರ್ಗಾದ ಕೋಟೆಯಲ್ಲಿರು ತೋಪು




ಗುಲಬರ್ಗಾದ ಕೋಟೆಯಲ್ಲಿರು
ಶಾಸನೋಕ್ತ ತೋಪು



ಮಹಾಗಾಂವದ ಮಾಳಿಂಗೇಶ್ವರ ಶಾಸನ




ಹರಸೂರಿನ ಜಗನಾಥ ಶಾಸನ



ಖಣದಾಳದ ಹನುಮಂತನ ಶಾಸನಶಿಲ್ಪ



ಸಣ್ಣೂರಿನ ರಾಮಲಿಂಗೇಶ್ವರ ಶಾಸನ



ಹುಣಸಗಿ ಹಡಿಗಲಿಯ ಜೈನ ಶಾಸನ



ಸಣ್ಣೂರಿನ ರಾಮಲಿಂಗಶ್ವರ ಗುಡಿಯ
ಗರ್ಭಗುಡಿಯ ಶಿವಲಿಂಗ



ಹೊನ್ನಕಿರಣಗಿಯ ಮಾಹಾದೇವ
ಗುಡಿಯ ಗರ್ಭಗೃಹ



ಗುಲಬರ್ಗಾದ ರಾಮತೀರ್ಥ ಶಿವಲಿಂಗ



ಹಿರಾಪೂರದ ನಗರೇಶ್ವರ ಗುಡಿಯ
ಶಿವಲಿಂಗ



ಹೊನ್ನಕಿರಣಗಿಯ ತ್ರೀಲಿಂಗೇಸ್ವರದ
ಶಿವಲಿಂಗ














ಪಟ್ಟಣದ ಸಾವಳಗಿ ಮಠದ ಶಿವಲಿಂಗ




ಕೆರೆ ಬೋಸಗಾದ ಶಿವನಗುಡಿಯ ಶಿವಲಿಂಗ



ಪಟಣದ ಬೋರಲಿಂಗೇಶ್ವರ ಗುಡಿಯ ಶಿವಲಿಂಗ



ಕರೆಭೋಸಗಾದ ಜೋತಿರ್ಲಿಂಗ



ಫಿರೋಜಾಬಾದದ ಈಶ್ವರ ದೇವಸ್ಥಾನದ
ಶಿವಲಿಂಗಗಳು



ಹೊನ್ನಕಿರಣಗಿಯ ಶ್ರೀ ಕೇಶ್ವವ
ಈಶ್ವರಲಿಂಗೇಶ್ವರ ಗರ್ಭಗೃಹದ ವಿಷ್ಣು



ಗುಲಬರ್ಗಾದ ರಾಮಥೀರ್ತದ
ಗುಡಿಯ ಪಕ್ಕದ ವಿಷ್ಣು



ಖಣದಾಳದ ಹನುಮಂತನ
ಗುಡಿಯ ಪಕ್ಕದ ವಿಷ್ಣು



ಖಣದಾಳದ ಹನುಮಂತನ ಗುಡಿಯ ಶಯನ ವಿಷ್ಣು



ಹೊನ್ನಕಿರಣಗಿಯ ಶ್ರೀ ಕೇಶ್ವವ
ಈಶ್ವರಲಿಂಗೇಶ್ವರ ಗರ್ಭಗೃಹದ ವಿಷ್ಣು



ಹುಣಸಿಹಡಗಲಿಯ ಜಿನಾಲಯದ ಮಹಾವೀರ




ಹರಸೂರಿನ ಜಿನಾಲಯದ
ವಿಗ್ನಹಾರ ಪಾರ್ಶ್ವನಾಥ



ಹರಸೂರಿನ ಜಿನಾಲಯದ ಚಿಂತಾಮಣಿ
ಪಾರ್ಶ್ವನಾಥ




ಹುಣಸಿಹಡಗಿಲಿಯ ಜೀನಾಲಯದ ಗರ್ಭಗುಡಿಯ ಪಾರ್ಶ್ವನಾಥ



ಹರಸುರಿನ ಜೀನಾಲಯದ ಜೈನಯತಿ



ಹರಸುರಿನ ಜೀನಾಲಯದ ೨೪ತೀರ್ಥಂಕರ ಮೂರ್ತಿಶಿಲ್ಪ



ಸಣ್ಣೂರಿನ ಹನುಮಂತನ ಗುಡಿಯ ಎದುರಿನ ವೀರಗಲ್ಲು



ಸಣ್ಣೂರಿನ ರಾಮಲಿಂಗೇಶ್ವರ ಗುಡಿಯ ಎದುರಿನ ವೀರಗಲ್ಲು



ಸಣ್ಣೂರಿನ ರಾಮಲಿಂಗೇಶ್ವರ ಗುಡಿಯ ಎದುರಿನ ವೀರಗಲ್ಲು




ಹರಸೂರಿನ ಮುಖ್ಯರಸ್ತೆಯಲ್ಲಿರುವ ವೀರಗಲ್ಲುಗಳು



ಹರಸೂರಿನ ಈಶ್ವರ ಗುಡಿಯ ಸಪ್ತಮಾತೃಕೆಯರು



ಗುಲಬರ್ಗಾದ ರಾಜಪುರದಲ್ಲಿಯ ಹನುಮಂತನ ಗುಡಿಯ ಪಕ್ಕದಲ್ಲಿರುವ ಸಪ್ತಮಾತೃಕೆಯರು



ಹರಸೂರ ಹನುಮಂತನ ಗುಡಿಯ ಪಕ್ಕದಲ್ಲಿರುವ ಸಪ್ತಮಾತೃಕೆಯರು




ಪಟ್ಟಣದ ಬೋಗಲಿಂಗೇಶ್ವರದ ಗುಡಿಯಲ್ಲಿರುವ ಸಪ್ತಮಾತೃಕೆಯರು



ಗುಲಬರ್ಗಾದ ರಾಜಪುರದಲ್ಲಿಯ ಹನುಮಂತನ ದೇವಾಲಯದ ಪಕ್ಕದಲ್ಲಿರುವ ಗಜಲಕ್ಷ್ಮಿಯ ಶಿಲ್ಪ



ಖಣದಾಳದ ಹನುಮಂತನ ದೇವಾಲಯದ ಭಿತ್ತಿಯಲ್ಲಿರುವ ಮೈಷಾಶೂರ ಮರ್ಧಿನಿ



ಪಟ್ಟಣದ ಬೋಗಲಿಂಗೇಶ್ವರ ಗುಡಿಯ ಪಕ್ಕದಲ್ಲಿರುವ ಉಮಾಮಹೇಶ್ವರಿ